ಪ್ರಬುದ್ಧ ಕರ್ನಾಟಕ



೨೯೧-೨೯೪

ಪ್ರಸಾರಾಂಗ : : ಮೈಸೂರು ವಿಶ್ವವಿದ್ಯಾನಿಲಯ

ಲೇಖಕರಿಗೆ ಸೂ[illegible]

೧. 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರ[illegible] ಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A Century and a Half of Literary Activity in Kannada,' Kannada Studies, Vol. 1, No. 2 (Mysore 1965), p. 62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟ ೭೪ ಸಂಚಿಕೆಗಳು ೨೯೧-೯೪

(ಸಂಯುಕ್ತ)

ಶ್ರೀ ಆಂಗಿರಸ ಸಂವತ್ಸರ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೨-೯೩

PRABUDDHA KARNATAKA, a Kannada Quarterly of the University of Mysore, Vol. 74, Number 1 to 4, pp. 131.

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮೈಸೂರು–೬

ಮುದ್ರಕರು :

ಡಾ. ಮೃತ್ಯುಂಜಯ ರುಮಾಲೆ

ನಿರ್ದೇಶಕರು, ವಿ.ವಿ. ಮುದ್ರಣಾಲಯ, ಮೈಸೂರು–೬

ವಿಷಯಸೂಚಿ

ಈ ಸಂಚಿಕೆಯ ಲೇಖಕರು

ಡಾ. ವ್ಹಿ. ಶಿವಾನಂದ	ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ.
ಎಂ. ಹೆಚ್. ರುದ್ರಮುನಿ	ಉಪನ್ಯಾಸಕರು, ಇಂಗ್ಲಿಷ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೬.
ಬಿ. ಎಸ್. ಸಣ್ಣಯ್ಯ	೩೩/೧, ೮ ನೇ ಅಡ್ಡರಸ್ತೆ, ಜಯಲಕ್ಷ್ಮೀಪುರ, ಮೈಸೂರು-೧೨.
ಮಾಧವ ಕುಲಕರ್ಣಿ	೨೫೩, ಎರಡನೇ ಹಂತ, ಗೋಕುಲಂ, ಮೈಸೂರು.
ಡಾ. ಕೆ. ಕೆಂಪೇಗೌಡ	ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೬.
ಡಾ. ಬಿ. ಜಿ. ಕನಕೇಶಮೂರ್ತಿ	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬.
ಡಾ. ಅನಂತ ನಾಗೇಂದ್ರ ಭಟ್ಟ	ಸಂಸ್ಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೬.
ಎಚ್. ಎಸ್. ಹರಿಶಂಕರ್	ರೀಡರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬.
ಡಾ. ಬಸವರಾಜ ಸಬರದ	ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
ಡಾ. ಕಮಲಾ ಹಂಪನಾ	೧೦೭೯, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦.
ಮಹೇಶ ಅಡಕೋಳಿ	ಉಪನ್ಯಾಸಕ, ಡಾ. ಎ. ಪಿ. ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಕುಮಟಾ.
ಗಿರಿಜಾಶಾಸ್ತ್ರಿ	ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬೈ.

ಡಾ. ವ್ಹಿ. ಶಿವಾನಂದ

ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ ಸ್ಥಳನಾಮಗಳು

ಸ್ಥಳನಾಮಗಳು, ಮಾನವೀಯ ಆವಾಸಗಳು ನೆಲೆಗೊಂಡ ಕಾಲದಿಂದಲೂ ಅಲ್ಲಿನ ಸಂಸ್ಕೃತಿಯ ಪಳೆಯುಳಿಕೆಗಳಂತೆ ತೋರುವುದರಿಂದ ಇತ್ತೀಚಿಗೆ ಜಾನಪದ, ಸಾಂಸ್ಕೃತಿಕ ಮಾನವಶಾಸ್ತ್ರ, ಪುರಾತತ್ತ್ವಶಾಸ್ತ್ರ ಹಾಗೂ ಭಾಷಾವಿಜ್ಞಾನ ಕ್ಷೇತ್ರಗಳು ಅಂತರ್‌ಶಿಸ್ತಿನ ವಿಷಯವಾಗಿಸಿಕೊಂಡು ಅದರ ಅಧ್ಯಯನದ ಮಹತ್ವವನ್ನು ಹೆಚ್ಚಿಸಿವೆ.[1]

ದಕ್ಷಿಣ ಭಾರತದ ಪ್ರಮುಖ ಗ್ರಂಥಸ್ಥ ಭಾಷೆಗಳಲ್ಲೊಂದಾದ ಕನ್ನಡದಲ್ಲಿ ಸಾಕಷ್ಟು ಪ್ರಾಚೀನ ಸಾಹಿತ್ಯ ಉಪಲಬ್ಧವಿದ್ದು, ಇಲ್ಲಿನ ಕಾವ್ಯ, ಪುರಾಣ ಚರಿತ್ರೆ, ದತ್ತಿಶಾಸನ, ರಾಜನಿರೂಪ, ವಂಶಾವಳಿ, ಕೈಫಿಯತ್ತು ಹಾಗೂ ಕಾಲಜ್ಞಾನ ವಚನ ಇವೇ ಮುಂತಾದ ಪ್ರಕಾರಗಳಲ್ಲಿ ನಮಗೆ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ವಿಪುಲ ಸಾಮಗ್ರಿ ದೊರೆಯುತ್ತದೆ. ಈ ನಿಟ್ಟಿನಲ್ಲಿ ಕ್ರಿ.ಶ. ೧೪೨೮ರಲ್ಲಿ ರಚಿತವಾದ ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ'ಯ ಸಂಧಿ ೩೮ರಲ್ಲಿ ತತ್ಕಾಲೀನ ಶಿವಶರಣರ ಸುಮಾರು ೪೦೦ ಸ್ಥಳನಾಮಗಳ ದಾಖಲಾತಿ (Documentation) ದೊರಕುತ್ತಿರುವುದು ಒಂದು ಅಪೂರ್ವ ಸಂಗತಿಯಾಗಿದೆ. ೧೫ನೆಯ ಶತಮಾನದ ಮಧ್ಯಭಾಗದಲ್ಲಿ ರಾಜ್ಯಭಾರ ಮಾಡಿದ ವಿಜಯನಗರದ ೨ನೆಯ ದೇವರಾಯ ಅರ್ಥಾತ್ ಪ್ರೌಢ

---

1. ಯೂರೋಪಿನಲ್ಲಿ ಲಿಬ್ನೀಜ್‌ನಿಂದ (ಕ್ರಿ.ಶ. ೧೭೬೮) ಆರಂಭಗೊಂಡ ಸ್ಥಳನಾಮಾಧ್ಯಯನ ಕ್ಷೇತ್ರ ಅನಂತರದಲ್ಲಿ ವ್ಯಾಪಕ ಬೆಳವಣಿಗೆಯನ್ನು ಹೊಂದಿದೆ. ಇಂಗ್ಲೆಂಡ್, ಸ್ಕಾಟ್‌ಲೆಂಡ್ ಹಾಗೂ ಅಮೆರಿಕೆಗಳಲ್ಲಿ ಪ್ರತ್ಯೇಕ ಸ್ಥಳನಾಮ ಅಧ್ಯಯನ ಸಂಸ್ಥೆಗಳು ಹುಟ್ಟಿಕೊಂಡಿವೆ. ಕ್ರಿ.ಶ. ೧೯೪೯ರಲ್ಲಿ ಆರಂಭಗೊಂಡ ಅಂತರ್‌-ರಾಷ್ಟ್ರೀಯ ನಾಮವಿಜ್ಞಾನದ ಸಂಸ್ಥೆ ಯುನೆಸ್ಕೋ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸುಮಾರು ೪೮ ರಾಷ್ಟ್ರಗಳು ತಮ್ಮ ತಮ್ಮ ಪರಿಸರದ ಸ್ಥಳನಾಮ ವಿಜ್ಞಾನ ಕುರಿತ ಪ್ರಗತಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯ ನಡೆಸುತ್ತಲಿವೆ. ೧೯೭೯ರಲ್ಲಿ ಸ್ಥಾಪಿತವಾದ Indian Place Name Society (ಮೈಸೂರು) ಹಾಗೂ ೧೯೮೩ರಲ್ಲ ಆರಂಭಗೊಂಡ The Place Name Society (ತ್ರಿವಂದ್ರಂ) ಈಚೆಗೆ ಭಾರತೀಯ ಸ್ಥಳನಾಮ ಅಧ್ಯಯನದಲ್ಲಿ ಹೆಚ್ಚಿನ ಜಿಜ್ಞಾಸೆಯನ್ನು ಬೆಳೆಸಲು ಕಾರಣವಾಗಿವೆ.

ದೇವರಾಯನ ಮಹಾಮಂತ್ರಿಯೂ, ಮಹಾದಂಡನಾಯಕನೂ ಆಗಿದ್ದ ಲಕ್ಕಣ್ಣ ದಂಡೇಶ ತಾನು ಅಧಿಕಾರಿಯಾಗಿದ್ದ ಅನೇಕ ಪ್ರಾಂತೀಯ ವಲಯಗಳಲ್ಲಿ ವಾಸವಾಗಿದ್ದ ಅಲ್ಲಲ್ಲಿ ನೂತನ ಶಿವಶರಣರನ್ನು ಅವರ ಹೆಸರು, ವೃತ್ತಿಗಳ ಜೊತೆಗೆ, ಅವರಿದ್ದ ಸ್ಥಳನಾಮಗಳನ್ನೂ ಸಹ ಒಂದು ಬಿಡದಂತೆ ಪಟ್ಟಿ ಮಾಡಿರುವುದರಿಂದ ವಿಜಯನಗರ ಕಾಲದ ಬಹುಸಂಖ್ಯಾತ ಸ್ಥಳನಾಮಗಳ ಮಾಹಿತಿ ನಮಗೆ ಸುಲಭವಾಗಿ ಸಿಕ್ಕುವಂತಾಗಿದೆ. ಈ ದೃಷ್ಟಿಯಿಂದ ಶಿವತತ್ವ ಚಿಂತಾಮಣಿ–ವೀರಶೈವ ಶರಣರ ವ್ಯಕ್ತಿನಾಮ ಹಾಗೂ ಸ್ಥಳನಾಮಗಳ ಒಂದು ಸಂಕ್ಷಿಪ್ತ ವಿಶ್ವಕೋಶವೆಂದು ಕರೆದರೆ ತಪ್ಪಾಗಲಾರದು.

ಶಿವತತ್ವ ಚಿಂತಾಮಣಿಯಲ್ಲಿ ಇಷ್ಟೊಂದು ಸಂಖ್ಯೆಯ ಊರ ಹೆಸರುಗಳು ದೊರಕುವುದರ ಹಿನ್ನೆಲೆಯಲ್ಲಿ ಅದಕ್ಕೆ ಪೂರಕವಾದ ಒಂದೆರಡು ಸಂಗತಿಗಳನ್ನು ನಾವು ಅವಶ್ಯವಾಗಿ ಗಮನಿಸಬಹುದಾಗಿದೆ. ವಿಜಯನಗರವು ನಿರಂಕುಶ ಪ್ರಭುತ್ವವನ್ನು ಹೊಂದಿದ ಮಹಾ ಸಾಮ್ರಾಜ್ಯವಾಗಿದ್ದರೂ, ಅದರ ಆಡಳಿತ ಪದ್ಧತಿಯಲ್ಲಿ ಕೇಂದ್ರಾಡಳಿತಕ್ಕಿರುವ ಮಹತ್ವ ಗ್ರಾಮಾಡಳಿತಕ್ಕೂ ಲಭ್ಯವಾಗಿದೆ ಪ್ರೌಢ ದೇವರಾಯನ ರಾಜ್ಯಾಡಳಿತದಲ್ಲಿ ಸುಮಾರು ೨೦ ಮಂತ್ರಿಗಳಿದ್ದುದಾಗಿಯೂ, ಅವರಲ್ಲಿ ಲಕ್ಕಣ್ಣ ದಂಡೇಶನು ಪ್ರಮುಖ ಅಮಾತ್ಯನಾಗಿದ್ದಾನೆಂದೂ, ತಿಳಿದು ಬರುತ್ತದೆ. ಇದರಿಂದ ರಾಜ್ಯಾಂಗ ವ್ಯವಸ್ಥೆಯಲ್ಲಿ 'ಮಂತ್ರಿಮಂಡಲ' (Council of Ministers)ದ ಪ್ರಾಮುಖ್ಯ ಗೊತ್ತಾಗುತ್ತದೆ. ವಿಸ್ತಾರವಾದ ರಾಜ್ಯವನ್ನು ವಿವಿಧ ವಲಯಗಳಲ್ಲಿ ಹಂಚಿದ್ದು, ಅದರಲ್ಲಿ ಗ್ರಾಮಸಭೆಗಳೂ ಸಹ ಮಹತ್ತ್ವದ ಆಡಳಿತ ಘಟಕಗಳಾಗಿದ್ದವು. 'ರಾಜ್ಯ'ದ ರಾಜಧಾನಿಯೊಂದಲ್ಲದೆ, ನಗರ, ಪಟ್ಟಣ, ಪುರ, ಹಳ್ಳಿಗಳಿಗೂ ಇದರಿಂದಾಗಿ ಮಹತ್ವ ದೊರಕಿದೆ.[2] ಈ ಒಂದೊಂದು ಪ್ರಾಂತೀಯ ವಲಯಗಳಿಗೆ ಒಬ್ಬೊಬ್ಬ ಮಂತ್ರಿಗಳು ನೇಮಕಗೊಂಡಿದ್ದರಿಂದ ಪ್ರತಿಯೊಂದು ಸ್ಥಳಗಳ ಸ್ಪಷ್ಟ ದಾಖಲಾತಿ ಹಾಗೂ ಅವುಗಳ ಸೀಮೆ ಮುಂತಾದ ವಿವರಗಳನ್ನು ತಿಳಿಯಲು ನಮಗೆ ಸಾಧ್ಯವಾಗಿದೆ. ಕೃಷ್ಣೆಯಿಂದ ಕೇಪ್ ಕಾಮೊರಿನ್‌ನ ವರೆಗೂ, ಬಂಗಾಲದಿಂದ–ಮಲಬಾರಿನವರೆಗೂ ಹರಡಿದ್ದ ಈ ಮಹಾ ಸಾಮ್ರಾಜ್ಯದ ಒಟ್ಟು ಸೀಮೆ ೧೦೦೦ 'ಪರಸಂಗ'ಗಳಷ್ಟಿತ್ತೆಂದು ಅಬ್ದುಲ್‌ರಜಾಕ್ ವರದಿ ಮಾಡಿದ್ದಾನೆ. ಈ ವಿಶಾಲವಾದ ರಾಜ್ಯವನ್ನು ಪೂರ್ವ–ಪಶ್ಚಿಮ–ಉತ್ತರ–ದಕ್ಷಿಣ ಹಾಗೂ ಮಧ್ಯ ವಲಯಗಳಲ್ಲಿ ಹಂಚಲಾಗಿದ್ದು, ಇದರಲ್ಲಿ ಸಮಾವೇಶವಾದ ಅಂದಿನ ಪ್ರಮುಖ ರಾಜಕೀಯ ವಲಯಗಳೆಂದರೆ, ಉದಯಗಿರಿ ರಾಜ್ಯ, (ನೆಲ್ಲೂರು, ಕಡಪ) ಪೆನಗೊಂಡೆರಾಜ್ಯ (ಬಳ್ಳಾರಿ, ಅನಂತಪುರ, ಉತ್ತರ ಮೈಸೂರು ಭಾಗ) ಮುಳವಾಯಿ

---

2. S. Srikantha Shastri, IA Volume 57, Saletore B.A.—Social and Political life under Vijayanagar Empire. Volume I

ರಾಜ್ಯ (ಮೈಸೂರು, ಸೇಲಂ, ದಕ್ಷಿಣ ಆರ್ಕಾಟ್) ಬಾರಕೂರ ಅಥವಾ ತುಳುರಾಜ್ಯ, (ಬನವಾಸಿ, ಅರಗ ಚಂದ್ರಗುತ್ತಿ) ಹಾಗೂ ರಾಜ ಗಂಭೀರ ರಾಜ್ಯಗಳು.[3]

ಲಕ್ಕಣ್ಣ ದಂಡೇಶನು ವಿವಿಧ ರಾಜಕೀಯ ವಲಯಗಳಿಗೆ ಈ ಕೆಳಗಿನ ಕಾಲಾವಧಿಯಲ್ಲಿ ಅವುಗಳ ಮಂಡಲಾಧಿಪತಿಯಾಗಿದ್ದ ಸಂಗತಿಯನ್ನು ಕನ್ನಡ, ತಮಿಳು ಭಾಷೆಗಳಲ್ಲಿ ಉಪಲಬ್ಧವಿರುವ ಸುಮಾರು ೧೭ ಶಾಸನಗಳು ಪ್ರಸ್ತಾಪಿಸುತ್ತವೆ.

ತಲಕಾಡು (ಕ್ರಿ.ಶ. ೧೪೨೮–೩೦)
ಮುಳಬಾಗಿಲ ಪ್ರಾಂತ (ಕ್ರಿ.ಶ. ೧೪೩೧–೩೩)
ದಕ್ಷಿಣ ಆರ್ಕಾಟ್ (ತಮಿಳುನಾಡು) (ಕ್ರಿ.ಶ. ೧೪೩೮)
ಬಾರಕೂರ ರಾಜ್ಯ (ಕ್ರಿ.ಶ. ೧೪೪೦)
ಮಧುರೆಯ ಮಂಡಲ ಕ್ರಿ.ಶ. (೧೪೪೯-೫೦)

ಮೇಲಿನವುಗಳಲ್ಲದೆ ರಾಜಗಂಭೀರರಾಜ್ಯ, ಪಡುವೀಡುಗಳಲ್ಲೂ ಈತ ಕೆಲಕಾಲ ಅಧಿಕಾರಿಯಾಗಿದ್ದನು. ಕರ್ನಾಟಕ ರಾಜ್ಯದ ವಲಯಗಳಲ್ಲದೆ, ಉತ್ತಂಗರೈ, (ಸೇಲಂ ಜಿಲ್ಲೆ) (ಕ್ರಿ.ಶ. ೧೪೨೮) ಪೆರಂಬೂರು, (ತ್ರಿಚನಾಪಳ್ಳಿ) (೧೪೪೦) ನಾಗಪಟ್ಟಣ (ತಂಜಾವೂರಜಿಲ್ಲೆ) (೧೪೪೦) ಕಡೆಗಳಲ್ಲಿ ತಮಿಳು ಭಾಷೆಯಲ್ಲಿ ಉಪಲಬ್ಧವಿರುವ ಶಾಸನಗಳ ಮೇಲಿಂದ ತಮಿಳುನಾಡಿನ ರಾಜ್ಯದ ಗಡಿಗೆರೆಗಳ ಸೂಕ್ಷ್ಮ ಪರಿಚಯು ಇವನಿಗಿದ್ದುದು ಸ್ಪಷ್ಟವಾಗುತ್ತದೆ. ಮಹಾದಂಡನಾಯಕನಾಗಿದ್ದಾಗ ವಿಜಯನಗರದ ಗಡಿ–ಗೆರೆಗಳ ಮೇಲೆ ದಂಡೆತ್ತಿ ಬಂದ ಸಿಂಹಳದ ದೊರೆ ಪರಾಕ್ರಮಬಾಹುವನ್ನು ನಿಗ್ರಹಿಸಲು 'ಸಿಂಹಳ ದಿಗ್ವಿಜಯ' ಕೈಗೊಂಡು, ಅಲ್ಲಿ ಶಾಂತಿಯನ್ನು ನೆಲೆಗೊಳಿಸಿದ್ದರ ಕಾರಣವಾಗಿ 'ದಕ್ಷಿಣ ಸಮುದ್ರಾಧಿಪತಿ' 'ಈಟಿಮತಿ ರೈಕೊಂಡ' ಎಂದು ಈತ ಬಿರುದಾಂಕಿತನಾಗಿದ್ದಾನೆ. ಲಕ್ಕಣ್ಣ ದಂಡೇಶ, ಇಂತಹ ರಾಜಕೀಯ ಆಡಳಿತಾತ್ಮಕ ಸನ್ನಿವೇಶಗಳ ಮೇಲಿಂದ ಸಮಗ್ರ ದಕ್ಷಿಣ ಹಿಂದೂಸ್ಥಾನದ ಭೌಗೋಲಿಕ ಸ್ಥಳನಾಮ ಸೀಮೆಗಳನ್ನು (South Indian Toponymy) ಬಲ್ಲವನಾಗಿದ್ದ ಸಂಗತಿ ದೃಢಪಡುತ್ತದೆ.

ವಿಜಯನಗರ ಕಾಲದ ಸ್ಥಳನಾಮ ವೈಲಕ್ಷಣ್ಯಗಳು :

ಆಡಳಿತ ಘಟಕ, ಅರಸರ ಪ್ರಭಾವ ಹಾಗೂ ಮತ್ತಿತರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ಸ್ಥಳಗಳಿಗೆ ಅವುಗಳದೇ ಆದ ಕೆಲವೊಂದು ವೈಲಕ್ಷಣ್ಯಗಳಿವೆ. ಅವನ್ನಿಲ್ಲಿ ಕೆಳಗೆ ನಿರ್ದೇಶಿಸಲಾಗಿದೆ.

3. Krishna Shastri H–ASR for (1967–68)

I. ಆಡಳಿತ ಘಟಕಗಳ ಮೇಲಿನ ಹೆಸರುಗಳು :

ನಾಡು—ಪಟ್ಟಣದನಾಡು, ಪಡುವನಾಡು, ಕಲ್ಲಿಹದ ನಾಡು, ಪಾಂಡ್ಯ ನಾಡು, ಹದಿನಾಡು, ಮಧುರೆಕೋಟೆಯನಾಡು, ಪೆರಿಯಾರ ನಾಡು.

ಪುರ—ವಿಜಯ ಕಲ್ಯಾಣಪುರ, ದಕ್ಷಿಣಾಪುರ, ಪ್ರಸನ್ನಪುರ
ಪಟ್ಟಣ—ಹೊಸಪಟ್ಟಣ, ದೇವರಾಯ ಪಟ್ಟಣ
ವೀಡು—ಪಡುವೀಡು, ಕೊಂಡವೀಡು
ನಗರ—ವಿಜಯನಗರ
ಮಂಗಲ—ನೆಲಮಂಗಲ
ಪಳ್ಳಿ–ಹಳ್ಳಿ—ಹೆಗ್ಗಡೆಹಳ್ಳಿ, ಮಾಯಿಗೊಂಡನಹಳ್ಳಿ, ಬೊಮ್ಮನಹಳ್ಳಿ

II. ಪ್ರಮುಖ ದೈವಾಂಕಿತ ಸ್ಥಳನಾಮಗಳು :

ವಿರೂಪಾಕ್ಷಪುರ, ಪಂಪಾಪುರ

III. ತಮಿಳುನಾಡು, ಆಂಧ್ರ ಹಾಗೂ ತುಳುನಾಡಿನ ಅಧೀನ ಪ್ರದೇಶದಲ್ಲಿನ ಸ್ಥಳಗಳು :

ತಮಿಳು—ಉದಾಹರಣೆ : ತಿರುಚಿರಾಪಳ್ಳಿ
ತಿರುವಣ್ಣಾಮಲೈ
ತಿರುವಾವೂರು
ವೆಲ್ಲೂರು

ತೆಲುಗು—ಉದಾಹರಣೆ : ಪೆನುಗೊಂಡ
ರಾಜಕೊಂಡ, ವಿನುಕೊಂಡ
ಗುತ್ತಿ, ಚಂದ್ರಗುತ್ತಿ

ತುಳು—ಉದಾಹರಣೆ : ಅಮ್ಮಾಳಿ, ಅಂಜನೆ, ಇಟ್ಟಿಡಲ, ಅಮ್ಮಣ್ಣನ
ಅರಿವಾರು, ನೇರಸಿ, ತೊಗರಿಸಿ, ಕಾಜಿಲೆ,
ಅಗೆವಾಲ, ಕೆಂಚಲ, ಬಡದವಳ, ಪುದಿಮಲು,
ಅಳವಿಂಡ್ಯೆ,........ ಮುಂತಾದವು

ಮೇಲೆ ಹೇಳಿದ ವಿಭಿನ್ನ ಪ್ರಾಂತೀಯ ಹೆಸರುಗಳಲ್ಲದೆ, ಲಕ್ಕಣ್ಣ ದಂಡೇಶನು ಕೇರಳ, ಒಡ್ಡಿಯಾ, ಗುಜರಾತ್, ಮಹಾರಾಷ್ಟ್ರ, ಗೋವೆ, ಕೊಂಕಣದೇಶ ಮುಂತಾದ ಕಡೆಗಳಲ್ಲಿನ ಶಿವಶರಣರನ್ನೂ ಸಹ ಹೆಸರಿಸುವುದರಿಂದ ಕನ್ನಡ ಸ್ಥಳ ನಾಮಗಳಲ್ಲಿ ಇನ್ನಿತರ ಭಾಷೆಯ ಸ್ಥಳನಾಮ, ಪ್ರಕೃತಿ ಇಲ್ಲವೆ ಪ್ರತ್ಯಯ ಘಟಕ ಸೇರಿಕೊಂಡಿರುವುದರಿಂದ ಅಂದಿನ ಸ್ಥಳನಾಮಗಳಲ್ಲಿ ಸಂಲಗ್ನೀಕರಣ, (Conver-

gence) ಸ್ವೀಕರಣ, (Borrowing) ಮುಂತಾದ ಭಾಷಾ ಪ್ರಕ್ರಿಯೆಗಳು ಯಥೇಷ್ಟವಾಗಿ ಕಂಡು ಬರುತ್ತವೆ.

ಲಕ್ಕಣ್ಣ ದಂಡೇಶನ ಸ್ಥಳನಾಮ ದಾಖಲಾತಿಯ ಮಾದರಿ :

ಲಕ್ಕಣ್ಣ ದಂಡೇಶ, ಶಿವಶರಣ ಸ್ಥಳನಾಮಗಳನ್ನು ಉಲ್ಲೇಖಿಸುವ ಮಾದರಿಗಾಗಿ ಶಿವತತ್ತ್ವ ಚಿಂತಾಮಣಿಯ ಒಂದು ಪದ್ಯವನ್ನಿಲ್ಲಿ ಕೊಟ್ಟಿದೆ.

ವರ ಸಿಮ್ಮಲ್ಲಿಗೆಯ ಕಾಟಪ್ಪ ಕಬ್ಬುನಗೆಲಸಿ
ಪರಮನುಂ ಧೋತ್ರ ಗಾವಿಯ ವೀರಣಯ್ಯಗಳು
ಪಿರಿದು ಹರಸಿಗೆಯ ಮಲ್ಲಣ್ಣನುಂ ಗೊಂಟಿ ಹಾಳೊಳಗೆ ನಾಗೋಬಾಯಿಯು |
ಕರುಣನಿಧಿ ದೋಸಪಳ್ಳಿಯ ಬಸವಣಯ್ಯನೆಸೆ
ವರಪೂರ ಗೆಜ್ಜೆಯಾ ಕಾಯಕದ ಮಲ್ಲಪ್ಪ
ಹರಭಕ್ತ ಹಂಚಿಗೆಯ ಬೊಮ್ಮಲಿಂಗಯ್ಯಗಳ ಚರಣಾಂಬುಜಕ್ಕೆ ಶರಣು

(ಶಿ. ಚಿಂ. ೩೮–೧೬೩)

ಉಕ್ತ ಪದ್ಯದಲ್ಲಿನ ಸಿಮ್ಮಲ್ಲಿಗೆ, ಧೋತ್ರಗಾವಿ ಹಂಚಿಗೆ (=ಹಂಜಿಗಿ) ಈ ಗ್ರಾಮನಾಮಗಳು ಈಗಲೂ ಬಿಜಾಪುರ, ಕಲುಬುರ್ಗಿ ಜಿಲ್ಲೆಗಳಲ್ಲಿ ವಿದ್ಯಮಾನವಾಗಿದೆ. ಇದರಿಂದ ಇವನು ಹೇಳುವ ಯಾವೊಂದು ಸ್ಥಳವೂ ಕಲ್ಪಿತವಾಗಿರದೆ ಐತಿಹಾಸಿಕವಾಗಿ ಅವು ಅಂದಿನಿಂದ ಇಂದಿನವರೆಗೂ ಹೆಸರುವಾಸಿಯಾದ ಹಳ್ಳಿಗಳಾಗಿದ್ದ ವಿಷಯ ವೇದ್ಯವಾಗುತ್ತದೆ.

ಸ್ಥಳನಾಮ ನಕ್ಷೆಗಳ ಸೂಚಕ ಮಾಹಿತಿ :

ಸ್ಥಳನಾಮ ನಕ್ಷೆಗಳು ನಮಗೆ ಇತ್ತೀಚಿಗೆ ಎರಡು ವಿಧದಲ್ಲಿ ದೊರೆಯಲು ಸಾಧ್ಯವಾಗಿದೆ.[4] ಭಾರತೀಯ ಸರ್ವೇಕ್ಷಣೆ (Survey of India) ಯಿಂದ ಸಿದ್ಧಗೊಳಿಸಲಾದ ಭೌಗೋಳಿಕ ನಕಾಶೆಗಳು (Topographical Maps) ಒಂದು ಮಾದರಿಯಲ್ಲಿದ್ದರೆ, ಕಂದಾಯ ಇಲಾಖೆ (Revenue Department) ಅನುಗೊಳಿಸಿದ ತಾಲ್ಲೂಕು ನಕ್ಷೆಗಳು (Taluk Maps of 1–Mile) ಇನ್ನೊಂದು ಮಾದರಿಯಲ್ಲಿವೆ ಬ್ರಿಟಿಷ್ ಆಡಳಿತಾವಧಿಯ ಕಾಲದಿಂದೀಚಿಗೆ ಲಭ್ಯವಾದ ಇಂತಹ ಯಾವೊಂದು ನಕಾಶೆಗಳ ವಿಧಾನ–ಪ್ರಣಾಲಿಕೆಗಳ ಪರಿಚಯವಿಲ್ಲದ ೧೫ನೆಯ ಶತಮಾನದಲ್ಲಿ ಲಕ್ಕಣ್ಣ ದಂಡೇಶನು ಸ್ಥಳನಾಮಗಳ ನಕಾಶೆಯನ್ನು ಸಿದ್ಧಪಡಿಸಲು ಸೂಕ್ತವಾದ ಮಾಹಿತಿಗಳನ್ನು ನಮಗೆ ಒದಗಿಸಿರುವುದು ಕುತೂಹಲಕಾರಿಯಾಗಿದೆ. ನಿದರ್ಶನಕ್ಕೆ ಅವನು ಹೇಳಿರುವ ಗ್ರಾಮನಾಮಗಳನ್ನು ಈ ಕೆಳಗಿನ ನಕಾಶೆಗಳಿಂದ ತೋರಿಸಬಹುದಾಗಿದೆ.

---

4. ವಿಶೇಷಕ್ಕೆ : Nachimuttu K.—Methodology in Place Name Studies (1987).

ಗುಹಾರಣ್ಯಕ್ಷೇತ್ರ ನಕ್ಷೆ :

ಇದರ "ಮೂಡಲು ಸ್ವಾಮಿ ಕಾರ್ತಿಕ ತೆಂಕಲು ಉಜ್ಜೈನಿ ಪಡುವಲು ಹರಿಹರ ಬಡಗಲು ಶ್ರೀ ವಿರೂಪಾಕ್ಷ" (ಶಿವತತ್ತ್ವ ಚಿಂತಾಮಣಿ ೩೮–೧೨೮) ಇಲ್ಲಿನ ಚತುಃ ಸೀಮಾಂತರ್ವಲಯದಲ್ಲಿ 'ಗುಹಾರಣ್ಯ'ವಿರುವದೆಂದು ಹೇಳಿರುವ್ರದರಿಂದ ಇವೆಲ್ಲ ಕ್ಷೇತ್ರಗಳ ಸೀಮಾರೇಖೆಗಳ ಮೇಲಿಂದ ಗುಹಾರಾಣ್ಯ ಕ್ಷೇತ್ರವನ್ನು ಸುಲಭವಾಗಿ ನಾವು ಪತ್ತೆ ಹಚ್ಚಬಹುದು. ಇಲ್ಲಿ ವಸಂತ ಮಲ್ಲೇಶ್ವರನೆಂಬ ಅಧಿದೈವ ಹಾಗೂ ಲೀಲೆಯ ರಾಮಯ್ಯನೆಂಬ ಶರಣನ ವೃತ್ತಾಂತಗಳನ್ನು ಲಕ್ಕಣ್ಣ ದಂಡೇಶ ನಮಗೆ ತಿಳಿಸುತ್ತಾನೆ.

ಊರು–ಪಳ್ಳಿ–ಹಳ್ಳಿ–ವಾರ್ಗಿಕಗಳ ಸೀಮಾ ರೇಖೆಗಳು:

ಕರ್ನಾಟಕದ ಸ್ಥಳನಾಮವಾರ್ಗಿಕಗಳಾದ ನಾಡು-ಊರುಗಳ ಪ್ರಸಾರ ಇಡೀ ಹಿಂದೂಸ್ಥಾನದ ವ್ಯಾಪ್ತಿಗೊಳಪಟ್ಟ ಅಂದಿನ ವಿಜಯನಗರದ ಪ್ರಭುತ್ವದಲ್ಲಿ, ತಮಿಳು ನಾಡಿನ ಅನೇಕ ವಲಯಗಳಲ್ಲೂ ಸಹ ಹೆಚ್ಚಿರುವುದು ಕಂಡುಬರುತ್ತವೆ. ಅಂದಿನ ಆಡಳಿತ ಹಿನ್ನಲೆಯೊಂದಿಗೆ ಒಂದು ಭೂಪಟದಲ್ಲಿ ಕರ್ನಾಟಕದ ಸ್ಥಳನಾಮಗಳ, ವಾರ್ಗಿಕಗಳ ಈ ಪ್ರಸಾರವನ್ನು ತಮಿಳು–ಕನ್ನಡ ಸ್ಥಳನಾಮಗಳ ಸೀಮಾ ರೇಖೆಗಳ ಮೇಲಿಂದ ಸೂಚಿಸಬಹುದಾಗಿದೆ. ನಿದರ್ಶನಕ್ಕೆ : ತಿರುವಾವೂರು, ಕರವೂರು, ವೆಲ್ಲಂನೂರು, ಆದೇರಿ(ತಿ ಅಂಧ್ರ–ಕರ್ನಾಟಕದ ಗಡಿಗೆರೆಗಳಲ್ಲಿ ಬರುವ ಪಳ್ಳಿ-ಹಳ್ಳಿ ವಾರ್ಗಿಕಗಳ ಪ್ರಸಾರ ನಕ್ಷೆಯನ್ನು ಸಹ ನಾವು ತಯಾರಿಸಿಕೊಳ್ಳಬಹುದಾಗಿದೆ.

ನೈಜಾಂ ಇಲಾಖೆಯ ಸ್ಥಳನಾಮ ಭೂಪಟ :

ಲಕ್ಕಣ್ಣ ದಂಡೇಶನು ತುಂಗಭದ್ರೆಯ ಉತ್ತರದಲ್ಲಿ ವಾಸವಾಗಿದ್ದ ಅನೇಕ ಶಿವಶರಣರ ಸ್ಥಳನಾಮಗಳನ್ನು ಉಲ್ಲೇಖಿಸುತ್ತಾನೆ, ಅವನು ಕೊಟ್ಟಿರುವ ಈ ಸ್ಥಳಗಳು ನೈಜಾಂ ಇಲಾಖೆಯೆಂದು ಪ್ರತೀತಿಯಿರುವ ಇಂದಿನ ಕಲಬುರ್ಗಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಈಗಲೂ ಕಾಣದೊರೆಯುತ್ತವೆ. ದಿಗ್ಗಾವಿ, ಸಾಬಾದು, ಹರಸೂರು, ಕಲ್ಯಾಣ, ಬಿದರೆ ಕೌಲಿಗೆ, ಏಳಿಗೆ, ಅಲಗೋಡು, ಮುದ ಗಲ್ಲು, ಸಲಗಪುರ, ಮುದಿಕೆ, ಕಾಳಗಿ, ಕೊಳತುಜುವ, ಬಲ್ಲಿಕೆ, ಧೋತ್ರಗಾವಿ, ಕೊಳ್ಳಿ–ಇವೆಲ್ಲವನ್ನೊಳಗೊಂಡು ನೈಜಾಂ ಇಲಾಖೆಯಲ್ಲಿ ಬರುವ ನೂತನ ಶರಣರ ಸ್ಥಳನಾಮಗಳ ನಕ್ಷೆಯನ್ನು ನಾವು ಸಿದ್ಧಪಡಿಸಿಕೊಳ್ಳಬಹುದಾಗಿದೆ. ಇದರಂತೆಯೇ ತುಳು ಪ್ರಕೃತಿ ಇಲ್ಲವೆ ಪ್ರತ್ಯಯಗಳ ಆಧಾರದ ಮೇಲಿಂದ ತುಳುನಾಡಿನ ಶರಣರ ಮೇರೆಗಳನ್ನು ನಾವು ಗೊತ್ತುಪಡಿಸಬಹುದು.

೧. ಲಕ್ಕಣ್ಣ ದಂಡೇಶನ ಸ್ಥಳನಾಮ ವೈಶಿಷ್ಟ್ಯಗಳು

ಒಂದು ಸ್ಥಳಕ್ಕೆ ಎರಡು ಹೆಸರುಗಳಿದ್ದಲ್ಲಿ (Duplication form) ನಿರ್ದೇಶಿತ ಸ್ಥಳನಾಮವನ್ನು ಅದಕ್ಕೆ ಅಧೀನವಾದ ನಾಡು, ಇಲ್ಲವೆ ಪರ್ವತ, ಪುರಾಣೋಕ್ತ ಹಿರಿಮೆಯನ್ನು ಸೂಚಿಸುವ ಯಾವುದೊಂದು ವಿಶೇಷಣವನ್ನು ಪೂರ್ವದಲ್ಲಿ ಸೇರಿಸಿ ಖಚಿತಪಡಿಸುವುದು.

ಉದಾಹರಣೆ : ಪಿರಿಯೂರ ನಾಡಿನ ಕನ್ನಹಳ್ಳಿ, ತೊಱಗಲಿಯ ಹೂಲಿ, ಬೆಜ್ಜವಾಡದ ಕೊಂಡವೀಡು, ಹದಿನಾಡಿನಲ್ಲಿರುವ ಬೊಮ್ಮನಹಳ್ಳಿ, ಮಾತಂಗಾಚಲದ ಗುಹಾಂತರ ಇತ್ಯಾದಿ.

೨. ಉತ್ಪ್ರೇಕ್ಷಿತ ಸ್ಥಳನಾಮಗಳು :

ನಿದರ್ಶನಕ್ಕೆ : **ಮಳಲಕೋಟೆ**—" ಗಂಗೆ ಮಲರಹಿತವಾಗಿ ಧರೆಯುಗದಲಿ ಸುಳಿಪು ನಿರ್ಮಲತೆ ಮಾಡಿ ಸೋಂಕಿದೊಡೆ ಮಳಲಾಗಿ ತೋರ್ಪಂತೆ ಶಿವನಸದ್ಭಕ್ತಿಯೆನಿಪುವ ಗಂಗೆ ತನು ಧರೆಯೊಳು ಶಿಳಿವತುಳ ವೀರಶೈವ ವ್ರತಾಚಾರ ಪಥದೊಳು ಪರಿದು ಮೋಹ ಬಂಧನವ ವ್ರತಾಚಾರಿಪ ಮಳಲಕೋಟೆಯ ಪುರದ ಭಕ್ತಿಯುಕ್ತರ ವಿಮಲ ಚರಣಾಂಬುಜಕ್ಕೆ ಶರಣು. (೩೮–೨೯) ಇಲ್ಲಿ 'ಮಳಲು' ಪ್ರಾಕೃತಿಕ ನದಿ ಇಲ್ಲವೆ ಸಮುದ್ರದ ತೀರ ಪ್ರದೇಶವನ್ನು ಸೂಚಿಸುವುದಾದರೂ ಅದನ್ನು ಕವಿ ಉತ್ಪ್ರೇಕ್ಷಿಸಿ ಹೇಳಿರುವುದನ್ನಿಲ್ಲಿ ಗಮನಿಸಬೇಕು. ಅದರಂತೆಯೇ ಶಿವಶರಣ ಸಂಗ, ಶಿವಗೋಷ್ಠಿ, ಶಿವದಾಸೋಹ, ಶಿವಕಿಂಕರತೆಯ ಶಿವನಿಷ್ಠಾಪರರ ಭವನದ '**ಶಿವಪುರ**'. ಕಾಯಮಲ ತ್ರಯೋಮೋಕ್ಷಮಂ ಕಳೆದ ನಿಜಸುಖದ ಸೀಮೆಯಾಗಿರುವುದು '**ಕಾಮಲಾಪುರ**' ಶೀಲವಂತರ ಆವಾಸವಾಗಿರುವ ಸ್ಥಾನ '**ಶೀಲವಂತಪುರ**'. ಸಾಮಾನ್ಯವಾಗಿ ಇಂತಹ ಸ್ಥಳನಾಮಗಳನ್ನು ಉತ್ಪ್ರೇಕ್ಷಿಸುವುದರ ಕಾರಣ, ಅವು ಪ್ರಾಕೃತಿಕವಾದವುಗಳೆಂಬುದಕ್ಕಿಂತ ಶಿವಶರಣರ, ಶಿವಭಕ್ತರ ನೆಲೆವೀಡುಗಳೆಂಬುದನ್ನು ಎತ್ತಿ ಹೇಳುವುದೇ ಆಗಿದೆ.

೩. ಸಾಂಸ್ಕೃತಿಕ ಅರ್ಥವಿವರಣೆ ಹೊಂದಿದ ಸ್ಥಳಗಳು :

ಸ್ಥಳನಾಮಗಳನ್ನು ಎರಡು ವಿಧದಲ್ಲಿ ಮುಖ್ಯವಾಗಿ ವರ್ಗೀಕರಿಸುವ ಕ್ರಮ ಕಂಡುಬರುತ್ತದೆ. (೧) ಭೌಗೋಳಿಕ (Topographical) (೨) ಸಾಂಸ್ಕೃತಿಕ (Cultural). ಭೌಗೋಳಿಕ ಸ್ಥಳನಾಮಗಳಿಗೆ ಅಲ್ಲಿನ ಪ್ರಾಕೃತಿಕ ಸನ್ನಿವೇಶಗಳಿಂದಾಗಿ ಒಂದೊಂದು ಹೆಸರು ನಿರ್ದಿಷ್ಟವಾಗಿ ಮುಂದುವರೆದಿರುತ್ತದೆ. ಅಂತಹ ಹೆಸರುಗಳಲ್ಲಿ ಅವುಗಳ ಉಚ್ಚಾರಣೆಯ ವ್ಯತ್ಯಾಸಗಳನ್ನುಳಿದರೆ ಹೆಚ್ಚಿನ ಬದಲಾವಣೆ ಕಂಡುಬರುವುದಿಲ್ಲ. ಆದರೆ ಒಂದು ಸ್ಥಳದ ಸಾಂಸ್ಕೃತಿಕ ನಿಷ್ಪತ್ತಿ ಕಾಲಕಾಲಕ್ಕೆ ಮಾರ್ಪಾಡಬಹುದು. ಸಾದೃಶ್ಯವೆನ್ನಿಸುವ ಸಾಮಾನ್ಯ ಲಕ್ಷಣ, ಆಶಯಗಳ

ಮೇಲಿಂದ ಒಂದು ಪ್ರಮುಖ ಸ್ಥಳನಾಮ, ಅದಕ್ಕೆ ಅಧೀನವಾದ ಇಲ್ಲವೆ ಅನುಗುಣ ವಾದ ಸ್ಥಳಗಳಿಗೆ ಅಂತಹದೇ ಹೆಸರನ್ನು ದತ್ತವಾಗಿಸಬಹುದು. ತನ್ಮೂಲಕ ಸಾಂಸ್ಕೃತಿಕ ಸ್ಥಳನಾಮಗಳು ಕಾಲಕಾಲಕ್ಕೆ ಹೊಸ ಅರ್ಥವನ್ನು ಉತ್ಪಾದಿಸುವ ಗುಣ ವೈಲಕ್ಷಣ್ಯಗಳನ್ನು ಹೊಂದಿರುತ್ತವೆ.[5]

ಸಾಂಸ್ಕೃತಿಕ ಅರ್ಥವಿವರಣೆಗೆ ಸಂಬಂಧಿಸಿದಂತೆ ಲಕ್ಕಣ್ಣ ದಂಡೇಶ ಹೆಸರಿಸುವ ಎರಡು ಪ್ರಮುಖ ಸ್ಥಳಗಳಾದ ಕಲ್ಯಾಣ ಮತ್ತು ವಿಜಯ ನಗರಗಳನ್ನಿಲ್ಲಿ ಹೆಸರಿಸ ಬಹುದು. ಕಲ್ಯಾಣ : ಚಾಳುಕ್ಯರ ಕಾಲದಿಂದಲೂ ಐತಿಹಾಸಿಕ ರಾಜಧಾನಿಯಾಗಿ ಖ್ಯಾತಿವೆತ್ತ ಕಲ್ಯಾಣವು ಭಕ್ತಿಭಂಡಾರಿ ಬಸವಣ್ಣನವರ ಲೋಕ ಸಂಘಟನಾತ್ಮಕ ಕ್ರಿಯೆಗಳಿಂದಾಗಿ ಅದು 'ಕಲ್ಯಾಣ'ದ ಅರ್ಥವನ್ನು ಬಹುವಿಧವಾಗಿ ನಿರ್ದೇಶಿಸು ವಂತಾಗಿದೆ. ಇದನ್ನು ಲಕ್ಕಣ್ಣ ದಂಡೇಶ ವಿಶೇಷಿಸಿ ಹೇಳುವರೀತಿ ಇಂತಿದೆ. 'ಶುಭ ಕಲ್ಯಾಣ' ಮನುಜ ಮಂಗಳ ಕಲ್ಯಾಣ, ಭಕ್ತಿಸತಿಯ ವಿವಾಹ ಕಲ್ಯಾಣ. ಪರಮ ಪದ ಕೈವಲ್ಯ ಕಲ್ಯಾಣ ಬಸವನಂತರ್ಗ ಭಕ್ತರ ಕಲ್ಯಾಣ—ಹೀಗೆ 'ಚಾಳುಕ್ಯ ರಾಯನ ಕಲ್ಯಾಣ'ವು 'ಬಸವ ಕಲ್ಯಾಣ'ವಾಗಿ ಮಾರ್ಪಟ್ಟುದಕ್ಕೆ ಇಲ್ಲಿನ ಸಾಂಸ್ಕೃತಿಕ ಅರ್ಥ ವ್ಯುತ್ಪಾದನ ಗುಣವೇ (Generative Quality) ಕಾರಣವಾಗಿದೆ.

'ವಿಜಯನಗರ' — 'ವಿಜಯ ಕಲ್ಯಾಣ' — 'ವಿದ್ಯಾನಗರಿ' :

ವಿಜಯನಗರ ಅರಸರ ಯುದ್ಧ ಪರಾಕ್ರಮ ಹಾಗೂ ವಿಶೇಷತಃ ಬಹಮನಿ ಸುಲ್ತಾನರ ಮೇಲೆ ಸಾಧಿಸಿದ ಪ್ರಚಂಡ ವಿಜಯ ಕಾರಣಗಳಿಂದಾಗಿ ಈ ನಗರವು 'ವಿಜಯ'ನಗರ (City of Victory) ವೆಂದು ಹೆಸರಾದುದನ್ನು ಇತಿಹಾಸಜ್ಞರು ಒಡಂಬಡುವರಾದರೂ 'ವಿಜಯ' ಎಂಬ ಪೂರ್ವ ವಿಶೇಷಣೆಯನ್ನು ಸೇರಿಸಲು ಇನ್ನೂ ಹಲವು ಸಂಗತಿಗಳು ಅಡಕವಾದಂತಿವೆ. ಕರ್ನಾಟಕದ ಅರಸರು ತಮ್ಮ ಹೆಸರುಗಳಿಗೆ 'ವಿಜಯ'ವೆಂಬ ಅಭಿಧಾನವನ್ನು ಸೇರಿಸಿರುವುದು ಒಂದು ಪರಂಪರೆಯೇ ಆಗಿದೆ. ವಿಜಯಾದಿತ್ಯ, ವಿಜಯ ವಿರೂಪಾಕ್ಷ (ಇನೆಯ ಬಲ್ಲಾಳ). ಈ ಹಿನ್ನೆಲೆಯಲ್ಲಿಯೇ ವಿಜಯನಗರದ ಅರಸರಲ್ಲಿ ವಿಜಯರಾಯ. ಹೀಗೆ ಈ ಹೆಸರುಗಳ ಖ್ಯಾತಿಯೂ ಒಂದು ಕಾರಣವಾಗಿ, ಅದು ಸ್ಥಳನಾಮದ ಮೇಲೂ ಬಂದು

---

5. Culture bound place names are usually generative, compound words, Idioms and phrases and even proverbs containing such Items will be there in the language. (See. Balakrishnan B. C. (1987). ಭೌಗೋಳಿಕ ಸ್ಥಳನಾಮಗಳನ್ನು ಕೋಶದಲ್ಲಿ ಹೆಸರಿಸ ಲಾಗದಿದ್ದರೂ, ಅರ್ಥ ವಿಸ್ತರಣೆಯಿಂದಾಗಿ ಸಾಂಸ್ಕೃತಿಕ ಸ್ಥಳನಾಮಗಳನ್ನು ಕೋಶ-ನಿಘಂಟುಗಳಲ್ಲಿ ಸೇರಿಸುವುದು ಅನಿವಾರ್ಯವಾಗುತ್ತದೆ.

ಸೇರಿದೆ. ಅಷ್ಟೇ ಅಲ್ಲ ವಿಜಯನಗರದ ಅಧಿದೈವವಾದ ಶ್ರೀ ವಿರೂಪಾಕ್ಷನನ್ನೂ ಸಹ 'ವಿಜಯ ವಿರೂಪಾಕ್ಷ' ಎನ್ನಲಾಗಿದೆ. ಇಂತಹ ಸಾಂಸ್ಕೃತಿಕ ಕಾರಣಗಳಿಂದಾಗಿ ಈ ನಗರವನ್ನು 'ವಿಜಯನಗರ' ಎನ್ನಲಾಗಿದೆ. ಲಕ್ಕಣ್ಣ ದಂಡೇಶ ಇನ್ನೂ ಮುಂದುವರೆದು 'ಭಕ್ತಿ' ವಿಜಯ ಶ್ರೀಯನ್ನೊಳಗೊಂಡುದಲ್ಲದೆ, ಕಲ್ಯಾಣದ ಶಿವಶರಣರ ಆಶೋತ್ತರಗಳ ಮರುಸ್ಫೂರ್ತಿಪಡೆದ ಈ ನೆಲ, 'ಅಭಿನವಕಲ್ಯಾಣ' ವಾಯಿತೆಂಬರ್ಥದಲ್ಲಿ ವಿಜಯನಗರವನ್ನು 'ವಿಜಯ ಕಲ್ಯಾಣಪುರ'ನೆಂದು ಕರೆದಿದ್ದಾನೆ. ಐತಿಹಾಸಿಕ, ಆಡಳಿತ ದೃಷ್ಟಿಯಿಂದ 'ವಿಜಯನಗರ'ವೆಂತಲೂ[6], ಧಾರ್ಮಿಕವಾಗಿ ವಿಜಯ ಕಲ್ಯಾಣಪುರವೆಂತಲೂ ಕೀರ್ತಿವಡೆದಂತೆ ಸಂಸ್ಕೃತಿ, ವಿದ್ಯೆಗಳ ಪುರೋಭಿವೃದ್ಧಿಯಿಂದಾಗಿ ಇದು 'ವಿದ್ಯಾನಗರ' ವೆಂದೂ ಹೆಸರಾಗಿದೆ. ಹರಿಹರ ಬುಕ್ಕರು ವಿದ್ಯಾರಣ್ಯರಿಂದ ಅನುಗ್ರಹಿತರಾಗಿ ರಾಜ್ಯವಾಳಿದ್ದರಿಂದ ಇದಕ್ಕೆ 'ವಿದ್ಯಾನಗರ'ವೆಂದು ಹೆಸರು ಪ್ರಾಪ್ತವಾಯಿತೆಂದು ಕೆಲವು ಇತಿಹಾಸಕಾರರು ಹೇಳಿರುವರಾದರೂ[7], ಇದು ವಿದ್ಯಾರಣ್ಯರಿಂದಲೇ ಪ್ರಾಪ್ತವಾದ ಹೆಸರೆಂಬುದನ್ನು ಸಮರ್ಥಿಸಲು ಆಧಾರಗಳ ಕೊರತೆಯಿದೆ.

ವಿಜಯ ನಗರದ ದೊರೆಗಳನ್ನು 'ವಿಜಯ ನಗರಾಧೀಶ' ರೆಂತಲೂ, ಅಲ್ಲಿನ ಸ್ಥಳ ದೈವತರನ್ನು 'ವಿಜಯ ವಿರೂಪಾಕ್ಷ' 'ವಿಜಯ ವಿಠಲ' ಅಷ್ಟೇಏಕೆ ವಿದ್ಯಾರಣ್ಯರನ್ನೂ, ಸಹ 'ವಿಜಯ ವಿದ್ಯಾರಣ್ಯ' ರೆಂದೇ ಹೆಸರಿಸುವ ಉಪಕ್ರಮವಿರುವಲ್ಲಿ 'ವಿಜಯ' ಪದವು ನಗರಕ್ಕೆ ವಿಶೇಷಣೆಯಾಗಿ ಜೋಡಣೆಗೊಂಡು ಮುಂದುವರೆದಂತೆ 'ವಿದ್ಯಾರಣ್ಯ'ರ ಪ್ರಭಾವಳಿಯಲ್ಲಿ ಈ ಹೆಸರು 'ವಿದ್ಯಾನಗರ' ವೆಂದೇ ಏಕೆ ಮುಂದುವರೆಯಲಿಲ್ಲ ? ಮೇಲಾಗಿ ವಿದ್ಯಾರಣ್ಯರ ಪ್ರಭಾವ ವಿಶೇಷದಿಂದಾಗಿಯೇ ಅಂದಿನ ವೀರಶೈವ ಕವಿಗಳು ವಿಜಯ ನಗರವನ್ನು 'ವಿದ್ಯಾನಗರಿ'ಯೆಂದು ಸೂಚಿಸಲಾರರು. ಪ್ರೌಢದೇವರಾಯನ ಕಾವ್ಯ (೧–೩೬, ೩೯) ಶರಸ್ಥಲ ನಾಗಿದೇವಚರಿತೆ (೫–೮೮) ಚನ್ನಬಸವ ಪುರಾಣ (೬೩–೧೬) ಇವೇ ಮುಂತಾದ ವೀರಶೈವ ಪುರಾಣಗಳಲ್ಲಿ 'ವಿದ್ಯಾನಗರ' ಪ್ರಯೋಗವಿದೆ. ಈ ಹಿನ್ನೆಲೆಯಿಂದ ವೀರಶೈವ ಕವಿಗಳು ಪುರಸ್ಕರಿಸುವ ವಿದ್ಯಾನಗರಿಗೆ ವಿಜಯನಗರ ಅರಸರ ವಿದ್ಯಾಪೋಷಣೆ ಸಂಸ್ಕೃತಿ, ಕಲೆಗಳ ಮಹದಾಶ್ರಯವೇ ಕಾರಣವಾಗಿರುವದಲ್ಲದೆ, ನೀಲಕಂಠ ಶಾಸ್ತ್ರಿಗಳು ಸೂಚಿಸುವ ವಿದ್ಯಾರಣ್ಯರೆಂಬ ವ್ಯಕ್ತಿ ನಿಷ್ಠ ಹೆಸರಿನ ಪ್ರಭಾವ ವಿಶೇಷವು ಅಷ್ಟೊಂದಾಗಿ ಕಾರಣವಾಗಿಲ್ಲ.

---

6. ಅಬ್ದುಲ್ ರಝಾಕನು ಇದನ್ನು 'ಬೆಜನಗರ' ಎಂದಿದ್ದಾನೆ.
7. Neelakantha Shastri K. A. (1966).

ಐತಿಹಾಸಿಕ ಪರ್ಯಾಯ ಸ್ಥಳನಾಮ ವಿವರ :

ಶಾಸನ, ಕಾವ್ಯ ಹಾಗೂ ಸ್ಥಳ ಪುರಾಣ–ಸ್ಥಳವದಂತಿಗಳ ಮೇಲಿಂದ ಐತಿಹಾಸಿಕ ಸ್ಥಳನಾಮಗಳಲ್ಲಿ ಕಂಡುಬರುವ ಪರ್ಯಾಯ ನಾಮಗಳನ್ನು (Historical alternant forms) ಶೋಧಿಸಲು ನಮಗೆ ಸಾಧ್ಯವಾಗುತ್ತದೆ. ಲಕ್ಕಣ್ಣದಂಡೇಶನ ಜನ್ಮಸ್ಥಳ ವಿರೂಪಾಕ್ಷಪುರ. ಕ್ರಿ.ಶ. ೧೪೩೧ರ ಮುಳಬಾಗಿಲ ಶಾಸನದಲ್ಲಿ ಲಕ್ಕಣ್ಣದಣ್ಣಾಯಕರು 'ವಿರೂಪಾಕ್ಷಪುರ' ಮೊದಲಾದ ೨ ಹಳ್ಳಿಗಳನ್ನು ಶ್ರೀಪ್ರಸನ್ನ ವಿರೂಪಾಕ್ಷದೇವರಿಗೆ ಧಾರಾದತ್ತವಾಗಿತ್ತರೆಂದು ಹೇಳಿದೆ. ಆದರೆ ಕ್ರಿ.ಶ. ೧೪೧೦ರ ಹೊಳಲ್ಕೆರೆ ಶಾಸನವೊಂದು ಹೊಸಪಟ್ಟಣದ ಲಕ್ಕಣ್ಣ ಒಡೆಯರ ನಿರೂಪದಿಂ ಎಂದು ವಿವರಿಸುತ್ತದೆ. ಇದರಿಂದ ವಿರೂಪಾಕ್ಷಪುರದ ಮೊದಲಿನ ಹೆಸರು ಹೊಸಪಟ್ಟಣವೆಂದು ನಿರ್ಧರಿಸಬಹುದು. ಆದರೆ ಇದಕ್ಕೂ ಪ್ರಾಚೀನ ಆಧಾರಗಳು ಮೂಲತಃ ಹೊಸಪಟ್ಟಣಕ್ಕೆ ವಿರೂಪಾಕ್ಷಪುರವೆಂದೇ ಹೆಸರಿದ್ದು, ಮತ್ತೊಂದು ಕಾಲಕ್ಕೆ ಮತ್ತೆ ಮೊದಲಿದ್ದ ವಿರೂಪಾಕ್ಷಪುರವೆಂಬ ಹೆಸರೇ ಖಾಯಂ ಆದ ಸ್ವಾರಸ್ಯ ಸಂಗತಿಯ ಮೇಲೆ ಬೆಳಕುಚೆಲ್ಲುತ್ತವೆ. ಅವನ್ನಿಲ್ಲಿ ಆಳರಸರ ಕಾಲಕ್ರಮ ಹಾಗೂ ಆಕರದೊಂದಿಗೆ ಸೂಚಿಸಿದೆ.

ಶ್ರೀವೀರ ವಿಜಯ ವಿರೂಪಾಕ್ಷಪುರ (೩ನೆಯ ವೀರಬಲ್ಲಾಳ ಕ್ರಿ.ಶ. ೧೩೩೯).

ಹೊಸಪಟ್ಟಣ (ವಿರೂಪಾಕ್ಷ ಬಲ್ಲಾಳ IV ಕ್ರಿ.ಶ. ೧೩೪೦) ಯುವ ರಾಜ್ಯಾಭಿಷೇಕ ಕಾಲಕ್ಕೆ ಪ್ರಾಪ್ತವಾದ ನೂತನ ಅಭಿಧಾನ).

ಹೊಸವೀಡು (೩ನೆಯ ಬಲ್ಲಾಳ ಗೌರಿಬಿದನೂರು ತಾಲೂಕಿನ ಹೊಸೂರು ಶಾಸನ).

ಪಟ್ಟಣದ ನಾಡು । ಹೊಸಪಟ್ಟಣ (ದೇವರಾಯ I ಹೊಳಲ್ಕೆರೆ ಶಾಸನ ಕ್ರಿ.ಶ. ೧೪೧೦).

ವಿರುಪಾಕ್ಷಪುರ (೨ನೆಯ ದೇವರಾಯ ಹಾಗೂ ಲಕ್ಕಣ್ಣ ದಂಡನಾಯಕರ ಕಾಲ ಕ್ರಿ.ಶ. ೧೪೩೧).

ಇಂದಿಗೂ ಕೋಲಾರ ಜಿಲ್ಲೆಯಲ್ಲಿರುವ ಈ ಗ್ರಾಮಕ್ಕೆ 'ವಿರೂಪಾಕ್ಷಪುರ ವೆಂದೇ ಕರೆಯಲಾಗುತ್ತದೆ. ಮಹಮ್ಮದೀಯ ದಾಳಿಗಳಿಂದ ದ್ವಾರಸಮುದ್ರವು ಹಾಳಾದ ಮೇಲೆ ೩ನೆಯ ವೀರಬಲ್ಲಾಳನು ತನ್ನ ಮಗನಿಗೆ ರಾಜ್ಯ ಪಟ್ಟಾಭಿಷೇಕ ವನ್ನು ಈ ಪಟ್ಟಣದಲ್ಲಿ ನೆರವೇರಿಸಿ. ವಿರೂಪಾಕ್ಷಪುರವನ್ನು ಹೊಸ ಪಟ್ಟಣವೆಂದು ಮಾರ್ಪಡಿಸಿದ್ದು ಒಂದು ಐತಿಹಾಸಿಕ ಘಟನೆ. ಆದರೆ ವಿಜಯನಗರದ ಅರಸರ ಇಷ್ಟದೈವವಾದ ಅಧಿಷ್ಠಾನ ಹಾಗೂ ಪ್ರಸನ್ನ ವಿರೂಪಾಕ್ಷದೇವರಿಗೆ ಧಾರಾದತ್ತವಾಗಿ ಸಿದ ಆ ಪುರ ಮತ್ತೆ ವಿರೂಪಾಕ್ಷಪುರವೆಂದೇ ಲಕ್ಕಣ್ಣ ದಂಡೇಶನ ಕಾಲಕ್ಕೆ ಮುಂದೆ

ಹೆಸರಾಗುತ್ತದೆ. ಚಾರಿತ್ರಿಕ ಸ್ಥಳನಾಮಗಳು ಹೇಗೆ ಕಾಲಕಾಲಕ್ಕೆ ಬದಲಾಗುತ್ತವೆ ಯೆಂಬುದಕ್ಕೆ ಇದೊಂದು ನಿದರ್ಶನ ಇಲ್ಲಿನ ಆಧಾರಗಳಿಂದ ವಿರೂಪಾಕ್ಷಪುರ ಎಂಬ ಸ್ಥಳನಾಮಕ್ಕೆ ಪಟ್ಟಣದನಾಡು ಹಾಗೂ ಹೊಸಪಟ್ಟಣವೆಂಬಿವೆರಡು ಪರ್ಯಾಯ ನಾಮಗಳಿದ್ದವೆಂಬ ಸಂಗತಿ ಖಚಿತವಾಗುತ್ತದೆ.[8] ಹೊಸದಾಗಿ ಪುರ ಊರುಗಳನ್ನು ನಿರ್ಮಿಸುವುದು ಇಲ್ಲವೆ ಇದ್ದ ಹೆಸರುಗಳಿಗೆ ಹೊಸ ಹೆಸರುಗಳನ್ನಿಡುವುದು, ಅಂದಂದಿನ ಆಳರಸರು, ಮಂತ್ರಿ, ದಣ್ಣಾಯಕರು ತಮ್ಮ ತಮ್ಮ ಹೆಸರುಗಳಿಂದ ಸ್ಥಳಗಳಿಗೆ ನಾಮಕರಣ ಮಾಡಿರುವುದು ಇಲ್ಲವೆ ಅಲ್ಲಿನ ಅಧಿದೈವದ ಮೇಲಿಂದ ಆ ಊರಿಗೆ ನಾಮಕರಣ ಮಾಡಿರುವ ಯಥೇಷ್ಟ ಸಂಗತಿಗಳನ್ನು ನಾವು ಕರ್ನಾಟಕದ ಶಾಸನ ಗಳಲ್ಲಿ ಕಾಣಬಹುದು.

ಶಿಷ್ಟರೂಪಗಳ ಪರಿಶೋಧನೆ:

ಸ್ಥಳಗಳ ಶಿಷ್ಟರೂಪವನ್ನು ತಿಳಿದುಕೊಳ್ಳುವುದು ಸ್ಥಳನಾಮ ಅಧ್ಯಯನದ ಪ್ರಮುಖ ಆಶಯಗಳಲ್ಲೊಂದು. ವಿದೇಶಗಳಲ್ಲಿ ಮುಖ್ಯವಾಗಿ ಯು.ಎಸ್.ಎ.ದಲ್ಲಿ Board of Geographical Names ಕ್ರಿ.ಶ. ೧೮೯೦ರಲ್ಲೇ ಸ್ಥಾಪಿತಗೊಂಡು ಈ ವಿಷಯಕ ವಾಗಿ ಕಾರ್ಯ ನಿರ್ವಹಿಸುತ್ತಲಿವೆ. ಭಾರತದಲ್ಲಿ ಸ್ವಾತಂತ್ರ್ಯನಂತರದಲ್ಲಿ ಕೆಲವೊಂದು ರಾಜ್ಯಗಳಲ್ಲಿ 'State Namcs Authority' ಸ್ಥಾಪಿತಗೊಂಡು, ಆಯಾ ಪ್ರಾಂತೀಯ ಪ್ರಾದೇಶಿಕ ಸ್ಥಳನಾಮಗಳ ಉಚ್ಚಾರಣೆ ಹಾಗೂ ಪದ ಪ್ರಯೋಗದಲ್ಲಿ ಏಕರೂಪತೆ ಯನ್ನು ಸಾಧಿಸಲು ಯತ್ನಿಸಿವೆ. ಗೆಜೆಟಿಯರ್; ಸರ್ವೇಕ್ಷಣ ಇಲಾಖೆ, ಕಂದಾಯ ಇಲಾಖೆ, ಜನಗಣತಿ ವರದಿ, ಅಂಚೆ–ತಂತಿ ಇಲಾಖೆ ಇವೇ ಮುಂತಾದವು ಸ್ಥಳ ನಾಮಗಳ ಶಿಷ್ಟ ದಾಖಲಾತಿಯನ್ನು ಮಾಡುತ್ತ ಬಂದಿದ್ದರೂ ಸಂಗ್ರಹಿಸಿರುವ ಅನೇಕ ಸ್ಥಳಗಳಲ್ಲಿ ಸಂದಿಗ್ಧತೆ, ಉಚ್ಚಾರ ದೋಷಗಳು ಇನ್ನೂ ಉಳಿದಿವೆ. ಈ ಸಮಸ್ಯೆಯ ನಿವಾರಣೆಗೆ ನಾವು ಪ್ರಾಚೀನ ಸಾಹಿತ್ಯ ಕಾವ್ಯ, ಪುರಾಣ, ಶಾಸನ ಹಾಗೂ ಮತ್ತಿತರ ದಾಖಲೆಗಳ ಮೇಲೆ ಕಣ್ಣಾಡಿಸಿದರೆ ಇಂದಿನ ಎಷ್ಟೋ ಅಶಿಷ್ಟ ಸ್ಥಳನಾಮ ರೂಪಗಳಿಗೆ ಅವಕ್ಕೆ ಹಿಂದಿದ್ದ ಶಿಷ್ಟ ರೂಪಗಳನ್ನು (Standard forms) ಕಂಡುಕೊಳ್ಳ ಬಹುದು ಲಕ್ಕಣ್ಣ ದಂಡೇಶನು ಉಲ್ಲೇಖಿಸುವ ಸ್ಥಳನಾಮಗಳ ಶಿಷ್ಟರೂಪಗಳನ್ನು

---

8. ಇತಿಹಾಸಕಾರರಿಗೆ ಇವೆರಡು ಪರ್ಯಾಯ ಹೆಸರುಗಳಲ್ಲಿನ ಸಂದಿಗ್ಧತೆ ಬಹುವಾಗಿ ಕಾಡಿದ್ದುಂಟು ಹಂಪೆ ವಿಜಯನಗರಗಳಿಗೂ ಸಹ ಇದನ್ನು ಅನ್ವಯಿಸಿರುವುದು ಒಂದು ಅವಾಂತರ ಹಂಪೆಯ ಪರ್ಯಾಯ ಹೆಸರುಗಳು: ವಿರೂಪಾಕ್ಷಪುರ, ಹೊಸಪಟ್ಟಣ, ಹೊಸ ಹಂಪೆಪಟ್ಟಣ, ಹಸ್ತಿನಾವತಿ, ಹಂಪೆ ಡಾ! ಕೃಷ್ಣಸ್ವಾಮಿ ಅಯ್ಯಂಗಾರ್ ಉಲ್ಲೇಖ–ಎಚ್. ದೇವೀರಪ್ಪ (ಪು. 61) ಗೌರಿಬಿದನೂರು ತಾಲೂಕಿನ ಹೊಸೂರು–ಹೊಸಪಟ್ಟಣವೆಂದು ಲೂಯಿರೈಸ್‌ರ ಸಂದೇಹ ಅಲ್ಲದೆ ಹೊಸ ಪಟ್ಟಣವು ವಿಜಯನಗರದ ಮೇರೆಗಳಲ್ಲೊಂದಾಗಿತ್ತೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. (Mysore Vol. II p. 133) ಇನ್ನು ಕೆಲವರಂತೂ ಇದು ಯಾವ ನಗರವೆಂದು ತಿಳಿಯ ದೆಂದು ನಿರುಪಾಯರಾಗಿದ್ದಾರೆ (ಎಂ. ವಿ. ಕೃಷ್ಣರಾವ್)

ಇಂದಿನ ವ್ಯಾವಹಾರಿಕ ಅಶಿಷ್ಟ ಉಚ್ಚಾರಿತ ಸ್ಥಳನಾಮಗಳೊಂದಿಗೆ ಇಲ್ಲಿ ಪಟ್ಟಿಮಾಡಿದೆ.

ಪ್ರಸ್ತುತ ಅಶಿಷ್ಟ ರೂಪ			ಪ್ರಾಚೀನ ಶಿಷ್ಟ ರೂಪ
ಮಾಯಸಂದ್ರ	——	<	ಮಾಯಿ ಸಮುದ್ರ
ಗುಮ್ಮಳಾಪುರ	——	<	ಗುಮ್ಮಹಾಳೆಂಬ ಪುರ
ಆರತೊಳ್ಳು	——	<	ಅರ್ಹವೊಳಲು, ಹರಹಕೊಳಲು
ಕಂಕೆರೆ	——	<	ಕನಕಗೆರೆ
ಕೋಳಕೂರ	——	<	ಕೊಳಕುಱುವ (ಕುಱುವ = ಬೆಟ್ಟ)
ಪೊಟ್ಟಂಚೆರು	——	<	ಪೊ (ಹೊ)ಟ್ಟಣಗೆಱೆ
ಭಾಲ್ಕಿ	——	<	ಬಳ್ಳಿಕೊಬಲ್ಲುಕೆ
ಮಳಖೇಡ	——	<	ಮಳೆಯಖೇಡ
ಮೋಟಗಿ	——	<	ಮೊರಟಗೆ
ಕಲ್ಬುರ್ಗಿ	——	<	ಕಲುಬುರಿಗೆ
ಆದವಾನಿ	——	<	ಆದವನಿ
ಕೊಟ್ಟೂರ	——	<	ಕೊಟ್ಟಾ (ರಾ)ರ
ಅಂಬಲಗಿ	——	<	ಅಂಬಲಿಕೆ
ಹುಳಗೇರಿ	——	<	ಹುಳ್ಳಿಯಂಗೆಱೆ
ಮುಗಿ	——	<	ಮೊಘೆ
ಶಾಬಾದ್	——	<	ಸಾಬಾದಿ
ಯೊಳಗಿ	——	<	ಎಳಗೆ
ದಿಗ್ಗಿ	——	<	ದಿಗ್ಗಾವೆ

ಸ್ಥಳನಾಮಗಳಲ್ಲಿ ಭಾಷಾವೈಜ್ಞಾನಿಕ ವ್ಯತ್ಯಾಸಗಳು:—

ಲಕ್ಕಣ್ಣ ದಂಡೇಶನು ಕೊಟ್ಟಿರುವ ಕೆಲವು ಸ್ಥಳನಾಮಗಳ ರಚನೆಯನ್ನು ಭಾಷಾ ವೈಜ್ಞಾನಿಕ ವ್ಯತ್ಯಾಸ ಪ್ರಕ್ರಿಯೆಗಳೊಂದಿಗೆ ಇಲ್ಲಿ ನಾವು ಪರಿಶೀಲಿಸಬಹುದು. ಮುಖ್ಯವಾಗಿ ಕೆಲವೊಂದು ಸ್ಥಳನಾಮ ಘಟಕಗಳಲ್ಲಿ ಸ್ಥಳನಾಮಪ್ರತ್ಯಯಗಳು ಸೇರುವಾಗ ಅವುಗಳ ಪ್ರಕೃತ್ಯಂತ್ಯವು ದೀರ್ಘವಾಗುವ ಪ್ರಕ್ರಿಯೆ ಕುರಿತು ಮಾತ್ರ ಇಲ್ಲಿ ವಿವೇಚಿಸಿದೆ. ಪುರ, ವಾಡಿ, ಊರು, ಮಲೈ, ಸ್ಥಲ—ಈ ಪ್ರತ್ಯಯಗಳ ಹಿಂದಿನ ದೀರ್ಘಕ್ಕೆ ಇಲ್ಲಿ ಉದಾಹರಿಸಿದೆ.

ಉದಾ :	/ಪುರ/ :	ಹಂಪೆ + ಪುರ ⟶ ಹಂಪಾಪುರ
		ವೈಲ + ಪುರ ⟶ ವೈಲಾಪುರ
		ಧಾರ + ಪುರ ⟶ ಧಾರಾಪುರ
		ದಕ್ಷಿಣ + ಪುರ ⟶ ದಕ್ಷಿಣಾಪುರ
		ಶಾಮಲ + ಪುರ ⟶ ಶಾಮಲಾಪುರ
		ಸೊನ್ನಲ + ಪುರ ⟶ ಸೊನ್ನಲಾಪುರ
	/ವಾಡಿ/	ಇಂಗುಳ + ವಾಡಿ ⟶ ಇಂಗುಳಾವಾಡಿ
	/ಊರು/	ತಿರು + ವ್ (ಅ) + ಪುರ ⟶ ತಿರುವಾವೂರು
	/ಮಲೈ/	ತಿರುವಣ + ಮಲೈ ⟶ ತಿರುವಣ್ಣಾಮಲೈ
	/ಸ್ಥಲ/	ಕಾಯುವರ + ದ + ಸ್ಥಲ ⟶ ಕಾಯುವರದಾ ಸ್ಥಲ
		ಕಾಳಿಕ + ಪುರ ⟶ ಕಾಳಿಕಾಪುರ

ಪ್ರಕೃತಿಯ ಅಂತ್ಯದ ದೀರ್ಘೀಕರಣಕ್ಕೆ ಈ ಕೆಳಗಿನ ಪ್ರಕ್ರಿಯೆಗಳು ಕಾರಣವಾದಂತಿವೆ.[9] (1) ಮೊದಮೊದಲಿಗೆ ಗ್ರಾಮನಾಮಗಳನ್ನು ಸಂಯುಕ್ತ ರೂಪದೊಡನೆ ವಾಕ್ಯಮಟ್ಟದಲ್ಲಿಯೇ ಪ್ರಯೋಗಿಸುವ ವಾಡಿಕೆಯಿದ್ದಿರಬಹುದೆಂಬು ದಕ್ಕೆ ಶಿವತತ್ವಚಿಂತಾಮಣಿಯಲ್ಲಿ ನಿದರ್ಶನಗಳಿವೆ. ಉದಾ ; ಹುಲಿಗೆರೆಯೆನಿಪ್ಪ ಪುರ ಇಲ್ಲಿನ 'ಎನಿಪ್ಪ' ಎಂಬ ವಾಚಕ ಪ್ರತ್ಯಯವನ್ನು ದೀರ್ಘಗೊಳಿಸಿ 'ಎನಿಪ್ಪಾ' ಎಂದೂ ಸಂಬೋಧಿಸಿರುವುದಕ್ಕೆ ಹಿಂದಿನ ಕಾವ್ಯಗಳಲ್ಲಿ ಉದಾಹರಣೆಗಳಿವೆ. ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು (ಕಬ್ಬಿಗರ ಕಾವ–ಆಂಡಯ್ಯ) ಆದರೆ ಕಾಲ ಕ್ರಮದಲ್ಲಿ ಈ ವಾಚಿಕ ಪ್ರತ್ಯಯಗಳು ಲೋಪಗೊಂಡು, ಸ್ಥಳನಾಮ ಪ್ರಕೃತಿಯನ್ನು ಷಷ್ಠ್ಯಂತ ದೀರ್ಘದೊಂದಿಗೆ ಸಂಕ್ಷಿಪ್ತಗೊಳಿಸಿ ನಿರ್ದೇಶಿಸುವ ಕ್ರಮ ಮೊದಲಾಗಿದೆ. ಹಂಪೆ + ಅ + ಪುರ—ಹಂಪೆಯಪುರ > ಹಂಪಾಪುರ ಕಾಯುವರದ + ಸ್ಥಲ = ಕಾಯುವರದಾಸ್ಥಲ.

(೨) ಷಷ್ಠಿ ಪ್ರತ್ಯಯ ಲೋಪವಿರುವಲ್ಲಿ ಸಂಬೋಧನೆಯ ದೀರ್ಘವಿಕರಣವು ಸೇರಿ ಸ್ಥಳನಾಮಗಳನ್ನು ನಿರ್ದೇಶಿಸುವಾಗ; ಪ್ರಕೃತಿಯ ಅಂತ್ಯಕ್ಕೆ ದೀರ್ಘವು ಸೇರಿ

9. ಡಾ। ಎಂ. ಚಿದಾನಂದ ಮೂರ್ತಿಯವರ 'ವರ–ವಾರ' ಎಂದು ಕೊನೆಗೊಳ್ಳುವ ಸ್ಥಳನಾಮಗಳ ವಿವೇಚನೆಯಲ್ಲಿ ಇವೆರಡೂ ಧ್ವನಿಮಾ ನಿಯಂತ್ರಿತ (Phonological Conditioned) ವಾದ ವಿಶಿಷ್ಟ ಪರಿಸರದಲ್ಲಿ ಸೇರುವ ಎರಡು ಸ್ಥಳನಾಮ ವಾರ್ಗಿಕದ ಉಪಾಕೃತಿಮ ಗಳೆಂದು ಹೇಳಿರುವುದು ಸರಿಯಾದರೂ, ಲೇಖನದ ಕೊನೆಯಲ್ಲಿ 'ವರ'ದ ಹಿಂದಿನ ದೀರ್ಘಕ್ಕೆ ಮೂಲ ಪದದ ಸಹಾಯದಿಂದ ವಿವರಣೆ ಕೊಡುವುದು ಕಷ್ಟ ಎಂದಿದ್ದಾರೆ. (ಚಿದಾನಂದ ಮೂರ್ತಿ ಎಂ.) (1981) ಆದರೆ ಮೇಲೆ ಹೇಳಿದ ಪ್ರಕೃತಿ ಅಂತ್ಯದ ದೀರ್ಘ ಪ್ರಕ್ರಿಯೆಯ ಸಹಾಯದಿಂದ ಅವರು ಸೂಚಿಸುವ ವಾರ್ಗಿಕಗಳ ಹಿಂದಿನ ದೀರ್ಘೀಕರಣದ ಸಮಸ್ಯೆಗೆ ನಾವು ಪರಿಹಾರ ಕಂಡುಕೊಳ್ಳಬಹುದಾಗಿದೆ.

ಕೊಂಡಿವೆ. ಉದಾಹರಣೆ: ಮೈಲ→ಮೈಲಾ—ಮೈಲಾಪುರ, ಧಾರ—ಧಾರಾ—ಧಾರಾಪುರ, ದಕ್ಷಿಣ — ದಕ್ಷಿಣಾ — ದಕ್ಷಿಣಾಪುರ, ತಿರುವಣ — ತಿರುವಣ್ಣಾ — ತಿರುವಣ್ಣಾಮಲೈ.

(೩) ಕೆಲವೊಂದು ಗ್ರಾಮದೇವತೆಗಳಿಂದ ನಿಷ್ಪನ್ನಗೊಳ್ಳುವ ಸ್ಥಳಗಳಿರುವಲ್ಲಿ ಸಂಸ್ಕೃತ ಸ್ತ್ರೀಲಿಂಗರೂಪಗಳಿಗೆ ಸಹಜ ದೀರ್ಘೀಕರಣವು ಸೇರಿದೆ. ಉದಾಹರಣೆ: ಕಾಳಿಕಾ + ಪುರ—ಕಾಳಿಕಾಪುರ, ಚೌಡಾ + ಪುರ—(< ಚಾಮುಂಡಿ) ಚೌಡಾಪುರ, ಸೀತಾ + ಪುರ—ಸೀತಾಪುರ ಉಳಿದ ಸಂಸ್ಕೃತ ದೀರ್ಘಾಂತ್ಯ ಪ್ರಕೃತಿಗಳಿರುವಲ್ಲಿ ಈ ಪ್ರಕ್ರಿಯೆ ಸಾಮಾನ್ಯವಾಗಿ ತೋರಿದೆ.

ಲಕ್ಕಣ್ಣ ದಂಡೇಶನ ಸ್ಥಳನಾಮಗಳ ವರ್ಗೀಕರಣ :

ಸ್ಥಳನಾಮಗಳು ರೂಪದೃಷ್ಟಿಯಿಂದ ಎರಡು ಘಟಕಗಳನ್ನೊಳಗೊಂಡ ಸಮಸ್ತ ನಾಮಪದಗಳಾಗಿರುತ್ತವೆ. ಇಲ್ಲಿನ ಪೂರ್ವಪದ ನಿರ್ದಿಷ್ಟ (Specific) ಪರಪದ ವಾರ್ಗಿಕ (Generic) ನಿರ್ದಿಷ್ಟ ಪದಗಳು ಭೌಗೋಲಿಕ ವೈಲಕ್ಷಣ್ಯ ಹಾಗೂ ಸಾಂಸ್ಕೃತಿಕ ಅರ್ಥ ವಿಸ್ತಾರ ಹಾಗೂ ನಿರ್ವಚನ ಸಾಮರ್ಥ್ಯದಿಂದಾಗಿ ಅವುಗಳ ಸಂಖ್ಯೆ ಅಪರಿಮಿತವಾಗುತ್ತಾ ಹೋಗುತ್ತದೆ. ಇಂತಹ ಅಪರಿಮಿತ ವೈಲಕ್ಷಣ್ಯಗಳನ್ನು ಪರಿಮಿತ ಸಂಖ್ಯೆಯಲ್ಲಿ ವಿಭಾಗಿಸಿ, ಸ್ಥಳನಾಮಗಳನ್ನು ಒಂದು ನಿರ್ದಿಷ್ಟ ತತ್ವ—ಪ್ರಣಾಲಿಕೆಯಲ್ಲಿ ಸೂಚಿಸುವ ಕಾರ್ಯವನ್ನು ವಾರ್ಗಿಕಗಳು ನಿರ್ವಹಿಸುತ್ತವೆ. ಶಿವ ತತ್ತ್ವಚಿಂತಾಮಣಿಯಲ್ಲಿನ ಅಸಂಖ್ಯಾತ ಸ್ಥಳನಾಮದ ನಿರ್ದಿಷ್ಟ ರೂಪಗಳನ್ನು ವಾರ್ಗಿಕಗಳು ಹೇಗೆ ಸೀಮಿತಗೊಳಿಸಿವೆ ಯೆಂಬುದರ ಮಾದರಿಯಾಗಿ ಉದಾಹರಿಸಿದೆ.

ನಿರ್ದಿಷ್ಟ : ವಾರ್ಗಿಕ

ಬೆಟ್ಟದ ಪಂಪಾ ಹರಿಹರ ಶೀಲವಂತ	+ ಪುರ	ಅಟ್ಟ ತೊಂಡ ತಗಡ ಕರ	+ ಊರ	(ಅಟ್ಟಲೂರು) (ತೊಂಡನೂರು) (ತಗಡೂರು) (ಕರವೂರು)
ಮಾಚಗೊಂಡನ ಹುಲುಮನೆ ಹುಣಸೆ ಪ್ರಭಾನ	+ ಹಳ್ಳಿ	ಧೋತ್ರೆ ಮೊಂಟೆ ಹಂಚಿ ಬೆಳು	+ {ಗ್ರಾಮ} ~ ಗಾವೆ ~ ಗಾವಿ ~ ಗೆ/ಗಿ.	

I ಶಿವತತ್ವ ಚಿಂತಾಮಣಿಯಲ್ಲಿ ಸ್ಥಳನಾಮ ನಿರ್ದಿಷ್ಟ ರೂಪಗಳು : (Specifics)

ಲಕ್ಕಣ್ಣ ದಂಡೇಶನಿಗೆ ಶಿವಶರಣರ, ಅದರಲ್ಲೂ ವರ್ತಮಾನ ಶರಣರ ಸ್ಥಳಗಳನ್ನು ಹೇಳುವ ಉದ್ದೇಶ ಪ್ರಧಾನವಾಗಿದ್ದರೂ ಸಹ ಅಲ್ಲಿನ ಸ್ಥಳನಾಮಗಳು

ಅಂದಿನ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭೌಗೋಲಿಕ ಸಂಗತಿಗಳ ಮಾಹಿತಿ ಸಂಗ್ರಹಕ್ಕೆ ಅತ್ಯಮೂಲ್ಯ ದಾಖಲೆಯೆನ್ನಿಸಿವೆ. ಇಲ್ಲಿ ಎಲ್ಲ ನಿರ್ದಿಷ್ಟಗಳನ್ನು ಹೇಳುವುದು ಅಶಕ್ಯ. ಪ್ರಮುಖವಾದ ಅಂದಿನ ಸ್ಥಳನಾಮಗಳ ಗುಣ-ವೈಲಕ್ಷಣ್ಯಗಳನ್ನು ಇಲ್ಲಿ ವಿಂಗಡಿಸಿ ಹೇಳಿದೆ.

I ಭೌಗೋಲಿಕ ನಿವೇಶನಗಳು :-(Topographical locations)

1.	ಗುಡ್ಡ-ಬೆಟ್ಟ-ಪರ್ವತ	—	ಮಾತಂಗಾಚಲ, ಬೆಟ್ಟದಪುರ ವರ ಗುಡ್ಡ ಪೊಳಲು, ಗುಹಾರಣ್ಯ
2.	ಕೊಳ್ಳ-ಕಣಿವೆ-ಕಂದರ	—	ಕೊಳ್ಳಿ, ಗುಂಡಿ ಪ್ರಭೆ, ಕೊಪ್ಪಗುಳಿಗದ್ದೆ
3.	ಕಲ್ಲು-ಮಣ್ಣು	—	ಮಳಲೂರು, ಬೆಣ್ಣೆಕಲ್ಲು, ಕಲ್ಲುಬರಿಗೆ
4.	ಜಲಾಶಯ	—	ನೀರಗುಂದ, ಕೆಱೆಯೂರು, ಕೆರಾವಳಿಯ ಮಂಗಳೂರು, ತೊಱಂಗು ಹೊರುಹೂಲಿ, ಗಂಗೆವಾಡಿಯಪುರ
5.	ಗಿಡ-ಮರ-ಸಸ್ಯ	—	ನೆಲ್ಲಿಯಕೊಪ್ಪ, ಕಿತ್ತನೆಲ್ಲಿ, ಕಡಬಳ್ಳಿ, ಬಿದಿರೆ, ಹುಣಸೆವಳ್ಳಿ, ಕಳ್ಳಿಯಹಾಳು, ಬೇವುಕಲ್ಲು, ಬೇವೂರು, ಮೆಳೆ, ಹುಬ್ಬಳ್ಳಿ
6.	ಆಕಾರ-ಪ್ರಕಾರ	—	ಬಟ್ಟಕೆಱೆ ದೊಡ್ಡವಾಡ, ಪೆನುಗೊಂಡೆ,
		—	ಪೆಱೆಪೊಂಪೆ, ಹಿರಿಯೂರು, ಪಿರಿದಾಗರ ಆಯತವಾಡಿ
7.	ವರ್ಣ	—	ಕನಕಗಿರಿ, ಹೊನ್ನಲಾಪುರ, ಕೆಂಬೊರಲು
8.	ಹೂ-ಹಣ್ಣು	—	ಮಾವಿನಳ್ಳಿ, ಸಂಪಗೆ
9.	ಪಶು-ಪಕ್ಷಿ-ಪ್ರಾಣಿ	—	ನವಿಲೂರು, ಕೋಗಿಲೂರು, ಆನೆಗೊಂದಿ, ಆನೆಬಿದ್ದ ಸಿಱಿ, ಸಿಂಗಪಟ್ಟಣ, ಬಲ್ಲಿಕೆ, ಗುಬ್ಬಿ,
10.	ದಿಕ್ಕು-ದೆಸೆ	—	ಉದಯಾಪುರ, ದಕ್ಷಿಣಾಪುರ, ಪಡುವನಾಡು, ಮೇಲುಗೊಂಕಣಪುರ
11.	ಅಳತೆ-ಸಂಖ್ಯೆ	—	ಅರೆಮಾರು, ಅಸಮಕೊಳಗ, ಒಕ್ಕುಂದ

II ಸಾಂಸ್ಕೃತಿಕ ನಿವೇಶನಗಳು (Cultural locations) :

1.	ಪೌರಾಣಿಕ	—	ಅಮರಾವತಿ, ಚಂಪಾವತಿ, ಪಾತಾಳಪುರ, ರಾಮಗಿರಿ, ಬ್ರಹ್ಮಶರಧಿ, ಶಿವನಸಮುದ್ರ

2. ಪುಣ್ಯಕ್ಷೇತ್ರ — ಪಂಪಾಕ್ಷೇತ್ರ, ಪ್ರಸನ್ನ ವಿರೂಪಾಕ್ಷಪುರ, ಮುಖಲಿಂಗ ಮಧುಕೇಶ್ವರ, ಧೂಪೇಶ್ವರ, ಗುಹಾರಣ್ಯಕ್ಷೇತ್ರ ಲಕುಮಹೇಶ್ವರ

3. ಪುಣ್ಯತೀರ್ಥ — ದೇವಪೂಜದ ಹೊಳೆ, ಸಂಗಮಪುರ

4. ಕೋಟೆ–ಕೊತ್ತಲು — ಕೋಟೆಯ ಕೆರೆ, ಕೊಂಡವೀಡು

5. ಐತಿಹಾಸಿಕ ವ್ಯಕ್ತಿಗಳು — ಹೊಸದೇವರಾಯ ಪಟ್ಟಣ, ಹೊನ್ನನಾಯಕ ಪೆಲ್ಲೂರು, ಬುಕ್ಕರಾಯನ ಸಮುದ್ರ, ದಣ್ಣಾಯಕನ ಕೋಟೆ, ದೇವರಾಜೇಂದ್ರಪುರ, ಕಂಪನಾಗರ, ಗಜಪತಿಯ ಮಾಜೂರು

6. ನಾಡುನಾಯಕರು ನಾಮ್ರಿಜುಗಳು — ಮಾಯಿಗೊಂಡನಹಳ್ಳಿ, ಸಿಂಗನಾಯಕಪುರ, ಬೊಮ್ಮನಹಳ್ಳಿ, ಕೇಶಗೊಂಡನವೂರು, ಶಿವಗೊಂಡನಹಳ್ಳಿ, ಸಿರಿಪತಿಹಳ್ಳಿ, ಹೆಗ್ಗಡೆಹಳ್ಳಿ

7. ಶಿವಶರಣರು, ಶಿವಾಚಾರ ಸಂಪನ್ನರು — ಗಣಪುರ, ಬಸವರಾಜನ ಮಠ ಕಲ್ಯಾಣ ಓಹಿಲಪುರ, ಉದ್ಭಟಯ್ಯಗಳಪುರ, ಸಪ್ಪೆಯಲಿಂಗಪುರ, ಶೀಲವಂತಪುರ, ಮಹಾಮನೆ 'ಉಳವಿ'

8. ವಿವಿಧ ಜಾತಿ ಜನಾಂಗ ವರ್ಗ — ಜೋಗಾಟಿಗೇರಿ, ಕೋಟಿಅಮರಗಲ್ಲು, ಗೆಜ್ಜೆಗಾರನಹಳ್ಳಿ, ಕಬ್ಬಲೂರು ಮೋರಖಂಡಿ

9. ಉದ್ಯೋಗ–ವ್ಯಾಪಾರ — ಹರದನಹಳ್ಳಿ, ಸಂತೆಪಟ್ಟಣ, ಸಂತೆಯಾರಾಪೂರು

10. ಓದು-ವಿದ್ಯೆ — ಓದುವಳ್ಳಿ, ವೇದಗಿರಿ, ವಿದ್ಯಾನಗರ

11. ಧಾರ್ಮಿಕ — ಬ್ರಾಹ್ಮಣ :- ಪ್ರಘರ, ಅಗ್ರಹಾರ ನಾರಾಯಣಪುರ ಶೈವ :- ಶಿವಪುರ

12. ಗ್ರಾಮ ದೈವತರು — ಮಾರಕಾಪುರ, ಮಾರಿಹಳ್ಳಿ, ಎಕ್ಕಾಲೂರು ಅಮ್ಮಣ್ಣ, ಕಾಳಿಗೆ, ಚೌಡಾಪುರ

13. ಸ್ಥಳವದಂತಿ — ಭೋಜನಪುರ (ಬೋದನ(<ಏಕ ಚಕ್ರನಗರಿ) ಮೂಕಿತಿಯಹಳ್ಳಿ
14. ಐತಿಹಾಸಿಕ ಘಟನಾವಳಿ — ವಿಜಯನಗರ, ವಿಜಯಕಲ್ಯಾಣಪುರ
15. ಪುನರ್‌ನಿರ್ಮಾಣ–
ಸ್ಥಾನಾಂತರಣ — ದೇವರಾಜೇಂದ್ರಪುರ ಹಳೇಬಿಡು–
(ಪುನರ್–ನಾಮಕರಣ) ಹೊಸ ಪಟ್ಟಣ

ಸ್ಥಳನಾಮ ವಾರ್ಗಿಕಗಳು : (Generics)

ನಿರ್ದಿಷ್ಟಗಳಿಗಿಂತ ಸ್ಥಳನಾಮ ವಾರ್ಗಿಕಗಳು ಹೆಚ್ಚು ಪ್ರಾಚೀನವೆಂದು ಸ್ಥಳನಾಮ ವಿಜ್ಞಾನಿಗಳ ತರ್ಕವಾಗಿದೆ. ಪ್ರಾಕೃತಿವಾದ ಸ್ಥಳನಿವೇಶನಗಳನ್ನು ಪ್ರಾಚೀನ ಗ್ರಂಥಗಳಲ್ಲಿ ಒಂದೊಂದು ವಿಧವಾಗಿ ವಿಂಗಡಿಸಿರುವುದು ಕಂಡುಬರುತ್ತವೆ.[10] ಸ್ಥಳನಾಮ ವಾರ್ಗಿಕಗಳನ್ನು ಅವುಗಳರಚನೆಯ ಮೇಲಿಂದ 'ಮುಕ್ತ' (Free) ಬದ್ಧ (bound) ಹಾಗೂ ಇವೆರಡರಲ್ಲೂ ಸಂದಿಗ್ಧತೆಯಿರುವ ಕೆಲವೊಂದು ಅಸ್ಪಷ್ಟರೂಪಗಳನ್ನು 'ಸಂಕೀರ್ಣ'ವೆಂದಾಗಿ, ಮೂರು ರೀತಿಯಲ್ಲಿ ವಿಂಗಡಿಸಬಹುದು. ಶಿವತತ್ತ್ವ ಚಿಂತಾಮಣಿಯಲ್ಲಿ ಉಕ್ತಗೊಂಡಿರುವ ವಾರ್ಗಿಕಗಳನ್ನಿಲ್ಲಿ ಉದಾಹರಿಸಿದೆ.

1. ಮುಕ್ತ — ಊರು, ಕೇರಿ, ಹಳ್ಳಿ, ಪುರ, ವಾಡಿ, ಅಗರ, ನಾಡು, ಸಮುದ್ರ, ಸ್ಥಲ, ಬಂಡೆ, ನೆಲ್ಲಿ, ವೊಳಲು ಮುಂತಾದವು
2. ಬದ್ಧ — ಇಗೆ. ಇಲ, ವಡಿಗ, ವನಿ ಮುಂತಾದವು
3. ಸಂಕೀರ್ಣ — ಅಣ, ಅಣಾನ, ಅಲು, ಅಳೆ, ಅಸೆ, ಎಯು.

ಸ್ಥಳನಾಮಗಳು ನಿರ್ದಿಷ್ಟ ಮತ್ತು ವಾರ್ಗಿಕಗಳೆರಡನ್ನೂ ಹೊಂದಿರುವುದು ಸಾಮಾನ್ಯ ನಿಯಮವಾದಾಗಲೂ, ಕೆಲವೊಮ್ಮೆ ನಿರ್ದಿಷ್ಟ ರೂಪಗಳೇ ಸ್ವತಂತ್ರ ಸ್ಥಳನಾಮಗಳಾಗಿಯೂ ಪ್ರಯೋಗವಾಗುತ್ತವೆ. ಶಿವತತ್ತ್ವ ಚಿಂತಾಮಣಿಯಲ್ಲಿ ಇಂತಹ ಎಷ್ಟೋ ಸ್ವತಂತ್ರ ಸ್ಥಳನಾಮಗಳಿವೆ. ಉದಾ : ಚಿಬ್ಬಿ, ಮುಗಳಿ, ಉಜ್ಜೈನಿ, ಕಂಚಿ, ಕಲ್ಯಾಣ, ಜಗಿರೆ, ಮೊಘೆ, ಹಂಪೆ, ಸಾಸಲು. ಆದರೆ ಇಂತಹ ಸ್ವತಂತ್ರ ಸ್ಥಳನಾಮಗಳ ಸಂಖ್ಯೆ ಕಡಮೆಯದಾಗಿರುತ್ತದೆ. ಒಂದೊಂದು ಸ್ಥಳವೂ ಅಲ್ಲಿನ ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ವೈಲಕ್ಷಣ್ಯಗಳನ್ನು ಪ್ರತಿನಿಧಿಸು

10. ತಮಿಳಿನ ತೊಲ್ಕಾಪ್ಪಿಯಂ ದಲ್ಲಿ ಸ್ಥಳನಾಮವಾರ್ಗಿಕಗಳನ್ನು ಕುರಿಚ್ಚಿ (Hilly) ಮುಲ್ಲೈ (pastoral) ಮರುದಂ (ravine) ನೆಯ್ದಲ್ (coastal) ಹಾಗೂ ಪಾಳೈ (waste) ಎಂದು 5 ವಿಧವಾಗಿ ಹೇಳಿದೆ. ಕರ್ನಾಟಕದ ಜಾನಪದ ಅಧ್ಯಯನಗಳಲ್ಲಿ ಕನ್ನಡ ನಾಡನ್ನು ಕರಾವಳಿ, ಮಲೆನಾಡು, ಬಯಲುಸೀಮೆ ಎಂದು ಹಂಚಲಾಗಿದೆ.

ವಲ್ಲಿ ನಿರ್ದಿಷ್ಟ ಘಟಕದ ಪಾತ್ರ ಮುಖ್ಯವಾಗುತ್ತದೆ. ಇಂತಹ ಸ್ಥಳನಾಮಗಳ ಹಿಂದೆ ಸೇರುವ ನಿರ್ದಿಷ್ಟಗಳ ಸಂಖ್ಯೆ ಎಷ್ಟಿದ್ದರೂ, ಗುಣ-ವೈಲಕ್ಷಣ್ಯಗಳ ಮೇಲಿಂದ ಅವನ್ನು ವರ್ಗೀಕರಿಸುವ ಇಲ್ಲವೆ ಪ್ರತ್ಯೇಕಿಸುವ ಕಾರ್ಯವಾರ್ಗಿಕದ್ದು. ಈ ಹಿಂದೆ ಇವುಗಳ ಸೇರುವಿಕೆಯು ತತ್ತ್ವ ಪ್ರಣಾಲಿಯು ಬಗೆಗೆ ಹೇಳಲಾಗಿದೆ ಸ್ಥಳನಾಮಗಳ ನಿರ್ದೇಶನ ಮಾಡುವಾಗ ಅಲ್ಲಿನ ಆವೃತ್ತಿ (Frequency) ಯನ್ನನುಸರಿಸಿ ಕೆಲವೊಮ್ಮೆ ವಾರ್ಗಿಕವು ನಿರ್ದಿಷ್ಟದ ಸ್ಥಳದಲ್ಲಿ ಬರಬಹುದು. ಇಲ್ಲಿ ಇವುಗಳ ಬಗೆಗೆ ಹೆಚ್ಚಿಗೆ ಚರ್ಚಿಸಿದೆ, ಲಕ್ಕಣ್ಣ ದಂಡೇಶನು ಹೇಳಿರುವ ಸ್ಥಳನಾಮ ವಾರ್ಗಿಕಗಳನ್ನು ಅಕಾರಾದಿ ಪಟ್ಟಿಯಲ್ಲಿ ಹೇಳಿದೆ.[11]

| ಅ | —ಅಗೆ, ಅಣ, ಅಣನ, ಅಯ್ಯ (ಅಗೆ ~ ಅ) ಅಲ, ಅಲು, ಅಲೆ, ಅಳೆ, ಅಸೆ, ಅಂತೆ, ಅಂಬಲು
| ಆ | —ಆಗರ, ಆಜಿ, ಆಚಿ, ಆರ (ಆವರ ~ ವರ)
| ಇ | —ಇಗೆ, ಇಲ
| ಈ | —ಈಶ್ವರ
| ಉ | —ಉಂಗುರ, ಉಡೆ, ಉವೆ, ಉಳ
| ಊ | —ಊಟ, ಊರು
| ಎ | —ಎಡಲು, ಎಯು
| ಕ್ | —ಕಣವೆ, ಕಲ್ಲು, ಕುಂದ, ಕುಱವ, ಕೂಡಲು, ಕೂರ, ಕೆದಱು, ಕೆಲಗೆ, ಕೆರೆ, ಕೊಡಗಿ, ಕೊಪ್ಪ, ಕೊಳಗು, ಕೊಳಲು, ಕೊಂಡೆ, ಕೋಟೆ, ಕ್ಷೇತ್ರ
| ಖ್ | —ಖಂಡಿ, ಖೇಟ
| ಗ್ | —ಗಟ್ಟ, ಗಡು, ಗಲ್ಲು, ಗಾದೆ, ಗಿರಿ, ಗುತ್ತಿ, ಗುಹೆ, ಗುಂಜಿ, ಗುಂಡಿ, ಗೆಡದ, ಗೆಡಹು, ಗೊಡಲು, ಗೊಂದಿ
| ಚ್ | —ಚಂಡಿ, ಚೂರು
| ತ್ | —ತೊಳಲು
| ದ್ | —ದನ, ಧೂಪೇಶ್ವರ
| ನ್ | —ನಗರ, ನಾಡು, ನಾಮೆ, ನಿಧಿ, ನೆಲ್ಲಿ
| ಪ್ | —ಪಟ್ಟಣ, ಪಱಿಗೆ, ಪರ್ವತ, ಪಳ್ಳಿ, ಪ್ರಭೆ, ಪಾಡು, ಪುರ, ಪೆಂಡೆ

11. ನಿರ್ದಿಷ್ಟ ಘಟಕವನ್ನು ಭೌಗೋಲಿಕ ಮತ್ತು ಸಾಂಸ್ಕೃತಿಕವೆಂದೂ ವರ್ಗೀಕರಿಸುವಂತೆ, ಸ್ಥಳನಾಮವಾರ್ಗಿಕಗಳೂ ಸಹ ಇವೇ ಎರಡು ಗುಂಪುಗಳಲ್ಲಿ ನಿರ್ದೇಶಿತಗೊಳ್ಳುವುದರಿಂದ ಅವನ್ನಿಲ್ಲಿ ವಿಷಯನಿಷ್ಠವಾಗಿ ವರ್ಗೀಕರಿಸಿರದೆ ರೂಪನಿಷ್ಠವಾಗಿ ಮಾತ್ರ ಎತ್ತಿಕೊಟ್ಟಿದೆ.

| ಬ್ | —ಬಳ್ಳಿ, ಬಂಡೆ, ಬರಡಿ, ಬಾಡಿ, ಬಾವಿ, ಬುದಶಿ, ಬೆದಿಲು, ಭಂಡಿ

| ಮ್ | — ಮಠ; ಮಡು, ಮಧುಕೇಶ್ವರ, ಮನೆ, ಮಲೆ, ಮೊಘ

| ರ್ | —ರತಿ

| ವ್ | —ವಟಿಗೆ, ವಡಿ, ವತಿ, ವದಿ, ವನಿ, ವರ, ವರಿ, ವಳ, ವಳ್ಳಿ, ವಾಗಾಲ, ವಾಗಿಲು, ವಾಸ, ವಾಲ, ವಿಂಡ್ಯೆ, ವೀಡು, ವುಣಿಸೆ, ವುಳ

| ಶ್ | —ಶರಧಿ

| ಸ್ | —ಸಮುದ್ರ, ಸಟು, ಸ್ಥಲ, ಸಿಂಹ, ಸುರಗಿ, ಸುಸ್ಥಲ

| ಹ್ | —ಹಳಿ, ಹಳ್ಳಿ, ಹಂಗಳ, ಹಾರ, ಹಾಳ (+ಪುರ) ಹುಳಿ, ಹೇಱು, ಹೊಳೆ, ಹೋಡ

ವಾರ್ಗಿಕಗಳ ಪ್ರತಿಶತ ಆವರ್ತನೆ:

ಲಕ್ಕಣ್ಣ ದಂಡೇಶ ಹೆಸರಿಸಿರುವ ಶಿವಶರಣರ 400 ಸ್ಥಳನಾಮಗಳ ಮುಂದೆ ಸೇರಿರುವ ವಾರ್ಗಿಕಗಳ ಒಟ್ಟು ಸಂಖ್ಯೆ 120, ಇವುಗಳಲ್ಲಿ ಕೆಲವೊಂದು ವಾರ್ಗಿಕಗಳ ಆವರ್ತನೆಯ ಸಂಖ್ಯೆಯನ್ನು ಅವುಗಳ ಪ್ರತಿಶತ ಪ್ರಮಾಣದಲ್ಲಿ ಕೆಳಗೆ ಹೇಳಿದೆ.

ಸ್ಥಳನಾಮ ವಾರ್ಗಿಕಗಳು 400/120	ಪ್ರಮುಖ ವಾರ್ಗಿಕ	ಆವರ್ತನ ಸಂಖ್ಯೆ	ಪ್ರತಿಶತ ಪ್ರಮಾಣ
1	2	3	4
	ಊರು	64	16%
	ಹಳ್ಳಿ, ಪಳ್ಳಿ	51	12½%
	ಪುರ	43	10.75%
	ಇಕೆ/ಇಗೆ	14	3.5%
	ಕೆರೆ/ಗೆರೆ	11	2.75%
	ಕಲ್ಲು	10	2.75%
	ನಾಡು	08	2.5%
	ವಾಡಿ, ವಾಡ	08	2%
	ಈಶ್ವರ	07	1.75%
	ಕೋಡು	06	1.15%

1	2	3	4
	ಪಟ್ಟಣ	04	1%
	ಗಿರಿ	04	1%
	ಕೂಗು	03	0.75%
	ವಾಗಿಲು	02	0 5%
	ಸಟಿ, ಶರಧಿ	02	0.5%
	[ರತಿ, ಕ್ಷೇತ್ರ, ನಗರ, ವಾಲ ಅಲೆ, ಅಣಸ, ಅಗೆ, ಇಲ, ಗೆಡದ ಪ್ರಭೆ ಅಂಬಲ]	01	0.25%

ಮೇಲಿನ ವಾರ್ಗಿಕಗಳು ಅಂದಿನ ರಾಜಕೀಯ ವಲಯಗಳಲ್ಲಿ ಒಂದೊಂದು ಕಡೆಯಲ್ಲಿ ಒಂದೊಂದು ವಿಧದಲ್ಲಿ ಪ್ರಸಾರಗೊಂಡಿವೆ. ಎಂದರೆ, ಊರು ವಾರ್ಗಿಕಗಳು ಒಂದು ನಿರ್ದಿಷ್ಟ ವಲಯದಲ್ಲಿ ಕಂಡು ಬಂದರೆ, ಪಳ್ಳಿ-ಹಳ್ಳಿಗಳು ಮತ್ತೊಂದು ವಲಯದಲ್ಲಿ ಆವರ್ತನೆಗೊಂಡಿವೆ. ಆಯಾ ಪ್ರಾದೇಶಿಕ ವೈಲಕ್ಷಣ್ಯವುಳ್ಳ ವಾರ್ಗಿಕಗಳಿಂದ ಸ್ಥಳನಾಮ ವಾರ್ಗಿಕಗಳ ಸೀಮಾರೇಖೆಗಳನ್ನು ನಾವು ಗೊತ್ತುಪಡಿಸಬಹುದು.

ಸಮಾರೋಪ :

ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಉಕ್ತವಾದ ನೂತನ ಶರಣರ ಸ್ಥಳನಾಮಗಳು ಶರಣರ ಜೀವನ ಚರಿತ್ರೆ, ಅವರಕಾಲ, ದೇಶ, ಪರಿಸರಗಳ ಮೇಲೆ ಬೆಳಕು ಚೆಲ್ಲುವುದಲ್ಲದೆ, ಕನ್ನಡದ ಪ್ರಾಚೀನ, ಐತಿಹಾಸಿಕ, ಸ್ಥಳನಾಮಗಳ ಸಮಗ್ರ ಶೇಖರಣೆ, ದಾಖಲಾತಿ ಹಾಗೂ ಸ್ಥಳನಾಮ ಅಧ್ಯಯನ ಕ್ಷೇತ್ರದ ಶಾಸ್ತ್ರೀಯ ಅಧ್ಯಯನಕ್ಕೆ ಸಹ ಅತ್ಯಪೂರ್ವ ಸಾಮಗ್ರಿಯಾಗುತ್ತವೆ. ಇಲ್ಲಿನ ಮಾದರಿ, ಧೋರಣೆಗಳನ್ನು ನಾವು ಅನೇಕ ಕನ್ನಡ ಕಾವ್ಯ, ಪುರಾಣ, ರಗಳೆ, ಚರಿತ್ರೆ, ವಂಶಾವಳಿ, ನಿಘಂಟು, ಕೈಫಿಯತ್ತು ಹಾಗೂ ಒಬ್ಬೊಬ್ಬ ಆಳರಸರ ಕಾಲದ ಶಾಸನಗಳ ಹಿನ್ನೆಲೆಯಲ್ಲಿ ಅನ್ವಯಿಸಿಕೊಂಡಾಗ ಕನ್ನಡ ಸ್ಥಳನಾಮಕ್ಷೇತ್ರದ ವ್ಯಾಪ್ತಿ ಎಷ್ಟೆಂಬುದರ ಅರಿವು ನಮಗಾಗುತ್ತವೆ ಕನ್ನಡ ಸ್ಥಳನಾಮ ಅಧ್ಯಯನಕ್ಕೆ ಈ ಬಗೆಯ ಪ್ರಾಚೀನ ಸಾಹಿತ್ಯ ಕೃತಿಗಳು ಕನ್ನೆನೆಲವಾಗಿವೆ.

(ಶಿವಶರಣರ ಹೆಸರುಗಳನ್ನು ಅವರಿರುವ ಸ್ಥಳನಾಮಗಳೊಂದಿಗೆ ಅಕಾರಾದಿ ಅನುಬಂಧವನ್ನು ಸಿದ್ಧಪಡಿಸುವಲ್ಲಿ ನೆರವಾದ ಬನಾರಸ ಹಿಂದೂ ವಿಶ್ವವಿದ್ಯಾನಿಲಯ, ಕನ್ನಡ ಸಂಶೋಧನಾ ವಿದ್ಯಾರ್ಥಿನಿ ನೇತ್ರಾವತಿ ಬಿ. ಬಿ. ಅವರಿಗೆ ಲೇಖಕ ಕೃತಜ್ಞ.)

ಅನುಬಂಧ

ಸ್ಥಳನಾಮಗಳು : (ನೂತನ ಶರಣರು)
ಅಂಕಸಮುದ್ರ (ತಾಚಪ್ಪ)
ಅಂಜನೆ (ವೀರಶೆಟ್ಟಿ)
ಅಂಬಲಿಕೆ(ರಿಗೆ) (ವಿಶ್ವನಾಥಯ್ಯ)
ಅಗೆವಾಲ (ಕಾರಣಿಕ ಚಿಕ್ಕಲಿಂಗಪ್ಪಯ್ಯ)

ಅಗ್ರಹಾರ (ಕಲ್ಲುಸೋವಣ್ಣ)
ಅಡಬೆಡಿಲು (ಅಮರಾಯಿ
ಮುದ್ದಾಯಿ)
ಅತ್ಮವನಿ (ಕಂ(ಗಂ)ಬಣ್ಣ)
ಅನುಪೂರ (ತಿಪ್ಪಣ್ಣ)
ಅಬ್ಬಲೂರು (ಬೈರಣಯ್ಯ)
ಅಮರಾವತಿಪುರ (ವೀರಮಹೇಶ್ವರರು)
ಅಮ್ಮಣನ (ನಾಗಪ್ಪ) (ಹೊನ್ನ
ಮಲ್ಲಣ್ಣ)
ಅಮ್ಮಳಿ (ಬಸವಣ್ಣ)
ಅಮಾನುಗಲ್ಲು (ನಾಗಪ್ಪ)
ಅರವೂರು (ಮಲ್ಲಪ್ಪ)
ಅರೆಯೂರು (ಚಲ್ಲಪ್ಪ)
ಅಲಸಗೆಯಪುರ (ಮಲ್ಲಣಯ್ಯ)
ಅಲುಗೋಡ (ಬೆಟ್ಟದೇವ)
(ಶೀಲವಂತ)
ಅಸಗೋಡ (ಮಲ್ಲರಸ)
ಅಸಮುಕೊಳಗ (ಮಹಾತ್ರಿ
ಪುರಾರಿಯಯ್ಯ)
ಅಳವಿಂಡ್ಯೆ (ಅಳವಿಂಡ್ಸ)(ಮರಳಯ್ಯ)
ಅಳಗಸೆಟ್ಟಿಪುರ (ರಾಯತಿಮ್ಮಣ್ಣ)
ಆದವನಿ (ದೇವಿಸೆಟ್ಟಿ)
ಆದಿಯೆಡಹಳ್ಳಿ (ಸಿದ್ಧಪ್ಪ)
ಆನೆಬಿದ್ದ ಸ(ಸೞಿ) (ನಮಃಶಿವಾಯ)
ಆನೆಯಗೊಂದಿ (ವೀರಣಯ್ಯ)
ಆನೆವರಿ (ಶಿವನು)
ಆಯತವಾಡಿ (ಭಾಮಯ್ಯ)
ಇಂಗಳಗುಂದಿ (ಮುದ್ದಪ್ಪಯ್ಯ)
(ಗುಂಡಿ)
ಇಂಗುಳಾವಾಡಿ (ಮಹಾಲಿಂಗ)
ಇಬ್ಬಳಕ್ಕಿಹಳ್ಳಿ (ನಾಗಣ್ಣ)

ಇಬ್ಬೆಡಲ (ಮಾಯ್ದೇವಯ್ಯ)
ಇಱುಬೆ(ಬು)ದಲೆ
ಉಜ್ಜೈನಿ (ಹಿರಿಯಪ್ಪ)
ಉತ್ತುವಹಳ್ಳಿ (ಅತಿಭೋಗಣ್ಣ)
ಉದಯಗಿರಿ (ವರದಾನಿ ರಾಮಯ್ಯ)
ಉದ್ದೀಹಾಹೋಡು
ದಿಂಬೂರು ಮಾಯಿಸೆಟ್ಟಿ
ಉದ್ದುರಾವೂರು
ಸ್ಥಳನಾಮಗಳು : (ನೂತನ ಶರಣರು
ಉಪ್ಪಿನಹಳ್ಳಿ (ಬಸವಣ್ಣ)
ಉಪ್ಪುಹು(ವೃ)ಣಸೆ (ಸಿರಿಗಿರಿಯ)
ಉಮ್ಮತೂರು (ಬಸವಣ್ಣ)
ಉಮ್ಮತೂರುನಾಡು
ಉದ್ಭಟಯ್ಯಗಳ (ಮೂಚಾಯಿಯಯ್ಯ)
ಪುರ
ಉಳುವೆ (ಸಾರಜ್ಞರೆನಿಪ
ಉಳುವೆಯ ಗಣನಿಚಯ)
ಮಹಾಮನೆ (ವೀರಪ್ಪರಾಣಿ)
ಎಕ್ಕಲೂರು (ನುಲಿಯ ಕಲ್ಲಪ್ಪ)
ಎಡೆಹಳ್ಳಿ (ಮಲ್ಲಪ್ಪ)
ಎಸೆವಲ್ತೋಟು
ಕೂರು (ತಿಪ್ಪಣ್ಣ)
ಏಳಿಗೆ (ಬೆಟ್ಟಾಭಕ್ತ)
ಏಳಪ್ಪಗೆ (ತಿಪ್ಪಣಯ್ಯ)
ಐಗನಹಳ್ಳಿ (ಕನ್ನಿದೇವಯ್ಯ)
ಒಕ್ಕುಂದ (   )
ಒಡ್ಡಿಯಾದೇಶದ ಮುಖಲಿಂಗ ಮಧುಕೇಶ್ವರ
ಓದುವಳ್ಳಿ ಗೌರಮ್ಮ
ಓರುವಳ್ಳಿ (ಶಿವರಾತ್ರಿಯಯ್ಯ)
ಓ(ವಾ)ಹಿಲಪುರ (ಹುಳಿಯುಮೇಶ್ವರ)
ಕಂಚಿ (ಬಯಲಲಿಂಗಣ್ಣ)
ಕಂಚುಮನಹಳ್ಳಿ (ಕಂಪಣಯ್ಯ)
ಕಂಟಿಯನಹಳ್ಳಿ (ಬೋ)ಚೋಳಪ್ಪ)
ಕಂದಕೂರು (ಸಿರಿಗಿರಿಬಿಡ್ಡಿ)
ಕಂಪಸಾಗರ (ಶಿವಮುದ್ದು ಮಂಗಣ್ಣ)
ಕಂಡವುಳ (ಸೋಯಿಸೆಟ್ಟಿ)
ಕಡವೂರ (ಒಲೆಯರಾಮಣಯ್ಯ)

ಕಡವೆಯುಪುರ (ಸೋನೆಬೊಪ್ಪಯ್ಯ)
ಕಡೆ(ಡಿ)ಯು (ಕ)ಮಲ್ಲಪ್ಪ)
ಕಣ್ಣಂಬಾಡಿ (ಚನ್ನಮಲ್ಲಿನಾಥೊಡೆ
ಯರು)
ಕತ್ತರಿನತ್ತಪುರ (ಮಹಾದೇವಿ)
ಕನ್ನಕಗೆರೆ (ಚನ್ನಬಸವಣ್ಣ)
ಕನ್ನಕಗೆಟಿಯುಗಿರಿ (ಜುಂಜುವೀರಭದ್ರ)
ಕನ್ನಲ್ಲಿ (ಗೆಜ್ಜೆ ಅಪ್ಪಣಯ್ಯ
ಪುಟ್ಟಣಯ್ಯ
ಕಬ್ಬಲಊರು, ಕಬ್ಬಲೂರು ಬಿದಿರೆ(?)
ಕೇತಪ್ಪಯ್ಯ
(ದೇವಪ್ಪಯ್ಯ)(ಭೀಮಸೆಟ್ಟಿ)
ಕರಿಯೊಡೆಯನಿಪ್ಪಪುರ
(ಮುಮ್ಮಡಿ ಭಕ್ತ)
ಕಲ್ಯಾಣಪುರ (ಗಂದಿಗ ಭೀಮಣಯ್ಯ)
ಕಲುಬರಿ (ರ)ಗೆ (ಹೆಗ್ಗಿಶೆಟ್ಟಿಲಿಂಗಪ್ಪ)
ಕಲ್ಲೆಹದನಾಡು (ರಾಯಿಸೆಟ್ಟಿ) (ಧರಣಿ
ಸೆಟ್ಟಿ)
ಕಲ್ಯಾಣ ದೇಶದ ಅತಿಬಿದಿರೆ
(ಬಸವಪ್ಪ)
ಕಸವಿಕೋಟೆ (ಬಸವಣ)
ಕಸಗೋಡು
ಕಹಿಗೋಡು (ಮಲ್ಲಪ್ಪ)
ಕಹಿಬಳ್ಳಿ (ಮರುಳಯ್ಯ)
ಕರವಳಿಯು ಮಂಗಳೂರು
(ಭಕ್ತನಾಗಪ್ಪ)
ಕರವೂರು (ರಾಮಣ್ಣ)
ಕಳಲೆ (ಕುಱುಬರ ನಾಯಿ
ದೇವಯ್ಯ)
ಕಳಸಪುರ (ಅಮುಭಕ್ತರು)
ಕಳ್ಳಿಯಹಾಳು (ಬಸವಣ)
ಕಾಕೊಳಲು (ಮಸಣಪ್ಪ)
ಕಾಗಲವಾಡಿ (ವೀರಯ್ಯ)
ಕಾಮಲಾಪುರ (ಪ್ರಾಣಲಿಂಗಿಗಳು)
ಕಾಟಿಲೆ (ಹಿಕ್ಕಲಯ್ಯ)
ಕಾರೆಗನಹಳ್ಳಿ (ಜಾಯಿದೇವ)
ಕಾಮವರದಾಸ್ಥಲ (ಸಿರಿಗಿರಿಭಕ್ತ)
ಕಾಶಿಗಾವು (ಸಂಗಣಯ್ಯ ಸಾಮಜ್ಞ)
ಕಾಳಿಗೆ (ಸಿರಿಯಣ್ಣ ಸೆಟ್ಟಿ)

ಕಿಕ್ಕೇರಿ (ನಾಗಪ್ಪ)
ಕಿತ್ತನೆಲ್ಲಿ (ಶೀಲವಂತತಿಮ್ಮಣ್ಣ)
ಕುದಿಹೇಱು (ಬೆವಹಾರಿ ಮಲ್ಲಣ್ಣ
ಕುಪ್ಪಟೂರು (ತಿಪ್ಪಣ್ಣ)
ಕೂಕಟಪಳ್ಳಿ (ಪೋತ ಭಕ್ತ)
(ರಾಚಾಯಿ)
ಕೂರಂಗಿಕೋಟೆ (ವರಧಾನ್ಯದಮ್ಮ)
ಕೆಂದೊಳಲ (ಚೌಡಪ್ಪ)
ಕೆಱೆಯೂರು
ಕೇತಗೊಂಡನವೂರು (ದೊಡ್ಡಯ್ಯ)
ಕೊಂಡವೀಡು (ಬೈಯ್ಯಣಯ್ಯ)
ಕೊಟ್ಟಾ(ಟಾ)ರ (ಕಾಳಪ್ಪ)(ಕಿನ್ನರಯ್ಯ)
ಕೊತ್ತಳ್ಳಿ (ಶಾಂತಸಾರಭಕ್ತ)
ಕೊತ್ತೂರು
ಕೊಣನಲ್ಲೂರು
ಕೊಪ್ಪ (ಲಕಮಣ್ಣ)(ತಿಮ್ಮಣ್ಣ)
ಕೊಳನಲ್ಲೂರ (ಶಿವಕವಿಸರ್ವೇಶ್ವರಯ್ಯ)
(ಶಿವದೇವಯ್ಯ)
ಕೊಳತೂರು (ರಸಿಕ ಮಲ್ಲಪ್ಪ)
ಕೊಳಕುಱುವ (ಸೊಪ್ಪಬಸವಣಯ್ಯ)
ಕೊಳ್ಳಿ
ಕೋಗಿಲೂರು (ವೀರಪ್ಪ)
ಕೋಟೆಯ ಕೆರೆ (ಲಕ್ಕಮ್ಮ)
ಕೋಡಗಲ್ಲು (ಕುಂಬಾರ
ಭಕ್ತರಾಮಣ್ಣ)
ಕೋವಿಯಣಸೆಯ
ಪುರ (ಮಾಚಪ್ಪ ತಂದೆ)
ಕೋಳಿಕೋಟೆ (ಮಕುಟವಯ್ಯ)
ಕೋರಮಱುಗಲ್ಲು ಕೇಸೂತು
ಕಾಲಿಗೆ (ಜಾನಪ್ಪ)
ಗಂಗೆವಾಡಿಯಪುರ (ಅತಿಭಕ್ತರು)
ಬಸವಣ
ಗಟ್ಟಿ (ಪೆಱದ ವಿಶ್ವನಾಥಯ್ಯ)
ಗಜಪತಿಯ
ಮಾಚೂರು (ಗುಡ್ಡಪ್ಪ)
ಗದುವಳಿ (ಸೋಮಪ್ಪ)
ಗಣಪುರ (ಪೋಲಯ್ಯ)
ಗವಱ

ಗಾವೂರು (ವೀರಯ್ಯ)
ಗುಂಜಡಲೂರು
ಗುಂಡಿಪ್ರಭೆ (ಕೊಂಕಣದ ಒಡೆಯರು)
(ವಾರಣಾಸಿಯ
ಒಡೆಯರು)
ಗುಜ್ಜರಾತಿ (ದೇಶರಾವುತರು)
ಗುಬ್ಬಿ (ಗುಬ್ಬಿಯ ಮಲ್ಲಣ್ಣ)
ಗುಮ್ಮಹಾಳ ಪುರ (ಚಿಕ್ಕದೇವಪಯ್ಯ)
ಗುಳಿ(ಣಿ)ಯಕಣಿಯ (ಸಿಂಗಣ್ಣಯ್ಯ)
ಗುಹಾರಣ್ಯ (ಲೀಲೆಯ ರಾಮಣಯ್ಯ)
ಗೂಳೆಯ (ಕನ್ನಪ್ಪಯ್ಯ)(ಕರಿಯ
ನಾಗಣಯ್ಯ)
ಗೆಜ್ಜೆಗಾರನಹಳ್ಳಿ (ಲಕ್ಕಣ್ಣ)
ಗೊಂಟೆಹಾಳು (
ಗೊರಕೋಡ (ಮಲ್ಲರಸ)
ಗೋವೆ
ಗೋಸಿಯ ಕೆಜ಼ (ಹೂವಿನ ವೀರಣಯ್ಯ)
ಚಂಪಾವತಿ (ಕಟ್ಟಿಗೆ ಕಾವಾಕದವೀರು)
ಚಂದ್ರಗುತ್ತಿ (ಬೆವಹಾರಿ ನಾಗಪ್ಪ)
ಚನ್ನಪಟ್ಟಣ (ಮಲ್ಲಣ್ಣ)
ಚಾಕನೂರು (ಕೇತಿದೇವ)
ಚಿಮ್ಮಲಿಗೆ (ನೀಲಕಂಠಯ್ಯ)
ಚೂಡಾಮಣಿ
ಚೆಟ್ಟಿ (ಮಾಯಿದೇವಯ್ಯ)
ಜಂತೆಗಲ್ಲು
ಜಂಬೂರು
ಜಗತಾಪಗುತ್ತಿ (ಮಾದಿಸೆಟ್ಟಿಯ ವೀರಣ)
ಜಾವಳಿಯಕೋಟೆ (ಚನ್ನಬಸವಣಯ್ಯ)
ಜಿ(ಚ)ನ್ನಾಗರ (ಓದಿಸು ಹಿರಿಯಣ್ಣ)
ಜೋವಟ್ಟಿಗೆ
ತಗಡೂರು
ತಗರೆ (ಚೀಡು)
ತಟ್ಯಕಲ್ಲು (ಲಿಂಗಸೆಟ್ಟಿ)
ತಲೆಮಲೆ (ಸಿಲಿಂಗಿದೇವಯ್ಯ)
(ಶಾಂತಮಲ್ಲಿನಾಥಯ್ಯ)
ತಳಕಾಡು (ಮಂಚಣ್ಣ)
ತಿರಿಚಿಟ್ಟಪಳ್ಳಿ
ತಿರುಮಕೂಡಲು (ಪರುಷಿನಯ್ಯ)
ತಿರುವಣಾಮಲೆ (ಲಿಂಗಣಯ್ಯ)
(ಮೋಳಾದೇವಿ)

ತಿರುವದಿ (ತಿರುವದಿಯ ಭಕ್ತರು)
ತಿರುವಾವೂರು
ತೆರಕಣಬೆ (ಓದಿಸು ರಾಮಣ್ಣ)
(ಕಂಪರಾಯ)
ತೆರಕಣಬೆಹೆಂಗುಳ (ಹಾಲಪ್ಪ)
ತೊಂಡನೂರು (ಧರಣಪ್ಪ)
ತೊಗರಸೆ (ಹಾಲಮ್ಮ)
ತೊಜಿಗಲೆಯ (ರಾಯಸೆಟ್ಟಿ)
ಹೂಲಿ (ಪೌರಾತಬೊಮ್ಮಣ್ಣ)
ತೋಗೂರು
ದಕ್ಷಿಣಾಪುರ (ಬೇಳೆಯೊಡೆಯಂರು)
ದಂಡಿನಕೊಡಗಿ (ಲಿಂಗಣಯ್ಯ)
ದವಡ
ದಾರಸಿಂಹ (ಮಾಳಿಸೆಟ್ಟಿ)
ದಿಗ್ಗಾವೆ (ಬಸವಣ)
ದುಂಬುರದಂಡೆ (ರಾಮಯ್ಯದೇವ
(ಬಂಡೆ) ರೊಡೆಯರು)
ದೇವಗಿರಿ (ರಾಮರಸ)
ದೇವಪೂತದಹೊಳೆ
ದೇವರಕೊಂಡೆ
ದೇವರಾಜೇಂದ್ರಪುರ
ದೊಡ್ಡವಾಡ (ಕರಿಗೊಂಡ)
ಡೊಂದಿ(ಡ) ಲೂರು (ಕಾಚಣ್ಣ)
ಧರೆಯಾಪುರ (ಗೋವಿಂದಸೆಟ್ಟಿ)
ಧರಿಸಿವಾಡ (ಕೇತ)
ದೋತ್ರಗಾವಿ (ಬಸವಣ್ಣ)
ದೋಸಪಳ್ಳಿ (ಬಸವಣಯ್ಯ)
ನಲ್ಲೂರು (ಹಿರಿಯಚಲಪ್ಪಯ್ಯ)
ನವಠಿ (ಮಲ್ಲಣಯ್ಯ)
ನವಿಲೂರು (ಮಹಾಮನೆವೀರಣ್ಣ)
(ಮಹಾದೇವಿ)
ನಂದಲೂರು (ಬಸವಣ್ಣ)
ನಾಡಿಗಿನಾದಿಡು (ಗುಡಿಲಪಾಡು)
ನಾರಚಂಡಿ (ರಾಮಣ್ಣ)
(ಸಾರಬಂಡಿ)
ನಾರಣಪುರ (ಬಸವಣ)
ನಿಟ್ಟೂರು
ನಿಡುಗಟ್ಟೆ (ಮಂಚಣ)
ನಿಡುಗಲ್ಲು (ಉದ್ದಪ್ಪ)
ನೀರಗುಂದ (ಹರಿಯಣ)

ನೂತಲಾಪಾಡು	(ವೀರಾಭಕ್ತ)
ನೆ(ಮ)ಲ್ಲಮಂಗಲ	(ಪೆಮ್ಮಣ್ಣ)
ನೆಲ್ಲಿಯಕೊಪ್ಪ	
ನೆಲೆಯುಂಗುರ	(ಸಿರಸಿಯಮಲ್ಲಪ್ಪತಂದೆ)
ನೇರಸಿ	(ಕಾಯ್ದೇವರಾಣಿ)
ನೇಳೆಳಪಯ್ಯ	(ಏಳಪ್ಪಗೆ~ಏಳಪ್ಪೆ)
ಪಟ್ಟಣದನಾಡು	(ಲಕ್ಕಣ ಹೆಗ್ಗಡೆ ಭಂಡಾರಿ) (ಎಳೆಯಪ್ಪ)
ಪಟ್ಟೇಶ್ವರ	(ಬಸವಣ್ಣತಂದೆ)
ಪಡವೀಡು	(ಪಿರಿಮುತ್ತಿನ ವೀರಣಯ್ಯ)
ಪಡೆವನಾಡಕೊಟ್ಟ ಬಾವಿ	(ಚೌಡು)
ಪರ್ವತ	ವರಧಾನ್ಯದೊಡೆಯರು)
ಪಂಪಾಕ್ಷೇತ್ರ	(ದಕ್ಷಿಣಾಮೂರ್ತಿಯತಿ) (ಶಿವಭಾವ ತಾಂತ್ರಿಕರು) (ಶಿವಯುತರು)
ಪಂಪಾಪುರ	(ಗುರುಮೂರ್ತಿ ಆಕಳ) (ವಾಸಿಯತಿ ಪಂಡಿತ)
ಪಾಂಡ್ಯನಾಡು	
ಪ್ರಭಾನಹಳ್ಳಿ	(ಮರಿಸೆಟ್ಟಿಯರ ದಳವಯ್ಯ)
ಪಾತಾಳಪುರ	(ಪಾತಾಳವಯ್ಯ)
ಪಾನುಗಲ್ಲು	(ಪುರಾಣಣ್ಣಗೊಂಡ)
ಪಾಲಂಕೆ	(ಶಂಕರೊಡೆಯರು)
ಪಿಕ್ಕಚೆಯಪುರ	(ದೊಡ್ಡಯ್ಯ)
ಪಿಂಡಿಕೂರು	(ಚಿನ್ನಾಭಕ್ತ ತಂದೆ)
ಪಿರಿದಾಗರ	(ಅಕ್ಕಮ್ಮ) (ಗುಬ್ಬರಪ್ಪಿ ಸೆಟ್ಟಿ)
ಪುದಿಯಲು	(ಓಬುಳಕ್ಕ)
ಪುಲಿಯೂರನಾಡಿನ ಕನ್ನಹಳ್ಳಿ	(ಕುಣಿಗಿಲಗಲಿ)
ಪೂಗೆ	
ಪೆಂಡಿಲ	(ಅಣ್ಣೆಸೆಟ್ಟಿ)
ಪ್ರಸನ್ನಪುರ	(ವಸಂತ ಮಲ್ಲೇಶ)
ಪೆನುಗೊಂಡೆ	(ಎಜ್ಜಿಮ್ಮ)
ಪೆರುಮೊಘೆ	(ದೇವಾಯಮ್ಮ)
ಪೊಟನೂರು	
ಪೊ(ಪೊ)ಟ್ಟಣಗೆಱೆ	

ಪೊತ್ತ	(ಪೈಯ ~ ಪೈಯ್ಯ)
ಪೊನ್ನಾಥಪುರ	
ಪೊನ್ನಾಂಬಲ	(ತಿರುಮಂಜಮ್ಮೈತಿ ಗಯ್ಯರು)
ಬಗ್ಗಂಜಿ	(ಮರುಳಿದೇವ)
ಬಟ್ಟಕೆಱೆ	(ಬಸವ)
ಬಡದವಳ	(ನಾಗಪ್ಪಯ್ಯ)
ಬನ್ನೂರು	(ಪರಮಮಲ್ಲಪ್ಪ)
ಬಲ್ಲಿಕೆ	(ಮಾಚಾಯಿ ತಾಯಿ)
ಬಸಪುರ	(ವೀರಮಾಹೇಶ್ವರರು)
ಬಸವರಾಜನಮಠ	ಕಲ್ಯಾಣಪುರ
ಒಳ್ಳೆಯಕೆಱೆ	
ಬಂಡೆಯಹಳ್ಳಿ	(ವೀರಣಯ್ಯ)
ಬ್ರಹ್ಮಶರಧಿ	(ತೋಟದವೀರಣಯ್ಯ)
ಬಾಗವಾಡಿ(ವಳ್ಳಿ)	(ವಿಟ್ಟಪ್ಪ) (ದೇವಣ್ಣ)
ಬಂಡ	(ಕನ್ನಪ್ಪ)
ಬಾದಾಮಿ	(ಭೈರು)
ಬಾರಕೂರು	
ಬಾಳವಾಡಿ	(ಗಂಗಿದೇವಯ್ಯ)
ಬಿಚ್ಚಲ	
ದಿರೆಯಪುರ	(ಗೋವಿಂದಸೆಟ್ಟಿ)
ಬಿನುಗುಂಜಿ	(ಮಲ್ಲರಸ)
ಬುಕ್ಕರಾಯನ ಸಮುದ್ರ	(ಕೊಂಡಮಲ್ಲಯ್ಯ)
ಬುಕ್ಕಸಾಗರಪುರ	
ಬೂಕನಕೆಱೆ	(ಸಂಗಯ್ಯ)
ಬೆಟ್ಟದಪುರ	
ಬೆಜ್ಜವಾಡದ ಕೊಂಡಬೀಡು	
ಬೆಣ್ಣೆಕಲ್ಲು	(ಬೊಮ್ಮಣಯ್ಯ)
ಬೆಣ್ಣೆಯ	
ಬೆಳಸರಿ	
ಬೆಳಕಂಬೂರು	
(ಕುಟೂರು)	(ಪರಮ) (?)
ಬೆಳುಗಾವೆ	(ಮರಿದೇವರಾಣಿಯರು)
ಬೆಳುವಡಿ	(ದಂಡಪ್ಪನಾಯಕ)
ಬೆಳ್ಳೂರು	(ಮಲ್ಲಣ್ಣ)
ಬೆಂಗಳೂರು	(ಮಲ್ಲಣ್ಣ)
ಬೇ(ಚೀ)ಗೂರು	
ಬೇವುಕಲ್ಲು	(ಮಾಯಣ್ಣ)

ಬೊಟ್ಟಗಡಿ

ಬೊಮ್ಮನಹಳ್ಳಿ (ಪುರಾತಯ್ಯ) (ಬೊಮ್ಮ ಭಕ್ತ)

ಭೋಜನಪುರ (ಕೋಮರಗಿರಿಯಯ್ಯ)

ಭಂಡಿ

ಭಂಡಿಗೆಡಹು (ಚಿಕ್ಕಪ್ರಸಾದಿಯಯ್ಯ)

ಭಾಮಗೆಡದ (ಚೌಡಿದೇವಯ್ಯ)

ಭೋಗಾಟಿಗೇರಿ (ಮಲ್ಲಿಯಕ್ಕ)

ಮಂಘೆ (ಕೂಲಯ್ಯಗಳು) (ಕೋತಿದೇವ)

ಮಡಿರೆ (ಮಲ್ಲಿನಾಥೊಡೆಯರು)

ಮದ್ದಿಪೆಂಟೆ (ಲಿಂಗಣಯ್ಯ)

ಮಧುರೆಕೋಟೆಯನಾಡು

ಮರದೂರು (ಮದ್ದೂರು) (ಮಲ್ಲಪ್ಪ)

ಮಲನೂರು (ಬಸವಪ್ಪ) (ಅಡಕೆದಸರಗಾಯಕ ವೃತ್ತಿ)

ಮಲ್ಲಿನಾಥೊಡೆಯ

ಮಳಲಕೋಟೆಯ ಪುರ (ಭಕ್ತಿಯುಕ್ತರು)

ಮಳೆಯಖೇಡ (ಗುಡ್ಡ)

ಮಳವೂರು (ಪೂಸಾಂಡಿ)

ಮಂಚಿಯಕ್ಕನಹಳ್ಳಿ

ಮಂಜ(ವ)ಣ (ಸತ್ಯರದೇವ ಮಲ್ಲಪ್ಪ)

ಮಂಡನೂರು (ರಾಮಣ್ಣ)

ಮಾತಂಗಾಚಲದ ಗುಹಾಂತರ (ಚರಲಿಂಗಮೂರ್ತಿಗಳು)

ಮಾಣೂರು (ಏಕೋಭಾವ)

ಮಾದಿಹಳ್ಳಿ (ನೀಲಕಂಠಯ್ಯ)

ಮಾಯಸಮುದ್ರ (ಅಂಕಸೆಟ್ಟಿ) ಗುರುಭಕ್ತ)

ಮಾಯಿಗೊಂಡನ ಹಳ್ಳಿ

ಮಾವನೂರು

ಮಳಲೂರು (ವೂರು)

ಮಳವಳ್ಳಿ (ಬಸವಣ)

ಮಾರಕಾಪುರ (ಕೇತಯ್ಯ)

ಮಾರೆಹಳ್ಳಿ (ಚಾಕಣ್ಣ)

ಮಾಲನೂರು (ಸೊಣ್ಣಯ್ಯ)

ಮಾವಾಮಡ (ತಿರುನಾಮಿನಾರೆವಳ್ಳರು)

ಮಾವಿನಹಳ್ಳಿ (ಓದಿಸು ಚಾರಪ್ಪ)

ಮಾಳಿವಾಡ

ಮಿಜಿಲೆ

ಮುಗುಳಿಯಪುರ (ಕನ್ನಪ್ಪ)

ಮುದಗಲ್ಲು (ಪರಮ ವೀರಣ್ಣಯ್ಯ)

ಮುದುಡೆ

ಮುರು (ಡು)ನಾಡಸುರಗಿ

ಮುಳಬಾಗಿಲು (ಶಿವರಾತ್ರಿಯಯ್ಯ)

ಮೂಕಿತಿಯಹಳ್ಳಿ (ಮುರುಳಿಯಮ್ಮ)

ಮೂಖಿಕಂಡಿ (ಬಸವಣ್ಣ)(ರೇವಣ್ಣದೇವರು)

ಮೆಳೆ (ಮೊಳೈಹಳ್ಳಿ)

ಮೇಲುಗೊಂಕಣದ ಧೂಪೇಶ್ವರ

ಮೈಲಾವರ (ಪುರಾಂತಕ ವರದಪ್ಪ)

ಮೊರಟಗೆ (ಜವನಿಸೆಟ್ಟಿಬೊಮ್ಮ)

ಮೊಲ್ಲಕೋಡು (ವಿರುಹಪ್ಪ)

ಮೊರಸಿ

ಮೋರುಖಂಡಿ (ಪರುವತಯ್ಯ)

ರಾಜಕೊಂಡೆ

ರಾಜಮಹೇಂದ್ರಾವರ (ಕೋಮಟಿಗ ಪೋಲಿಸೆಟ್ಟಿ)

ರಾಜೇಶ್ವರಪುರ (ಸಂಗಪ್ಪನಾಗಪ್ಪ)

ರಾಮಗಿರಿ (ಮಾಯಿಸೆಟ್ಟಿ)

ರಾಮಂ (ವಂ)

ಮಾರು (ಕೊಂಗವರಗುಣ)

ರಾಮದುರ್ಗ (ಬಾಗಿಲಭೈರವ)

ರಾಮಾಪುರ (ಶಿವಯಂತರು)

ಲಕುಮಣೇಶ್ವರ

ವರಗುಡ್ಡಪೊಳಲು (ಬಾಲಪ್ಪ)

ವರೂಣಟ (ದೇವರೂಟ) (ಶಿವರಾತ್ರಿಯಯ್ಯ)

ವಿಜಯಕಲ್ಯಾಣಪುರ (ದೇವರಾಜೇಂದ್ರ)

ವಿಜಯನಗರ

ವಿನುಕೊಂಡೆ

ವಿಪ್ರಪುರ

ವಿರುಪಾಪುರ (ಪರಮೇಶ್ವರಯ್ಯ)

ವಿಲ್ಲೂರು (ತಿಮ್ಮಣ್ಣ) (ಜೇಡರ ಚೌಡಪ್ಪ)

ವಿಶಾಲಕಣಚೂರು (ಕಲ್ಲಪ್ಪ)

ವೆಲ್ಲಂದೂರು (ಚಿಟ್ಟಾಭಕ್ತ)

ವೇದಗಿರಿ (ಅಂಗಡಿ ದೇವಪ್ಪ)

ಶಿವನಸಮುದ್ರ (ನಮಃಶ್ಶಿವಾಯ)
ಶಿವಪುರ (ಕೆಂಪಯ್ಯ, ಬಸವ, ವೀರ ಮಾಹೇಶ್ವರರು)
ಶೀಲಗೊಂಡನಹಳ್ಳಿ
ಶೀಲವಂತಪುರ (ಶಿವಭಾವುಕರು)
ಸಕಲನಹಳ್ಳಿ (ಸಿರುಂಗಪ್ಪಯ್ಯ)
ಸಪ್ಪೆಯಲಿಂಗಪುರ (ರಾಯಪ್ಪ)
ಸಲಗಪುರ (ಬಸವಣ್ಣಯ್ಯ)
ಸಂಗಮಪುರ (ಭಕ್ತಮಾಹೇಶ್ವರರು)
ಸಂತೆಯಾರಾವೂರು (ಪಿಚ್ಚಪೋಲಭಕ್ತ)
ಸಂಪಗೆ
ಸಾದು (ರಾಜಾಯಮ್ಮ)
ಸಾಬಾವೆ (ಗವಜಿ ಬಸವಣ್ಣ)
ಸಾಜಿಕೆ
ಸಿಂಗಣನನಲ್ಲೂರು (ಶಿವನಪ್ಪಯ್ಯ)
ಸಿಂಗಪಟ್ಟಣ (ಭಕ್ತರು)
ಸಿಂಗನಾಯಕಪುರ (ಶಿವಯುತರು)
ಸಿಮ್ಮಲಿಗೆ
ಸಿರಿಪತಿಹಳ್ಳಿ (ಚಿಟ್ಟಪ್ಪನಾಯಕ)
ಸಿರಿಯೂರು (ಚೆನ್ನಯ್ಯ)
ಸೀಗೋಡ (ಸೆಣಗೋಡು) (ಸೋವಪ್ಪ)
ಸುಗ್ಗನಹಳ್ಳಿ (ಕಾಟ) (ಮಹಾಲಿಂಗ ದೇವಯ್ಯ)
ಸೆಂಟೆವಾಡ (ಮಾಚಿಸೆಟ್ಟಿ)
ಸೊನ್ನಲಪುರ (ರಾಘವ)
ಸೊನ್ನಾರ (ಬಸವಣ್ಣ ತಂದೆಗಳು)
ಸೋಲೇರಹಳ್ಳಿ (ಮಲ್ಲು)
ಹಂಗದೂರು (ಡೋ(ದೊ)ಳ್ಳಪ್ಪ)
ಹಚಿರಿಲಿಗಂಚಿ (ಬಸವಣಯ್ಯ)
ಹದಿನಾಡಿನಲ್ಲಿರುವ ಬೊಮ್ಮನಹಳ್ಳಿ (ವೀರಣಯ್ಯ) ಹದು (ಗುಡ)ವಳಿ
ಹರಕೇರಿ (ಹೊಣ್ಣೆಯಯ್ಯ)
ಹರದನಹಳ್ಳಿ (ಗೋಸಾಯಿ ಪೋಲಣ್ಣ)
ಹರಸೂರು (ಪಾಬಣ್ಣ) (ಲಿಂಗಣ್ಣಯ್ಯ)
ಹರಹತೊಳಲು (ಪಂಡರಿದೇವ) (ಗಾಣಿಗ ಮಲ್ಲಪ್ಪಯ್ಯ)
ಹರಹಳ್ಳಿ (ಮಲ್ಲಣ್ಣ)
ಹರಿಹರಪುರ (ವೀರ–ಮಾಹೇಶ್ವರರು)
ಹರಿಯಸಮುದ್ರ (ವಿರುಪಣ್ಣತಂದೆ)
ಹರಿಸಿಗೆ (ಮಲ್ಲಣ್ಣ)
ಹಱುವೆ (ಬಿಡಾಡಿ ದೇವಯ್ಯ)
ಹಲಕನಹಾಳು (ಬುಳ್ಳಪ್ಪ)
ಹವಳಿಗೆ (ವಚನಗಾಯಕ ಬೊಮ್ಮಣ್ಣ)
ಹಂಚಿಕೆ (ಹಂಜಿಗೆ) (ಬೊಮ್ಮಲಿಂಗಯ್ಯ)
ಹಂಪಾಪುರ (ಕಾರೆಗನ ಹಳ್ಳಿ)
ಹಂಪೆ (ಗುರುಮೂರ್ತಿ ಒಂದೆತ್ತಿನಯ್ಯಗಳು)
(ಹಾ) ನಿಧಿ (ಲಿಂಗೈಕ್ಯ ಮಲ್ಲಣ್ಣ)
ಹಾಲವಾಗಿಲು (ಶೀಲವಂತಜ್ಜಪ್ಪ) ಪೆರುಮಾಳದೇವ)
ಹಿರಿಯಪ್ಪನವಳ್ಳಿ (ಮಾಯಿಸೆಟ್ಟಿ)
ಹಿರಿಯೂರು
ಹುಣಿಸೆವಳ್ಳಿ (ಲಕುಮಣ್ಣ)
ಹುಬ್ಬಳ್ಳಿ (ಬೈರಸೆಟ್ಟಿ ಗಂದಿಗ)
ಹುಲಿಗೆಱೆಯೆನಿಪ ಪುರ (ಬಸವಣ್ಣ) (ಭಕ್ತರು)
ಹುಲುವೆಯಹಳ್ಳಿ (ರಾಮಣ್ಣ)
ಹುಲ್ಲೆಯನಹಳ್ಳಿ (ರಾಮಿದೇವ)
ಹುಳಿಯುಂಗೆಱೆ (ಶೀಲವಂತ ಮಲ್ಲಯ್ಯ)
ಹುಳ್ಳನಹಳ್ಳಿ (ಕೇಶವರಾಜ)
ಹೆಗ್ಗಡೆಹಳ್ಳಿ (ವೀರಬಸವಣ್ಣ)
ಹೆಗವಾಡಿ
ಹೆಗ್ಗೊಡೆಗೊಂಡ (ಮಲ್ಲಪ್ಪಯ್ಯಗಳು)
ಹೆಜ್ಜಾಜಿ
ಹೊಂಗನೂರು (ಶೊಣ್ಣಯ್ಯ) (ಸಿಂಗಣ್ಣಯ್ಯ)
ಹೊಟ್ಟಣಗೆಱೆ (ಸೋಮವಾರಮ್ಮ) (ಪೂಜಾಭಕ್ತ)
ಹೊನ್ನನಾಯಕ ವಿಲ್ಲೂರು (ತಿಮ್ಮಯ್ಯ)
ಹೊನ್ನಾವಳ (ಹೊನ್ನಾಂಬಲೊಡೆಯರು)
ಹೊನ್ನೂರು (ಕಡಗದ ಕಾಯಕ ವಿರುಪಣ್ಣ)
ಹೊಯ್ಸಣದೇಶದ ಸಾಸಲು (ಸಾಸಲು ಭೈರವೇಶ್ವರ)

ಹೊಸದೇವರಾಯ
    ಪಟ್ಟಣ (ರಸಿಕ ಪುಟ್ಟಯ್ಯ)
ಹೊಸಪಟ್ಟಣ (ತೋಟದ ವೀರಣಯ್ಯ)
    ಕಕಾರಿರಾಮ

ಹೊಸವೂರು
    ಸುಸ್ಥಲ (ವೀರಮಾಹೇಶ್ವರರು)
ಹೊಂ(ಪೊಂ)ಗನೂರು

ಎಂ. ಹೆಚ್. ರುದ್ರಮುನಿ

ಕೂಸು

ಬೆಂದ ಹೃದಯದ ನೋವು
ತಳಮಳ ಗುಟ್ಟಿ
ಕಪ್ಪೆ ಚಿಪ್ಪನೊಡೆದು
ಹೊರ ಹಾಕಲು ಹೊಂಚು ಹಾಕುತ್ತಿವೆ ಭಾವನೆಗಳು

ಬರೀ ಮೈಯ ಕಪ್ಪು ದೇಹ
ಕತ್ತಲು ಬರಿದು
ಬೆಳಕು ಕೊಡುವ ಆಶಾಕಿರಣ

ಕತ್ತಲಲ್ಲೇ ಮೊಳೆಯುವ
ನೆಲ ಬಗೆದು ಹೊರಬರುವ ಬೀಜ
ಬೆಳೆದು ಟಿಸಿಲೊಡೆದು
ಹೆಮ್ಮರವಾಗಲು ಚಾಚುವಿರಾ
ಸ್ನೇಹ ಹಸ್ತ.

ಬೇರೆಯವರ ರಾಡಿ ತೊಳೆದು
ಕೊಳಕನ್ನೆಲ್ಲ ಒದರುವ
ಈ ಕೂಸು ಪರಿಸರ ಕೇಳಿ
ಪಡೆದ ಫಿನಿಕ್ಸ್

ಬಿ. ಎಸ್. ಸಣ್ಣಯ್ಯ

ಅಪರೂಪದ ಹಸ್ತಪ್ರತಿಗಳು

ಶ್ರವಣಬೆಳಗೊಳದ ಶ್ರೀ ಜೈನಮಠಾಧೀಶ್ವರರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಅತೀವ ಆಸಕ್ತಿಯಿಂದ ಇತ್ತೀಚೆಗೆ ಸಂಗ್ರಹಿಸಿರುವ ನೂರಾರು ಹಸ್ತಪ್ರತಿಗಳಲ್ಲಿ ಕೆಲವು ಅಪರೂಪವಾದ ಹಸ್ತಪ್ರತಿಗಳು ದೊರೆತಿವೆ. ಅವುಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಇದುವರೆಗೂ ಅಪರಿಚಿತವಾಗುಳಿದಿದ್ದ ಕೆಲವು ಹೊಚ್ಚ ಹೊಸ ಕೃತಿಗಳು ಕಂಡುಬರುತ್ತವೆ. ಅವುಗಳೆಂದರ ೧. ದೇವರಸನ ಮದನಚಕ್ರೇಶ್ವರ ಚರಿತೆ ೨. ಗುರುವಣ್ಣನ ಲೊಕ್ಕಿಯಮ್ಮನ ಚರಿತೆ ೩. ತೇಜಣ್ಣನ ಸೋಮಶೇಖರ ಚಿತ್ರಶೇಖರ ಚರಿತೆ ೪. ಗುಮ್ಮಟನಾಥನ ನಾಗಕುಮಾರ ಷಟ್ಪದಿ ೫. ಬಲ್ಲಾಳರಾಯನ ಚಾವುಂಡರಾಯ ಪುರಾಣ ೬. ಸಿಂಗಕವಿಯ ಸುಕುಮಾರ ಚರಿತೆ.

೧. ಬಹುರೋಚಕ ಕಥೆಯಾದ ಪ್ರದ್ಯುಮ್ನನ ಚರಿತೆಯನ್ನೊಳಗೊಂಡ ಮದನ ಚಕ್ರೇಶ್ವರ ಚರಿತೆಯ ಒಂದೇ ಒಂದು ಓಲೆಪ್ರತಿ ದೊರೆತಿದ್ದರೂ ಗ್ರಂಥ ಪೂರ್ಣವಾಗಿದ್ದು ಕವಿಯ ಕಾಲ ದೇಶಾದಿಗಳ ಬಗೆಗೆ ಅಲ್ಪಸ್ವಲ್ಪ ವಿವರಗಳನು ತಿಳಿಯಲು ಸಾಧ್ಯವಾಗಿದೆ ಇದರ ಕರ್ತೃ ದೇವರಸ. ಪೂರ್ಣ ಗ್ರಂಥ ಸಾಂಗತ್ಯ ದಲ್ಲಿದ್ದರೂ ಐದು ವೃತ್ತಗಳನ್ನೂ ಒಂದು ದೀರ್ಘ ವಚನವನ್ನೂ ರಚಿಸಿ ಪ್ರತಿ ವಿಭಾಗವನ್ನೂ ಆಶ್ವಾಸವೆಂದು ಕರೆದಿದ್ದಾನೆ ಹಾಗೂ ಶಕಟರೇಫ ಬಳಸಿದ್ದಾನೆ. ತನ್ನದೂ ಚಂಪೂ ಕೃತಿಗಳ ಸಾಲಿಗೆ ಸೇರಲೆಂಬ ಬಯಕೆಯಿಂದ ಈ ರೀತಿ ಮಾಡಿರ ಬಹುದು. ಇದರಲ್ಲಿ ೧೨ ಆಶ್ವಾಸಗಳೂ ೧೯೨೨ ಪದ್ಯಗಳೂ ಇವೆ. ೧೧ ಆಶ್ವಾಸ ಗಳಲ್ಲಿ ಕಥಾವಸ್ತು ನಿರೂಪಣೆ ಮಾಡಿದರೆ ೧೨ನೆಯದನ್ನು ತನ್ನ ವಿಷಯವನ್ನು ಹೇಳಿ ಕೊಳ್ಳಲು ಮೀಸಲಿರಿಸಿದ್ದಾನೆ.

ಇದರಿಂದ ತಿಳಿದುಬರುವಂತೆ ಈತನು ಕನಕಗಿರಿಯ ಮೂಡಣ ದಿಕ್ಕಿನಲ್ಲಿರುವ ಮಲಯಗ್ರಾಮದವನೆಂದೂ, ದೇವ ರಸಾರ್ಯನ ಮಗ ಬ್ರಹ್ಮನ ಪುತ್ರ ಅಥವಾ ದೇವರಸಾರ್ಯನ ಮೊಮ್ಮಗ 'ಜಿನಪದಾಂಬುಜ ಭಕ್ತ'ನಾದ ದೇವರಸನೆಂದೂ ವ್ಯಕ್ತವಾಗುತ್ತದೆ. ಈ ಹೇಳಿಕೆಯಲ್ಲಿ ಬರುವ 'ಕನಕಗಿರಿ ಮಲಯಗ್ರಾಮ'ಗಳನ್ನು

ಗಮನಿಸಿದರೆ ಚಾಮರಾಜನಗರ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಜೈನ ಕ್ಷೇತ್ರವಾದ ಮಲೆಯೂರಿನವನೆಂದು ಹೇಳಬಹುದಾಗಿದೆ. ಆದರೆ ಕಾಲದ ಬಗೆಗೆ ಯಾವ ಸೂಚನೆಯೂ ಇಲ್ಲದಿರುವುದರಿಂದ ಈ ಬಗೆಗಿನ ಅಸ್ಪಷ್ಟತೆ ಹಾಗೆಯೇ ಉಳಿಯುತ್ತದೆ.

ದೇವಚಂದ್ರನ 'ರಾಜಾವಳಿ ಕಥಾಸಾರ'ದ "ಮಹಿಸೂರೊಳು ನಿಂದೆಮ್ಮ ಪಿತಾಮಹಂ ದೇವರಸಂ ಕನಕಗಿರಿಯ ಪದ್ಮಾವತಿ ಮಹಾದೇವಿ"[1] ಎಂಬ ಹೇಳಿಕೆಯಲ್ಲಿ ಬರುವ ದೇವರಸನೇ ಪ್ರಕೃತ ಕೃತಿಯ ಕರ್ತೃವಾಗಿರಬಹುದು. ಹಾಗಾದಲ್ಲಿ ೧೭೭೦-೧೮೪೧ರವರೆಗೆ ಜೀವಿಸಿದ್ದ ದೇವಚಂದ್ರನ ಪಿತಾಮಹ ದೇವರಸನಾಗುತ್ತಾನೆ ಎಂದರೆ ದೇವಚಂದ್ರನಿಗಿಂತ ಎರಡು ತಲೆಮಾರಿನಷ್ಟು ಹಿಂದಿನವನಾದ ದೇವರಸನ ಕಾಲವನ್ನು ಸುಮಾರು ೧೬೫೦ ಎಂದಿಟ್ಟುಕೊಳ್ಳಬೇಕಾಗುತ್ತದೆ. ಅಲ್ಲದೆ ಈತನು ಸ್ತುತಿಸಿರುವ ಕನ್ನಡ ಕವಿಗಳಲ್ಲಿ ರತ್ನಾಕರನು ಕೊನೆಯವನಾಗಿದ್ದು ೧೫೫೭ರಲ್ಲಿದ್ದ ರತ್ನಾಕರನಿಗಿಂತ ಈಚಿನವನೆಂಬುದೂ ಈ ಕಾಲ ನಿರ್ಣಯಕ್ಕೆ ಪೋಷಕವಾಗಿ ನಿಲ್ಲುತ್ತದೆ. ಮತ್ತೂ ಒಂದು ಅಂಶವೆಂದರೆ

ಹಲಗೆ ಬಳಹವಿಡಿಯದ ಪದವಿಟ್ಟದ
ನಳಿದು ಬರೆಯದಗ್ಗಳಿಕೆ
ಬಳಸಿಹ ಲೇಖಕರ್ಗಳ ಕಂಠಪತ್ರದೊ
ಳುಲುಹುಗುಂದದಗ್ಗಳಿಕೆ ೯—೫೬

ಎಂದು ಹೇಳಿರುವಲ್ಲಿ ಕುಮಾರವ್ಯಾಸನ ಅನುಕರಣೆಯ ಸ್ಪಷ್ಟ ಸೂಚನೆಯಿದೆ. ಮತ್ತೆ ಹಸ್ತಪ್ರತಿಯಲ್ಲಿನ ಲಿಪಿವಿನ್ಯಾಸವೂ ಸಾಕಷ್ಟು ಪ್ರಾಚೀನವಾಗಿ ಕಂಡು ಬರುತ್ತದೆ. ಈ ಎಲ್ಲ ದೃಷ್ಟಿಯಿಂದ ದೇವರಸನ ಕಾಲವನ್ನು ಸುಮಾರು ೧೬೫೦ ಎಂದು ನಿರ್ಧರಿಸಬಹುದಾಗಿದೆ.

ಆದಿಯ ೨೪ ಪದ್ಯಗಳಲ್ಲಿ ೨೪ ತೀರ್ಥಂಕರರನ್ನು ಸ್ತುತಿಸಿದ ಕವಿಯು ವಿಜಯ ನಾಥ ಪಾರಿಶ್ವೇಶ ಬೆಳಗುಳದ ಭುಜಬಲಿಗಳನ್ನೂ ಪಂಚಾಚಾರ್ಯರು ಮತ್ತು ಸರಸ್ವತಿಯನ್ನೂ ಸ್ತುತಿಸುತ್ತಾನೆ. ಅನಂತರ ಪೂಜ್ಯಪಾದ ಪಂಪ ಪೊನ್ನ ಜನ್ನ ನೇಮಿಚಂದ್ರ ಸುಜನೋತ್ತಂಸ ಅಸಗ ಮಧುರ ಅಗ್ಗಳ ರತ್ನಾಕರರನ್ನು ನೆನೆಯುತ್ತಾನೆ.

ಇದು ನೇಮಿಜಿನರಾಜಕ್ರಮ ಬಿಸರುಹ
ಮಧುಪಾಯಮಾನ ವಿಲಾಸ
ಮದನ ಚಕ್ರೇಶನ ಪುಣ್ಯಚರಿತ್ರದೊಳ್

ಎಂದು ಹೇಳುವುದರಿಂದ ೨೨ನೆಯ ತೀರ್ಥಂಕರನಾದ ನೇಮಿನಾಥ ಚರಿತೆಯಲ್ಲಿ ಕಂಡು ಬರುವ ಪ್ರದ್ಯುಮ್ನನ ಕಥೆಯೇ ಆಧಾರವಾಗಿದೆ.

1

ಅಂಬುಜಾಸ್ತ್ರನ ಕಥೆವೇಳ್ವೆನು ಭವ್ಯೌಘ
ಸಭೆಗೆ ಕಾಲಕ್ಷೇಪವಾಗಿ
ಶುಭಪರಿಣಾಮದೊದವು ದೊರಕಲಿಯೆಂ
ದಭವನ ಕಥೆವೇಳಿದೆನು ೧೨–೨೭

ಎಂದು ತನ್ನ ಕೃತಿಯ ಉದ್ದೇಶ ಮತ್ತು ಸಾರ್ಥಕತೆಯನ್ನು ವಿವರಿಸಿದ್ದಾನೆ. ಕಾವ್ಯವು ಮಧ್ಯಮ ದರ್ಜೆಯದಾಗಿದ್ದು ಸರಳ ಸುಂದರ ಶೈಲಿಯಿಂದ ಉತ್ತಮ ವರ್ಣನೆಗಳಿಂದ ಓದುಗರನ್ನು ಆಕರ್ಷಿಸುತ್ತದೆ.

೨. ಎರಡನೆಯದಾದ ಲೊಕ್ಕಿಯಮ್ಮನ ಚರಿತೆ (ಪದ್ಮಾವತಿ ಚರಿತೆ)ಯನ್ನು ಗುರುವಣ್ಣನೆಂಬ ಕವಿ ರಚಿಸಿದ್ದಾನೆ. ಇದು ಸಾಂಗತ್ಯದಲ್ಲಿದ್ದು ೧೨ ಸಂಧಿಗಳನ್ನೂ ೧೧೦೮ ಪದ್ಯಗಳನ್ನು ಒಳಗೊಂಡಿದೆ. ಆದಿಯಲ್ಲಿ ಪಂಚಾಚಾರ್ಯರು ಮತ್ತು ಬೆಳುಗೊಳದ ಗೊಮ್ಮಟನಾಥರನ್ನೂ, ಕನ್ನಡ ಕವಿಗಳಾದ ಪಂಪ ನಾಗಚಂದ್ರ ಶಾಂತಿವರ್ಮ ರತ್ನಾಕರರನ್ನೂ ನೆನೆದಿದ್ದಾನೆ.

ಸುರಭಿಪುರದ ಚಂದ್ರನಾಥನ ಪೂಜಿಪ
ಗೆರುವ ಗುಮ್ಮಯ್ಯನಾತ್ಮಜನು
ಗುರುವಣ ಪೇಳಿದ ಜಿನದತ್ತರಾಯನ
ಚರಿತೆಯ ಜನರು ಲಾಲಿಪುದು ೧–೨೭

ಎಂಬುದರಿಂದ ಈತನು ಸುರಭಿಪುರದ ಚಂದ್ರನಾಥನನ್ನು ಪೂಜಿಸುವ ಗುಮ್ಮಯ್ಯನೆಂಬುವವನ ಮಗ ಗುರುವಣ್ಣನೆಂದೂ, ಹೊಂಬುಜದ ಪದ್ಮಾವತಿ ಅಥವಾ ಜಿನದತ್ತರಾಯನ ಕಥೆಯನ್ನು ಹೇಳುವನೆಂದೂ ತಿಳಿದುಬರುತ್ತದೆ. ತನ್ನ ಕೃತಿಯು

ರಸದಾಳಿಯಂತೆ ರಮಣಿಯ ಚೆಂದುಟಿಯಂತೆ
ಪೊಸವೆಣ್ಗಳ ಕೂಟದಂತೆ
ಹಸ ಮೃದು ನುಡಿಯ ಕನ್ನಡದೊಳು ರಚಿಸುವೆ
ರಸಿಕ ಜನರು ಲಾಲಿಪುದು ೧–೨೬

ಎಂದು ತನ್ನ ಕೃತಿಯ ಹಿರಿಮೆಯಲ್ಲಿ ಆತ್ಮವಿಶ್ವಾಸ ಹೊಂದಿದ್ದಾನೆ. ಇದನ್ನು ಪಟ್ಟದ ಭದ್ರಹಸ್ತಿಯನೇರಿ ರಾಯನು

ಪಟ್ಟಣದೊಳು ಪೊಗಲಾಗ
ಕಟ್ಟಲು ಸಕಲ ವಾದ್ಯದ ರವವೆಣ್ದೆಸೆ
ಗಿಟ್ಟಣಿಸಿದವೇನೆಂಬೆ ೧೨–೩೨

ಪುರದ ನಾರಿಯರೆಲ್ಲ ಮಗಿಲೇರಿ ಮನೆಯೇರಿ
ತ್ವರಿತದಿ ಜಿನದತ್ತ ನೃಪನ
ಭರದಿ ಕಾಣುತ ಕಂಗಳ ಜಲದೊಳು ತಮ್ಮ
ಉರಕೆ ಮಜ್ಜನವ ಮಾಡಿದರು ೧೨–೩೩

ಎಂಬಿವೇ ವರ್ಣನೆಗಳಲ್ಲಿ ಕಾಣಬಹುದು.

ಕವಿಯ ಕಾಲ ದೇಶಾದಿಗಳ ಬಗೆಗೆ ವಿವರವಾವುವೂ ದೊರೆಯದಿದ್ದರೂ 'ಸುರಭಿಪುರ' ಎಂಬುದರಿಂದ ಈತನು ಈ ಪ್ರದೇಶದವನೆಂದು ಹೇಳಬಹುದು. ಈ ಹೆಸರಿನ ಯಾವ ಸ್ಥಳದ ಮಾಹಿತಿಯೂ ದೊರೆಯುವುದಿಲ್ಲ. ಆದರೆ 'ಸುರಧೇನುಪುರ' ಎಂಬುದರ ಬಗೆಗೆ ಎಪಿಗ್ರಾಫಿಯಾ ಕರ್ಣಾಟಿಕಾ ಸಂಪುಟ ೯ರ ಪೀಠಿಕೆಯಲ್ಲಿ ಹೇಳಲಾಗಿದೆ. ಈಗ ಇದು ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣದ ಹೋಬಳಿಯಲ್ಲಿದೆ. 'ಸುರಧೇನುಪುರ'ವನ್ನೇ ಕವಿಯು 'ಸುರಭಿಪುರ' ಎಂದು ಹೇಳಿದ್ದಾನೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಒಂದು ಐತಿಹ್ಯದಿಂದ ತಿಳಿದುಬರುವಂತೆ 'ಸುರಲೋಕದಿಂದ ಸುರಭಿಗಳು ಬಂದು ಶ್ರೀರಂಗನಾಥ ದೇವಾಲಯದಲ್ಲಿ ಹಾಲು ಸುರಿಸುತ್ತಿದ್ದವು. ಆದುದರಿಂದ 'ಸೊರಬ'ವಾಯಿತೆಂಬುದು ಶಿವಮೊಗ್ಗ ಜಿಲ್ಲೆಯ ಸೊರಬಕ್ಕೆ ಇದೆ.' ಆದುದರಿಂದ ಇದೇ ಸುರಭಿಪುರವಿರಬಹುದೆಂಬುದು ಊಹೆಯಾಗುತ್ತದೆ. ಒಟ್ಟಿನಲ್ಲಿ ಇವಾವುವೂ ಕವಿಯ ಪ್ರದೇಶವನ್ನು ಖಚಿತವಾಗಿ ಗುರುತಿಸುವಲ್ಲಿ ಸಹಾಯಕವಾಗುವುದಿಲ್ಲ.

ಕಾಲದ ಬಗೆಗೆ ಪ್ರತಿಯ ಕಾಲವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪ್ರತಿಯ ಕೊನೆಯಲ್ಲಿ "ಶಾಲಿವಾಹನ ಶಕವರ್ಷ ೧೬೮೮ನೆಯ ವರ್ತಮಾನಕ್ಕೆ ಸಲುವ ವ್ಯಯಸಂವತ್ಸರದ ಮಾರ್ಗಶಿರ ಶು ಮಂಗಳವಾರ ತಾಸು ಇಕ್ಕೆ ಶ್ರೀಮದಭಿನವ ದೇವೇಂದ್ರಕೀರ್ತಿಸ್ವಾಮಿಯವರ ಪಾದೋಪಾಂತದಲ್ಲು ಕಳಶದ ಮರಿಯಂಣೋಪಾಧ್ಯಾಯನು ತನಗೆ ಕೇವಲಜ್ಞಾನ ನಿಮಿತ್ತವಾಗಿ ಬರದಂಥ ಲೊಕಿಯಂಮನ ಚರಿತೆ ಸಮಾಪ್ತ" ಎಂದಿದೆ. ಇದರಿಂದ ಈ ಪ್ರತಿಯ ಕಾಲ ಕ್ರಿ.ಶ. ೧೭೬೬ ಆಗುತ್ತದೆ. ಎಂದರೆ ಕವಿಯು ಇದಕ್ಕೆ ಹಿಂದೆ ಸುಮಾರು ೧೭೫೦ರಲ್ಲಿದ್ದಿರಬಹುದೆಂದು ಹೇಳಬಹುದಾಗಿದೆ.

೩. ಮತ್ತೊಂದು ಹೊಸ ಕೃತಿಯೆಂದರೆ ಸೋಮಶೇಖರ ಚಿತ್ರಶೇಖರ ಚರಿತೆ. ಇದನ್ನು ತೇಜಣ್ಣನೆಂಬುವನು ಸಾಂಗತ್ಯದಲ್ಲಿ ರಚಿಸಿದ್ದಾನೆ. ಇದರಲ್ಲಿ ೯ ಸಂಧಿಗಳು ೧೧೯೫ ಪದ್ಯಗಳೂ ಇವೆ. ಇದು ಓಲೆ ಗ್ರಂಥವಾಗಿದ್ದು ದೊರೆತ ಏಕೈಕ ಹಸ್ತಪ್ರತಿಯಾಗಿದೆ. ಪ್ರತಿಯ ಆದಿಯಲ್ಲಿ "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾಃ ೧೭೫೪ನೆಯ ನಂದನನಾಮ ಸಂವತ್ಸರದ ಆಶ್ವಿಜ ಶು ೧೦ ಗುರುವಾರದಲ್ಲು ಮದ್ದಗಿರಿ ಪೂರ್ವಾಚಾರ್ಯರು ಗುರುಪಾದಯ್ಯನವರ ಕುಮಾರ ಕರಿಬಸವನ್ನಗೆ ಓದಿಕೊಳ್ಳುವುದಕ್ಕೆ ಪ್ರಾರಂಭಿಸಿ ಬರೆದುಕೊಟ್ಟ ಚೋರಕಥೆ ರತ್ನಾಪುರಿ ವಜ್ರಮಕುಟರಾಯನ ಕುಮಾರರು ಸೋಮಶೇಖರ ಚಿತ್ರಶೇಖರರ ಚರಿತ್ರೆ ಬರುವುದಕ್ಕೆ ಶುಭಮಸ್ತು" ಎಂದಿದೆ. ಎಂದರೆ ಈ ಪ್ರತಿಯ ಕಾಲ ಕ್ರಿ.ಶ. ೧೮೩೨ ಆಗುತ್ತದೆ. ಉಳಿದಂತೆ ಕೃತಿಯಲ್ಲಿ ಕವಿಯ ಕಾಲದ ಬಗೆಗೆ ದೊರೆಯುವ ಒಂದು ಸೂಚನೆಯೆಂದರೆ

ಹಿಂದಕ್ಕೆ ಕವಿಯಾದ ಕಸ್ತುರಿಸಿದ್ಧನು
ಹೊಂದಿಸಿರುವ ಚೋರಕಥೆಯ
ಅಂದವರಿತು ನಾನೆಕ್ಷಗಾನವ ಬಿಟ್ಟು
ಹೊಂದಿಸಿ ಚರಿತೆ ಮಾಡಿದೆನು ೯—೯೮

ಎಂದು ತನ್ನ ಕೃತಿಗೆ ಕಸ್ತೂರಿಸಿದ್ಧನ ಕಥೆಯೇ ಆಧಾರವೆಂಬುದನ್ನು ಸೂಚಿಸಿದ್ದಾನೆ. ಕಸ್ತೂರಿಸಿದ್ಧನ ಕಾಲ ಸುಮಾರು ೧೮೦೦ ಎಂದು ಕವಿ ಚರಿತೆಕಾರರು ನಿರ್ಣಯಿಸಿದ್ದಾರೆ. ಆದುದರಿಂದ ತೇಜಣ್ಣನೂ ಇದೇ ಕಾಲಕ್ಕೆ ಅಥವಾ ಸ್ವಲ್ಪ ಈಚೆಗೆ ಇದ್ದಿರಬಹುದು; ಇಲ್ಲವೆ ಕಸ್ತೂರಿಸಿದ್ಧನ ಕಾಲವನ್ನೇ ಹಿಂದಕ್ಕೆ ಸರಿಸಬಹುದಾದರೆ ಈತನದೂ ಇನ್ನೂ ಪೂರ್ವಕ್ಕೆ ಹೋಗಬಹುದು. ಈತನ ಕಾಲವನ್ನು ಸುಮಾರು ೧೮೦೦ ಎಂದೇ ಹೇಳಬಹುದು.

ಧರೆಯೊಳಧಿಕವಾಗಿ ಮೆರೆಯುತಿ
ಮುಕೂರೊಳಿರುತಿಹ ಜಿನಕುಲೋತ್ತಮನು
ಪುರುಷಯ್ಯನ ಸತಿ ಗಿರಿಯಮ್ಮನ ಸುತ
ಹಿರಿಯ ಮಗ ತೇಜಣ್ಣ ೯—೯೯

ಎಂಬಲ್ಲಿ ಸ್ವಲ್ಪ ಭಾಗ ತ್ರುಟಿತವಾಗಿರುವುದರಿಂದ ಯಾವ ಊರೆಂಬುದು ತಿಳಿದುಬರುವುದಿಲ್ಲ. ಆದರೆ ಪುರುಷಯ್ಯ ಮತ್ತು ಗಿರಿಯಮ್ಮನ ಹಿರಿಯ ಮಗ ತೇಜಣ್ಣನೆಂಬುದು ಖಚಿತವಾಗಿದೆ.

೪. ದೊರೆತ ಅಪರೂಪ ಹಸ್ತಪ್ರತಿಗಳಲ್ಲಿ ನಾಲ್ಕನೆಯದಾದ ನಾಗಕುಮಾರ ಷಟ್ಪದಿ ಎಂಬ ಗ್ರಂಥವನ್ನು ಗುಮತನಾಥನೆಂಬುವವನು ರಚಿಸಿದ್ದಾನೆ. ಇದು ೩೫ ಸಂಧಿಗಳನ್ನು ೧೯೧೨ ಭಾಮಿನಿ ಷಟ್ಪದೀ ಪದ್ಯಗಳನ್ನು ಹೊಂದಿರುವ ಬೃಹದ್ಗ್ರಂಥ; ಇದು ಕಾಗದದ ಹಸ್ತಪ್ರತಿಯಾಗಿದೆ. ಹಸ್ತಪ್ರತಿಯ ಆದಿಯಲ್ಲಿ "ಶ್ರೀವೀತರಾಗಾಯ ನಮಃ ಸಿರಗುಪ್ಪೆ ಪಾರಿಶ್ವಜಿನಯೇ ನಮಃ" ಎಂದೂ, ಕೊನೆಯಲ್ಲಿ "ಶಕೆ ೧೭೯೭ ಯುವ ನಾಮ ಸಂವತ್ಸರದ ಬದ್ರಪದ ಸುದ ೭ ಸೋಮವಾರ ಅನುರಾದ ನಕ್ಷತ್ರದಲ್ಲಿ ಯಿಂತ್ಹೀ ಸುಭದಿವಸದೊಳು ಸಿರಗುಪ್ಪೆಯಿದ್ದಪ್ಪನವರ ಮಗ ಗೆನಪ್ಪಗೆ ಬೆಳುಗುಳದ ಗುಮತನಾಥನು ಬರದುಕೊಟ್ಟ ನಾಗಕುಮಾರನ ಸಟ್ಪದಿ ಪುರಾಣ ಸಮಾಪ್ತ" ಎಂದೂ ಇರುವುದರಿಂದ ಸಿರಗುಪ್ಪೆಯ ಪಾರ್ಶ್ವಜಿನಾಲಯದಲ್ಲಿ ಕ್ರಿ.ಶ. ೧೮೭೫ರಲ್ಲಿ ಮಾಡಿದ ಪ್ರತಿ ಎಂಬುದು ತಿಳಿದುಬರುತ್ತದೆ. ಕವಿಯು ಇದಕ್ಕಿಂತ ಎಷ್ಟು ಹಿಂದೆ ಇದ್ದವನು? ಯಾವ ಪ್ರದೇಶದವನು? ಮೊದಲಾದ ವಿಷಯಗಳನ್ನು ಇತರ ಆಧಾರಗಳನ್ನು ಪರಿಶೀಲಿಸಿ ನಿರ್ಣಯ ಮಾಡಬೇಕಾಗಿದೆ.

೫. ದೊರೆತಿರುವ ಐದನೆಯ ಕೃತಿಯೆಂದರೆ ಬಲ್ಲಾಳರಾಯನೆಂಬ ಕವಿಯಿಂದ ರಚಿತವಾಗಿರುವ ಚಾವುಂಡರಾಯ ಪುರಾಣ. ಇದು ೨ ಸಂಧಿಗಳನ್ನೂ ೩೧೦ ಪದ್ಯಗಳನ್ನೂ ಒಳಗೊಂಡಿರುವ ಚಿಕ್ಕ ಕೃತಿ. ಸಾಂಗತ್ಯದಲ್ಲಿ ರಚಿತವಾಗಿರುವ ಇದು

ಕಾಗದದ ಹಸ್ತಪ್ರತಿಯಾಗಿದ್ದು ಸಮಗ್ರವಾಗಿದೆ. ಪ್ರತಿಯ ಮೊದಲಲ್ಲಿ "ಶ್ರೀ ಖಾನಾಪುರದ ಶಾಂತಿನಾಥಾಯ ನಮಃ" ಎಂದೂ, ಕೊನೆಯಲ್ಲಿ "ಸ್ವಸ್ತಿಶ್ರೀ ನೃಪ ಶಾಲಿವಾಹನ ಸಕೆ ೧೩೫೩ ತ್ರಿಪಂಸನೆಖರನಾಮ ಸಂವತ್ಸರೆ ಜೇಷ್ಟ ಶುದ ೧೦ ರವಿವಾರ ನೇಟಿ ಖಾನಾಪುರದ ಶ್ರೀ ಶಾಂತಿತೀರ್ಥೇಶನ ಚೈತ್ಯಾಲಯದಲ್ಲಿ ಮುಗಿತು" ಎಂದೂ ಇರುವುದರಿಂದ ಕವಿಯೂ ಆ ಪ್ರದೇಶಕ್ಕೆ ಸೇರಿದವನೊ ಏನೊ ಎಂದು ಅನುಮಾನಿಸಲು ಆಸ್ಪದವಿದೆ. ಇಲ್ಲಿ ಕೊಟ್ಟಿರುವ ಶಕವರ್ಷದೊಡನೆ ಸಂವತ್ಸರಾದಿ ವಿವರಗಳು ಸರಿಹೋಗುವುದಿಲ್ಲ; ೨೭೫೩ಕ್ಕೆ ಸರಿ ಹೊಂದುತ್ತವೆ. ಎರಡನೆಯ ಸಂಖ್ಯೆಯ ೩-೭ ಸ್ವಲ್ಪ ಹೆಚ್ಚು ಆಗಿರಬಹುದು. ಇದು ಸಾಂಗತ್ಯಕೃತಿಯಾಗಿರುವುದರಿಂದಲೂ ಮತ್ತು ಕಾಗದದ ಪ್ರತಿಯಾಗಿರುವುದರಿಂದಲೂ ೧೭೫೩ಕ್ಕೆ ಸರಿಯಾದ ಪ್ರತಿಯ ಕಾಲ ಎಂದು ಒಪ್ಪಬಹುದು. ಕೊಟ್ಟಿರುವ ಸಂವತ್ಸರಾದಿ ವಿವರಗಳು ಜೂನ್ ೧೯, ೧೮೩೧ಕ್ಕೆ ಸರಿಹೋಗುವುದರಿಂದ ಕವಿಯ ಕಾಲವನ್ನು ಕ್ರಿ.ಶ. ಸುಮಾರು ೧೮೦೦ ಎಂದಿಟ್ಟು ಕೊಳ್ಳಬಹುದಾಗಿದೆ.

ಶ್ರೀಮುನಿವೃಂದಾರಕ ವಂದಿತ (?)
ಕೋಮಲಪದ ಪದ್ಮಯುಗಲ
ಸೋಮಾರ್ಕಕೋಟಿ ತೇಜ ಗುಂಮಟಜಿನ
ಕಾಮಿತಾರ್ಥವನೀವುದೆಮಗೆ ॥ ೧ ॥

ಎಂದು ಆದಿಯಲ್ಲಿ ಬಾಹುಬಲಿಯನ್ನು ಸ್ತುತಿಸುತ್ತಾನೆ. ಕೊನೆಯಲ್ಲಿ

ಚಾವುಂಡರಾಯನನ್ವಯದಂತರದೊಳು
ಭೂವಿಖ್ಯಾತ ಬಲ್ಲಾಳರಾಯ
ಆ ವಿಸ್ತಾರವನು ವಿವರಿಸುವಲ್ಲಿಗೆ
ತೀರಿತು ಎರಡನೆ ಸಂಧಿ ॥ ೧೬೦ ॥

ಎಂದು ಕಾವ್ಯವನ್ನು ಮುಗಿಸಿದ್ದಾನೆ. ಈತನು ಯಾವ ಬಲ್ಲಾಳರಾಯ ಎಂಬುದು ಸದ್ಯಕ್ಕೆ ತಿಳಿದುಬರುವುದಿಲ್ಲ.

೬. ಮತ್ತೊಂದು ಕೃತಿಯೆಂದರೆ ಸಿಂಗಕವಿಯಿಂದ ರಚಿತವಾದ ಸುಕುಮಾರ ಚರಿತೆ. ಇದು ಓಲೆಯಲ್ಲಿದ್ದು ಅಸಮಗ್ರವಾಗಿದೆ; ೮೬ ಕಂದ ಪದ್ಯಗಳು ಮಾತ್ರ ದೊರೆತಿವೆ. ಆದಿಯಲ್ಲಿ ಜಿನೇಂದ್ರರ ಸ್ತುತಿಯಿದೆ.

ಚರಿತಂಗಳೊಳಗೆ ಪೊಗಳಲು
ಚರಿತಂ ಸುಕುಮಾರದೇವನೆಂಬನ ಚರಿತಂ
ಚರಿತಮಿದನರ್ತಿಯಿಂದಂ
ಕರಮೊಪ್ಪಿರೆ ಪೇಳ್ದನಲ್ತೆ ಸಿಂಗಂ ಧರೆಯೊಳ್ ॥ ೩ ॥

ಎಂದು ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಶಕಟರೇಫ ಬಳಕೆಯಾಗಿದೆ.

ಕರ್ಣಾಟಕ ಕವಿಚರಿತೆಯ ಮೊದಲನೆಯ ಸಂಪುಟದಲ್ಲಿ "ಸಿಂಗದೇವ ಸು. ೧೧೯೮ ಎಂದು ಹೇಳಿ ಸೊರಬದ ೧೪ನೆಯ ಶಾಸನದಲ್ಲಿ (ಶಕ ೧೧೧೯) ಈತನನ್ನು "ಸರಸೋದಾರ ಕವಿತ್ವ ಚತುರಾಸ್ಯಂ" ಎಂದು ಹೊಗಳಿದೆ. ಈತನು ಜಿಡ್ಡುಳಿಗೆಯ ಎಕ್ಕಲದೇವನ ಮತ್ತು ಚಟ್ಟಲದೇವಿಯ ಮಗನೆಂದು ಹೇಳಿದೆ. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೊ ತಿಳಿಯದು'' ಎಂದು ಹೇಳಲಾಗಿದೆ. ಈ ಸಿಂಗದೇವನೇ ಪ್ರಕೃತ ಸಿಂಗಕವಿಯೇ ಅಲ್ಲವೇ ಎಂದು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಈತನ ಕಾಲ ದೇಶಾದಿಗಳ ಬಗೆಗೆ ಯಾವ ಸೂಚನೆಗಳೂ ಕಂಡುಬರುವುದಿಲ್ಲ.

ಈ ಎಲ್ಲ ಕೃತಿಗಳ ಬಗೆಗೆ ವಿವರವಾದ ಅಧ್ಯಯನದ ಅನಂತರ ಪ್ರತಿಯೊಂದು ಕೃತಿಯನ್ನೂ ಬೇರೆ ಬೇರೆಯಾಗಿ ವಿಮರ್ಶಿಸಲಾಗುವುದು. ಆಗ್ಗೆ ಕವಿ ಕೃತಿಗಳ ಬಗೆಗೆ ಇನ್ನೂ ಹೆಚ್ಚಿನ ಮಾಹಿತಿಗಳು ಲಭ್ಯವಾಗುವುವೆಂದು ಆಶಿಸಿದ್ದೇನೆ. ಇವು ಆದಷ್ಟು ಬೇಗ ಅಚ್ಚಾಗಿ ಪ್ರಕಟವಾದಲ್ಲಿ ಪೂಜ್ಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಶ್ರಮ ಮತ್ತು ಅಲ್ಪಸ್ವಲ್ಪ ನನ್ನ ಸಂಶೋಧನೆಯ ಫಲ ಸಾರ್ಥಕವಾಗುತ್ತದೆ.

ಕವಿಚರಿತೆಯಲ್ಲಿ ಉಕ್ತವಾಗಿರುವ ಸದ್ಯಕ್ಕೆ ಅಲಭ್ಯವಾಗುಳಿದಿರುವ ಕೆಲವು ಹಸ್ತಪ್ರತಿಗಳನ್ನೂ ಗುರುತಿಸಲಾಗಿದೆ. ಇವುಗಳ ಬಗೆಗೆ ಮತ್ತೊಂದು ಲೇಖನದಲ್ಲಿ ವಿವರಗಳನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆ.

ಎಂ. ಹೆಚ್. ರುದ್ರಮುನಿ

ಹಿಮ ಕವಿದ ಬದುಕು

ಒಂದು ಸುಂದರ ಬೆಳಗು
ಮರ ತುಂಬ ಸೊಗಸಾದ ಹಸಿರು
ಮನಸ್ಸು ಗಂಭೀರ ಸಾಗರ
ಹುಚ್ಚು ಮನಸ್ಸಿನ ಹರವು ಅಪಾರ
ಘಟನೆಗಳು ಸಾಗರದ ತೆರೆಗಳು
ತಡೆಯಿಲ್ಲದೆ ಬಂದು ಅಪ್ಪಳಿಸುವ ಪರಿ ಅನಂತ
ಸುಖ ದುಃಖಗಳ ಸಮ ಸಮ ಪಡೆದು
ಬದುಕಿದ ದಿವ್ಯ ಜೀವನ
ಗಕ್ಕನೆ ಕಣ್ಮರೆ
ಹಿಮಕವಿದ ಬದುಕು
ಕೊರೆಯುವ ಅನುಭವ ಅವ್ಯಕ್ತ ಶಿಲೆಯು ಹಾಗೆ
ಈ ಬದುಕು ಹಲವು–ತಿರುವು–ಶಾಕ್‌ಗಳ ಕಂದರ

ಜೊತೆ ಜೊತೆಗೆ ಬಾಳಲು ಬಿಡದ
ಪೀಡೆ ಈ ಸ್ಥಿತಿ ನೊಳೆಯಲು
ಬಿಟ್ಟು ಸಸಿ ಚಿವುಟಿದ ರೀತಿ ಭಯಾನಕ

ನೋಡು ನೋಡುತ್ತಲೇ
ಸೂರ್ಯಕರಗಿ ಹೋದಭಾಸ
ಅದರ ಹೊಂಗಿರಣದ ರಶ್ಮಿಯಲಿ
ಎಲೆ ಉದುರಿದ ಬೋಳಾದ ಮರದ ನೆನಪು.

ಮಾಧವ ಕುಲಕರ್ಣಿ

ವಿ. ಕೃ. ಗೋಕಾಕ ಅವರ 'ಸಮರಸವೇ ಜೀವನ' —ಒಂದು ಮರುಚಿಂತನೆ

ಮುಖ್ಯವಾಗಿ ಇದೊಂದು ಪಾತ್ರ ಪ್ರಧಾನವಾದ ಕಾದಂಬರಿ. ಆದರೆ ಕಾದಂಬರಿಯ ಭಾಗಗಳು ಬೆಳೆಯುತ್ತ ಹೋದ ಹಾಗೆ ಇದೊಂದು 'ತತ್ವಪ್ರಧಾನ' ಕಾದಂಬರಿಯಾಗಿ ರೂಪುಗೊಳ್ಳುತ್ತದೆ. ಆರು ಭಾಗಗಳನ್ನುಳ್ಳ ಈ ಬೃಹತ್ ಕಾದಂಬರಿ ಬೆಳೆದು ಮುಕ್ತಾಯವಾಗಲು ಒಟ್ಟು ಇಪ್ಪತ್ತೆರಡು ವರುಷಗಳು ಬೇಕಾದವೆಂದು ಲೇಖಕರು ಹೇಳಿದ್ದಾರೆ. ಇದೊಂದು ಭಗೀರಥ ಪ್ರಯತ್ನವೇ ಸರಿ. ಆದರೆ ಕಾದಂಬರಿಯನ್ನು ಓದಿದ ನಂತರ ಮತ್ತು ಇಡೀ ಕನ್ನಡ ಕಾದಂಬರಿ ಲೋಕವನ್ನು ಅವಲೋಕಿಸಿದಾಗ ಇದು ರಶಿಯ ಸಾಹಿತ್ಯದಲ್ಲಿ ಗೋಗೋಲನ, ಓವರ ಕೋಟಿಗೆ ಹಲವು ದೃಷ್ಟಿಯಿಂದ ಸಮವೆಂದು ಅನ್ನಿಸದಿರದು. ಈ 'ಸಮರಸವೇ ಜೀವನ' ಕಾದಂಬರಿಯಿಂದ ಪ್ರಭಾವಿತವಾಗಿ ಕನ್ನಡದ ಅನೇಕ ಕತೆ–ಕಾದಂಬರಿಗಳು ಅವತರಿಸಿವೆ. ಕನ್ನಡ ಗದ್ಯದ ಬಳಕೆಯಲ್ಲಿ ಕೂಡ ನಂತರದ ಎಷ್ಟೋ ಲೇಖಕರಿಗೆ ಈ ಕಾದಂಬರಿಯು ದಾರಿದೀಪವಾಗಿರಲೂ ಬೇಕು. ೧೯೩೦ರ ಸುಮಾರಿನ ಇತರ ಕನ್ನಡ ಗದ್ಯಕೃತಿಗಳನ್ನು ಅವಲೋಕಿಸಿದಾಗ 'ಇಜ್ಜೋಡು' ಕಾದಂಬರಿಯ ಮಹತ್ವ ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ನರಹರಿಯ ಬೆಳವಣಿಗೆಯೇ ಈ ಕಾದಂಬರಿಗಳ ಕೇಂದ್ರ ಬಿಂದು. ಭಾವನಾ ಜೀವಿಯಾದ ನರಹರಿಯು ಮೊಗ್ಗಾವಿಯ ಪ್ರೈಮರಿ ಸ್ಕೂಲಿನಲ್ಲಿ ತೋರುವ ಪ್ರತಿಭೆಯಿಂದ ಹಿಡಿದು ಅವನು ಕೊನೆಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ—'ಪೂರ್ಣ ಜೀವನ ಕೇಂದ್ರ'ವೆಂಬ ಮಹತ್ವಾಕಾಂಕ್ಷೆ ಸಂಸ್ಥೆಯೊಂದನ್ನು ಪ್ರಾರಂಭಿಸುವುದರವರೆಗೆ ಕಾದಂಬರಿಯ ಹರವು ಹಬ್ಬಿದೆ. ಆದರೆ, ಆದರ್ಶಮಯ ವ್ಯಕ್ತಿಯೊಂದು ಪ್ರಧಾನ ಪಾತ್ರವಾದಾಗ, ಲೇಖಕರ ಕೈಯನ್ನೂ ಮೀರಿ ನಾಯಕನನ್ನುಳಿದು ಇತರ ಕೆಲವು ಪಾತ್ರಗಳೂ ಜೀವಂತವಾಗುವಂತೆ, ಇಲ್ಲಿಯೂ ನರಹರಿಯನ್ನು ಮೀರಿ ಕೆಲವು ಮುಖ್ಯ ಮತ್ತು ಅಮುಖ್ಯ ಪಾತ್ರಗಳು ಬೆಳೆಯುತ್ತವೆ.

ಕುಸುಮಾ-ನರಹರಿ, ಶೀನು–ಸುಶೀಲೆ–ಸಿಮನ್, ವಿಷ್ಣು–ಪ್ರಮೀಳೆ ಹೀಗೆ ಮೂರು ಜೋಡಿಗಳನ್ನು ಲೇಖಕರು ಜೀವನದ ಮಹಾಸಮುದ್ರದ ಮೇಲೆ ತೇಲಿ ಬಿಟ್ಟಿದ್ದಾರೆ. ಈ ಜೋಡಿಗಳ ತಾಕಲಾಟ ಮತ್ತು ಸಮಾನಾಂತರ ಬೆಳವಣಿಗೆಯನ್ನು ನೋಡಿದಾಗ ಪಾತ್ರ ಪ್ರಧಾನ ಕಾದಂಬರಿಯ ಒಂದು ಅಂಶ ಸ್ಪಷ್ಟವಾಗುತ್ತದೆ. ಸಮಾನಂತರ ಪಾತ್ರ ಸೃಷ್ಟಿಯ ಮೂಲಕ ಒಂದು ಮೌಲ್ಯ ವ್ಯವಸ್ಥೆಯನ್ನು ಸೃಷ್ಟಿಸುವುದು ಮತ್ತು ಈ ಮೌಲ್ಯ ವ್ಯವಸ್ಥೆಯ ಪರೀಕ್ಷೆಗಾಗಿ ಒಂದು ತಾತ್ವಿಕ ಕೇಂದ್ರವನ್ನು ನಿರ್ಮಿಸುವುದು. 'ಸಮರಸವೇ ಜೀವನ' ಕಾದಂಬರಿ ಕೂಡ ಈ ಸ್ವೀಕೃತ ಸೂತ್ರಕ್ಕೆ ಹೊರತಾಗಿಲ್ಲ. ಆದರೆ, ಕುಸುಮಾ, ದೇಸಾಯರು, ವಿಷ್ಣು ಮುಂತಾದವರು ಸಾತ್ವಿಕ ವರ್ಗದಲ್ಲಿ ಮತ್ತು ಸುಬ್ಬಣ್ಣಾಚಾರ್ಯರು, ಜಾನಕಿ ಬಾಯರು, ರಮಾಬಾಯರು ಇವರು ಋಜು ಮಾರ್ಗದಿಂದ ಹೊರತಾಗಿ—ಈ ತಾತ್ವಿಕ ಕೇಂದ್ರವನ್ನು ಮೀರಿ ನಿಲ್ಲುತ್ತಾರೆ. 'ಇಜ್ಜೋಡು' ಕಾದಂಬರಿಯಲ್ಲಿ ಬರುವ ನರಹರಿಯ ಅಕ್ಕ ಪದ್ಮಾವತಿ ಮತ್ತು ಆವಳ ದುರಂತ ಸಾವು 'ಸಮರಸವೇ ಜೀವನ' ಕಾದಂಬರಿಯ ಒಟ್ಟು 'ಧ್ವನಿ'ಯನ್ನು ಮೊದಲೇ ಪ್ರತಿಷ್ಠಾಪಿಸಿ ಬಿಡುತ್ತದೆ. ಇವಳ ಪರಂಪರೆಯಲ್ಲಿಯೇ ಮುಂದೆ ಶೀನೂನ ಹೆಂಡತಿ ಸುಶೀಲೆಯು ನಡೆಯುತ್ತಾಳೆ. ಸುಮಾರು ೫೦ ವರ್ಷಗಳ ಹಿಂದಿನ ಉತ್ತರ ಕರ್ನಾಟಕದ ದೇಶಸ್ಥ ಬ್ರಾಹ್ಮಣರ ಮನೆಯ ಚಿತ್ರಣ ಕಾದಂಬರಿಯುದ್ದಕ್ಕೂ ಚದುರಿದೆ. ಜಾನಕೀಬಾಯರು, ಪದ್ಮಾವತಿಯ ಸಾವಿಗೆ ಕಾರಣರಾಗುತ್ತಾರೆ. 'ಇಜ್ಜೋಡಿನಲ್ಲಿ' ಅವರು ಅನಕ್ಷರಸ್ಥರು. ಆದರೆ ಮುಂದೆ ಸುಶೀಲೆಯ ಸಾವಿಗೆ ಕಲಿತ ಶೀನೂವೆ ಕಾರಣನಾಗುತ್ತಾನೆ. ಹಾಗೆ ನೋಡಿದರೆ, ನರಹರಿಯು ಮೊಗಾವಿಯನ್ನು ಬಿಡಲು ಕಾರಣರಾದ ರಮಾಬಾಯರಷ್ಟೇ ಶೀನೂ ಕೂಡ ಸುಶೀಲೆಯ ಜೀವನದ ಅಂತ್ಯಕ್ಕೆ ಕಾರಣನಾಗಿದ್ದಾನೆ. ಜಾನಕೀಬಾಯರು ಮತ್ತು ಕೇಶವ ಇವರಿಬ್ಬರೂ ಪದ್ಮಾವತಿಯ ಸಾವಿನಲ್ಲಿ ಅಪರಾಧಿಗಳಾಗಿ ನಿಲ್ಲುವಂತೆ ಕಾದಂಬರಿಯು ಸ್ಪಷ್ಟವಾದ ಧೋರಣೆ ತಳೆದಿದೆ. ಆದರೆ ಸುಶೀಲೆಯ ದುರಂತಕ್ಕೆ ಮಾತ್ರ ಶೀನೂನು ಭಾಗಶಃ ಕಾರಣನಾಗಿರಬಹುದು ಎಂಬಂತೆ ಚಿತ್ರಿತವಾಗಿದೆ. ಏಕಿರಬಹುದು? ಈ ಪ್ರಶ್ನೆಯ ಉತ್ತರದಲ್ಲಿಯೇ ಕಾದಂಬರಿಯ ಯಶ–ಅಪಯಶಗಳ ಪ್ರಶ್ನೆಯೂ ಅಡಗಿದೆ. 'ಸಮುದ್ರಯಾನ'ವು ಕಾದಂಬರಿಯ ಮಧ್ಯಭಾಗದಲ್ಲಿದ್ದುಕೊಂಡು ಕೆಲವು ಸಲ ಪ್ರವಾಸಿಯೊಬ್ಬನ ದಿನಚರಿಯಂತೆ ಕಂಡರೂ ನಾನು ಎತ್ತಿದ ಈ ಪ್ರಶ್ನೆಯ ದೃಷ್ಟಿಯಿಂದ ಈ ಭಾಗವು ಮಹತ್ವದ್ದಾಗಿದೆ. ಪ್ರಜ್ಞೆಯ ಒಂದು ಮಟ್ಟವು 'ಸಮುದ್ರಯಾನ'ಕ್ಕಿಂತ ಹೆಚ್ಚಿನ ಸಮಪಾತಳಿಯಲ್ಲಿ ಒಟ್ಟು ಕಾದಂಬರಿಗಳಲ್ಲಿ ಓತಪ್ರೋತವಾಗಿ ಹರಿಯುತ್ತದೆ. ಆದರಲ್ಲಿ ಏರಿಳಿತಗಳಿಲ್ಲವೆಂತಲ್ಲ. ಅಲ್ಲಿ ಸುಬ್ಬಣಾಚಾರ್ಯರಂಥ ಧೂರ್ತರು, ಗಣಪತರಾಯರಂಥ ಕ್ರಿಯೆ ಇಲ್ಲದ ಬೌದ್ಧಿಕರು, ಮೋಡಕರಂಥ ಕುರುಡು ಸಂಸ್ಕೃತಿಯ ಹಿಂಬಾಲಕರು ಇದ್ದಾರೆ. ಆದರೆ ಸಮುದ್ರಯಾನದಿಂದ ಉಂಟಾಗುವ ಅಲ್ಲೋಲಕಲ್ಲೋಲ ಮಾತ್ರ, ನೇರವಾಗಿ

ಮೊಗ್ಗಾವಿಯ ಮೇಲಾಗದಿದ್ದರೂ, ಮೊಗ್ಗಾವಿಯಿಂದ ಉದ್ಭವವಾದ ಶೀನೂನ ಮೇಲೆ ಖಂಡಿತವಾಗಿಯೂ ಆಗುತ್ತದೆ. ಶೀನೂ ವಿದೇಶಕ್ಕೆ ಹೋದ ಮೇಲೆ ಬದಲಾಗುವಂಥ ವ್ಯಕ್ತಿತ್ವ ಉಳ್ಳವನು ಎಂಬುದನ್ನು ಕಾದಂಬರಿಯು ಆತನ ಕಾಲೇಜು ದಿನಗಳ ಚಿತ್ರಣದಲ್ಲಿಯೇ ನೀಡುತ್ತದೆ. ಹೀಗಾಗಿ ಆತನ ವರ್ತನೆಯಿಂದ ಯಾವ ರೀತಿಯ ದಿಗಿಲೂ ಓದುಗನಿಗೆ ಉಂಟಾಗುವುದಿಲ್ಲ. ಆದರೆ ಸಾಮಾಜಿಕ ಜೀವನದಲ್ಲಿ ಆಸಕ್ತಿ ಉಂಟಾದಾಗ ಶೀನು ಪಶ್ಚಿಮದ ಸಂಸ್ಕೃತಿ ಮತ್ತು 'ಮೊಗ್ಗಾವಿಯ ಸಂಸ್ಕೃತಿ'ಯ ಹೋಲಿಕೆಗೆ ತೊಡಗುತ್ತಾನೆ. ಆತನು ಬಡುವಣದ ಹೆಣ್ಣು ಸಿಮನಳನ್ನು ಮದುವೆಯಾಗಿ ಅಲ್ಲಿಯೇಉಳಿದು, ಸುಶೀಲೆ ಸಾಯುತ್ತಿರುವಾಗ ಸಿಮನ ಮತ್ತು ಮಗ ಅರುಣನೊಡನೆ ಅವಳನ್ನು ನೋಡಲು ಬರುತ್ತಾನೆ. ಈ ಶೀನುನ ಬಗೆಗೆ ಲೇಖಕರು ಓದುಗರಲ್ಲಿ ಅನುಕಂಪವಿರುವಂತೆ ಮಾಡಲು ಪ್ರಯತ್ನಿಸುತ್ತಾರೆ. ಜಾನಕೀಬಾಯಿಯರು ಮತ್ತು ಕೇಶವ ತಮ್ಮ ಅಜ್ಞಾನದಿಂದಾಗಿ ಪದ್ಮಾವತಿಯಂಥ ಹುಟ್ಟು ಸುಸಂಸ್ಕೃತ ಮಹಿಳೆಯನ್ನು ಅರ್ಥಮಾಡಿಕೊಳ್ಳಲಾರರೆಂದರೆ ಒಪ್ಪಬಹುದು. ಆದರೆ ಶೀನೂನ ವ್ಯಕ್ತಿತ್ವಕ್ಕೆ ಪಶ್ಚಿಮದ ' ಉದಾರ ' ಸಂಸ್ಕೃತಿ ಸೇರಿದಾಗ ಆತನು ಸುಶೀಲೆಯನ್ನು ನಿರ್ಲಕ್ಷಿಸುತ್ತಾನೆ. ಆದರೂ ಲೇಖಕರ ವ್ಯಂಗ್ಯಕ್ಕೆ ಕಾರಣನಾಗುವುದಿಲ್ಲ. ಮೌಲ್ಯ ನಿರ್ಮಿತಿಯ ಚೌಕಟ್ಟಿನಲ್ಲಿ ' ಸಮರಸವೇ ಜೀವನ ' ಕಾದಂಬರಿಯು ಇಲ್ಲಿ ವಾಸ್ತವವಾಗಿ ಪಾಶ್ಚಿಮಾತ್ಯ ಮೌಲ್ಯಗಳಿಗೆ ಆದರದ ಸ್ಥಾನವನ್ನೇ ಕೊಟ್ಟಿದೆ ಎನ್ನಬಹುದು. ನಾನು ಹೀಗೆ ಹೇಳಲು ಇನ್ನೊಂದು ಬಲವಾದ ಕಾರಣವೆಂದರೆ, ಕಾದಂಬರಿಯುದ್ದಕ್ಕೂ ಕಂಡುಬರುವ ವ್ಯಂಗ್ಯ ಮತ್ತು ಅದನ್ನು ಪ್ರಯೋಗಿಸುವ ಸ್ಥಳಗಳ ಪರೀಕ್ಷೆ.

ಮೇಲ್ನೋಟಕ್ಕೆ ನೋಡಿದಾಗ ಉದಾತ್ತ ವ್ಯಕ್ತಿಗಳು ವ್ಯಂಗ್ಯದಿಂದ ಮುಕ್ತರಾಗಿದ್ದಾರೆನ್ನಬಹುದು. ಸುಬ್ಬಣ್ಣಾಚಾರ್ಯರು ಕಾದಂಬರಿಯಲ್ಲಿ ಬೆಳೆಯುವ ರೀತಿ ಮಾತ್ರ ಅಭ್ಯಾಸಯೋಗ್ಯವಾಗಿದೆ. ಕಾದಂಬರಿಯ ಪ್ರಾರಂಭದಲ್ಲಿ ಹೈಗ್ರೀವಾಚಾರ್ಯರ ನೆರಳಿನಂತೆ ಮತ್ತು ಮಗನಾದ ತಿಪ್ಪನ ಶ್ರೇಯೋನ್ನತಿಗಾಗಿ ಅವಿಚ್ಛಿನ್ನವಾದ ಪ್ರಯತ್ನ ಮಾಡುವ ತಂದೆಯಂತೆ ಕಾಣುತ್ತಾರೆ. ಅಮುಖ್ಯಪಾತ್ರವಾಗಿಯೂ ಓಡಮೂಡುತ್ತಾರೆ. ಈಗ ಲೇಖಕರು ಈ ಪಾತ್ರವನ್ನು ತಮ್ಮ ವ್ಯಂಗ್ಯದ ಅಂಗಳದಿಂದ ಹೊರಹೋಗಲು ಬಿಟ್ಟಿಲ್ಲ. ಆದರೆ, ಹೈಗ್ರೀವಾಚಾರ್ಯರ ಇಳಿವಯಸ್ಸಿನಲ್ಲಿ ಅವರ ಪಾಪಪ್ರಜ್ಞೆಯ ಕೇಂದ್ರವಾಗುವ ಸುಬ್ಬಣ್ಣಾಚಾರ್ಯರು, ಹೈಗ್ರೀವಾಚಾರ್ಯರ ಅಂತ್ಯ ಸಮಯಕ್ಕೆ ಅವರ ಕ್ಷಮೆ ಕೇಳುತ್ತಾರೆ. ನರಹರಿಯನ್ನು ಊರು ಬಿಟ್ಟು ಓಡಿಸಲು ಪ್ರಯತ್ನಿಸುತ್ತಾರೆ. ನಂತರ ರಮಾಬಾಯಿಯರ ಕಾಮವನ್ನು ತಣಿಸುವ ಧೂರ್ತ ಶಿಖಾಮಣಿಯಾಗಿ ರೂಪುಗೊಳ್ಳುತ್ತಾರೆ. ರಮಾಬಾಯಿಯರ ಅಂತ್ಯವಾದ ಮೇಲೆ ಅವರಲ್ಲಿ ಬದಲಾವಣೆಗಳನ್ನು ನಿರೀಕ್ಷಿಸಿದ ಓದುಗನಿಗೆ ದುಷ್ಟತೆಯ ಆಳಕ್ಕೆ ತಳವೆಂಬುದೇ ಇರುವುದಿಲ್ಲವೆಂದು ಗೊತ್ತಾಗುತ್ತದೆ. ಪಂಢರಪುರದಲ್ಲಿ ಬೆನ್ನಿನ ಮೇಲಿನ ತೊನ್ನಿನ ಅರಿವು ಬಂದಾದ ಮೇಲೆ ಸುಬ್ಬಣಾಚಾರ್ಯರು ಬದಲಾಗುತ್ತಾರೆ. ಆದರೆ ಎತ್ತ ? ತಮ್ಮ

ಮಗ ತಿಪ್ಪನಿಗೆ ಮೂರನೆ ಹೆಂಡತಿಯನ್ನು ತರುವುದರತ್ತ. ಮಾಡಿದ ಪಾಪಗಳು ಅವರನ್ನು ಚಿಂತೆಗೀಡುಮಾಡಿ ದೇಹವನ್ನು ಕೊರೆಯುತ್ತಿದ್ದರೂ ಕೂಡ ಮಗನ ಭವಿಷ್ಯದ ದೃಷ್ಟಿಯಿಂದ ಮೂರನೆ ಹೆಂಡತಿಯೊಡನೆ ಬರುವ ಮೂರು ಕೂರಿಗೆ ಹೊಲವೇ ಅವರಿಗೆ ಮಹತ್ವದ್ದಾಗುತ್ತದೆ. ಹೈಗ್ರೀವಾಚಾರ್ಯರು ಮತ್ತು ಸುಬ್ಬಣ್ಣಾಚಾರ್ಯರು ನೆಲಕ್ಕಂಟಿದ ಜೀವಗಳು. ಆದರೆ ಸುಬ್ಬಣ್ಣಾಚಾರ್ಯರು ಪಾತ್ರವಾಗಿ ಅರಳುವ ಬಗೆ ಮಾತ್ರ ಕೌತುಕಕ್ಕೆ ಎಡೆಮಾಡಿಕೊಡುವಂಥದು. ಅವರು ಮಗನ ಮಮತೆಯೊಡಲಿಗೆ ಬಿದ್ದು ಎರಡನೆಯ ಲಗ್ನ ಮಾಡಿಕೊಂಡಿಲ್ಲ. ಆದರೆ ರಮಾಬಾಯಿರಲ್ಲಿ ತಮ್ಮ ಕಾಮಪಿಪಾಸೆಯನ್ನು ತಣಿಸಿಕೊಳ್ಳುವಲ್ಲಿ ಹಿಂದೆಗೆಯುವುದಿಲ್ಲ. ತಮ್ಮ ಪಾಪಗಳಿಗಾಗಿಯೇ ತೊನ್ನು ಬೆನ್ನ ಮೇಲೆ ಮೂಡಿದೆ ಎಂಬು ಅಳುಕಿದೆ, ಆದರೆ, ಮಗನಿಗೆ ಮೂರನೆ ಹೆಂಡತಿಯನ್ನು ತರುವುದು ಪಾಪವಾಗಿ ಅವರಿಗೆ ತೋರುವುದಿಲ್ಲ. ಇಂಥ ದ್ವಂದ್ವಗಳ ನಡುವೆ ಬೆಳೆಯುವ ಈ ಪಾತ್ರವು ಲೇಖಕರ ಪಾತ್ರರಚನೆಯ ಕೌಶಲಕ್ಕೆ ಸಾಕ್ಷಿಯಾಗಿದೆ. ಕೆಟ್ಟ-ಒಳ್ಳೆಯ, ದುಷ್ಟ ಮತ್ತು ಸಜ್ಜನ ಪಾತ್ರಗಳಿಂದಲೇ ತುಂಬಿದ ' ಸಮರಸವೇ ಜೀವನ ' ಕಾದಂಬರಿಯಲ್ಲಿ ಇಂಥ ಕೆಲವು ಪಾತ್ರಗಳು ಅಲ್ಲಲ್ಲಿ 'ಒಡಮೂಡಿ'ರುವುದರಿಂದ ಕಾದಂಬರಿಯ ಅರ್ಥ ವೈಶಾಲ್ಯ ಆಳಕ್ಕೂ ಹೋಗಿದೆ. ಇಂಥ ಪಾತ್ರಗಳು ಕಾದಂಬರಿಯ ಹಂದರವು ತೂಕ ತಪ್ಪದಂತೆಯೂ ಮಾಡಿವೆ. ಇದರೊಡನೆಯೇ ಪ್ರಮೀಳೆಯ ಪಾತ್ರವೂ ನೆನಪಿಗೆ ಬರುತ್ತದೆ. ದೈಹಿಕ ಆಮಿಷಕ್ಕೆ ಒಳಗಾಗಿ ಅವಳು ವಿಷ್ಣುವಿನಂಥ ಸಾತ್ವಿಕನ ಪ್ರೇಮಕ್ಕೆ ಎರವಾಗುತ್ತಾಳೆ. ಶೀನು ಪಾಶ್ಚಿಮಾತ್ಯ ಸಾಮಾಜಿಕ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾನೆ. ವಿಷ್ಣು ಎರಡು ವರ್ಷಗಳವರೆಗೆ ಆ ಜೀವನದಲ್ಲಿದ್ದೂ ಎಲೆಯ ಮೇಲಿನ ನೀರಿನ ಗುಳ್ಳೆಯಂತಿದ್ದು ಬರುತ್ತಾನೆ. ಆದರೆ ಪ್ರಮೀಳೆಯು ಆತನ ಈ ತಪಸ್ಸಿಗೆ ಪ್ರತಿಫಲವಾಗಿ ಕೊಡಲು ಏನೂ ಇಲ್ಲದ ಬರಿಗೈ ಬಂಟಳಾಗಿ ನಿಂತಿದ್ದಾಳೆ. ಇಲ್ಲಿಯ ದುರಂತದಲ್ಲಿ ಮಾತ್ರ ಅದ್ಭುತವಾದ ಸಾಹಿತ್ಯ ಶಕ್ತಿ ಇದೆ ಎನ್ನಿಸುತ್ತದೆ. ಪ್ರಮೀಳೆಯಲ್ಲಿ ಮೊದಲಿನಿಂದಲೂ ದೈಹಿಕ ಆಕರ್ಷಣೆಯು ಬೌದ್ಧಿಕ ಆಕರ್ಷಣೆಗಿಂತ ಹೆಚ್ಚೆಂದು ಲೇಖಕರು ತೋರಿಸುತ್ತಲೇ ಹೋಗಿದ್ದಾರೆ. ಕುದುರೆಯ ಸವಾರಿಯ ಬಗೆಗಿರುವ ಅವಳ ಪ್ರೇಮ ಅವಳ ಪಾತ್ರದ ಮಟ್ಟಿಗೆ ಒಂದು ಒಳ್ಳೆಯ ಸಂಕೇತವೇ ಆಗಿದೆ. ನಂತರ ಇದು ನಾಯಿಯ ಪ್ರೀತಿಯಲ್ಲಿ ಪರಿವರ್ತನೆಗೊಳ್ಳುವಾಗಲೇ ಕುಡುಚಿಯ ಪ್ರವೇಶ ಅವಳ ಜೀವನದಲ್ಲಾಗುತ್ತದೆ. ಕುಡುಚಿಯಂಥ ಮನುಷ್ಯನ ದೈಹಿಕ ಆಕರ್ಷಣೆಗೆ ಒಳಗಾಗಬಲ್ಲ ಈ ಪ್ರಮೀಳೆಯಲ್ಲಿ ವಿಷ್ಣುನಂಥವನನ್ನು ಪ್ರೀತಿಸಬಲ್ಲ ಹೃದಯವೂ ಇದೆ. ಸುಬ್ಬಣ್ಣಾಚಾರ್ಯರ ಪಾತ್ರದಲ್ಲಿರುವ ದ್ವಂದ್ವ ಇಲ್ಲಿ ಇನ್ನೊಂದು ಆಯಾಮವನ್ನು ಪಡೆದಿದೆ. ಅಲ್ಲಿ ಮಗನ ಮೇಲಿನ ಮಮತೆ—ಆಚಾರ್ಯರ ಭೌತಿಕ ಕಾಮಧೋರಣೆಯಲ್ಲಿ ಪರಿವರ್ತನವಾಗಿದ್ದರೆ ಇಲ್ಲಿ ದೈಹಿಕ ಆಕರ್ಷಣೆಯು ಪವಿತ್ರ ಪ್ರೇಮವನ್ನು ಬಲಿತೆಗೆದುಕೊಂಡಿದೆ. ಆದರೆ ಪ್ರಮೀಳೆಯು

ಸುಬ್ಬಣ್ಣಾಚಾರ್ಯರಿಗಿಂತ ಒಂದು ಹೆಚ್ಚಿನ ಸ್ಥರದಲ್ಲಿದ್ದಾಳೆ. ವಿಷ್ಣುವಿನ ಬಗೆಗೆ ಇರುವ ನಿಜವಾದ ಪ್ರೇಮ ಅವಳದು. ವಿಷ್ಣುವನ್ನು ಕಳೆದುಕೊಂಡರೂ ನಿಜ ಹೇಳಿ ಕಳೆದುಕೊಳ್ಳುತ್ತಾಳೆ. ಅವಳು ಉದಾತ್ತವಾಗುವುದು, ಪವಿತ್ರ ಪ್ರೇಮವನ್ನು ತನ್ನ ಕಲುಷಿತ ಪ್ರೇಮದ ಒಸಗೆಯಲ್ಲಿ ಸೆರೆ ಹಿಡಿಯಬಾರದೆಂಬ ಅವಳ ಧೋರಣೆಯಿಂದಾಗಿ. ಸಾಹಿತ್ಯಕವಾಗಿ ಅವಳು ಕೂಡ ಶಕ್ತಿಯುತವಾದ ಪಾತ್ರವಾಗಿ ಬೆಳೆಯುವುದು ಅವಳ ವ್ಯಕ್ತಿತ್ವದಲ್ಲಿಯೇ ಅಡಕವಾಗಿರುವ ದ್ವಂದ್ವದಿಂದಾಗಿ. ಈ ಪಾತ್ರಗಳು ಕಾದಂಬರಿಯು ನಿರ್ಮಿಸುವ ಮೌಲ್ಯದ ಮಾನದಂಡದಲ್ಲಿ ತ್ಯಾಜ್ಯವೆನ್ನಿಸಿದರೂ ಅವುಗಳು ಬದುಕುವ ದ್ವಂದ್ವದ ದೃಷ್ಟಿಯಿಂದ ನೋಡಿದಾಗ ಮತ್ತು ಅವು ಚಿತ್ರಿತವಾಗಿರುವ ರೀತಿಯಲ್ಲಿ ಅವು ಸ್ವೀಕಾರಾರ್ಹವಾಗುತ್ತವೆ. ಕಾದಂಬರಿಯ ಒಟ್ಟು ಶಕ್ತಿ ಇರುವುದೇ ಈ ವಿಷಯದಲ್ಲಿ.

ಇಂಥ ಒಂದು ದ್ವಂದ್ವ ಶೀನೂನ ಪಾತ್ರದಲ್ಲಿಯೆ? ತನ್ನ ದೇಶದಲ್ಲಿ ಹೆಂಡತಿಯನ್ನು ಬಿಟ್ಟುಹೋದ ಈ ತರುಣ, ಪಡುವಣದ ಸಾಮಾಜಿಕ ಮೌಲ್ಯಗಳಿಗೆ ಮಾರಿ ಹೋಗಿ ಸಿಮನ್‌ಳನ್ನು ಮದುವೆಯಾಗುತ್ತಾನೆಯೆ? ಅಲ್ಲಿಯ ಏಕಾಂಗಿತನಕ್ಕೆ ಬೇಸತ್ತು ಬಯಸಿಬಂದ ಹೆಣ್ಣಿಗೆ ಪ್ರೇಮದೀಕ್ಷೆ ನೀಡುತ್ತಾನೆಯೆ? ಇವೆರಡೂ ಹೌದೆಂಬಂತೆ—ಕಾದಂಬರಿಯಲ್ಲಿ ಆತನ ಪಾತ್ರವು ಚಿತ್ರಿತವಾಗಿರುವುದೇನೊ ನಿಜ. ಆದರೆ ಇವೆಲ್ಲ ದ್ವಂದ್ವಗಳ ಹಿಂದೆ ಪಾತ್ರ ನಿರ್ಮಾಣದ ಒತ್ತಾಸೆ ಅಥವ ಪಾತ್ರ ಬೆಳವಣಿಗೆಯ ಅಂತರ್ಯದಿಂದ ಉದ್ಭವವಾಗುವ ಆವಶ್ಯಕತೆಗಿಂತ ಹೆಚ್ಚಾಗಿ ಒಟ್ಟು ಕಾದಂಬರಿಯ ತಂತ್ರಕ್ಕೆ ಶೀನೂ ಹೀಗಾಗುವುದು ಬೇಕಾಗಿದೆ ಎನ್ನಿಸುತ್ತದೆ. ಶೀನು-ನರಹರಿ-ವಿಷ್ಣು ಇವರಲ್ಲಿ ವಿಭಿನ್ನತೆಯನ್ನು ತರಬೇಕಾದರೆ ಶೀನು ಪರದೇಶದಲ್ಲಿ ಉಳಿಯುವುದು ಅವಶ್ಯಕವಾಗುತ್ತದೆ. ಇದರಿಂದ ಸಂಭವಿಸುವ ದುರಂತವೇನೊ ಪದ್ಮಾವತಿಯ ದುರಂತದ ಮುಂದಿನ ಮಜಲನ್ನು ತೋರಿಸುತ್ತದೆ. ಆದರೆ ಈ ಈ ದುರಂತ ಪರಂಪರೆಯ ಬೆಳವಣಿಗೆಗೆ ಕಾರಣವಾದ ವಸ್ತು ಮಾತ್ರ ವ್ಯಕ್ತಿಯ ದ್ವಂದ್ವದಿಂದ ಉದ್ಭವವಾಗಿರದೆ ಭಾಗಶಃವಾದರೂ ಕಾದಂಬರಿಯ ತಾಂತ್ರಿಕ ಆವಶ್ಯಕತೆಯ ಅಂಗವಾಗಿ ಉಳಿದುಬಿಟ್ಟಿದೆ. ಪ್ರವಿಣಾಳೆ, ಸುಬ್ಬಣ್ಣಾಚಾರ್ಯರ ವಿಷಯಕ್ಕೆ ಮಾತ್ರ ಹೀಗೆ ಹೇಳಲಾಗುವುದಿಲ್ಲ. ಅವರ ಪಾತ್ರಗಳು ತಾಂತ್ರಿಕ ಆವಶ್ಯಕತೆಗಿಂತ ಹೆಚ್ಚಾಗಿ ತಮ್ಮ ಒಡಲಿನ ಬೆಂಕಿಯಿಂದಲೇ ಹುಟ್ಟಿ ಅದರಲ್ಲಿಯೇ ದಹಿಸಿಹೋಗುತ್ತವೆ. ಪದ್ಮಾವತಿ ಪರಿಸ್ಥಿತಿಯ ಕೈಗೊಂಬೆಯಾಗುತ್ತಾಳೆ. (ಪರಿಸ್ಥಿತಿಯು ಲೇಖಕರ ವ್ಯಂಗ್ಯಕ್ಕೂ ಒಳಗಾಗಿದೆ ಎಂಬುದನ್ನು ಗಮನಿಸಬೇಕು.) ಶೀನೂನ ವಿಷಯಕ್ಕೆ ಬಂದಾಗ ಮಾತ್ರ ಈ ಮಾತು ಅಷ್ಟು ಸತ್ಯವೆನ್ನಿಸುವಷ್ಟು ಕಾದಂಬರಿ ಆ ಪಾತ್ರವನ್ನು ಚಿತ್ರಿಸಿಲ್ಲ. ಆತನ ಆಂತರಿಕ ಒಳತೋಟಿಯಾಗಲಿ ಅಥವ ಅವನನ್ನು ಚಿತ್ರಿಸುವಾಗ ಇರಬಹುದಾದ ಸಾಂಕೇತಿಕ ಅರ್ಥಗಳಾಗಲೀ ಶಕ್ತಿಯುತ ವಾಗಿಲ್ಲ.

ಇನ್ನು ಆದರ್ಶದ ಪಾತಳಿಯೊಂದು ಕಾದಂಬರಿಯಲ್ಲಿ ಹರಿಯುತ್ತದೆ. ಅದರ ಸ್ವರೂಪವೇನು ಮತ್ತು ಅದರಿಂದ ನಿರ್ಮಾಣವಾಗುವ ಮೌಲ್ಯದ ಅಟ್ಟಣಿಗೆಯ ಬೆಳಕಿನಲ್ಲಿ ನಾನು ಈವರೆಗೆ ಚರ್ಚಿಸಿದ 'ದ್ವಂದ್ವ'ದ ಸ್ಥಾನವೇನೆಂಬುದನ್ನು ನೋಡೋಣ. ಏಕೆಂದರೆ, ಪಾತ್ರಪ್ರಧಾನವಾದ ಕಾದಂಬರಿಯಲ್ಲಿ ಇಂಥ ಒಂದು ಶೋಧನೆ ಅವಶ್ಯಕವೆಂದು ನನ್ನ ಭಾವನೆಯಾಗಿದೆ.

ಕಾದಂಬರಿಯಲ್ಲಿ ಬರುವ ಆದರ್ಶದ ಮೊದಲನೆಯ ಹಂತ ಮೊಗ್ಗಾಗಿಯು ಗಣಪತರಾಯರ ಪತ್ರಗಳಲ್ಲಿ ಗೋಚರಿಸುತ್ತದೆ. ಅವರು ಕ್ರಿಯೆ ಇಲ್ಲದ ವಿಚಾರವಂತರು. ಅವರು ಮಹಾರಾಷ್ಟ್ರದ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಅವರ ಪತ್ರಗಳು ಎರಡು ಕೆಲಸವನ್ನು ಸಾಧಿಸುತ್ತವೆ. ಮೊದಲನೆಯದಾಗಿ ಅವು ಗಣಪತರಾಯರ ಸಂಕುಚಿತ ಮನೋಭಾವಕ್ಕೆ ಹಿಡಿದ ಕನ್ನಡಿಗಳಾಗಿವೆ. ಎರಡನೆಯದಾಗಿ ಅವು ತಾಂತ್ರಿಕವಾಗಿ ಕಾದಂಬರಿಯ ಕೆಲವು ಘಟನೆಗಳನ್ನು ವಿವರಗಳನ್ನು ನಮ್ಮ ಗಮನಕ್ಕೆ ತರುತ್ತವೆ. ಆದರೆ ಗಣಪತರಾಯರ ಆದರ್ಶಗಳನ್ನು ಕಾದಂಬರಿಕಾರರು ಸ್ವಲ್ಪ ವ್ಯಂಗ್ಯದಿಂದಲೇ ನೋಡಿರುವುದರಿಂದ ಆದರ್ಶದ ಬಗೆಗಿನ ಲೇಖಕರ ಧೋರಣೆ ಮತ್ತು ಅದರ ಆರೋಗ್ಯಪೂರ್ಣತೆಯ ಭೂಮಿಕೆ ಇಲ್ಲಿಯೇ ಸ್ಥಾಪಿತವಾಗುತ್ತದೆಂದು ನನಗೆ ಅನ್ನಿಸಿದೆ. ಮೋಡಕರನ್ನು ಚುಡಾಯಿಸುತ್ತಲೇ ಗಣಪತರಾಯರು ತಮ್ಮ ಪತ್ರಗಳಲ್ಲಿ ಮಹಾರಾಷ್ಟ್ರದ ಸಂಸ್ಕೃತಿಯನ್ನು ಹೊಗಳುತ್ತಾರೆ. ಇದೇ ಧೋರಣೆ, 'ಸಮರಸವೇ ಜೀವನ' ಕಾದಂಬರಿಗಳ ಸಂಪುಟಗಳುದ್ದಕ್ಕೂ ಉಳಿದಿದೆಯೆ ಎಂಬ ಪ್ರಶ್ನೆಯನ್ನು ಕೇಳಿದಾಗ ಹಲವಾರು ವಿಮರ್ಶಾತ್ಮಕ ಸಮಸ್ಯೆಗಳು ಏಳುತ್ತವೆ.

ಗಣಪತರಾಯರ ಮುಂದಿನ ಹೆಜ್ಜೆಯಾಗಿ ದೇಸಾಯರು ಕಾಣುತ್ತಾರೆ. ಸಾಂಸಾರಿಕ ಜೀವನದಿಂದ ವಂಚಿತರಾಗಿ, ಸಾನಿಯ ಬೆನ್ನುಬಿದ್ದು, ಕೊನೆಗೆ ಪುಣೆಗೆ ಮಗಳನ್ನು ಕರೆದುಕೊಂಡು ಹೋಗಿ, ಅವಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವುದರಲ್ಲಿ ಅವರ ಆದರ್ಶವು ಕೊನೆಗೊಳ್ಳುತ್ತದೆ. ಇದರ ಮುಂದಿನ ಹೆಜ್ಜೆಯೇ ನರಹರಿ. ಈ ಪಾತ್ರದ ಆದರ್ಶದ ನೆಲೆ ಎಲ್ಲಿದೆ ? ಮೊದಲಿನ ಭಾಗಗಳಲ್ಲಿ ಅದು ಆತನ ಭಾವಪ್ರಪಂಚದಲ್ಲಿದೆ. ನಂತರದ ಭಾಗಗಳಲ್ಲಿ ಅದು ಸ್ವಾತಂತ್ರ್ಯ ಆಂದೋಲನದಲ್ಲಿ ನೆಲೆಗೊಂಡಿದೆ. ಕಾದಂಬರಿಯನ್ನು ಓದುತ್ತ ಹೋದಂತೆ ನರಹರಿಯ ಆದರ್ಶದ ಪಾತಳಿಯು ಗಟ್ಟಿಯಾದ ಕ್ರಿಯಾ ನೆಲೆಯ ಮೇಲೆ ನಿಂತಿಲ್ಲವೆಂಬುದು ಸ್ಪಷ್ಟವಾಗುತ್ತ ಹೋಗುತ್ತದೆ. ಆತನು ಹಿಡಿದುದರಲ್ಲೆಲ್ಲ ಯಶಸ್ವಿಯಾಗುವುದರಿಂದ ಅವನಿಗೆ 'ದ್ವಂದ್ವ'ವೆಂಬುದೇ ಇಲ್ಲ. ರಮಾಬಾಯಿಯರು ಆತನನ್ನು ಕಾಮುಕ ದೃಷ್ಟಿಯಿಂದ ನೋಡಿದಾಗ ಮಾತ್ರ ಆತನು ವಿಹ್ವಲನಾಗುತ್ತಾನೆ. ಆದರೆ ಸ್ವಾಮಿದಾಸರ ಭೇಟಿಯಾದ ನಂತರ ಆತನ ಜೀವನದಲ್ಲಿ ಇರಬಹುದಾದ ದ್ವಂದ್ವವೂ ಮಾಯವಾಗಿ ಹೋಗುತ್ತದೆ. ಕಾವ್ಯದಿಂದ ಹುಟ್ಟಿದ ಆದರ್ಶವು ಸ್ವಾತಂತ್ರ್ಯ ಹೋರಾಟದಲ್ಲಿ

ಪರ್ಯವಸಾನವಾಗುತ್ತದೆ. ಅದೇ ಮುಂದೆ 'ಪೂರ್ಣಜೀವನ ಕೇಂದ್ರ'ದ ಆಕಾರವನ್ನು ತಳೆದು ನಿಲ್ಲುತ್ತದೆ. ಕಾದಂಬರಿಯಲ್ಲಿ ಜೈಲಿನ ಜೀವನದ ಚಿತ್ರಣವೇ ಇಲ್ಲ. ಅವರ ಪ್ರಥಮ ಅನುಭವ ಲೇಖಕರಿಗೆ ಇಲ್ಲದಿರುವುದೇ ಇದಕ್ಕೆ ಕಾರಣವಿರಬಹುದು. ಆದರೆ ಇದರಿಂದ ನರಹರಿಯ ಪಾತ್ರ ಬೆಳವಣಿಗೆ ಸಾಕಷ್ಟು ಕುಂಠಿತವಾಗಿದೆ. ಉಳಿದ ಪಾತ್ರಗಳು ಬೆಳೆಯುತ್ತವೆ, ತಮ್ಮಷ್ಟಕ್ಕೆ, ಕಾದಂಬರಿಕಾರರ ಅಂಗೈಯಿಂದ ತಪ್ಪಿಸಿಕೊಂಡ ತಮ್ಮ ಸ್ವಂತ ಅಸ್ತಿತ್ವವನ್ನು ಸ್ಥಾಪಿಸುತ್ತವೆ—ಅವುಗಳಲ್ಲಿ ಹುಟ್ಟುವ ಮಾನವ ಸಹಜ ದ್ವಂದ್ವದಿಂದಾಗಿ. ಆದರೆ ನರಹರಿ ಮತ್ತು ಸ್ವಾಮಿ ದಾಸರು ಮಾತ್ರ ಒಂದು ಪೂರ್ವಯೋಜಿತ ಸೂತ್ರಕ್ಕೆ ಒಳಗಾಗಿ ನಿರ್ಮಾಣಗೊಳ್ಳುತ್ತಾರೆ. ಅವರು ಲೇಖಕರು ನಿರ್ಮಿಸುವ ಆದರ್ಶಪಾತಳಿಯ ಸೀಮಾರೇಖೆಯನ್ನು ದಾಟುವಂತಿಲ್ಲ.

'ಸಮರಸವೇ ಜೀವನ' ಕಾದಂಬರಿಯು ಪ್ರಕಟವಾದ ಕಾಲ ಮತ್ತು ಲೇಖಕರ ಹಿಂದಿರಬಹುದಾದ ಕನ್ನಡ ಕಾದಂಬರಿ ಸಾಹಿತ್ಯದ ಇತಿಹಾಸವನ್ನು ನೋಡಿದಾಗ ಇದೊಂದು ಬೃಹತ್ ಪ್ರಯತ್ನವೇ ಸರಿ. ಆದರೆ, ನಾನು ಎತ್ತಿದ ಈ 'ದ್ವಂದ್ವ'ದ ಪ್ರಶ್ನೆಯನ್ನು ನೋಡಿದಾಗ ಗೋಕಾಕರಂಥ ಲೇಖಕರಿಗೆ "ಬೆಳೆಯುವ ಪಾತ್ರಗಳು" ಮತ್ತು "ಬೆಳೆಸುವ ಪಾತ್ರಗಳು" ಇವುಗಳ ಮಧ್ಯದ ವ್ಯತ್ಯಾಸ ಗೊತ್ತಿರಲಾರದೆ ಹೋಯಿತೆ ಎಂಬ ಪ್ರಶ್ನೆ ಏಳುತ್ತದೆ. ಆದರೆ ಬೆಳೆಯುವ ಪಾತ್ರಗಳು ಕನ್ನಡ ಕಾದಂಬರಿಗಳಲ್ಲಿ ಹುಟ್ಟಿ ೧೯೩೧ ರಿಂದ ಇಲ್ಲಿಯವರೆಗೆ ನಮ್ಮ ಪ್ರಜ್ಞೆಯನ್ನು ಕೆಣಕಿರುವುದರಿಂದಲೇ ಈ ಪ್ರಶ್ನೆಯು ಉದ್ಭವಿಸಿದೆ ಎಂಬುದನ್ನು ಮರೆಯುವಂತಿಲ್ಲ. ಸಾಹಿತ್ಯ ಇತಿಹಾಸದ ಬೆಳಕಿನಲ್ಲಿ ಹಳೆಯ ಕೃತಿಗಳು ಹೊಸ ಅರ್ಥ ಪಡೆಯುವುದೇ ಇದರಿಂದ. ಸುಬ್ಬಣ್ಣಾಚಾರ್ಯರ ಪಾತ್ರವನ್ನು ಕುರಿತು ಚರ್ಚಿಸಬೇಕಾದ ಸನ್ನಿವೇಶ ಇಂದು ಒದಗಿಬಂದಿದೆ. 'ಸಮರಸವೇ ಜೀವನ'ದ ಕಾದಂಬರಿಕಾರರ ಪ್ರಜ್ಞಾಲೋಕದಲ್ಲಿ ಅಂಥವರಿಗೂ ಸ್ಥಾನವಿತ್ತೆಂಬುದು—ಅದೂ ಅರವತ್ತು ವರ್ಷಗಳ ಹಿಂದೆ—ಎಂಬುದೇ ಗೋಕಾಕರನ್ನು ದೊಡ್ಡ ಲೇಖಕರ ಸಾಲಿಗೆ ಸೇರಿಸುತ್ತದೆ. ಇಂಥ ಲೇಖಕರೊಬ್ಬರು ಮುಂದೆ ಗದ್ಯವನ್ನು ತಮ್ಮ ಅಭಿವ್ಯಕ್ತಿಯ, ಅದರಲ್ಲಿಯೂ ಕಲಾಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳಲಿಲ್ಲವೆಂಬುದೇ ನಮ್ಮ ಸಾಹಿತ್ಯ ಚರಿತ್ರೆಯ ನಿಗೂಢ ಸತ್ಯಗಳಲ್ಲಿ ಒಂದಾಗಿ ಉಳಿದೀತು.

ಎಂ. ಹೆಚ್. ರುದ್ರಮುನಿ

ಕುಸುಮದಡಿ ಮುಳ್ಳು ಮೂಡುವ ಅಚ್ಚರಿ

ನೀಲಿ ಗನಸಿನ ಕನ್ಯೆ
ಬಂದು ಒಡಮೂಡಿದಳು ಪಕ್ಕದಲಿ
ಕೇಸರಿಯ ನಸುಗೆಂಪು
ಗುಲಾಬಿಯ ಕೆಂಪು ಪಸರಿಸಿತು ಮನವೆಲ್ಲ.

ಮನವೆಲ್ಲ ಹಗುರಾಗಿ
ಹಿಂಜಿದ ಹರಳೆ
ಪಕಳೆಗಳ ಅರಳಿಸಿ ಮಧು ಬೀರುವ ಪುಷ್ಪ
ಜುಳು ಜುಳನೆ ಹರಿವನದಿ
ಮೈ ಮನವೆಲ್ಲ ಹಸಿರು ಉದ್ಯಾನ.

ಹಿಂದಿನ ದಿನ ಚಂದ್ರ
ನಕ್ಷತ್ರ ಪರಿಚಾರಿಕೆಯರ ರಾಣಿ
ಕಪ್ಪನೆಯ ಕರಿ ಮೋಡಗಳ ಮೇಲೆ
ಬೆಣ್ಣೆ ಮುದ್ದೆ
ಸಾಗಿತ್ತು ಸಾರೋಟಿನ ದರ್ಬಾರು.

ನೀನು ಬಂದ ದಿನ
ಕೋಣೆಯೆಲ್ಲ ಝಗ್ಗನೆ ದೀಪಾಲಂಕಾರ
ಬಂಗಾರದ ಹೊಳಪು
ಕತ್ತಲ ಕಾಣೆಯಾಗಿಸುವ
ಕೋಲ್ಮಿಂಚು ರೂಪು.

ಡಾ. ಕೆ. ಕೆಂಪೇಗೌಡ

ಭಾಷಾ ಬೋಧನಾ ಉಪಕರಣಗಳು

•

ಭಾಷಾ ಬೋಧನೆಯಲ್ಲಿ ಬೋಧನಾ ಉಪಕರಣಗಳು ಹೆಚ್ಚು ಪ್ರಮುಖವಾದ ಪಾತ್ರ ವಹಿಸುತ್ತವೆ. ಭಾಷೆಯ ಕಲಿಕೆ ಮುಖ್ಯವಾಗಿ ಜ್ಞಾನೇಂದ್ರಿಯ ಚಟುವಟಿಕೆಗಳಿಂದಲೇ ನಡೆಯುವಂತಹ ಕ್ರಿಯೆ ಯಾದುದರಿಂದ ಇದಕ್ಕೆ ಬೋಧನಾ ಉಪಕರಣಗಳ ಬಳಕೆ ಹೆಚ್ಚು ಉಪಯುಕ್ತವಾದದ್ದು ಮತ್ತು ಹೆಚ್ಚು ಪರಿಣಾಮಕಾರಿಯಾದದ್ದು. ಈ ಕಾರಣದಿಂದಲೇ ಭಾಷಾ ಬೋಧನೆಯ ಕ್ಷೇತ್ರದಲ್ಲಿ ಬೋಧನಾ ಉಪಕರಣಗಳನ್ನು ಹೆಚ್ಚು ಬಳಸಲಾಗುತ್ತಿದೆ. ಭಾಷಾ ಬೋಧಕನು ಭಾಷೆಯನ್ನು ಕಲಿಸುವಾಗ ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ತನ್ನ ಚಟುವಟಿಕೆಗಳಿಗೆ ತಕ್ಕ ಬೋಧನಾ ಉಪಕರಣಗಳನ್ನು ನಿಯೋಜಿಸಿಕೊಳ್ಳಬಹುದು. ಇದರಿಂದ ಭಾಷಾ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿ ಮುಂದುವರಿಯಬಲ್ಲದು. ಈ ರೀತಿ ಭಾಷೆ ಬೋಧನೆಗೆ ಉಪಯೋಗಿಸಬಹುದಾದ ಉಪಕರಣಗಳನ್ನೇ ಭಾಷಾ ಬೋಧನಾ ಉಪಕರಣಗಳು (language teaching aids) ಎನ್ನುವರು.

ಬೋಧನಾ ಉಪಕರಣಗಳಲ್ಲಿ ನಾನಾ ಬಗೆ, ಅವುಗಳನ್ನು ದೃಶ್ಯ ಉಪಕರಣಗಳು (visual aids) ಎಂದೂ, ಶ್ರವ್ಯ ಉಪಕರಣಗಳು (Audio-aids) ಎಂದೂ, ದೃಶ್ಯ-ಶ್ರವ್ಯ ಉಪಕರಣಗಳು (Audio-visual aids) ಎಂದೂ, ಶ್ರವ್ಯ-ಭಾಷಿಕ ಉಪಕರಣಗಳು (Audio-lingual aids) ಎಂದೂ, ನಾಲ್ಕು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಕಣ್ಣಿನಿಂದ ನೋಡಿ ವಿಷಯವನ್ನು ತಿಳಿಯಲು ಸಹಾಯಕವಾಗುವ ಉಪಕರಣಗಳನ್ನೇ ದೃಶ್ಯ ಉಪಕರಣಗಳು ಎನ್ನುವರು. ಕಪ್ಪು ಹಲಗೆ, ಭೂಪಟಗಳು, ಚಾರ್ಟುಗಳು, ನಕ್ಷೆಗಳು, ರೇಖಾ ಚಿತ್ರಗಳು ಮುಂತಾದುವುಗಳನ್ನು ದೃಶ್ಯ ಉಪಕರಣಗಳಿಗೆ ಉದಾಹರಿಸಿಕೊಳ್ಳಬಹುದು. ಅದೇ ರೀತಿ ಕಿವಿಯಿಂದ ಕೇಳಿ ವಿಚಾರವನ್ನು ತಿಳಿಯಲು ಸಹಾಯಕವಾಗುವ ಉಪಕರಣಗಳು ಶ್ರವ್ಯ ಉಪಕರಣಗಳು ಎನಿಸಿಕೊಳ್ಳುತ್ತವೆ. ಇದಕ್ಕೆ ರೇಡಿಯೋ ಮತ್ತು ಧ್ವನಿ ಮುದ್ರಿಕೆಗಳನ್ನು ಉದಾಹರಿಸಿಕೊಳ್ಳಬಹುದು. ಇದೇ ರೀತಿ ಕಣ್ಣಿನಿಂದ ನೋಡುತ್ತಾ, ಕಿವಿಯಿಂದ ಕೇಳುತ್ತಾ, ವಿಚಾರ ತಿಳಿಯಲು ಸಹಾಯಮಾಡುವ ಉಪಕರಣಗಳನ್ನು ದೃಶ್ಯ

ಶ್ರವ್ಯ ಉಪಕರಣಗಳು ಎನ್ನುವರು. ಇದಕ್ಕೆ ಬೂರದರ್ಶನಗಳು ಮತ್ತು ಚಲನ ಚಿತ್ರಗಳನ್ನು ಉದಾಹರಿಸಿಕೊಳ್ಳಬಹುದು. ಹಾಗೆಯೇ ಕಿವಿಯಿಂದ ಕೇಳುತ್ತಾ ಬಾಯಿಂದ ಉಚ್ಚಾರ ಮಾಡುತ್ತಾ ಉಚ್ಚಾರವನ್ನು ಮತ್ತೆ ಧ್ವನಿ ಮುದ್ರಣಮಾಡಿ ಕೊಳ್ಳಲು ಸಹಾಯಕವಾಗುವ ಉಪಕರಣಗಳು ಕೂಡ ಇವೆ. ಇಂತಹ ಉಪಕರಣ ಗಳನ್ನೇ ಶ್ರವ್ಯ-ಭಾಷಿಕ ಉಪಕರಣಗಳು ಎನ್ನುವರು. ಇದಕ್ಕೆ ಭಾಷಾ ಪ್ರಯೋಗ ಶಾಲೆ ಮತ್ತು ಟೇಪ್ ರೇಕಾರ್ಡಗಳನ್ನು ಉದಾಹರಿಸಿಕೊಳ್ಳಬಹುದು. ಈ ನಾಲ್ಕು ಬಗೆಯ ಉಪಕರಣಗಳು ಭಾಷಾ ಬೋಧನೆಯಲ್ಲಿ ಹೆಚ್ಚು ಪ್ರಮುಖವಾದ ಪಾತ್ರ ವನ್ನು ವಹಿಸುತ್ತವೆ.

ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಯನ್ನು ಭಾಷೆಯನ್ನು ಕಲಿಯುವುದರತ್ತ ಪ್ರಚೋದಿಸುವುದು, ಕಲಿಕೆಯಲ್ಲಿ ಆವನ ಆಸಕ್ತಿ ಬೆಳೆಯುವಂತೆ ಮಾಡುವುದು, ಆವನ ಮಾನಸಿಕ ಚಟುವಟಿಕೆಗಳನ್ನು ಹೆಚ್ಚು ಉದ್ದೀಪನಗೊಳಿಸುವುದು ಬೋಧನೆ ಮತ್ತು ಕಲಿಕೆಯ ನಡುವೆ ಸಹಜವಾತಾವರಣ ಮೂಡಿಸುವುದು, ಕಲಿಯುವ ಮತ್ತು ಕಲಿಸುವ ವಿಧಾನವನ್ನು ಹೆಚ್ಚು ಆಕರ್ಷಕಗೊಳಿಸುವುದು, ಭಾಷಾ ಕಲಿಕೆಯಲ್ಲಿ ಉತ್ತಮ ಸನ್ನಿವೇಶವನ್ನು ಮೂಡಿಸುವುದು, ಬೋಧನೆಯಲ್ಲಿ ವೈವಿಧ್ಯ ತರುವುದು ಹೀಗೆ ಹಲವಾರು ಸಂದರ್ಭಗಳಲ್ಲಿ ಬೋಧನಾ ಉಪಕರಣಗಳನ್ನು ಬಳಸ ಬೇಕಾಗುತ್ತದೆ. ಬೋಧನಾ ಉಪಕರಣಗಳು ಇವೆಲ್ಲಕ್ಕಿಂತಲೂ ಹೆಚ್ಚಾಗಿ ವಿದ್ಯಾರ್ಥಿ ಯಲ್ಲಿ ಭಾಷೆಯನ್ನು ಕಲಿಯುವ ಆಸಕ್ತಿ ಮತ್ತು ಕುತೂಹಲವನ್ನುಂಟು ಮಾಡಲು ಸಹಾಯ ಮಾಡುತ್ತವೆ. ಇವು ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿ ತಾನೇ ಸ್ವತಃ ಪಾಲ್ಗೊಳ್ಳುವಂತೆ ಮಾಡುತ್ತವೆ ಮತ್ತು ಪ್ರಚೋದಿಸುತ್ತವೆ. ತರಗತಿಯಲ್ಲಿ ವಿವಿಧ ಬೋಧನಾ ಉಪಕರಣಗಳನ್ನು ಭಾಷಾ ಬೋಧನೆಗೆ ಬಳಸುವುದರಿಂದ ವಿದ್ಯಾರ್ಥಿಯ ಭಾಷಾ ಕಲಿಕೆಯ ಸಾಮರ್ಥ್ಯ ವೃದ್ಧಿಸುತ್ತದೆ. ಕಲಿಕೆಯಲ್ಲಿ ಶಿಸ್ತು ಆಸಕ್ತಿ ಹೆಚ್ಚುತ್ತದೆ ಸಮಗ್ರ ಹಾಗೂ ಪರಿಪೂರ್ಣವಾದ ಭಾಷಾ ಕಲಿಕೆ ಇದರಿಂದ ಸಾಧ್ಯ ವಾಗುತ್ತದೆ.

ತರಗತಿಯಲ್ಲಿ ಎಲ್ಲಾ ವಿಚಾರಗಳನ್ನು ಎಲ್ಲಾ ಸನ್ನಿವೇಶಗಳನ್ನು ಪರಿಚಯ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ಈ ಕೊರತೆಯನ್ನು ಬೋಧನಾ ಉಪಕರಣ ಗಳಂತಹ ಸಾಮಾಗ್ರಿಗಳು ತುಂಬಿ ಕೊಡಬಲ್ಲವು, ಅತಿದೊಡ್ಡದಾದ, ಅತಿ ಸೂಕ್ಷ್ಮ ವಾದ ವಿಚಾರಗಳನ್ನು ಕೆಲವು ಆಧುನಿಕ ಉಪಕರಣಗಳ ಮೂಲಕ ಸಮರ್ಪಕವಾದ ರೀತಿಯಲ್ಲಿ ಬೋಧಿಸಲು ಸಾಧ್ಯವಿದೆ. ಅತಿ ಸುಂದರವಾದ ಪ್ರಕೃತಿ ಸೌಂದರ್ಯ ವನ್ನೊ, ನದಿ, ಪರ್ವತ, ಸಮುದ್ರ ಪ್ರದೇಶಗಳನ್ನೊ, ಬೆಟ್ಟ ಗುಡ್ಡಗಳ ಸಾಲು ಗಳನ್ನೋ, ಪಶುಪಕ್ಷಿಗಳ ಚಲನ ವಲನಗಳನ್ನೋ ಬೋಧಿಸಬೇಕಾದರೆ ಕೆಲವು ಸ್ಲೈಡುಗಳನ್ನು ಬಳಸಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಭಾಷೆಯನ್ನು ಯಥಾವತ್ತಾಗಿ ಕಲಿಯಲು ಸಹಾಯಕವಾಗುತ್ತದೆ. ಭಾಷಾ ಬೋಧನೆಗೆ ಹೆಚ್ಚು

ಆಧುನಿಕ ಉಪಕರಣಗಳನ್ನು ಬಳಸುವುದರಿಂದ ಸುಲಭವಾಗಿ, ಸರಳವಾಗಿ, ನೈಜವಾಗಿ, ಶೀಘ್ರವಾಗಿ ಭಾಷೆಯನ್ನು ಕಡಿಮೆ ಅವಧಿಯಲ್ಲಿ ಕಲಿಸಬಹುದು. ಕಲಿತ ಭಾಷಿಕ ವಿಚಾರಗಳು ಪ್ರಾಯೋಗಿಕವಾಗಿ ಬಳಕೆಯಾಗುವಂತೆ ಇಂತಹ ಉಪಕರಣಗಳು ಸಹಾಯ ಮಾಡುತ್ತವೆ. ಕಲಿಕೆಯ ಚಟುವಟಿಕೆ ಹೆಚ್ಚುವಂತೆ ಇವು ನೆರವಾಗುತ್ತವೆ. ಶೇಕಡಾ ೪೦ ಭಾಗ ಹೆಚ್ಚುವರಿ ಭಾಷಾ ಕಲಿಕೆ ಇವುಗಳಿಂದ ಸಾಧ್ಯವಿದೆ. ಈ ಎಲ್ಲಾ ಕಾರಣಗಳಿಂದಾಗಿಯೇ ಭಾಷಾ ಬೋಧನೆಗೆ ಹೆಚ್ಚು ಅನುಕೂಲಕರವಾದ ಆಧುನಿಕ ಉಪಕರಣಗಳನ್ನು ಬಳಸಬೇಕಾದುದು ಅತ್ಯಗತ್ಯ. ಇದರಿಂದ ಭಾಷಾ ಕಲಿಕೆ ಹೆಚ್ಚು ವ್ಯವಸ್ಥಿತವಾದ ರೀತಿಯಲ್ಲಿ ಮುಂದುವರಿಯಲು ಸಹಾಯಕವಾಗುವುದು. ಈ ದೃಷ್ಟಿಯಿಂದಲೇ ಭಾಷಾ ಬೋಧನೆಗೆ ಬೋಧನಾ ಉಪಕರಣಗಳನ್ನು ಬಳಸುವುದು ಹೆಚ್ಚು ಉಪಯುಕ್ತವಾದದ್ದು ಮತ್ತು ಹೆಚ್ಚು ಪರಿಣಾಮಕಾರಿಯಾದದ್ದು ಎಂದು ಭಾವಿಸುವರು.

ಚಿತ್ರಪಟಗಳು, ಚಾರ್ಟುಗಳು, ರೇಖಾಚಿತ್ರಗಳು, ನಕ್ಷೆಗಳು, ಭೂಪಟಗಳು ಮುಂತಾದುವು ಭಾಷೆಯ ಬೋಧನೆಗೆ ಹೆಚ್ಚು ಸಹಾಯ ಮಾಡುತ್ತವೆ. ಹೆಚ್ಚು ಆಕರ್ಷಕವಾದ, ವರ್ಣರಂಜಿತವಾದ ಚಿತ್ರಪಟಗಳು, ನಕ್ಷೆಗಳು, ರೇಖಾಚಿತ್ರಗಳು ಭಾಷಾಬೋಧನೆಯಲ್ಲಿ ಹೆಚ್ಚು ಪರಿಣಾಮಕಾರಿಯಾದ ಪಾತ್ರವಹಿಸುತ್ತವೆ. ಇದರಿಂದ ಭಾಷಾಬೋಧನೆ ಹೆಚ್ಚು ಅರ್ಥಪೂರ್ಣವಾಗುವುದು. ಭಾಷೆಯ ಪಾಠಗಳಲ್ಲಿ ಬರುವ ಪ್ರಕೃತಿ ವರ್ಣನೆ ಪಶುಪಕ್ಷಿಗಳು, ನದಿ, ಸಮುದ್ರ, ಪರ್ವತ ಪ್ರದೇಶಗಳು, ಸರೋವರಗಳು, ಸುಂದರ ಸನ್ನಿವೇಶಗಳು ಮುಂತಾದುವುಗಳನ್ನು ಹಲವಾರು ವಾಕ್ಯಗಳಲ್ಲಿ ವಿವರವಾಗಿ ಹೇಳುವುದಕ್ಕಿಂತ ಒಂದು ಉತ್ತಮವಾದ ಚಿತ್ರವನ್ನು ತೋರಿಸಿ ವಿದ್ಯಾರ್ಥಿಗಳಲ್ಲಿ ಅವುಗಳ ಬಗ್ಗೆ ಸ್ಪಷ್ಟವಾದ ಕಲ್ಪನೆ ಮೂಡಿಸುವುದು ಹೆಚ್ಚು ಉಪಯುಕ್ತವಾದದ್ದು. ಐತಿಹಾಸಿಕ ಶಿಲ್ಪ ಕಲೆ ಮತ್ತು ಸ್ಮಾರಕಗಳನ್ನು ಚಿತ್ರಗಳ ಮೂಲಕ ಬೋಧಿಸುವುದು ಹೆಚ್ಚು ಪರಿಣಾಮಕಾರಿಯಾದದ್ದು ಇದೇ ರೀತಿ ವರ್ಣಮಾಲೆ, ಕಾಗುಣಿತ, ಅಕ್ಷರ ವಿನ್ಯಾಸ, ಸಂಖ್ಯೆ, ಸಂಕೇತಗಳು, ಪದಗಳು, ಧ್ವನಿಗಳು, ವ್ಯಾಕರಣಾಂಶಗಳು, ಲೇಖನ ಚಿಹ್ನೆಗಳು ಮುಂತಾದುವುಗಳನ್ನು ಕೆಲವು ರೇಖಾಚಿತ್ರಗಳ ಮೂಲಕ, ಕೆಲವು ಆಕರ್ಷಕ ಚಾರ್ಟುಗಳಿಂದ ಪರಿಚಯಿಸಬಹುದು. ಕಣ್ಣಿನಿಂದ ನೋಡಿ ಬರೆಸುವ ಮಾರ್ಗ ಓದುಬರಹವನ್ನು ತಿದ್ದಿಕೊಳ್ಳಲು ತುಂಬ ಉಪಯುಕ್ತವಾದದ್ದು. ಇದರಿಂದ ಭಾಷಾ ಕಲಿಕೆಯಲ್ಲಿ ಓದು ಬರಹಗಳ ಕಲಿಕೆ ಸುಲಭವಾಗುತ್ತದೆ.

(೨) ಶ್ರವ್ಯ ಉಪಕರಣಗಳು (Audio-aids)

ಶ್ರವ್ಯ ಉಪಕರಣಗಳಲ್ಲಿ ರೇಡಿಯೋ ಮತ್ತು ಟೇಪ್‌ರೆಕಾರ್ಡ್‌ಗಳು ಬಹಳ ಮುಖ್ಯವಾದ ಪಾತ್ರವಹಿಸುತ್ತವೆ. ಇವುಗಳ ಸಹಾಯ ಭಾಷಾ ಕಲಿಕೆಗೆ ಅತ್ಯಗತ್ಯ.

ರೇಡಿಯೋ ಜಗತ್ತಿನ ಮೂಲೆ ಮೂಲೆಯಲ್ಲಿ ಉಂಟಾಗುವ ವಿಚಾರಗಳನ್ನು, ಘಟನೆಗಳನ್ನು ಬಿತ್ತರಿಸುವ ವಿಶಿಷ್ಟ ಸಾಧನ. ಕಾಲ, ದೂರ, ದೇಶವನ್ನು ಗೆದ್ದು ನಿಂತಿರುವ ಇದು ಇಂದು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದೆ. ಶಿಕ್ಷಣ, ಸಾಮಾಜಿಕ, ಆರ್ಥಿಕ, ರಾಜಕೀಯ ವಿದ್ಯಮಾನಗಳನ್ನು ಮನಮುಟ್ಟುವಂತೆ ರೇಡಿಯೋ ಬಿತ್ತರಿಸುತ್ತದೆ. ಮುಂದುವರಿದ ದೇಶಗಳಾದ ಅಮೆರಿಕ, ಇಂಗ್ಲೆಂಡ್, ರಷ್ಯ ಮುಂತಾದ ದೇಶಗಳು ರೇಡಿಯೋವನ್ನು ಶಿಕ್ಷಣ ಕ್ಷೇತ್ರದಲ್ಲಿ ಒಂದು ಪ್ರಭಾವಿ ಮಾಧ್ಯಮವನ್ನಾಗಿ ಬಳಸುತ್ತಿದ್ದಾರೆ. ಇದು ವೈವಿಧ್ಯಮಯವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಪ್ರಸಾರವಾಗುವ ಅನೇಕ ಕಾರ್ಯಕ್ರಮಗಳು ಭಾಷಾಬೋಧನೆಗೆ ಪೂರಕವಾಗುವಂತಿದ್ದರೆ ಉತ್ತಮ. ಭಾಷಾಬೋಧನೆಗೆ ನೆರವಾಗುವ ಕಾರ್ಯಕ್ರಮಗಳನ್ನು ನಿಯೋಜಿಸಿಕೊಂಡು ಅಂತಹ ಕಾರ್ಯಕ್ರಮಗಳನ್ನು ಪ್ರಸಾರಮಾಡುವುದರಿಂದ ಭಾಷಾಕಲಿಕೆ ಸುಲಭವಾಗುತ್ತದೆ. ರೇಡಿಯೋಗಳಲ್ಲಿ ಪ್ರಸಾರವಾಗುವ ಭಾಷಿಕ ಪಾಠಗಳು, ಸಂಭಾಷಣೆಗಳು, ಪ್ರಶ್ನೋತ್ತರಗಳು, ಭಾಷಣಗಳು, ವರದಿಗಳು, ವಾರ್ತೆಗಳು ಮುಂತಾದುವು ಭಾಷೆ ಕಲಿಯುವ ವಿದ್ಯಾರ್ಥಿಗೆ ನೇರವಾಗಿ ಸಹಾಯ ಮಾಡುತ್ತವೆ. ಅದರಿಂದ ಪ್ರಸಾರವಾಗುವ ವಿವಿಧ ಪಠ್ಯ ಕ್ರಮಗಳನ್ನು ವಿದ್ಯಾರ್ಥಿ ನೇರವಾಗಿ ಕೇಳುವುದರಿಂದ ಅವನ್ನು ಕೇಳಿ ಅರ್ಥಮಾಡಿಕೊಳ್ಳಲು ಸಹಾಯಕವಾಗುವುದು. ರೇಡಿಯೋ ಕಾರ್ಯಕ್ರಮಗಳಲ್ಲಿ ಕೇಳಿ ಬರುವ ಭಾಷಾ ಶೈಲಿ, ಪದ ಪ್ರಯೋಗ ವಾಕ್ಯಗಳು ಉಚ್ಚಾರವನ್ನು ಸ್ಪಷ್ಟವಾಗಿ ಕಲಿಯಲು ನೆರವಾಗುತ್ತವೆ. ವಿದ್ಯಾರ್ಥಿ ಕಲಿಯುವ ಭಾಷೆಯ ಸಂಗೀತ ಕಾರ್ಯಕ್ರಮಗಳು, ಮಕ್ಕಳ ಕಾರ್ಯಕ್ರಮಗಳು, ರಸಪ್ರಶ್ನೆಗಳು, ರಸಮಂಜರಿ ಕಾರ್ಯಕ್ರಮಗಳು, ಚಿಂತನಗಳು, ನಾಟಕಗಳು, ಸಾಹಿತ್ಯಿಕ ವಿಚಾರಗಳು, ಸಂದರ್ಶನಗಳು, ಕಾವ್ಯವಾಚನಗಳು, ಕೃತಿ ವಿಮರ್ಶೆಗಳು, ಸಮಕಾಲೀನ ವಿದ್ಯಮಾನಗಳು, ಆರೋಗ್ಯ ಪರಿಸರ ಮುಂತಾದ ವಿಚಾರಗಳು ಭಾಷೆಯ ಕಲಿಕೆಗೆ ತುಂಬ ಸಹಾಯ ಮಾಡುತ್ತವೆ. ಭಾಷಾ ಬೋಧನೆಗೆ ನೆರವಾಗುವ ಇಂತಹ ಅನೇಕ ಕಾರ್ಯಕ್ರಮಗಳನ್ನು ನಿಯೋಜಿಸಿಕೊಂಡು ಅವನ್ನು ರೇಡಿಯೋ ಮುಂತಾದುವುಗಳ ಮೂಲಕ ಕೇಳುವುದರಿಂದ ವಿದ್ಯಾರ್ಥಿಯ ಉಚ್ಚಾರಣೆ ಮತ್ತು ವಿಷಯಜ್ಞಾನ ಎರಡು ಬೆಳೆಯುತ್ತವೆ. ಶಾಲಾಕಾಲೇಜುಗಳು ಇಂತಹ ಅನೇಕ ಕಾರ್ಯಕ್ರಮಗಳನ್ನು ಭಾಷಾಬೋಧನೆಗೆ ನೆರವಾಗುವಂತೆ ಅಳವಡಿಸಿಕೊಂಡು ಪ್ರಸಾರಮಾಡುವುದರಿಂದ ವಿದ್ಯಾರ್ಥಿಗಳ ಸುಪ್ತ ಪ್ರತಿಭೆ ಅರಳುತ್ತದೆ. ಕಲಿಕೆಯಲ್ಲಿ ಅವರ ಆಸಕ್ತಿ ಬೆಳೆಯುತ್ತದೆ. ಅವರ ಕಲಾವಂತಿಕೆ ಮೊಳೆಯುತ್ತದೆ. ವ್ಯಾವಹಾರಿಕ ಭಾಷೆ ಅದರ ಬರವಣಿಗೆಯ ಬಗೆಗಿನ ಆಸಕ್ತಿಯು ವಿದ್ಯಾರ್ಥಿಯಲ್ಲಿ ಕೆರಳುತ್ತದೆ ಎನ್ನಬಹುದು.

ರೇಡಿಯೋಗಳಂತೆಯೇ ಟೇಪ್‌ರೆಕಾರ್ಡರ್ ಕೂಡ ಒಂದು ಉತ್ತಮವಾದ ಶ್ರವ್ಯ ಸಾಧನ. ಇದನ್ನು ಭಾಷೆ ಕಲಿಯಲು ಬಳಸುವುದರಿಂದ ಭಾಷೆಯನ್ನು ಕೇಳುವುದು,

ಅರ್ಥಮಾಡಿ ಕೊಳ್ಳುವುದು, ಆಡುವುದು, ಓದುವುದು ಬರೆಯುವುದು ಮುಂತಾದುವು ಗಳನ್ನು ತಿದ್ದಿ ಕೊಳ್ಳಲು ಸಹಾಯಕವಾಗುತ್ತದೆ. ಓದುಗಾರಿಕೆ, ಹಾಡುಗಾರಿಕೆ, ವಿಮರ್ಶೆ, ಸಂಭಾಷಣೆ ಮುಂತಾದುವುಗಳನ್ನು ಅಭ್ಯಾಸಮಾಡಲು ಇದು ಉತ್ತಮವಾದ ಉಪಕರಣವಾಗಿದೆ ಇದರಿಂದ ವಿದ್ಯಾರ್ಥಿಯು ಸ್ಪಷ್ಟವಾದ ಉಚ್ಚಾರ, ಉಚ್ಚಾರದ ಧ್ವನಿಯ ಏರಿಳಿತಗಳು, ಸ್ವರಾಘಾತ, ಬಲಾಘಾತ, ತಾನ, ಸ್ವರಲಹರಿ, ಸಂಗವು ಮುಂತಾದುವುಗಳನ್ನು ಸ್ವತಃ ತನ್ನ ಕಿವಿಯಿಂದಲೇ ಕೇಳಿ ಪರಿಚಯಮಾಡಿಕೊಳ್ಳ ಬಹುದು. ಹಾಗೆಯೇ ಅವನ್ನು ತಿದ್ದಿಕೊಳ್ಳಬಹುದು. ಅದೇ ವಿಚಾರಗಳನ್ನು ಉಚ್ಚಾರಮಾಡುತ್ತಾ ಅವನ್ನು ಮತ್ತೆ ಪುನರ್ ಮುದ್ರಿಸಿಕೊಂಡು ಅಭ್ಯಾಸಮಾಡ ಬಹುದು, ತಮ್ಮ ತಪ್ಪುಗಳನ್ನು ತಾವೇ ತಿದ್ದಿಕೊಳ್ಳಲು ಟೇಪ್ ರೆಕಾರ್ಡರ್‌ನಲ್ಲಿ ಅವಕಾಶವಿದೆ. ಪದ್ಯ, ಗದ್ಯ ಕಲಿಸಲು, ಹಾಡುಗಳು, ಸಂಗೀತ, ಸಾಮರಸ್ಯ, ಶೈಲಿ ಮುಂತಾದುವುಗಳನ್ನು ಅಭ್ಯಾಸಮಾಡಲು, ವಾಕ್‌ಚಾತುರ್ಯ ಬೆಳೆಸಿಕೊಳ್ಳಲು ಧ್ವನಿ ಮುದ್ರಿಕೆಗಳನ್ನು ಬಳಸುವುದು ಉತ್ತಮ ಇದರಿಂದ ವಿದ್ಯಾರ್ಥಿ, ಓದುವುದು, ಹಾಡುವುದು, ಭಾಷಣ ಮುಂತಾದುವುಗಳನ್ನು ಧ್ವನಿ ಮುದ್ರಿಕೆ ಮಾಡಿಕೊಂಡು ಬಿಡುವಾಗಿದ್ದ ಸಮಯದಲ್ಲಿ ಅವನ್ನು ಮತ್ತೆ ಕೇಳಿ ಕೇಳಿ ಅವನ ಭಾಷೆಯಲ್ಲಿ ಕಂಡು ಬರುವ ದೋಷಗಳನ್ನು ತಿದ್ದಿಕೊಳ್ಳಲು ಇದು ಸಹಾಯ ಮಾಡುತ್ತದೆ. ವಿದ್ಯಾರ್ಥಿ ಮಾಡುವ ತನ್ನ ತಪ್ಪುಗಳನ್ನು ಧ್ವನಿ ಮುದ್ರಿಸಿ ಕೊಳ್ಳುವುದರಿಂದ ಅದೇ ವಿದ್ಯಾರ್ಥಿ ಮಾಡುವ ತಪ್ಪುಗಳನ್ನು ಅವನು ಸ್ವತಃ ಕೇಳಿ ತಿದ್ದಿ ಕೊಳ್ಳಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಸರಿಯಾದ ಉಚ್ಚಾರ ಕಲಿಯಬೇಕಾದರೆ, ಅವನು ಮಾಡುವ ತಪ್ಪುಗಳನ್ನು ಸ್ವತಃ ಕೇಳಿ ತಿದ್ದಿ ಕೊಳ್ಳಬೇಕಾದರೆ, ಅಂತಹ ವಿಚಾರಗಳನ್ನು ಧ್ವನಿ ಮುದ್ರಿಸಿಕೊಂಡು ಟೇಪ್ ರೆಕಾರ್ಡರ್‌ನ ಮೂಲಕ ಕೇಳಿ ಅಭ್ಯಾಸ ಮಾಡ ಬಹುದು. ಉತ್ತಮವಾದ ಹಾಡುಗಳು, ಕವನಗಳು, ಕಥೆಗಳು, ಸಂಭಾಷಣೆಗಳು ಮಾತುಗಾರಿಕೆಯನ್ನು ಅಭ್ಯಾಸ ಮಾಡಲು ಸಹಾಯ ಮಾಡುತ್ತವೆ. ಇವನ್ನು ಧ್ವನಿ ಮುದ್ರಣ ಮಾಡಿಕೊಂಡು ಅವನ್ನು ವಿದ್ಯಾರ್ಥಿಗಳು ಪದೇ ಪದೇ ಕೇಳಿ ಅರ್ಥ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರೆ ವಿದ್ಯಾರ್ಥಿಗಳು ಭಾಷೆಯನ್ನು ಸುಲಭ ವಾಗಿ ಕಲಿಯಬಲ್ಲರು. ಗದ್ಯ ಮತ್ತು ಪದ್ಯ ಭಾಗಗಳನ್ನು ಅವನ್ನು ಬರೆದ ಲೇಖಕ ರಿಂದಲೇ ಓದಿಸಿ, ಹಾಡಿಸಿ ಅವನ್ನು ಧ್ವನಿ ಮುದ್ರಿಸಿಕೊಂಡು ಅವನ್ನು ತರಗತಿಯಲ್ಲಿ ವಿದ್ಯಾರ್ಥಿಗಳು ಕೇಳುವಂತೆ ಮಾಡಿದರೆ ಅವರು ಭಾಷೆಯನ್ನು ಹೆಚ್ಚು ಸ್ಪಷ್ಟವಾಗಿ ಕಲಿಯಲು ಅನುಕೂಲವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿಯೇ ಧ್ವನಿ ಮುದ್ರಿಕೆಗಳನ್ನು ಭಾಷಾಶಾಲಿಕೆಯಲ್ಲಿ ಇಂದು ಹೆಚ್ಚು ಬಳಸಲಾಗುತ್ತಿದೆ ಎನ್ನುವರು.

೩. ಶ್ರವ್ಯ–ಭಾಷಿಕ ಉಪಕರಣಗಳು (Audio-lingual aids)

ಭಾಷಾ ಪ್ರಯೋಗ ಶಾಲೆ ಶ್ರವ್ಯ–ಭಾಷಿಕ ಉಪಕರಣಕ್ಕೆ ಉತ್ತಮವಾದ ಉದಾಹರಣೆ, ಅನ್ಯ ಭಾಷೆಯನ್ನು ಬೋಧಿಸುವಲ್ಲಿ ಭಾಷಾಪ್ರಯೋಗ ಶಾಲೆಯನು

ಇಂದು ಹೆಚ್ಚು ಬಳಸಲಾಗುತ್ತಿದೆ. ಇದು ಶ್ರವ್ಯ ಹಾಗೂ ವಾಚಿಕ ಉಪಕರಣವಾಗಿ ತೋರಿ ಬಂದರೂ ಇದರಿಂದ ವಿದ್ಯಾರ್ಥಿ ಭಾಷೆಯನ್ನು ಹೆಚ್ಚು ಸ್ಪಷ್ಟ ಹಾಗು ಕಡಿಮೆ ಅವಧಿಯಲ್ಲಿ ಕಲಿಯಲು ಅವಕಾಶವಿದೆ. ಇದನ್ನು ಪ್ರತ್ಯೇಕವಾಗಿ ವಿವರವಾಗಿ ವಿಚಾರ ಮಾಡಲಾಗಿದೆ.

೪. ದೃಶ್ಯ–ಶ್ರವ್ಯ ಉಪಕರಣಗಳು (Audio-visual aids)

ದೂರದರ್ಶನ ಮತ್ತು ಚಲನಚಿತ್ರಗಳು ಉತ್ತಮವಾದ ದೃಶ್ಯ-ಶ್ರವ್ಯ ಸಾಧನಗಳು. ಇವು ಆಧುನಿಕ ಸಂಪರ್ಕ ಮಾಧ್ಯಮಗಳಾಗಿವೆ. ಇವು ಮನರಂಜನೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು ಮಹತ್ವ ಪೂರ್ಣವಾದ ಸ್ಥಾನವನ್ನು ಪಡೆದುಕೊಂಡಿವೆ. ಉತ್ತಮವಾದ ಚಲನಚಿತ್ರದಿಂದ ವಿದ್ಯಾರ್ಥಿಗಳ ವಾಕ್‌ಚಾತುರ್ಯ ಬೆಳೆಯುವಂತೆ ಮಾಡಬಹುದು. ಸಾಹಿತ್ಯ, ಸಂಭಾಷಣೆ, ಭಾಷಣ, ಹಾಡುಗಾರಿಕೆ, ವಾಕ್ ಚಾತುರ್ಯ ಇವು ವಿದ್ಯಾರ್ಥಿಯ ಭಾಷೆಯ ಕಲಿಕೆಯ ಕಡೆ ಆಸಕ್ತಿ ಬೆಳೆಯುವಂತೆ ಮಾಡುತ್ತವೆ. ಭಾಷೆಯ ವಿವಿಧ ಪಾಠ ಪ್ರವಚನಗಳು, ಜೀವನ ಕಥನಗಳು, ಮಹಾಪುರುಷರ ಸಾಹಸ ಮಾರ್ಗಗಳು, ನಾಟಕಗಳು, ಧಾರ್ಮಿಕ ವಿಚಾರಗಳು ಮುಂತಾದುವುಗಳನ್ನು ದೂರದರ್ಶನದಲ್ಲಿ ಪ್ರದರ್ಶಿಸುವುದರಿಂದ ವಿದ್ಯಾರ್ಥಿಗಳಲ್ಲಿ ಭಾಷಾಕಲಿಕೆ ಹೆಚ್ಚುತ್ತದೆ. ಹೆಚ್ಚು ಆಸಕ್ತಿ ಅವರಲ್ಲಿ ಬೆಳೆಯುತ್ತದೆ, ಕುತೂಹಲ ಮೂಡುತ್ತದೆ. ಪ್ರಕೃತಿ, ಪರಿಸರ, ಆರೋಗ್ಯ ಶಿಕ್ಷಣ ಸಮಸ್ಯೆಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು, ಸಮಕಾಲೀನ ವಿದ್ಯಮಾನಗಳು ದೂರದರ್ಶನದಲ್ಲಿ ಪ್ರಸಾರವಾಗುವುದನ್ನು ನೋಡುವುದರಿಂದ, ಕೇಳುವುದರಿಂದ ಅವರ ಭಾಷಾಜ್ಞಾನ ಹೆಚ್ಚುತ್ತದೆ. ಸಂಗೀತ, ಭಾಷಣಗಳು, ವಿಚಾರವಿಮರ್ಶೆಗಳು, ಇದಕ್ಕೆ ಸಂದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದುವುಗಳನ್ನು ಕುರಿತ ವೀಡಿಯೋ ಕ್ಯಾಸೆಟ್ಟುಗಳನ್ನು ತಯಾರಿಸಿಕೊಂಡು ಅವನ್ನು ಬೇಕೆನಿಸಿದಾಗ ಬಳಸಬಹುದಾದ ಅವಕಾಶವೂ ದೂರದರ್ಶನದಲ್ಲಿದೆ. ಇದರಿಂದ ಭಾಷಾಕಲಿಕೆ ಸುಲಭವಾಗುತ್ತದೆ.

ಮೇಲೆ ಹೆಸರಿಸಿಕೊಂಡಿರುವ ಆ ಬೇರೆ ಬೇರೆ ಬೋಧನಾ ಉಪಕರಣಗಳ ಜೊತೆಗೆ ಕೆಲವು ಮಾದರಿ ಪಾಠಗಳು, ನಕ್ಷೆಗಳು, ರೇಖಾ ಚಿತ್ರಗಳು, ಫಿಲ್ಮ್ ಸ್ಟ್ರಿಪ್‌ಗಳು, ಸ್ಲೈಡ್ಸ್‌ಗಳು, ಓವರ್ ಹೆಡ್ ಪ್ರೊಜೆಕ್ಟರ್‌ಗಳು ಮುಂತಾದ ಉಪಕರಣಗಳನ್ನು ಬರವಣಿಗೆ ಮತ್ತು ವ್ಯಾಕರಣ ವಿಚಾರಗಳನ್ನು ಕಲಿಸಲು ಹೆಚ್ಚು ಬಳಸಲಾಗುತ್ತಿದೆ. ನಮ್ಮ ಇಂದಿನ ಶಾಲಾಕಾಲೇಜುಗಳ ಪರಿಸ್ಥಿತಿ ದುಬಾರಿ ಉಪಕರಣಗಳನ್ನು ಬಳಸಲು ಹೆಚ್ಚು ಶಕ್ತವಾಗಿಲ್ಲ, ಆದಕಾರಣ ಭಾಷಾ ಬೋಧನೆ ಕೇವಲ ಪುಸ್ತಕಗಳ ಬೋಧನೆಗೆ ಮಾತ್ರ ಸೀಮಿತವಾಗಿದೆ. ಅಧ್ಯಾಪಕನು ತನ್ನ ಪರಿಶ್ರಮದಿಂದ ತನಗೆ ತಾನೇ ಸ್ವತಃ ತಯಾರಿಸಿಕೊಳ್ಳಬಲ್ಲ ಕಡಿಮೆ ಬೆಲೆಯ

ಉಪಕರಣಗಳನ್ನು ಮಾತ್ರ ಭಾಷಾಬೋಧನೆಗೆ ಬಳಸಬಹುದು. ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ ತಿದ್ದಲು ಅನುಕೂಲವಾಗುವ ಸರಳ ಉಪಕರಣಗಳನ್ನು ಬಳಸುವುದು ಹೆಚ್ಚು ಉಪಯುಕ್ತವಾದದ್ದು. ಇದರಿಂದ ಭಾಷೆಯನ್ನು ಹೆಚ್ಚು ಕ್ರಮಬದ್ಧವಾಗಿ ಕಲಿಸಲು ಸಾಧ್ಯವಿದೆ. ಬೋಧಕನು ಬಳಸುವ ಬೋಧನಾ ಉಪಕರಣಗಳು ಅವನ ಉದ್ದೇಶಕ್ಕೆ ಮಾತ್ರ ಸೀಮಿತವಾಗಿರಬೇಕಾದುದು ಅತ್ಯಗತ್ಯ. ಅವು ಭಾಷೆಯ ವಿವಿಧ ಅಂಶಗಳನ್ನು ಕಲಿಸಲು ಅನುಕೂಲವಾಗುವಂತಿರಬೇಕು. ಸಂದರ್ಭಕ್ಕೆ ತಕ್ಕ ಉಪಕರಣಗಳ ಬಳಕೆ ಬಹಳ ಮುಖ್ಯ, ಬಳಸುವ ಉಪಕರಣಗಳನ್ನು ಎಲ್ಲರಿಗೂ ಕಾಣುವಂತೆ, ಕೇಳುವಂತೆ ತೋರಿಸಬೇಕಾದುದು ಅವಶ್ಯಕ. ಭಾಷಾ ಬೋಧನೆಯಲ್ಲಿ ಅಕ್ಷರಮಾಲೆ, ಅಕ್ಷರವಿನ್ಯಾಸ, ಪದ, ವಾಕ್ಯ, ಮುಂತಾದುವುಗಳನ್ನು ಕಲಿಸಲು ಅನುಕೂಲವಾಗುವ ರೀತಿಯಲ್ಲಿ ಪ್ಲಾಶ್ ಕಾರ್ಡುಗಳನ್ನು ತಯಾರಿಸಿಕೊಳ್ಳುವುದು ಉತ್ತಮ. ಇವು ಯಾವ ರೀತಿಯಿಂದಲೂ ದುಬಾರಿಯಾಗಬಾರದು. ಯಾವುದೇ ಉಪಕರಣವನ್ನಾದರೂ ಅದನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡಬೇಕು ಅನಂತರ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮುಚ್ಚಿಡಬೇಕು. ಅನಾವಶ್ಯಕವಾಗಿ ಎಲ್ಲಾ ವೇಳೆಯಲ್ಲಿ ಬೋಧನಾ ಉಪಕರಣಗಳನ್ನು ಬಳಸಲು ಹೋಗಬಾರದು. ಅದರಿಂದ ಹೆಚ್ಚು ಪ್ರಯೋಜನವೇನೂ ಆಗುವುದಿಲ್ಲ. ಆಯ್ದುಕೊಂಡ ಉಪಕರಣಗಳು ಹೆಚ್ಚು ಆಕರ್ಷಕವಾಗಿದ್ದು, ಅವು ಬೋಧನೆಯಲ್ಲಿ ವಿಚಾರ ಕಲ್ಪನೆಯನ್ನು ಪ್ರತಿಬಿಂಬಿಸುವಂತಿರಬೇಕಾಗುತ್ತದೆ. ಹೀಗೆ ಬೋಧನಾ ಸಾಮಗ್ರಿಗಳನ್ನು, ಸಾಧನಗಳನ್ನು ಭಾಷಾ ಬೋಧನೆಗೆ ಸರಿಯಾಗಿ ಉಪಯೋಗಿಸಿಕೊಂಡರೆ ಭಾಷಾಕಲಿಕೆ ಕಷ್ಟವೇನೂ ಆಗುವುದಿಲ್ಲ.

ಡಾ. ಬಿ. ಜಿ. ಕನಕೇಶಮೂರ್ತಿ

ಮತ್ಸ್ಯಕನ್ಯೆ ಮತ್ತು ಕುಡುಕರು

ಅವಳು ಪೂರಾ ಬೆತ್ತಲಾಗಿ ಒಳಬಂದಾಗ
ಈ ಗಂಡಸರೆಲ್ಲಾ ಅಲ್ಲೇ ಇದ್ದರು
ಮದಿರೆಯ ಸುಖಿಸುತ್ತ ಕುಳಿತಿದ್ದ ಅವರು, ಉಗುಳತೊಡಗಿದರವಳ ಕಡೆಗೆ
ಈಗ ತಾನೇ ನದಿಯಿಂದೆದ್ದು ಬಂದವಳು, ಏನೂ ತಿಳಿಯಲಿಲ್ಲ
ದಾರಿ ತಪ್ಪಿದವಳು : ಮತ್ಸ್ಯಕನ್ಯೆ
ಅವಳ ಹೊಳೆಹೊಳೆವ ಚರ್ಮದ ಮೇಲೆ ಕಟಕಿಗಳು ಹರಿದವು
ಹೊನ್ನ ರವಿಕೆಗಳ ತೋಯಿಸಿದವು ಹೊಲಸು ಮಾತುಗಳು
ಕಣ್ಣೀರಿಗಪರಿಚಿತಳು, ಅಳಲಿಲ್ಲ ಅವಳು
ಬಟ್ಟೆಗಳೆ ಗೊತ್ತಿಲ್ಲ, ಉಡಲಿಲ್ಲ ಅವಳು
ಉರಿವ ಸಿಗರೇಟು, ಸುಟ್ಟ ಬಿರಡೆಗಳ ತುದಿಯಿಂದ ಅವಳ ಚುಚ್ಚಿದರು,
ಗಹಗಹಿಸುತ್ತ, ಹೆಂಡದಂಗಡಿಯ ನೆಲದ ಮೇಲೆ ದಿಂಡುರುಳುಗೆಡಹಿದರು
ತುಟಿ ಬಿಚ್ಚಲಿಲ್ಲ, ಮಾತೇನೆಂದರೆ ತಿಳಿಯದವಳಿಗೆ
ದೂರದೊಲವಿನ ಬಣ್ಣವಾಗಿದ್ದವು ಅವಳ ಕಣ್ಣುಗಳು,
ಗೋಮೇಧಿಕವ ಹೋಲುತಿದ್ದವು ತೋಳುಗಳು.
ಹವಳ ಬೆಳಕಿನಲಿ ಸುಮ್ಮನೆ ಚಲಿಸಿದವು ತುಟಿಗಳು,
ಹೊರಟು ಹೋದಳು ಕಡೆಗೆ ಆ ಬಾಗಿಲಿಂದ
ನದಿಯ ಸೇರಿರಲಾರಳು, ತಾ ಬಂದಂತೆಯೇ,
ಮತ್ತೆ ಮಳೆಯಲ್ಲಿ ಹೊಳೆವ ಅಮೃತ ಶಿಲೆಯಂತೆ;
ಮತ್ತೆ ಹಿಂದಕ್ಕೆ ಕೊಂಚವೂ ನೋಡದೆ, ಈಸಿದಳು ಮುಂದೆ ಮುಂದೆ,
ಈಸಿದಳು ಅನಂತತೆಯ ಕಡೆಗೆ, ತನ್ನ ಕೊನೆಯ ಕೊನೆಗೆ.

ಡಾ. ಅನಂತನಾಗೇಂದ್ರ ಭಟ್ಟ

ಮಮ್ಮಟನ ದೃಷ್ಟಿಯಲ್ಲಿ ಶಬ್ದಾರ್ಥ ಸ್ವರೂಪ

ಅಲಂಕಾರಶಾಸ್ತ್ರದ ಗ್ರಂಥಕರ್ತೃಗಳಲ್ಲಿ ಮಮ್ಮಟನಿಗೆ ಅತ್ಯಂತ ಪ್ರಶಸ್ತವಾದ ಸ್ಥಾನವಿದೆ. ಈತನು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಜೀವಿಸಿದ ಆಲಂಕಾರಿಕ. ಇವನ ಜನ್ಮಸ್ಥಾನ ಕಾಶ್ಮೀರ. ಇವನು ಇವನ ಹಿಂದಿನ ಮುಖ್ಯ ಆಲಂಕಾರಿಕರ ಅಭಿಪ್ರಾಯಗಳೆಲ್ಲವನ್ನೂ ಕ್ರೋಡೀಕರಿಸಿ ; ಕೂಲಂಕಷವಾಗಿ ಪರ್ಯಾಲೋಚಿಸಿ ; ಬಹುಮಟ್ಟಿಗೆ ಸಂದೇಹಕ್ಕೆ ಆಸ್ಪದವಿಲ್ಲದಂತೆ ; ಸಾಹಿತ್ಯಶಾಸ್ತ್ರದ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾನೆ. ಇವನ ಶೈಲಿಯು ಸುಲಭವೂ, ಮನೋಹರವೂ ತಲಸ್ಪರ್ಶಿಯೂ, ಅಸಂದಿಗ್ಧವೂ ಆಗಿರುತ್ತದೆ. ಭಾಮಹಾದಿ ಲಾಕ್ಷಣಿಕರು ವಿರಚಿಸಿದ ಅನೇಕ ಗ್ರಂಥಗಳನ್ನು ಅಭ್ಯಸಿಸಿ ಕಾವ್ಯಶಾಸ್ತ್ರದ ಪ್ರಮೇಯಗಳನ್ನು ಅರ್ಥಮಾಡಿಕೊಳ್ಳುವ ಬದಲು ಇವನು ಬರೆದ ಕಾವ್ಯಪ್ರಕಾಶವೆಂಬೊಂದೇ ಗ್ರಂಥವನ್ನು ಓದಿ ಸೌಂದರ್ಯಶಾಸ್ತ್ರದ ಸರ್ವಸಿದ್ಧಾಂತಗಳನ್ನೂ ಸುಲಭವಾಗಿ ತಿಳಿಯಬಹುದು ಎಂದರೆ ಅತಿಶಯೋಕ್ತಿಯಾಗಲಾರದು. ಹತ್ತು ಉಲ್ಲಾಸಗಳಿರುವ ಕಾವ್ಯಪ್ರಕಾಶದಲ್ಲಿ ನಾಟ್ಯಕ್ಕೆ ಸಂಬಂಧಿಸಿದ ವಿಷಯವೊಂದನ್ನು ಬಿಟ್ಟು ಅಲಂಕಾರಶಾಸ್ತ್ರದ ಉಳಿದೆಲ್ಲ ವಿಷಯಗಳೂ ಪ್ರತಿಪಾದಿತವಾಗಿವೆ. ಆ ವಿಷಯಗಳಲ್ಲಿ ಒಂದಾದ ‘ ಶಬ್ದಾರ್ಥ ಸ್ವರೂಪ ’ ಎಂಬ ವಿಷಯವನ್ನು ಈ ಲೇಖನದಲ್ಲಿ ಚರ್ಚಿಸಲಾಗುವುದು.

ಶಬ್ದವು (ಅದರ ಅರ್ಥದ ದೃಷ್ಟಿಯಿಂದ) ವಾಚಕ, ಲಾಕ್ಷಣಿಕ ಮತ್ತು ವ್ಯಂಜಕಗಳೆಂದು ಮೂರು ಬಗೆಯಾಗಿದೆ. ಇದರಂತೆ ಶಬ್ದಕ್ಕಿರುವ ಅರ್ಥವೂ ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯಗಳೆಂದು ಮೂರು ಬಗೆಯಾಗಿದೆ. ಇದು ಅನುಕ್ರಮವಾಗಿ ವಾಚಕ ಶಬ್ದದಿಂದ ವಾಚ್ಯಾರ್ಥವೂ, ಲಾಕ್ಷಣಿಕ ಶಬ್ದದಿಂದ ಲಕ್ಷ್ಯಾರ್ಥವೂ ಮತ್ತು ವ್ಯಂಜಕಶಬ್ದದಿಂದ ವ್ಯಂಗ್ಯಾರ್ಥವೂ ಬರುತ್ತದೆ.

ಸ್ಯಾದ್ವಾಚಕೋ ಲಾಕ್ಷಣಿಕಃ ಶಬ್ದೋತ್ರ ವ್ಯಂಜಕಸ್ತ್ರಿಧಾ ।
ವಾಚ್ಯಾದಯಃ ತದರ್ಥಾಃ ಸ್ಯುಃ...॥ (ಕಾ. ಪ್ರ., ೨–೬)

ವೈಶೇಷಿಕರು ಈ ಶಬ್ದಾರ್ಥಸ್ವರೂಪವನ್ನು 'ಜಾತಿ ವಿಶಿಷ್ಟ ವ್ಯಕ್ತಿ' ಎಂದೂ, ಬೌದ್ಧರು ಅಪೋಹ (ಅತದ್ವ್ಯಾವೃತ್ತಿ) ಎಂದೂ ಕರೆಯುತ್ತಾರೆ.[1]

ತದ್ವಾನ್ ಅಪೋಹೋ ವಾ ಶಬ್ದಾರ್ಥಃ ಕೈಶ್ಚಿದುಕ್ತಃ...ನ ದರ್ಶಿತಃ ।

(ಕಾ. ಪ್ರ. ೨-೮)

ಇನ್ನು ಮುಂದೆ ಇವುಗಳ ಒಂದೊಂದರ ವಿವರಣೆಯನ್ನೂ ಕ್ರಮವಾಗಿ ನೋಡೋಣ.

೧. ವಾಚಕ-ವಾಚ್ಯ

ವಾಚಕವು ಶಬ್ದರೂಪವಾದುದು ಹಾಗೂ ವಾಚ್ಯವು ಅರ್ಥರೂಪವಾದುದೂ ಆಗಿವೆ ಎಂದು ಹಿಂದೆ ನೋಡಿದ್ದೇವೆ. ಅಂದರೆ ಒಂದು ವಸ್ತುವನ್ನು ಮತ್ತು ಗುಣ, ಕ್ರಿಯೆ ಮೊದಲಾದುವುಗಳನ್ನು ಮಾತಿನ ಮೂಲಕ ನಿರ್ದೇಶಿಸಲು ಸಮಾಜದಲ್ಲಿ ರೂಢಿಯಾಗಿರುವ ಸಂಕೇತವೇ ಶಬ್ದ ಅಥವಾ ಪದ. ಒಂದೊಂದು ಶಬ್ದಕ್ಕೂ ಒಂದೊಂದು ಅರ್ಥವು ಸಂಕೇತವಾಗಿದೆ. (ಅಂದರೆ ಒಂದೊಂದು ಪದಕ್ಕೆ ಒಂದೊಂದು ಅರ್ಥವನ್ನು ನಿಯಮನಗೊಳಿಸಲಾಗಿದೆ) ಈ ಸಂಕೇತಿತವಾದ ಅರ್ಥವು ಶಬ್ದಪ್ರಯೋಗ ಮಾಡಿದಾಗ ಸಾಕ್ಷಾತ್ತಾಗಿ (ನೇರವಾಗಿ) ತಿಳಿದುಬರುತ್ತದೆ. ಅಂತಹ ನೇರವಾಗಿ ಅಭಿವ್ಯಕ್ತವಾಗುವ ಪದಶಕ್ತಿಗೆ[2] ಅಥವಾ ಶಬ್ದಶಕ್ತಿಗೆ 'ಅಭಿಧಾವೃತ್ತಿ' ಎಂದೂ ; ಆ ಅಭಿಧಾವೃತ್ತಿಯಿಂದ ತಿಳಿದು ಬರುವ ಅರ್ಥಕ್ಕೆ ಅಭಿಧೇಯಾರ್ಥವೆಂದೂ ಹೆಸರಿಸಿದ್ದಾರೆ. ಈ ಅಭಿಧೇಯಾರ್ಥಕ್ಕೆ ವಾಚ್ಯಾರ್ಥ ಅಥವಾ ಮುಖ್ಯಾರ್ಥ ಎಂದೂ ಕರೆಯುತ್ತಾರೆ—

ಸಾಕ್ಷಾತ್ ಸಂಕೇತಿತಂ ಯೋರ್ಥಂ ಅಭಿಧತ್ತೇ ಸ ವಾಚಕಃ ।
ಸ ಮುಖ್ಯೋರ್ಥಃ ತತ್ರ ಮುಖ್ಯೋ ವ್ಯಾಪಾರೋಭಿದೋಚ್ಯತೇ॥

(ಕಾ. ಪ್ರ., ೨-೭, ೮)

ಇದು ಅಂದರೆ ಮುಖ್ಯಾರ್ಥವು ಸಾಮಾನ್ಯಾರ್ಥಬೋಧಕ ಹಾಗೂ ಸಾರ್ವತ್ರಿಕ ಎಂದು ಸಾಮಾನ್ಯವಾಗಿ ಹೇಳಬಹುದು.

ಈ ಸಂಕೇತವು ಉಪಾಧಿಗೆ ಸಂಬಂಧಿಸಿದ್ದಾಗಿದೆ. ಉಪಾಧಿ ಎಂದರೆ ಜಾತಿ,[3] ಗುಣ, ಕ್ರಿಯೆ, ಸಂಜ್ಞೆ ಮುಂತಾದವುಗಳು. ಕಾರ್ಯ ಸಾಧನೆಗೆ ಅಥವಾ

---

1. ಮಮ್ಮಟನು ಇವುಗಳನ್ನು ವಿವರಿಸದೇ ನಾಮಮಾತ್ರ ನಿರ್ದೇಶಿಸಿ ಮುಗಿಸಿದ್ದಾನೆ.

2. ಒಂದು ವಸ್ತುವನ್ನು ನೆನಪಿಗೆ ತಂದುಕೊಡುವ ಪದ ಮತ್ತು ಪದಾರ್ಥಗಳಿಗೆ ಇರುವ ಸಂಬಂಧವೆ ಶಬ್ದಶಕ್ತಿ—ಅರ್ಥಸ್ಮೃತ್ಯನುಕೂಲಃ ಪದ ಪದಾರ್ಥ ಸಂಬಂಧಃ ಶಕ್ತಿಃ (ತರ್ಕ ಸಂಗ್ರಹ)

3. ಜಾತಿ ಎಂದರೆ ವಸ್ತುವಿನಲ್ಲಿರುವ ಅಸಾಧಾರಣ ಅಥವಾ ಸಮಾನ ಧರ್ಮ. ಗುಣವೆಂದರೆ ವಸ್ತುವಿನ ಗುಣಧರ್ಮ ಅಥವಾ ಮೂಲಸ್ವಭಾವ. ಕ್ರಿಯೆ ಎಂದರೆ ಚೇಷ್ಟಾ ಅಥವಾ ಸರ್ವವಿಧ ವ್ಯಾಪಾರ (ಕೃತ್ಯ) ಸಂಜ್ಞೆ ಎಂದರೆ ಸನ್ನೆ ಅಥವಾ ಗುರುತು ಎಂದು ಸಾಮಾನ್ಯವಾಗಿ ಹೇಳಬಹುದು.

ಕೆಲಸದಲ್ಲಿ ಕರ್ತೃವಿನ ಪ್ರವೃತ್ತಿ–ನಿವೃತ್ತಿಗಳಿಗೆ ಯೋಗ್ಯವಾದುದು ವ್ಯಕ್ತಿ. ಇದರಿಂದ ಸಂಕೇತವು ಒಂದೇ ವ್ಯಕ್ತಿಯಲ್ಲಿ ಇದೆ ಎನ್ನಲಾಗದು. ಏಕೆಂದರೆ 'ಗಾಮಾನಯ' (ಹಸುವನ್ನು ಹೊಡೆದುಕೊಂಡು ಬಾ) ಎಂದಾಗ ಯಾವುದೇ ಗೋ(ಹಸು)ವನ್ನಾದರೂ ತರಬಹುದು. ಇದರಿಂದ ಕೇವಲ ಒಂದೇ ವ್ಯಕ್ತಿಗೆ ಸಂಕೇತವು ಉಂಟಾಗುವುದು ಎಂದರೆ 'ಗಾಮಾನಯ' ಎಂದಾಗ ಯಾವುದೇ ಹಸುವನ್ನಾದರೂ ತರಲು ಸಾಧ್ಯ ವಾಗುವುದಿಲ್ಲ. ಅಂದರೆ ಗಾಮಾನಯ ಎಂದಾಗ ವ್ಯಕ್ತಿ ವಿಶೇಷಕ್ಕೆ ಅನ್ವಯವಾಗಿ ವ್ಯಕ್ತಿ ಸಾಮಾನ್ಯಕ್ಕೆ ಅನ್ವಯವಾಗದೇ ವ್ಯಭಿಚರಿತವಾಗುತ್ತದೆ. ವ್ಯಭಿಚಾರ[1]ವೆಂಬುದೊಂದು ದೋಷ. ಈ ದೋಷವನ್ನು ಹೋಗಲಾಡಿಸಲು ಗಾಮಾನಯ ಎಂದಾಗ 'ಗೋ' ಎಂಬ ಶಬ್ದವು ಪ್ರತಿಯೊಂದು ಗೋವ್ಯಕ್ತಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಅನ್ವಯವಾಗುತ್ತದೆ ಎಂದು ಹೇಳಬಹುದು. ಆದರೆ 'ಗೋ' ವ್ಯಕ್ತಿ ಪ್ರಪಂಚದಲ್ಲಿ ಇಷ್ಟೇ ಸಂಖ್ಯೆಯಲ್ಲಿದೆ ಎಂದು ಹೇಳಲು ಸಾಧ್ಯವಿಲ್ಲ. ಅದು ಅನಂತವಾದುದು. ಇದರಿಂದ ಪ್ರತಿಯೊಂದು 'ಗೋ' ವ್ಯಕ್ತಿಯಲ್ಲಿಯೂ ಸಂಕೇತವಾಗುವುದು ಎಂದಾಗ ಆನಂತ್ಯ[2]ವೆಂಬ ದೋಷವು ಬರುವುದು. ಆದ್ದರಿಂದ ಈ ಮೇಲಿನ ವ್ಯಭಿಚಾರ ಮತ್ತು ಆನಂತ್ಯ ದೋಷಗಳಿಂದ ವಿಮುಕ್ತಿಯನ್ನಾಗಿಸಲು ಉಪಾಧಿಯಲ್ಲಿ ಸಂಕೇತವನ್ನು ಹೇಳಬೇಕು ಎಂದು ಶಾಸ್ತ್ರಜ್ಞರು ಹೇಳಿದ್ದಾರೆ.

ಉಪಾಧಿಯು ಪ್ರಥಮತಃ ವಸ್ತುವಿನದೇ ಆದ ಧರ್ಮ ಹಾಗೂ ವಕ್ತೃವಿನ ಇಚ್ಛಾನುಸಾರ ಆರೋಪಿತವಾಗುವ ಧರ್ಮ ಎಂಬುದಾಗಿ ಎರಡು ಬಗೆ. ಸಿದ್ಧ ವಾದುದು ಮತ್ತು ಸಿದ್ಧವಾಗತಕ್ಕದ್ದು ಎಂದು ಇನ್ನೆರಡು ಭೇದಗಳನ್ನು ವಸ್ತುಧರ್ಮ ಉಪಾಧಿಯಲ್ಲಿ ಕಾಣಬಹುದು. ಸಿದ್ಧವಸ್ತುಧರ್ಮ ಉಪಾಧಿಯು ವಸ್ತುವಿಗೆ ಪ್ರಾಣಪ್ರದವಾದುದು ಮತ್ತು ವಸ್ತುವಿಗೆ ವಿಶೇಷವನ್ನು ತರುವಂತಹುದು ಎಂದು ಇನ್ನೆರಡು ಅವಾಂತರ ಭೇದಗಳನ್ನು ಪಡೆದಿದೆ. ಇಲ್ಲಿ ವಸ್ತುವಿಗೆ ಪ್ರಾಣಪ್ರದವಾದ ಸಿದ್ಧವಸ್ತು ಧರ್ಮವೇ ಜಾತಿ (ಗೋತ್ವ ಮುಂತಾದವು). ವಸ್ತುವಿಗೆ ವಿಶೇಷವನ್ನು ತರುವಂತಹ ಸಿದ್ಧವಸ್ತುಧರ್ಮವೇ ಗುಣ (ಶುಕ್ಲ, ಪೀತ ಮುಂತಾದವು). ಸಾಧ್ಯ ರೂಪವಾದುದೇ ಕ್ರಿಯಾ (ಪಾಕಾದಿಗಳು). ವಕ್ತೃವು ತನ್ನ ಇಷ್ಟಾನುಸಾರವಾಗಿ ಆರೋಪಿಸುವ ಧರ್ಮವೇ ಸಂಜ್ಞೆ (ದೇವದತ್ತ, ಗಜ ಇತ್ಯಾದಿ). ಒಟ್ಟೂ ಉಪಾಧಿಯು ಅಂತಿಮವಾಗಿ ನಾಲ್ಕು ವಿಧ. ಈ ನಾಲ್ಕು ಬಗೆಯ ಉಪಾಧಿಗಳನ್ನು ಈ ಕೆಳಗಿನಂತೆ ತಿಳಿಸಬಹುದು—

---

1. ವ್ಯಭಿಚಾರವೆಂದರೆ ನಿಯಮೋಲ್ಲಂಘನೆ.
2. ಆನಂತ್ಯದೋಷವೆಂದರೆ ಮಿತಿಯ ಉಲ್ಲಂಘನೆ.

- ವಸ್ತು ಧರ್ಮ ಉಪಾಧಿ →
  - ಸಿದ್ಧವಸ್ತು ಧರ್ಮಃ →
    - ೧. ಪದಾರ್ಥಸ್ಯ ಪ್ರಾಣಪ್ರದಃ (ಗೋತ್ವಾದಿ ಜಾತಿ)
    - ೨. ಪದಾರ್ಥಸ್ಯ ವಿಶೇಷಾಧಾನ ಹೇತುಃ (ಶುಕ್ಲಾದಿ ಗುಣಃ)
  - → ೩. ಸಾಧ್ಯವಸ್ತು ಧರ್ಮಃ (ಪಾಕಾದಿಕ್ರಿಯಾ)
  - ೪. ವಕ್ತ್ರೃಯದೃಚ್ಛಾ ಸನ್ನಿವೇಶಿತಃ (ದೇವದತ್ತಾದಿ ಸಂಜ್ಞಾ)

ಮೇಲೆ ವಿವರಿಸಿದಂತೆ ಉಪಾಧಿಯು ನಾಲ್ಕು ವಿಧವಾಗಿದೆ ಎಂಬುದನ್ನು ಮೀಮಾಂಸಕರು ಒಪ್ಪುವುದಿಲ್ಲ. ಜಾತಿಯೊಂದೇ ಉಪಾಧಿ. ಅದರಲ್ಲಿಯೇ ಎಲ್ಲವಿಧ ಉಪಾಧಿಯೂ ಅಂತರ್ಭಾವವಾಗುತ್ತವೆ ಎನ್ನುತ್ತಾರೆ. ಅವರ ಅಭಿಪ್ರಾಯವನ್ನು ಮಮ್ಮಟನು '............ಜಾತಿರೇವ ವಾ' ಎಂಬ ಮಾತಿನಿಂದ ತಿಳಿಸಿದ್ದಾನೆ.

ವಾಕ್ಯಾರ್ಥದ ಜ್ಞಾನವಾದರೆ ವಾಚ್ಯಾರ್ಥದ ಜ್ಞಾನ ಸುಲಭ.[1] ಇದರಿಂದ ಮಮ್ಮಟನು ಈ ಸಂದರ್ಭದಲ್ಲಿ ವಾಕ್ಯಾರ್ಥ ಹಾಗೂ ಅವುಗಳ ಬಗೆಗಿನ ಕೆಲವು ದಾರ್ಶನಿಕರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಾನೆ. ಅವು ಈ ಮುಂದಿನಂತಿವೆ.

ವಾಕ್ಯ, ಮಹಾವಾಕ್ಯಗಳನ್ನೇ ನಾವು ಭಾಷೆ ಎಂದು ವ್ಯವಹರಿಸುತ್ತೇವೆ. ವಾಕ್ಯವೆಂದರೆ ಪದಗಳ ಸಮೂಹ. ವಾಕ್ಯಗಳಲ್ಲಿರುವ ಪದಗಳ ಸ್ಥಾನ ಮತ್ತು ಸಂಬಂಧಗಳೇನು ? ವಾಕ್ಯಸ್ಥ ಪದಗಳ ಅರ್ಥಗಳನ್ನು ಬೇರೆ ಬೇರೆಯಾಗಿ ಮೊದಲು ಅರಿತುಕೊಂಡು ಅನಂತರ ವಾಕ್ಯದಲ್ಲಿ ಅವುಗಳಿಗಿರುವ ಸಂಬಂಧವನ್ನು ತಿಳಿದು ಕೊಳ್ಳುತ್ತೇವೆಯೋ ಅಥವಾ ಸಮಗ್ರ ವಾಕ್ಯಾರ್ಥವನ್ನು ಅಖಂಡವಾಗಿ ಗ್ರಹಿಸುತ್ತೇವೆಯೋ ? ಎಂಬ ವಿಷಯಗಳಲ್ಲಿ ಬೇರೆ ಬೇರೆ ಶಾಸ್ತ್ರಕಾರರು ಚರ್ಚೆ

---

1. ವಾಕ್ಯಾರ್ಥವೆಂದರೆ ಒಂದು ವಾಕ್ಯದಿಂದ ಬರುವ ಅರ್ಥ ಎಂದೂ ವಾಚ್ಯಾರ್ಥವೆಂದರೆ ಶಬ್ದ ಶಕ್ತಿಯ ಪ್ರಸಂಗದಲ್ಲಿ ಪ್ರಥಮ ಶಕ್ತಿಯಾದ ಅಭಿಧಾಶಕ್ತಿಯಿಂದ ಮಾಡುವ ಅರ್ಥವೆಂದೂ ಸಾಮಾನ್ಯವಾಗಿ ಹೇಳಬಹುದು.

ನಡೆಸಿದ್ದಾರೆ. ಈ ವಿಷಯದಲ್ಲಿ ಭಟ್ಟ ಮೀಮಾಂಸಕರು[1] ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[2]

ವಾಕ್ಯದಲ್ಲಿ ಸೇರಿರುವ ಪದಗಳು ಬಿಡಿಬಿಡಿಯಾಗಿ ತಮ್ಮ ಅರ್ಥವನ್ನು ಸೂಚಿಸಿ ವಿರಮಿಸುತ್ತವೆ. ಇಲ್ಲಿಗೆ ಆ ಪದಗಳ ಅಭಿಧಾವೃತ್ತಿಯ ಶಕ್ತಿ ಮುಗಿದಂತಾಯಿತು. ಇದರಿಂದ ಸಮಗ್ರ ವಾಕ್ಯದ ಅರ್ಥವನ್ನು ತಿಳಿಸುವ ಶಕ್ತಿ ಅಭಿಧಾವೃತ್ತಿಗೆ ಇಲ್ಲದಂತೆ ಆಯಿತು. ಇದರಿಂದ 'ತಾತ್ಪರ್ಯ'ವೆಂಬ ಬೇರೊಂದು ವ್ಯಾಪಾರವನ್ನು ಒಪ್ಪಬೇಕು. ಈ ತಾತ್ಪರ್ಯವೆಂಬ ವ್ಯಾಪಾರದಿಂದ ಹೊರಡುವ ಅರ್ಥ ತಾತ್ಪರ್ಯಾರ್ಥ. ವಾಕ್ಯದ ಪದಗಳಿಂದ ಮೊದಲು ಒಂದೊಂದರ ವಾಕ್ಯಾರ್ಥವೂ ಅರಿವಾಗುತ್ತದೆ. ಅನಂತರ ಅವುಗಳ ಆಕಾಂಕ್ಷಾ,[3] ಸನ್ನಿಧಿ[4], ಯೋಗ್ಯತಾ[5]ಗಳ ಅನ್ವಯ ರೂಪದ ತಾತ್ಪರ್ಯಾರ್ಥ

---

1. ಮೀಮಾಂಸೆ ಎಂಬುದು ಆಸ್ತಿಕ ದರ್ಶನಗಳಲ್ಲೊಂದು. ಆ ದರ್ಶನದಲ್ಲಿ ಕುಮಾರಿಲ ಭಟ್ಟ ಹಾಗೂ ಪ್ರಭಾಕರ ಎಂಬ ಇಬ್ಬರು ವಿದ್ವಾಂಸರು ಪ್ರಸಿದ್ಧರು. ಈ ಇಬ್ಬರು ವಿದ್ವಾಂಸರು ಸ್ವಲ್ಪ ವ್ಯತ್ಯಾಸವಾಗಿ ತಮ್ಮ ತಮ್ಮ ವಾದವನ್ನು ಅನೇಕ ವಿಚಾರಗಳಲ್ಲಿ ಮಂಡಿಸಿದ್ದಾರೆ. ಇದರಿಂದ ಆ ದರ್ಶನದಲ್ಲಿ ಮುಖ್ಯವಾದ ಎರಡು ಪರಂಪರೆಗಳೇ ಬೆಳೆದು ಬಂದಿವೆ. ಕುಮಾರಿಲ ಭಟ್ಟರ ಅನುಯಾಯಿಗಳನ್ನು ಭಾಟ್ಟ ಮೀಮಾಂಸಕರೆಂದೂ, ಪ್ರಭಾಕರರ ಅನುಯಾಯಿಗಳನ್ನು ಪ್ರಾಭಾಕರ ಮೀಮಾಂಸಕರೆಂದೂ ಕರೆಯಲಾಗಿದೆ. ಇವುಗಳಲ್ಲದೇ ಈ ದರ್ಶನದಲ್ಲಿ ಮುರಾರಿ ಮಿಶ್ರನ ಇನ್ನೊಂದು ಪಂಥವಿದೆ. (ಮುರಾರೇಃ ತೃತೀಯಃ ಪಂಥಾಃ। ಎಂಬುದು ಪ್ರಸಿದ್ಧ)

2. ನೈಯ್ಯಾಯಿಕರೂ ಸಹ ಭಾಟ್ಟರ ಈ ವಾದವನ್ನು ಮಾನ್ಯ ಮಾಡಿರುತ್ತಾರೆ.

3. ಒಂದು ಪದ ತನ್ನ ಅರ್ಥದ ಪೂರ್ತಿಕೆಗೋಸ್ಕರ ಇನ್ನೊಂದು ಪದವನ್ನು ಅಪೇಕ್ಷಿಸಿದರೆ ಅದನ್ನು 'ಆಕಾಂಕ್ಷೆ' ಎಂದು ಕರೆಯಲಾಗಿದೆ. ಇದು ವಾಕ್ಯಗತವಾದುದಾಗಲೀ ಆಗಿರಬಹುದು. ಅಭಿಧಾನಾಪರ್ಯವಸಾನಂ ಅಭಿಧೇಯಾಪರ್ಯವಸಾನಂ ತ ಜಿಜ್ಞಾಸೋದಯ ನಿಬಂಧನಂ ।

...... । ಅನ್ವಿತಸ್ಯ ಅಭಿಧಾನಾರ್ಥಂ ಉಕ್ತಾರ್ಥಘಟನಾಯ ವಾ ।
ಪ್ರತಿಯೋಗಿನಿ ಜಿಜ್ಞಾಸಾ ಯಾ ಸಾಕಾಂಕ್ಷೇತಿ ಗೀಯತೇ ॥
ಪ್ರಕರಣಪಂಚಿಕಾ (ವಾಕ್ಯಾರ್ಥಮಾತೃಕಾ–ವೃತ್ತಿ) ;
ಬನಾರಸ್, ೧೯೬೧, ಪು. ೩೮೬–೩೮೮.

4. ಪದಗಳನ್ನು ವಿಳಂಬವಿಲ್ಲದೇ ನಿರಂತರವಾಗಿ ಉಚ್ಚರಿಸುವುದನ್ನು 'ಸನ್ನಿಧಿ' ಎಂದು ಹೇಳಲಾಗಿದೆ. ಇದಕ್ಕೆ ಆಸತ್ತಿ ಎಂತಲೂ ಹೆಸರಿಸಿದ್ದಾರೆ.

ಆಸತ್ತಿಶ್ಚ ಅವ್ಯವಧಾನೇನ ಪದಜನ್ಯ ಪದಾರ್ಥೋಪಸ್ಥಿತಿಃ ।
ವೇದಾಂತ ಪರಿಭಾಷಾ, ಮದ್ರಾಸ್, ೧೯೪೨, ಪು. ೬೮ ;
ಪದಾನಾಂ ಅವಿಲಂಬೇನೋಚ್ಚಾರಣಂ।
A primer of Indian logic (ತರ್ಕಸಂಗ್ರಹ)
K.S.R.I. Madras, 1951, p. 30.

5. ಯೋಗ್ಯತಾ ಎಂದರೆ ಪದಗಳ ಸಂಬಂಧಾರ್ಹತೆ. ಅಂದರೆ ವಾಕ್ಯದಲ್ಲಿ ಪದಗಳ ಅರ್ಥಗಳು ಪರಸ್ಪರ ವಿರೋಧವಿಲ್ಲದೇ ಹೊಂದಿಕೊಳ್ಳುವಿಕೆ.

ಸಂಬಂಧಾರ್ಹಂ ಯೋಗ್ಯತಾ । ಪ್ರಕರಣಾಪಂಚಿಕಾ, ಬನಾರಸ್, ೧೯೬೧, ಪು. ೩೯೦
ಅರ್ಥಾಬಾಧೋ ಯೋಗ್ಯತಾ । A primer of Indian logic (ತರ್ಕಸಂಗ್ರಹ) K.S.R.I. Madras, 1951. p. 30.

ವನ್ನು ಗ್ರಹಿಸಲಾಗುತ್ತದೆ. ಹೀಗೆ ಪ್ರತಿಪಾದಿಸುವ ಭಟ್ಟ ಮೀಮಾಂಸಕರನ್ನು ಅಭಿಹಿತಾನ್ವಯವಾದಿ[1]ಗಳೆಂದು ಕರೆದಿದ್ದಾರೆ.

> ತಾತ್ಪರ್ಯಾರ್ಥೋऽಪಿ ಕೇಷುಚಿತ್ (ಕಾ.ಪ್ರ. ೨-೬)
> ಆಕಾಂಕ್ಷಾ ಸನ್ನಿಧಿಯೋಗ್ಯತಾವಶಾತ್ ವಕ್ಷ್ಯಮಾಣ
> ಸ್ವರೂಪಾಣಾಂ ಪದಾರ್ಥಾನಾಂ ಪರಸ್ಪರ ಸಮನ್ವಯೇ
> ತಾತ್ಪರ್ಯಾರ್ಥೋ ವಿಶೇಷವಪುಃ ಅಪದಾರ್ಥೋऽಪಿ
> ವಾಕ್ಯಾರ್ಥಃ ಸಮುಲ್ಲಸತಿ ಇತಿ ಅಭಿಹಿತಾನ್ವಯವಾದಿನಾಂ
> ಮತಂ । (ಕಾ ಪ್ರ. ೨-೬ರ ವೃತ್ತಿ)

ಅರ್ಥಾವಬೋಧಕ ಪ್ರಕಾರವನ್ನು ಪ್ರಾಭಾಕರ ಮೀಮಾಂಸಕರು ಈ ಕೆಳಗಿನಂತೆ ವಿವರಿಸುತ್ತಾರೆ—

ಮಾತನಾಡುವಾಗ ಪ್ರತಿಯೊಂದು ಪದಗಳ ಕಡೆಗೆ ಪ್ರತ್ಯೇಕ ಗಮನಕೊಡುವ ಅವಶ್ಯಕತೆಯಿಲ್ಲ. ಇದರಂತೆ ಆಲೋಚನೆಯಲ್ಲಿಯೂ ಮೂಲಾಂಶವು ವಾಕ್ಯವೇ ಹೊರತು ಪದಗಳಲ್ಲ. ಇದರಿಂದ ಅನ್ವಯ ವಿಶಿಷ್ಟವಾಗಿಯೇ ವಾಕ್ಯದ ಅರ್ಥವನ್ನು ಗ್ರಹಿಸುತ್ತೇವೆ. ಹೀಗೆನ್ನುವವರನ್ನು 'ಅನ್ವಿತಾಭಿಧಾನವಾದಿ[2]ಗಳೆಂದು ಕರೆದಿದ್ದಾರೆ.

ವಾಚ ಏವ ವಾಕ್ಯಾರ್ಥ : ಇತ್ಯನ್ವಿತಾಭಿಧಾನವಾದಿನಃ (ಕಾ.ಪ್ರ. ೨-೬ರ ವೃತ್ತಿ)

ವಾಕ್ಯದ ಅರ್ಥವು ಅಖಂಡವಾಗಿ ತಿಳಿದುಬರುತ್ತದೆ ಎಂಬುದು ವೈಯ್ಯಾಕರಣರ ಸಿದ್ಧಾಂತ. ಒಂದು ಪದೋಚ್ಚಾರಣೆಯಾದಾಗ ಅದರಲ್ಲಿ ಪ್ರಕೃತಿ[3] ಹಾಗೂ ಪ್ರತ್ಯಯ[4] ಭಾಗಗಳನ್ನು ಪ್ರತ್ಯೇಕಿಸಿ ನೋಡದೇ ಹೇಗೆ ಪದದ ಒಟ್ಟರ್ಥವನ್ನು ಒಂದೇ ಸಾರೆ ಗ್ರಹಿಸುವೆವೋ ಹಾಗೆಯೇ ವಾಕ್ಯದಲ್ಲಿರುವ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಪ್ರತ್ಯೇಕವಾಗಿ ವಿಭಾಗಿಸಿಕೊಳ್ಳದೇ ವಾಕ್ಯಾರ್ಥವನ್ನು ಒಮ್ಮೆಲೇ ಗ್ರಹಿಸುತ್ತೇವೆ. ಒಂದು ವಾಕ್ಯದಲ್ಲಿಯ ಪದ, ಪ್ರಕೃತಿ, ಪ್ರತ್ಯಯ, ಕರ್ತೃ, ಕರ್ಮ,

---

1. ಪದದಲ್ಲಿರುವ ಅರ್ಥಗಳ ಅನ್ವಯದಿಂದುಂಟಾಗುವ ತಾತ್ಪರ್ಯಾರ್ಥವು ವಾಕ್ಯಾರ್ಥ ಬೋಧ ವಿಷಯವಾಗುತ್ತದೆ ಎನ್ನುವುದೇ ಅಭಿಹಿತಾನ್ವಯವಾದ. ಇದರಿಂದ 'ಅಭಿಹಿತಾನಾಂ ಪದೋಪಸ್ಥಿತಾನಾಂ ಅರ್ಥಾನಾಂ ಅನ್ವಯಃ ಸಂಸರ್ಗಃ ಸಂಸರ್ಗಮರ್ಯಾದಯಾ ವಾಕ್ಯಾರ್ಥ ಬೋಧಃ' ಎಂದು ಇದಕ್ಕೆ ವ್ಯುತ್ಪತ್ತಿಯನ್ನು ಹೇಳಬಹುದು. ಮುಕುಲ ಭಟ್ಟನೂ ಅಭಿಧಾವೃತ್ತಿ ಮಾತೃಕಾ ಎಂಬ ತನ್ನ ಗ್ರಂಥದಲ್ಲಿ ಇದನ್ನೇ ಹೇಳಿದ್ದಾನೆ. ಅರ್ಥಾನಾಂ ಅಭಿಹಿತಾನಾಂ ಉತ್ತರಕಾಲಂ ಪರಸ್ಪರಾನ್ವಯಾತ್ ಅಭಿಹಿತಾನ್ವಯಃ (ಅ.ವೃ ಮಾ., ಪು. ೧೫)

2. ಅನ್ವಿತಾಭಿಧಾನವಾದಿಗಳು ವಾಕ್ಯದಲ್ಲಿ ಶಕ್ತಿಯನ್ನು ಅಂಗೀಕರಿಸುತ್ತಾರೆ. ಇವರ ಮತದಂತೆ ಪದಶಕ್ತಿಯು ವಾಕ್ಯಾರ್ಥಬೋಧಕ್ಕೆ ಕಾರಣವಲ್ಲ ಅನ್ವಯವಿಶಿಷ್ಟ ವಾಕ್ಯಾರ್ಥಶಕ್ತಿಯೇ ವಾಕ್ಯಾರ್ಥಜ್ಞಾನಕ್ಕೆ ಕಾರಣ ಎಂದು ಇವರ ವಾದ.

3. ಪ್ರಕೃತಿ ಎಂದರೆ ಪದದ ಮೂಲ ರೂಪ.

4. ಪ್ರತ್ಯಯವೆಂದರೆ ಪದದ ಅಥವಾ ಶಬ್ದದ ಅಂಗ.

ಮುಂತಾದ ಕ್ರಿಯಾಪದ ವಿಭಾಗಗಳು ಭಾಷಾಭ್ಯಾಸಿಗಳಿಗೆ ವಿಷಯವನ್ನು ತಿಳಿಸಿ ಕೊಡುವುದಕ್ಕಾಗಿ ಮಾಡಿಕೊಂಡ ವಿಧಾನವಾಗಿರುತ್ತದೆ ಎಂಬುದು ಇವರ ಅಭಿಪ್ರಾಯ.

ಆದ್ದರಿಂದ ಭಾಷೆಯಲ್ಲಿ ವಾಕ್ಯವೇ ಮುಖ್ಯವಾದುದು. ಪದಗಳು ವಾಕ್ಯದ ಅವಯವಗಳು. ಆಕಾಂಕ್ಷಾ[1], ಸನ್ನಿಧಿ (ಆಸತ್ತಿ),[2] ಯೋಗ್ಯತಾ[3] ಈ ಮೂರನ್ನುಳ್ಳ ಪದಸಮುದಾಯವೇ ಅಖಂಡವಾದ ವಾಕ್ಯಾರ್ಥವನ್ನು ಅಂದರೆ ಶಾಬ್ದಬೋಧವನ್ನು ಉಂಟುಮಾಡುತ್ತದೆ ಎಂದು ವೈಯ್ಯಾಕರಣರೇ ಮೊದಲಾದ ಅನೇಕ ಶಾಸ್ತ್ರಕಾರರ ನಿರ್ಧಾರ.

ವಾಕ್ಯಂ ಸ್ಯಾತ್ ಯೋಗ್ಯತಾಕಾಂಕ್ಷಾಸತ್ತಿಯುಕ್ತಃ ಪದೋಚ್ಚಯಃ । (ಸಾಹಿತ್ಯದರ್ಪಣ ೨–೧)

ಅಂತೂ ಮುಖ್ಯಾರ್ಥವನ್ನು ಕೊಡುವ ಶಬ್ದ, ವಾಕ್ಯ, ಮಹಾವಾಕ್ಯ ಮುಂತಾದವುಗಳೇ ವಾಚಕವೆಂದೂ, ಮುಖ್ಯಾರ್ಥವನ್ನು ಕೊಡುವ ಶಬ್ದಶಕ್ತಿಯೇ ಅಭಿಧಾವೃತ್ತಿ ಎಂದೂ, ಅಭಿಧಾವೃತ್ತಿಯಿಂದ ಬರುವ ಅರ್ಥವೇ ಮುಖ್ಯಾರ್ಥವೆಂದೂ ಹೆಸರಿಸಲಾಗಿದೆ.

೨. ಲಕ್ಷಕ-ಲಕ್ಷ್ಯ :

ಮುಖ್ಯಾರ್ಥಕ್ಕೆ ಬಾಧೆಯುಂಟಾಗಿ ಅದರೊಡನೆ ಅಂದರೆ ಮುಖ್ಯಾರ್ಥದೊಡನೆ ಸಂಬಂಧದಿಂದಲೇ ಇದ್ದು ; ರೂಢಿಯ ಬಲದಿಂದಲಾಗಲೀ ಅಥವಾ ಪ್ರಯೋಜನದ ದೆಸೆಯಿಂದಲಾಗಲಿ ಬೇರೊಂದು ಅರ್ಥವು ಒಂದು ವಾಕ್ಯದಲ್ಲಿ ಸ್ಫುರಿಸುವುದಾದರೆ ಅದನ್ನು ಲಕ್ಷಣಾ ಎಂದು ಕರೆದಿದ್ದಾರೆ—

---

1. ವ್ಯಕ್ತಿಯ ಜ್ಞಾನಾಪೇಕ್ಷೆ—ಆಕಾಂಕ್ಷಾ ಪ್ರತಿಪತ್ತುರ್ಜಿಜ್ಞಾಸಾ (ಸಂಪ್ರದಾಯ ಪ್ರಕಾಶಿಕಿ–ಕಾ.ಪ್ರ.ವ್ಯಾಖ್ಯಾ)

2 ಪರಸ್ಪರ ಪದಾರ್ಥಗಳಲ್ಲಿ ಅನ್ಯೋನ್ಯವಾಗಿರುವ ಅರ್ಥಗಳನ್ನು ಎಡಬಿಡದೇ ತಿಳಿಸುವ ಸಾಮರ್ಥ್ಯ—ಆಕಾಂಕ್ಷಿತಸ್ಯ ಯೋಗ ಸ ಚ ಆನಂತರ್ಯಂ ಸನ್ನಿಧಿಃ । (ಸಂ. ಪ್ರ.—ಕಾವ್ಯಪ್ರಕಾಶದ ವ್ಯಾಖ್ಯಾನ)

3. ಸಂದರ್ಭಕ್ಕನುಗುಣವಾಗಿ ಒಂದು ಪದಾರ್ಥದಲ್ಲಿ ಇನ್ನೊಂದರ ಅನ್ವಯ—ಏಕಪದಾರ್ಥೇ ಅಪರಪದಾರ್ಥಸ ಪ್ರಕೃತ ಸಂಸರ್ಗತ್ವಂ ಯೋಗ್ಯತಾ । (ಬಾಲಬೋಧಿನೀ—ಕಾ.ಪ್ರ. ವ್ಯಾಖ್ಯಾನ)

ಮುಖ್ಯಾರ್ಥಬಾಧೇ ತದ್ಯೋಗೇ ರೂಢಿತೋಥ ಪ್ರಯೋಜನಾತ್ ।
ಅನ್ಯೋಽರ್ಥೋ ಲಕ್ಷ್ಯತೇಯತ್ಸಾ ಲಕ್ಷಣಾರೋಪಿತಾ ಕ್ರಿಯಾ ॥
(ಕಾ.ಪ್ರ. ೨-೯)

ಲಕ್ಷಣೆಯು ಆರೋಪಿಸಲ್ಪಡುವ ಶಬ್ದವ್ಯಾಪಾರ, ಅರ್ಥಾರೋಪವನ್ನು ಮಾಡಿಕೊಳ್ಳುವ ಪದಕ್ಕೆ ಲಕ್ಷಕ ಎಂತಲೂ, ಈ ಲಕ್ಷಕದಿಂದ ಉಂಟಾಗುವ ಅರ್ಥಕ್ಕೆ ಲಕ್ಷ್ಯವೆಂತಲೂ ಕರೆಯಲಾಗಿದೆ. ಅಂದರೆ ಲಕ್ಷಕ (ಶಬ್ದ) ವಿದ್ದಲ್ಲಿ ಲಕ್ಷಣಾ (ವ್ಯಾಪಾರ) ದಿಂದ ಲಕ್ಷ್ಯ (ಅರ್ಥ)ವು ಸ್ಫುರಿಸುವುದು ಎಂದು ತಾತ್ಪರ್ಯ.

ಈ ಲಕ್ಷಣೆಯು ಗೌಣೀ ಹಾಗೂ ಶುದ್ಧ ಲಕ್ಷಣಾ ಎಂದು ಎರಡು ವಿಧ. ಸಾದೃಶ್ಯ ಸಂಬಂಧವನ್ನಾಶ್ರಯಿಸಿದ ಲಕ್ಷಣೆಯನ್ನು ಗೌಣೀ ಎಂದೂ ಸಾದೃಶ್ಯವನ್ನು ಬಿಟ್ಟು ಬೇರೆ ಸಂಬಂಧವನ್ನಾಶ್ರಯಿಸಿದ ಲಕ್ಷಣೆಯನ್ನು ಶುದ್ಧಾ ಲಕ್ಷಣಾ ಎಂದೂ ವಿಭಾಗಿಸಲಾಗಿದೆ. ಗೌಣೀ ಲಕ್ಷಣಾವು ಸಾರೋಪಾ ಹಾಗೂ ಸಾಧ್ಯವಸಾನಾ ಎಂದು ಪುನಃ ಎರಡು ಬಗೆಯಾಗಿದೆ. ಶುದ್ಧಾ ಲಕ್ಷಣವು ಉಪಾದಾನ, ಲಕ್ಷಣ, ಸಾರೋಪ ಹಾಗೂ ಸಾಧ್ಯವಸಾನಾ ಎಂದು ನಾಲ್ಕು ಬಗೆಯಾಗಿದೆ. ಪ್ರಯೋಜನ ಮೂಲವಾಗಿರುವ ಈ ಲಕ್ಷಣೆಯು ಒಟ್ಟು ಆರು ವಿಧ.

ಭೇದಾವಿಮೌ ಚ ಸಾದೃಶ್ಯಾತ್ಸಂಬಂಧಾಂತರತಸ್ತಥಾ ।
ಗೌಣೌ ಶುದ್ಧೌ ಚ ವಿಜ್ಞೇಯೌ ಲಕ್ಷಣಾ ತೇನ ಷಡ್ವಿಧಾ ॥ (ಕಾ. ಪ್ರ. ೨-೧೨)

ಲಕ್ಷಣೆಯ ಆರು ಬಗೆಯ ಪ್ರಭೇದಗಳನ್ನೂ ಕ್ರಮವಾಗಿ ಈ ಮುಂದೆ ನೋಡೋಣ :

೧. **ಉಪಾದಾನ ಲಕ್ಷಣಾ :** ಇದು ಶುದ್ಧ-ಲಕ್ಷಣೆಯ ಭೇದಗಳಲ್ಲೊಂದು ಮುಖ್ಯಾರ್ಥವು ತನ್ನ ಸ್ಥಾಪನೆಗೆ ಇನ್ನೊಂದರ್ಥವನ್ನು ಸೇರಿಸಿಕೊಂಡರೆ ಅಂದರೆ ತನ್ನರ್ಥವನ್ನು ಬಿಡದೆ ಬೇರೊಂದರ್ಥವನ್ನು ಗ್ರಹಣಮಾಡಿದರೆ ಅದು ಉಪಾದಾನ ಲಕ್ಷಣಾ ಎಂದಿದ್ದಾರೆ.

ಸ್ವಸಿದ್ಧಯೇ ಪರಾಕ್ಷೇಪಃ .... । (ಕಾ. ಪ್ರ. ೨-೧೦)
ಉದಾಹರಣೆ : ಕುಂತಾಃ ಪ್ರವಿಶಂತಿ ।
(ಈಟಿಗಳು ಪ್ರವೇಶಿಸುತ್ತವೆ)

ಈಟಿಗೆ ಜೀವವಿಲ್ಲ. ಅದು ಅಚೇತನವಾದ ವಸ್ತು. ಇದರಿಂದ ಈಟಿಗಳು ಪ್ರವೇಶಮಾಡಲು ಸಾಧ್ಯವಿಲ್ಲ. ಆದ್ದರಿಂದ ಕುಂತಾಃ ಪ್ರವಿಶಂತಿ ಎಂಬ ವಾಕ್ಯಕ್ಕೆ ಕುಂತಧಾರಿಣಃ ಯೋಧಾಃ ಪ್ರವಿಶಂತಿ (ಈಟಿಧಾರಿಗಳಾದ ಭಟರು ಪ್ರವೇಶಿಸುತ್ತಾರೆ) ಎಂಬರ್ಥವು ಗ್ರಹಣವಾಗುವುದು. ಇಲ್ಲಿ ಮುಖ್ಯಾರ್ಥವು ತನ್ನನ್ನೂ ಬಿಡದೆ ಇನ್ನೊಂದರ್ಥವನ್ನೂ ಸೇರಿಸಿಕೊಂಡಿದೆ. ಆದುದರಿಂದ ಇದು ಉಪಾದಾನ ಲಕ್ಷಣಾ. ಇದನ್ನು ನೈಯ್ಯಾಯಿಕರು ಅಜಹಲ್ಲಕ್ಷಣಾ ಎಂದು ಹೆಸರಿಸಿದ್ದಾರೆ.

೨. ಲಕ್ಷಣ-ಲಕ್ಷಣಾ : ಇದೂ ಸಹ ಶುದ್ಧ ಲಕ್ಷಣೆಯ ಭೇದವಾಗಿದೆ. ಮುಖ್ಯಾರ್ಥವು ಮತ್ತೊಂದರ್ಥಕ್ಕೆ ಅನುವುಮಾಡಿಕೊಟ್ಟು ತನ್ನರ್ಥವನ್ನು ಕಳೆದು ಕೊಂಡರೆ ಅದು 'ಲಕ್ಷಣ ಲಕ್ಷಣಾ' ಎನ್ನಲಾಗಿದೆ.

। ... ಪರಾರ್ಥಂ ಸ್ವಸಮರ್ಪಣಂ । (ಕಾ.ಪ್ರ. ೨-೧೦)
ಉದಾಹರಣೆ : ಗಂಗಾಯಾಂ ಘೋಷಃ ।
(ಗಂಗೆಯಲ್ಲಿ ಹಳ್ಳಿ)

ಗಂಗಾನದಿಯಲ್ಲಿ ಹಳ್ಳಿಯು ಇಗಲು ಸಾಧ್ಯವಿಲ್ಲದ್ದರಿಂದ 'ಗಂಗಾಯಾಂ' ಎಂಬ ಪದದಿಂದ 'ಗಂಗಾತಟೇ' ಎಂಬರ್ಥವು ದ್ಯೋತಿತವಾಗುವುದು. ಗಂಗಾಯಾಂ (ಗಂಗೆಯಲ್ಲಿ) ಎಂಬರ್ಥವು ಸಂಪೂರ್ಣ ತ್ಯಾಜ್ಯವಾಗಿ ಗಂಗಾತಟೇ (ಗಂಗಾದಡದಲ್ಲಿ) ಎಂಬರ್ಥ ಬಂದಿದೆ ಹೀಗೆ ತನ್ನ ಅರ್ಥವನ್ನು ಕಳೆದುಕೊಂಡು ಮತ್ತೊಂದರ್ಥವನ್ನು ಬೋಧಿಸುವುದರಿಂದ ಇದು ಲಕ್ಷಣ ಲಕ್ಷಣಾಕ್ಕೆ ಉದಾಹರಣೆಯಾಗುವುದು.

೩. ಶುದ್ಧ-ಸಾರೋಪಾ ಲಕ್ಷಣಾ : ಸಾದೃಶ್ಯ ಸಂಬಂಧವಲ್ಲದೇ ವಿಷಯ-ವಿಷಯಿಗಳು ಅಂದರೆ ಆರೋಪವಾದದ್ದು ಹಾಗೂ ಆರೋಪಕ್ಕೆ ವಿಷಯವಾದುದು ಸ್ಪಷ್ಟವಾಗಿ ಕಂಡುಬಂದರೆ ಅದು ಶುದ್ಧಾ ಸಾರೋಪಾ ಲಕ್ಷಣಾ ಎನ್ನಲಾಗಿದೆ.

ಸಾರೋಪಾನ್ಯಾತ್ತು ಯತ್ರೋಕ್ತೌ ವಿಷಯೀ ವಿಷಯಸ್ತಥಾ । ಕಾ. ಪ್ರ. (೨-೧೧)
ಉದಾಹರಣೆ : ಆಯುರ್ಘೃತಂ ।
(ತುಪ್ಪವು ಆಯುಸ್ಸು)

ಇಲ್ಲಿ ತುಪ್ಪಕ್ಕೆ ಆಯುಸ್ಸು ಎಂದು ಆರೋಪಿಸಲಾಗಿದೆ. ವಿಷಯ-ವಿಷಯಿಗಳನ್ನು ಬೇರೆಬೇರೆಯಾಗಿ ಹೇಳಲಾಗಿದೆ. ಇಲ್ಲಿ ಕಾರ್ಯಕಾರಣ ಸಂಬಂಧವಿದೆಯೇ ವಿನಹ ಸಾದೃಶ್ಯ ಸಂಬಂಧವಿಲ್ಲ. ಈ ಉದಾಹರಣೆಯಲ್ಲಿ ಕಾರ್ಯವೇ ಆಯುಸ್ಸು. ತುಪ್ಪವೇ ಕಾರಣ ಇದು ಸಾದೃಶ್ಯೇತರ ಸಂಬಂಧ ಆದ್ದರಿಂದ ಇದು ಶುದ್ಧ-ಸಾರೋಪಾ ಲಕ್ಷಣಾ.

೪. ಶುದ್ಧ-ಸಾಧ್ಯವಸಾನಾ ಲಕ್ಷಣಾ : ಆರೋಪಕ್ಕೆ ಮಾಡಲಾದ ವಸ್ತುವು ಆರೋಪಕ್ಕೆ ಆಸ್ಪದವಾದ ವಸ್ತುವನ್ನು ಮುಚ್ಚಿದರೆ ಅಂದರೆ ವಿಷಯಿಯು ವಿಷಯದಲ್ಲಿ ಅಡಗಿದರೆ ಅದನ್ನು ಸಾಧ್ಯವಸಾನಾ ಲಕ್ಷಣಾ ಎಂದು ಕರೆದಿದ್ದಾರೆ

ವಿಷಯ್ಯಂತಃ ಕೃತೇನಸ್ಮಿನ್ ಸಾ ಸ್ಯಾತ್ ಸಾಧ್ಯವಸಾನಿಕಾ । (ಕಾಪ್ರ. ೨-೧೧)
ಉದಾಹರಣೆ : ಆಯುರೇವೇದಂ ।
(ಆಯುಸ್ಸೇ ಇದು)

ಈ ಉದಾಹರಣೆಯಲ್ಲಿ 'ಆಯುಸ್ಸು' ವಿಷಯಿಯಾಗಿದೆ. ವಿಷಯದ ಸ್ಥಾನದಲ್ಲಿ 'ಇದಂ' (ಇದು) ಎಂಬ ಸರ್ವನಾಮ ಪದವಿದೆ ಸ್ಪಷ್ಟವಾಗಿ ವಿಷಯದ

ಹೆಸರನ್ನು ಹೇಳಲಿಲ್ಲ. ಅಂದರೆ ವಿಷಯವು ಮರೆಯಾಗಿದೆ. ವಿಷಯ–ವಿಷಯಿಗಳಿಗೆ ಸಂಬಂಧಾಂತರವಿದೆ. ಇದರಿಂದ ಇದು ಶುದ್ಧ–ಸಾಧ್ಯವಸಾನಾ ಲಕ್ಷಣ.

ಈ ಮೇಲೆ ವಿವರಿಸಿದ ಉಪಾದಾನ ಲಕ್ಷಣಾ, ಲಕ್ಷಣಾ ಲಕ್ಷಣಾ, ಸಾರೋಪಾ ಲಕ್ಷಣಾ ಮತ್ತು ಸಾಧ್ಯವಸಾನಾ ಲಕ್ಷಣಗಳೆಂಬ ನಾಲ್ಕು ಪ್ರಭೇದಗಳು ಶುದ್ಧ–ಲಕ್ಷಣೆಯ ವಿಭಾಗಗಳು. ಗೌಣೀ ಲಕ್ಷಣೆಯ ಪ್ರಭೇದಗಳು ಈ ಮುಂದಿನಂತಿವೆ. ಶುದ್ಧ–ಲಕ್ಷಣೆಯು ಎಂದೆಂದೂ ಸಾದೃಶ್ಯೇತರ ಸಂಬಂಧವನ್ನು, ಗೌಣ–ಲಕ್ಷಣೆಯು ಎಂದೆಂದೂ ಸಾದೃಶ್ಯ ಸಂಬಂಧವನ್ನು ಪಡೆದಿವೆ ಎಂಬುದನ್ನು ಈ ಹಿಂದೆಯೇ ನೋಡಿರುತ್ತೇವೆ.

೫. ಗೌಣ ಸಾರೋಪಾ ಲಕ್ಷಣಾ : ಒಂದು ವಸ್ತುವು ಇನ್ನೊಂದು ವಸ್ತುವಿನ ಮೇಲೆ ಆರೋಪಗೊಂಡರೆ ಅಂದರೆ ವಿಷಯಿ–ವಿಷಯಗಳು ಒಂದೇ ಆಗಿ ತೋರಿದರೆ ಅದು 'ಗೌಣೀಸಾರೋಪಾ' ಎನ್ನಲಾಗಿದೆ.

ಸಾರೋಪಾನ್ಯಾತು ಯತ್ರೋಕ್ತೌ ವಿಷಯೀ–ವಿಷಯಸ್ತಥಾ ।
(ಕಾ. ಪ್ರ. ೨—೧೧)

ಉದಾಹರಣೆ : ಗೌರ್ವಾಹೀಕಃ ।
(ವಾಹೀಕನು ದನ)

ಇಲ್ಲಿ ಗೌ : (ದನ) ಎಂಬ ಪದವು ವಿಷಯಿ ವಾಹೀಕ ಎಂಬ ಪದವು ವಿಷಯ. ವಿಷಯಿಯನ್ನು ವಿಷಯದ ಮೇಲೆ ಆರೋಪಿಸಲಾಗಿದೆ. ಅಥವಾ ವಿಷಯಿ–ವಿಷಯಗಳು ಒಂದೇ ಆಗಿವೆ. ಆದ್ದರಿಂದ ಇದು ಗೌಣಿ ಸಾರೋಪಾ.

೬. ಗೌಣಿ ಸಾಧ್ಯವಸಾನಾ ಲಕ್ಷಣಾ : ಆರೋಪ ಮಾಡಿರುವ ವಸ್ತುವು (ವಿಷಯಿಯು) ಆರೋಪ್ಯ ವಸ್ತುವನ್ನು (ವಿಷಯವನ್ನು) ಮರೆಮಾಡಿದರೆ ಹಾಗೂ ಅವುಗಳ ಸಂಬಂಧ ಸಾದೃಶ್ಯರೂಪವಾಗಿದ್ದರೆ ಅದು ಗೌಣಿ ಸಾಧ್ಯವಸಾನಾ ಎನ್ನಲಾಗಿದೆ.

ವಿಷಯ್ಯಂತಃಕೃತೇನ್ಯಸ್ಮಿನ್ ಸಾ ಸ್ಯಾತ್ ಸಾಧ್ಯವಸಾನಿಕಾ ।
(ಕಾ. ಪ್ರ. ೨–೧೧)

ಉದಾಹರಣೆ : ಗೌರಯಂ ।
(ಇವನು ದನ)

ಗೌಃ (ದನ) ಎಂಬ ಪದ ವಿಷಯಿ ಅಯಂ (ಇದು) ಎಂಬುದು ವಿಷಯದ ಸ್ಥಾನದಲ್ಲಿದೆ. ವಿಷಯಕ್ಕೆ ಸರ್ವನಾಮ ಪದವನ್ನು ಬಳಸಿ; ವಿಷಯವನ್ನು ಮರೆ ಮಾಡಲಾಗಿದೆ. ಈ ವಿಷಯ ವಿಷಯಿಗಳ ಸಂಬಂಧ ಸಾದೃಶ್ಯರೂಪವಾದುದು. ಇದರಿಂದ ಇದು ಗೌಣೀ ಸಾಧ್ಯವಸಾನಾ ಲಕ್ಷಣಾ.

ಈ ಮೇಲೆ ವಿವರಿಸಿದ ಲಕ್ಷಣೆಯ ಭೇದಗಳನ್ನು ಈ ಕೆಳಗಿನಂತೆ ತೋರಿಸಬಹುದು.

ಲಕ್ಷಣಾ
(ಅವ್ಯಂಗ್ಯ ಲಕ್ಷಣಾ)

ಶುದ್ಧ–ಲಕ್ಷಣಾ (ಸಾದೃಶ್ಯೇತರ ಸಂಬಂಧ)

1. ಉಪಾದಾನ ಲಕ್ಷಣಾ
   - ಕುಂತಾಃ ಪ್ರವಿಶಂತಿ
   - ಈಟಿಗಳು ಪ್ರವೇಶಿಸುತ್ತವೆ
2. ಲಕ್ಷಣ ಲಕ್ಷಣಾ
   - ಗಂಗಾಯಾಂ ಘೋಷಃ
   - ಗಂಗೆಯಲ್ಲಿ ಹಳ್ಳಿ
3. ಸಾರೋಪಾ ಲಕ್ಷಣಾ
   - ಆಯುರ್ಘೃತಂ
   - ತುಪ್ಪವು ಆಯುಸ್ಸು
4. ಸಾಧ್ಯವಸಾನಾ
   - ಆಯುರೇವೇದಂ
   - ಇದೇ ಆಯುಸ್ಸು

ಗೌಣ–ಲಕ್ಷಣಾ (ಸಾದೃಶ್ಯ ಸಂಬಂಧ)

5. ಸಾರೋಪಾ
   - ಗೌರ್ವಾಹೀಕಃ
   - ವಾಹೀಕನು ದನ
6. ಸಾಧ್ಯವಸಾನಾ
   - ಗೌರಯಂ
   - ಇವನು ದನ

'ಗೌಃ ಅನುಬಂಧ್ಯಃ' ಹಾಗೂ ಪೀನೋದೇವದತ್ತಃ ದಿವಾ ಭುಂಕ್ತೇ ಎಂಬೆರಡು ಉದಾಹರಣೆಗಳು ಕ್ರಮವಾಗಿ ಉಪಾದಾನ ಹಾಗೂ ಲಕ್ಷಣ ಲಕ್ಷಣಾಗಳಾಗುತ್ತವೆ ಎಂಬ ಮೀಮಾಂಸಕರ ವಾದವನ್ನು ಸಯುಕ್ತಿಕವಾಗಿ ಮಮ್ಮಟನು ಅಲ್ಲಿಯೇ ಮುಂದೆ ಖಂಡಿಸುತ್ತಾನೆ—

> ಗೌಃ ಅನುಬಂಧ್ಯಃ ....ಅರ್ಥಾಪತ್ತೇರ್ವಾ ವಿಷಯತ್ವಾತ್ |
> (ಕಾ. ಪ್ರ. ೨–೧೩ರ ವೃತ್ತಿ)

ಮೇಲೆ ವಿವರಿಸಿದ ಆರು ವಿಧ ಲಕ್ಷಣೆಗಳು ರೂಢಿಮೂಲ ವಾಗಿರುತ್ತವೆ. ಅದಿಲ್ಲದಿದ್ದರೆ ಪ್ರಯೋಜನ ಮೂಲವಾಗಿರುತ್ತವೆ. ರೂಢಿಮೂಲದಿಂದ ಬಂದ ಲಕ್ಷಣೆಯನ್ನು ವ್ಯಂಗ್ಯರಹಿತ ಅಥವಾ ಅವ್ಯಂಗ್ಯ ಲಕ್ಷಣೆ ಎಂದೂ ಪ್ರಯೋಜನ ಮೂಲದಿಂದ ಬಂದ ಲಕ್ಷಣೆಯನ್ನು (ಪ್ರಯೋಜನವು ಯಾವಾಗಲೂ ಸಾಮಾನ್ಯವಾಗಿ ವ್ಯಂಜನಾ ವ್ಯಾಪಾರದಿಂದಲೇ ತಿಳಿದು ಬರುವಂತಹದಾದ್ದರಿಂದ) ವ್ಯಂಗ್ಯಸಹಿತ ಅಥವಾ

ಸವ್ಯಂಗ್ಯ ಲಕ್ಷಣೆ ಎನ್ನಲಾಗಿದೆ. ಹೀಗಿರುವುದರಿಂದ ಲಕ್ಷಣೆಯು ಪ್ರಪ್ರಥಮವಾಗಿ ವ್ಯಂಗ್ಯಸಹಿತ ಹಾಗೂ ವ್ಯಂಗ್ಯರಹಿತ ಎಂಬುದಾಗಿ ಎರಡು ವಿಧ. ವ್ಯಂಗ್ಯ ಸಹಿತ ಲಕ್ಷಣೆಯಲ್ಲಿ ಗೂಢ ಹಾಗೂ ಅಗೂಢ ಎಂಬುದಾಗಿ ಪುನಃ ಇನ್ನೆರಡು ಪ್ರಭೇದಗಳನ್ನು ಕಾಣಬಹುದಾಗಿದೆ. ಅಂತೂ ಲಕ್ಷಣೆಯು ಅಂತಿಮವಾಗಿ ಅವ್ಯಂಗ್ಯ, ಗೂಢವ್ಯಂಗ್ಯ ಮತ್ತು ಅಗೂಢವ್ಯಂಗ್ಯಗಳೆಂದು ಮೂರು ವಿಧ—

> ವ್ಯಂಗ್ಯೇನ ರಹಿತಾ ರೂಢೌ ಸಹಿತಾ ತು ಪ್ರಯೋಜನೇ ।
> ತಚ್ಚ ಗೂಢಮಗೂಢಂ ವಾ ತದೇಷಾ ಕಥಿತಾ ತ್ರಿಧಾ ॥
>
> (ಕಾ. ಪ್ರ. ೨–೧೨)

ಇದನ್ನು ಈ ಕೆಳಗಿನಂತೆ ತೋರಿಸಬಹುದು

ಲಕ್ಷಣಾ

- ವ್ಯಂಗ್ಯ ರಹಿತ (ಅವ್ಯಂಗ್ಯ) (ರೂಢಿಯನ್ನಾಶ್ರಯಿಸಿರುವುದು)
  - ಶುದ್ಧ–ಲಕ್ಷಣಾ (ನಾಲ್ಕು ಭೇದಗಳು)
  - ಗೌಣ–ಲಕ್ಷಣಾ (ಎರಡು ಭೇದಗಳು)
- ವ್ಯಂಗ್ಯ ಸಹಿತ (ಸವ್ಯಂಗ್ಯ) (ಪ್ರಯೋಜನವನ್ನಾಶ್ರಯಿಸಿರುವುದು)
  - ಗೂಢವ್ಯಂಗ್ಯ
  - ಅಗೂಢವ್ಯಂಗ್ಯ

೩ ವ್ಯಂಜಕ–ವ್ಯಂಗ್ಯ[1]: ವ್ಯಂಜಕ (ಶಬ್ದ)ದಿಂದ ವ್ಯಂಗ್ಯ (ಅರ್ಥ)ದ ಅರಿವಾಗುತ್ತದೆ. ವ್ಯಂಗಾರ್ಥವನ್ನು ಕೆಲವು ಸಾರೆ ಶಬ್ದವೂ, ಕೆಲವು ಸಾರೆ ಅರ್ಥವೂ ಸೂಚಿಸುತ್ತವೆ ವ್ಯಂಗ್ಯವನ್ನು ಸೂಚಿಸುವ ವ್ಯಂಜನಾವ್ಯಾಪಾರವುಳ್ಳ ಶಬ್ದವಾಗಲಿ, ಅಥವಾ ಅರ್ಥವಾಗಲಿ ಅವೆಲ್ಲವನ್ನೂ ವ್ಯಂಜಕವೆಂದೇ ಕರೆಯಬಹುದಾಗಿದೆ. ವ್ಯಂಜಕವು ಎಂದೆಂದೂ ವಿಶೇಷ ಧರ್ಮಬೋಧಕ ಅದು ಶಬ್ದದಿಂದಲೂ ಬರಬಹುದು ಅಥವಾ ಅರ್ಥದಿಂದಲೂ ಬರಬಹುದು. ಶಬ್ದವು ವ್ಯಂಜಕವಾಗುವುದಷ್ಟೇ ಅಲ್ಲ; ಒಂದು ವ್ಯಂಗ್ಯಾರ್ಥವು ಇನ್ನೊಂದು ವ್ಯಂಗ್ಯಾರ್ಥಕ್ಕೆ ಆಸ್ಪದಕೊಟ್ಟು ಮೊದಲನೆಯ ವ್ಯಂಗಾರ್ಥವು ಎರಡನೆಯ ಅರ್ಥಕ್ಕೆ ವ್ಯಂಜಕವಾಗುವುದು.

---

1 ವ್ಯಂಗ್ಯವೆಂದರೆ ಕನ್ನಡ ಭಾಷೆಯ ವ್ಯಂಗ್ಯವಲ್ಲ ಕನ್ನಡದಲ್ಲಿ ವ್ಯಂಗ್ಯವನ್ನು ಕುಹಕ ಅಪಹಾಸ್ಯ ಮುಂತಾದವುಗಳಿಗೆ ಸಮಾನಾರ್ಥಕವಾಗಿ ಬಳಸುತ್ತಾರೆ. ಆದರೆ ಅಲಂಕಾರಶಾಸ್ತ್ರದಲ್ಲಿ ವ್ಯಂಗ್ಯವೆಂದರೆ ಕಾವ್ಯಾತ್ಮ ಎನ್ನಲಾಗಿದೆ

ತದ್ಯುಕ್ತೋ ವ್ಯಂಜಕಃ ಶಬ್ದಃ ಯತ್ ಸೋಽರ್ಥಾಂತರಯುಕ್ ತಥಾ |
ಅರ್ಥೋಽಪಿ ವ್ಯಂಜಕಸ್ತತ್ರ ಸಹಕಾರಿತಯಾ ಮತಃ ||
(ಕಾ. ಪ್ರ. ೨–೨೦)

ಇದರಿಂದ ಶಬ್ದ–ವ್ಯಂಜಕ ಹಾಗೂ ಅರ್ಥವ್ಯಂಜಕ ಎಂದು ವಿಭಾಗಿಸಬಹುದು. ಇವುಗಳಿಂದ ಬರುವ ಅರ್ಥಗಳಿಗೆ ಕ್ರಮವಾಗಿ ಶಬ್ದವ್ಯಂಗ್ಯ ಮತ್ತು ಅರ್ಥವ್ಯಂಗ್ಯ ಎಂದು ಹೇಳಬಹುದಾಗಿದೆ.

(ಅ) ಶಬ್ದವ್ಯಂಜಕ : ಇದು ಅಭಿಧಾ ಮೂಲವಾದುದು. ಇದಕ್ಕೆ ಉದಾಹರಣೆಯಾಗಿ ವಾಕ್ಯಪದೀಯವೆಂಬ ಗ್ರಂಥದ 'ಸಂಯೋಗೋ ವಿಪ್ರಯೋಗಶ್ಚ' ಮತ್ತು 'ಸಾಮರ್ಥ್ಯಮೌಚಿತೀ' ಎಂಬೆರಡು ಕಾರಿಕೆಗಳನ್ನು ತೆಗೆದುಕೊಂಡು ಕಾವ್ಯಪ್ರಕಾಶದಲ್ಲಿ ವಿವರಿಸಲಾಗಿದೆ. ಮುಖ್ಯವಾಗಿ ಸಂಯೋಗ, ವಿಯೋಗ, ಸಾಹಚರ್ಯ, ವಿರೋಧ, ಉದ್ದೇಶ, ಸಂದರ್ಭ, ಚಿಹ್ನೆ, ಶಬ್ದಾಂತರ ಸಾನ್ನಿಧ್ಯ, ಸಾಮರ್ಥ್ಯ, ಔಚಿತ್ಯ, ದೇಶ, ಕಾಲ, ಲಿಂಗ, ಸ್ವರ ಇವೇ ಮೊದಲಾದವುಗಳು ಶಬ್ದವ್ಯಂಜಕಕ್ಕೆ ಕಾರಣಗಳಾಗುತ್ತವೆ. ಈ ಮೇಲಿನ ಯಾವುದಾದರೂ ಕಾರಣಗಳಿಂದ ಒಂದು ಶಬ್ದವು ವ್ಯಂಜಕವಾಗಬಲ್ಲದು ಎಂದರ್ಥ.

ಸಂಯೋಗೋ ವಿಪ್ರಯೋಗಶ್ಚ ಸಾಹಚರ್ಯಂ ವಿರೋಧಿತಾ
ಅರ್ಥಃ ಪ್ರಕರಣಂ ಲಿಂಗಂ ಶಬ್ದಸ್ಯಾನ್ಯಸ್ಯ ಸನ್ನಿಧಿಃ
ಸಾಮರ್ಥ್ಯಮೌಚಿತೀ ದೇಶಃ ಕಾಲೋ ವ್ಯಕ್ತಿಃ ಸ್ವರಾದಯಃ |
ಶಬ್ದಾರ್ಥಸ್ಯಾನವಚ್ಛೇದೇ ವಿಶೇಷಸ್ಮೃತಿಹೇತವಃ ||
(ಕಾ. ಪ್ರ. ೨–೧೯ರ ವೃತ್ತಿಯಲ್ಲಿ ; ವಾಕ್ಯಪದೀಯ ೨–೩೧೭, ೩೧೮)

(ಆ) ಅರ್ಥವ್ಯಂಜಕ : ಅರ್ಥದ ಮೂಲದಿಂದ ಯಾವ ಶಬ್ದವು ವ್ಯಂಜಕವೆನಿಸುವುದೊ ಅದು ಅರ್ಥವ್ಯಂಜಕ ಎನ್ನಲಾಗಿದೆ. ಇದಕ್ಕೆ ಮುಖ್ಯವಾಗಿ ವಕ್ತೃ (ಮಾತಾಡುವ ವ್ಯಕ್ತಿ), ಬೋದ್ಧವ್ಯ (ಮಾತನ್ನು ಆಲಿಸುವ ವ್ಯಕ್ತಿ), ಬೋದವ್ಯ (ಮಾತನ್ನು ಆಲಿಸುವ ವ್ಯಕ್ತಿ), ಕಾಕು (ಮಾತಿನ ವೈಖರಿ), ವಾಕ್ಯ, ವಾಚ್ಯಾರ್ಥ, ಅನ್ಯರ ಉಪಸ್ಥಿತಿ, ಸಂದರ್ಭ, ಪ್ರದೇಶ, ಸಮಯ ಮುಂತಾದವುಗಳು ಕಾರಣಗಳು.

ವಕ್ತೃ ಬೋದ್ಧವ್ಯಕಾಕೂನಾಂ ವಾಕ್ಯವಾಚ್ಯಾನ್ಯಸನ್ನಿಧೇಃ |
ಪ್ರಸ್ತಾವದೇಶಕಾಲಾದೇಃ ವೈಶಿಷ್ಟ್ಯಾತ್ ಪ್ರತಿಭಾಜುಷಾಂ ||
ಯೋಽರ್ಥಸ್ಯಾನ್ಯಾರ್ಥಧೀಹೇತುಃ ವ್ಯಾಪಾರೋ ವ್ಯಕ್ತಿರೇವ ಸಾ |
(ಕಾ. ಪ್ರ. ೩–೨೧, ೨೨)

ಈ ಮೇಲೆ ಹೆಸರಿಸಿದ ಕಾರಣಗಳು ಇದ್ದರೂ ಸಹೃದಯತೆ ಮತ್ತು ಪ್ರತಿಭೆಗಳಿಲ್ಲದಿದ್ದರೆ ವ್ಯಂಗ್ಯಾರ್ಥವು ಸ್ಫುರಿಸುವುದಿಲ್ಲ. ವ್ಯಂಗ್ಯಾರ್ಥವು ಯಾವಾಗಲೂ

ಸಹೃದಯ ಹೃದಯಾನಂದದಾಯಕವಾದುದು. ಸಹೃದಯ[1]ನಿಗೆ ಆನಂದವನ್ನುಂಟು ಮಾಡುವುದೇ ಕಾವ್ಯದ ಮುಖ್ಯ ಪ್ರಯೋಜನ, ಇದರಿಂದ ವ್ಯಂಗ್ಯ-ವ್ಯಂಜಕಗಳೇ ಕಾವ್ಯದ ಜೀವಾಳ. ಇವನ್ನೇ ಧ್ವನಿ ಎಂದು ವಿದ್ವಾಂಸರು ಕರೆದಿದ್ದಾರೆ—

ಇದಮುತ್ತಮಮತಿಶಯಿನೀ ವ್ಯಂಗ್ಯೇ ವಾಚ್ಯಾತ್—
ಧ್ವನಿರ್ಬುಧೈಃ ಕಥಿತಃ । (ಕಾ. ಪ್ರ. ೧–೪)

ಪ್ರಯೋಜನ ಸಹಿತವಾದ ಲಕ್ಷಣೆಗಳಿರುವ ಕಡೆಗಳಲ್ಲೆಲ್ಲಾ ವ್ಯಂಗ್ಯಾರ್ಥವು ಇರುವುದು. ಆದರೆ ವ್ಯಂಗ್ಯಾರ್ಥವಿರುವ ಕಡೆಗಳಲ್ಲೆಲ್ಲಾ ಲಕ್ಷಣ ಇರಬೇಕಾಗಿಲ್ಲ. ಲಕ್ಷಣಾವೃತ್ತಿಗೆ ಅವಕಾಶವೇ ಇಲ್ಲದೆ ಶಬ್ದದ ಅಭಿಧಾವ್ಯಾಪಾರದಿಂದ ಹೊರಡುವ ವಾಚ್ಯಾರ್ಥವು ಸಂಗತವಾಗಿರುವ ಕಡೆಗಳಲ್ಲೂ ವ್ಯಂಗ್ಯಾರ್ಥವು ಸ್ಫುರಿಸಬಹುದು.

ಯಸ್ಯ ಪ್ರತೀತಿಮಾಧಾತುಂ ಲಕ್ಷಣಾ ಸಮುಪಾಸತೇ ।
ಫಲೇ ಶಬ್ದೈಕಗಮ್ಯೇತ್ರ ವ್ಯಂಜನಾನ್ನಾಪರಾ ಕ್ರಿಯಾ ॥
ಅನೇಕಾರ್ಥಸ್ಯ ಶಬ್ದಸ್ಯ ವಾಚಕತ್ವೇ ನಿಯಂತ್ರಿತೇ ॥
ಸಂಯೋಗಾದ್ಯೈಃ ಅವಾಚ್ಯಾರ್ಥಧೀಕೃದ್ವ್ಯಾಪೃತಿರಂಜನಾ ॥ (ಕಾ. ಪ್ರ. ೨–೧೪, ೧೯)

ಉಪಸಂಹಾರ: ಅಲಂಕಾರಶಾಸ್ತ್ರದಲ್ಲಿ ಅಭಿಧಾವೃತ್ತಿ, ಲಕ್ಷಣಾವೃತ್ತಿ, (ಗೌಣೀವೃತ್ತಿ), ವ್ಯಂಜನಾವೃತ್ತಿಗಳೆಂದು ಮೂರು ವಿಧ ಶಬ್ದವ್ಯಾಪಾರಗಳನ್ನು ಗುರುತಿಸಿದ್ದಾರೆ. ಇವುಗಳಿಂದ ಹೊರಡುವ ಅರ್ಥಗಳಿಗೆ ಕ್ರಮವಾಗಿ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳೆಂದು ಕರೆದಿದ್ದಾರೆ. ಸಂಕೇತಾರ್ಥವೇ ವಾಚ್ಯಾರ್ಥ (ಮುಖ್ಯಾರ್ಥ ಅಥವಾ ಅಭಿಧೇಯಾರ್ಥ), ಇದನ್ನು ತಿಳಿಸುವ ಶಬ್ದಕ್ಕೆ ವಾಚಕ (ಅಭಿಧಾ) ಎಂದು ಸಂಜ್ಞೆ. ವಾಚ್ಯಾರ್ಥಕ್ಕೆ ಬಾಧೆಯುಂಟಾದಾಗ ಮಾತ್ರ ಲಕ್ಷಣಾ ವೃತ್ತಿಯು ಪ್ರವೃತ್ತಿತವಾಗಿ ಲಕ್ಷ್ಯಾರ್ಥವು ಗೋಚರಿಸುತ್ತದೆ. ಇದನ್ನು ತಿಳಿಸುವ ಶಬ್ದಕ್ಕೆ ಲಕ್ಷಕ ಅಥವಾ ಲಾಕ್ಷಣಿಕ ಎಂದು ಹೆಸರು. ವ್ಯಂಗ್ಯಾರ್ಥವನ್ನು ಕೆಲವು ವೇಳೆ ಶಬ್ದವೂ ಕೆಲವು ವೇಳೆ ಅರ್ಥವೂ ಸೂಚಿಸುತ್ತವೆ. ವ್ಯಂಗ್ಯಾರ್ಥವನ್ನು ಸೂಚಿಸುವ ವ್ಯಂಜನಾವ್ಯಾಪಾರವುಳ್ಳದ್ದೆಲ್ಲಾ (ಶಬ್ದವಾಗಲೀ ಅಥವಾ ಅರ್ಥವಾಗಲಿ) ವ್ಯಂಜಕವೆಂದೇ ವಿದ್ವಾಂಸರು ಹೇಳುತ್ತಾರೆ. ಈ ವ್ಯಂಜಕದಿಂದ ಹೊರಡುವ ಅರ್ಥವೇ ವ್ಯಂಗ್ಯಾರ್ಥ. ಕಾವ್ಯದಲ್ಲಿ ಇದಕ್ಕೆ ವಿಶೇಷ ಅಥವಾ ಪ್ರಧಾನ ಸ್ಥಾನ ದೊರೆತರೆ 'ಧ್ವನಿ' ಎನಿಸಲ್ಪಡುತ್ತದೆ. ಹೀಗೆ ಕಾವ್ಯಪ್ರಕಾಶದಲ್ಲಿ ಶಬ್ದ (ವಾಚಕ, ಲಕ್ಷಕ, ವ್ಯಂಜಕ) ಮತ್ತು ಅರ್ಥ (ವಾಚ್ಯ, ಲಕ್ಷ್ಯ, ವ್ಯಂಗ್ಯ)ಗಳ ಸ್ವರೂಪ ನಿರ್ದೇಶವಾಗಿರುತ್ತದೆ.

---

1. ಕವಿಯ ಇಂಗಿತವನ್ನು ಅರ್ಥಮಾಡಿಕೊಳ್ಳುವವನೇ ಸಹೃದಯು. ಕಾವ್ಯವನ್ನು ಪರಿಶೀಲಿಸುವಾಗ ವರ್ಣಿತವಿಷಯದಲ್ಲಿ ತಲ್ಲೀನನಾಗುವ ಅರ್ಹತೆಯುಳ್ಳ ನಿರ್ಮಲ ಮನಸ್ಸಿನ ವ್ಯಕ್ತಿಯೇ ಸಹೃದಯ ಎಂದು ಅಭಿನವಗುಪ್ತನು ಸ್ಪಷ್ಟಪಡಿಸಿದ್ದಾನೆ. "ಯೇಷಾಂ ಕಾವ್ಯಾನು ಶೀಲನವಶಾತ್ ವಿಶದೀಭೂತೇ ಮನೋ ಮುಕುರೇ ವರ್ಣನೀಯ ತನ್ಮಯೀ ಭವನಯೋಗ್ಯತಾ ತೇ ಸಹೃದಯಾಃ । (ಧ್ವನ್ಯಾಲೋಕ–ಮೊದಲ ಶ್ಲೋಕದ ವ್ಯಾಖ್ಯಾನ)

ಎಚ್. ಎಸ್. ಹರಿಶಂಕರ್

ತಿರುಮಲಾರ್ಯನ ಚಿಕದೇವರಾಜ ವಿಜಯ

ಚಿಕದೇವರಾಜ ಒಡೆಯರ ಆಸ್ಥಾನ ಕವಿಯಾಗಿ, ಪಂಡಿತನಾಗಿ, ಆ ಕಾಲದ ಸಾಹಿತ್ಯಕ್ಕೆ ತನ್ನ ಪಾಂಡಿತ್ಯಪ್ರತಿಭೆಯಿಂದ ಒಂದು ಹೊಸ ಹಾದಿಯನ್ನು ತಿರುಮಲಾರ್ಯ ಹಾಕಿಕೊಟ್ಟನು. ೧೦ನೆಯ ಶತಮಾನದಲ್ಲಿ ನವಚೇತನಗೊಂಡು ವಿರಾಜಮಾನವಾಗಿ ಬೆಳಗಿದ್ದ ಚಂಪೂ ಸಂಪ್ರದಾಯ, ಕಾಲಕ್ರಮದಲ್ಲಿ ತನ್ನ ಸತ್ವವನ್ನು ನೀಗಿಕೊಂಡಿತು. ರಗಳೆ, ವಚನ, ಷಟ್ಪದಿ, ಮೊದಲಾದ ಇತರ ಸಾಹಿತ್ಯ ಪ್ರಕಾರಗಳು ನವ ವೈವಿಧ್ಯದೊಂದಿಗೆ ಕನ್ನಡದಲ್ಲಿ ಬಳಕೆಗೆ ಬಂದವು. ಚಂಪೂ ಸಂಪ್ರದಾಯ ಈಗ ಹಿಂದೆ ಸರಿಯಿತು. ಆದರೆ ಚಿಕದೇವರಾಜನ ಕಾಲದಲ್ಲಿ ಮತ್ತೆ ಚಂಪುವಿಗೆ ಪ್ರಾಶಸ್ತ್ಯ ದೊರಕಿ ಅದು ತಲೆ ಎತ್ತಿ ನಿಲ್ಲುವಂತಾಯಿತು. ಹೀಗೆ ಆ ಸಾಹಿತ್ಯ ಪ್ರಕಾರ ತಲೆ ಎತ್ತಿ ನಿಲ್ಲಲು ಶ್ರಮಿಸುವಂತೆ ಮಾಡಿದ ಸ್ತುತ್ಯಕಾರ್ಯ ಹೆಚ್ಚಾಗಿ ತಿರುಮಲಾರ್ಯ ಮತ್ತು ಚಿಕುಪಾಧ್ಯಾಯರಿಗೆ ಸಲ್ಲಬೇಕಾಗುತ್ತದೆ.

ತಿರುಮಲಾರ್ಯನ ಕೃತಿಗಳು ಬೆರಳೆಣಿಕೆಗೆ ಸಿಗುವಷ್ಟು ಮಾತ್ರವಿದ್ದರೂ ಸತ್ವ ಪೂರ್ಣವಾಗಿವೆ. 'ಚಿಕದೇವರಾಯ ವಂಶಾವಳಿ', 'ಚಿಕದೇವರಾಜ ವಿಜಯ', 'ಅಪ್ರತಿಮ ವೀರ ಚರಿತ' ಮತ್ತು 'ಚಿಕದೇವರಾಜ ಶತಕ' ಇವನ ಕೃತಿಗಳು. 'ಚಿಕದೇವರಾಜ ಶತಕ' ನಮಗೆ ದೊರಕಿಲ್ಲವಾದರೂ ಅವನ ಇತರ ಕೃತಿಗಳನ್ನು ಅಭ್ಯಸಿಸಿದ ನಮಗೆ ಅಲ್ಲಿ ಚಿಕದೇವನ ಸ್ತುತಿಯನ್ನುಳಿದರೆ ಮತ್ತೆ ಬೇರೇನೂ ಇಲ್ಲ ಎಂಬ ಅಂಶವನ್ನು ಮನಗಾಣಬಹುದು. ಇವನ ಕೈವಾಡ 'ಚಿಕದೇವರಾಜರ' ಕೃತಿಗಳಲ್ಲಿಯೂ ಕಾಣಬರುತ್ತದೆ ಒಡೆಯರ 'ಗೀತಗೋಪಾಲ' ಮತ್ತು 'ಬಿನ್ನಪ'ಗಳಲ್ಲಿ ಇವನ ಕೃತಿಗಳಿಂದ ತೆಗೆದ ಪದ್ಯಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಕ್ರಿ.ಶ. ೧೬೪೫ರಲ್ಲಿ ಈತನು ಶ್ರೀರಂಗಪಟ್ಟಣದಲ್ಲಿ ಜನಿಸಿದನು. ತನ್ನ ೬೧ನೆಯ ವಯಸ್ಸಿನಲ್ಲಿ ಅಂದರೆ ಕ್ರಿ.ಶ. ೧೭೦೬ ರಲ್ಲಿ ಈತ ಮೃತನಾದಂತೆ ತೋರುತ್ತದೆ. ಈತನು ಶ್ರೀವೈಷ್ಣವ ಕವಿ, ಕೌಶಿಕ ಗೋತ್ರದವನು. ತಂದೆ ಅಳಸಿಂಗರಾರ್ಯ ಮತ್ತು ತಾಯಿ ಸಿಂಗಮ್ಮ. ಅಳಸಿಂಗರಾರ್ಯರು ಚಿಕದೇವರಾಜ ಒಡೆಯರ ತಂದೆ ದೇವರಾಜ ನಿಗೆ ಅಚ್ಚುಮೆಚ್ಚಿನವನಾಗಿದ್ದನಲ್ಲದೆ, ಆತನ ಆಸ್ಥಾನದಲ್ಲಿ ಪೌರಾಣೀಕನೂ

ಆಗಿದ್ದನು. ಆಳಸಿಂಗರಾರ್ಯ ಕ್ಷಮಾಶೀಲ, ಶಾಂತಿರಸದಿಂದ ತುಂಬಿ ಜ್ಞಾನ ಭಂಡಾರವನ್ನು ಬೆಳಸಿಕೊಂಡು ಸದ್ಭಕ್ತಿಯನ್ನು ಮೆರೆದ ಮಹಾವ್ಯಕ್ತಿ[1] ಎಂದು ತಿರುಮಲಾರ್ಯನು ಕೊಂಡಾಡಿದ್ದಾನೆ. ಚಿಕದೇವರಾಜನ ಆಸ್ಥಾನದಲ್ಲಿ ಪಂಡಿತನಾಗಿ ಮೆರೆದು ಕನ್ನಡ ಸಾಹಿತ್ಯದಲ್ಲಿಯೇ ಮೊಟ್ಟಮೊದಲು ಉಪಲಬ್ಧವಾದ ಕನ್ನಡ ನಾಟಕ ಕರ್ತೃವಾದ ಸಿಂಗರಾರ್ಯನು ಈತನ ಸೋದರ. ಸಿಂಗರಾರ್ಯನು[2] ತನ್ನ 'ಮಿತ್ರವಿಂದಾ ಗೋವಿಂದ'ದಲ್ಲಿ ಈತನ ಗುಣ ಪ್ರಶಂಸೆ ಮಾಡಿರುವುದು ಸಮಂಜಸವೆಂದು ತೋರುತ್ತದೆ. ಬಾಲ್ಯದಿಂದಲೂ ತಿರುಮಲಾರ್ಯನು ಚಿಕದೇವರಾಜನೊಡನೆಯೇ ಬೆಳೆದು ಅವನ ಆಸ್ಥಾನದಲ್ಲಿ ಪಂಡಿತನಾಗಿ ಅನಂತರ ಅವನ ಮಂತ್ರಿಯಾದನು. "ಕೆಲವು ಕಾಲ ಮಧುರೆಯ ನಾಯಕನ ಹೆಂಡತಿ ಮಂಗಮ್ಮನ ಬಳಿಯಲ್ಲಿಯೂ ಮಂತ್ರಿಯಾಗಿದ್ದಂತೆ ತಿಳಿಯುತ್ತದೆ"[3] ಎಂದು ಕವಿಚರಿತಕಾರರು ಅಭಿಪ್ರಾಯಪಡುತ್ತಾರೆ. ಇವನ ಸಮಕಾಲೀನ ಶಾಸನವೊಂದು[4] ತಿರುಮಲಾರ್ಯನನ್ನು 'ಚಿಕದೇವರಾಜನ ಆಸ್ಥಾನದ ಬೃಹಸ್ಪತಿ' ಎಂದು ಹೊಗಳುತ್ತದೆ. ಹೀಗೆ ಈತನು ಪಂಡಿತಮಾನ್ಯನು ಮಾತ್ರವೇ ಅಲ್ಲದೆ ರಾಜಮಾನ್ಯನೂ ಆಗಿದ್ದನು. ಅಷ್ಟೇ ಅಲ್ಲ, ರಾಜನ ಆಂತರಿಕ ವ್ಯವಹಾರಗಳಲ್ಲಿಯೂ ಇವನ ಕೈವಾಡವಿದ್ದುದು ಸುಸ್ಪಷ್ಟ. ಶ್ರೀವೈಷ್ಣವ ಮತಾನುಯಾಯಿಯಾಗಿದ್ದರಿಂದ ದೊರೆಗೆ ಅದರಲ್ಲಿ ಆಸಕ್ತಿಯನ್ನು ಹುಟ್ಟಿಸಿ ಉಳಿದ ಅರಸು ಮನೆತನದವರನ್ನೂ ಶ್ರೀವೈಷ್ಣವ ಧರ್ಮಕ್ಕೆ ಮತಾಂತರ ಹೊಂದುವಂತೆ ರಾಜನ ಮೂಲಕ ಪ್ರೇರೇಪಿಸುತ್ತಾನೆ. ಮೊದಮೊದಲು ಇವನ ಅಭಿಪ್ರಾಯದಂತೆ ಅರಸು ಮನೆತನದವರು ಒಪ್ಪಿದರೂ ಕೂಡ ಕೊನೆಗೆ ರಾಜನ ಅಪ್ಪಣೆಯನ್ನು ಪಡೆದು ಅವರು ತಮ್ಮ ತಮ್ಮ ಧರ್ಮವನ್ನೇ ಮುಂದು ವರಿಸಿಕೊಂಡು ಹೋಗುತ್ತಾರೆ. ತಿರುಮಲಾರ್ಯನು ದೊರೆಗೆ ಈ ರೀತಿ ಬಿನ್ನವಿಸಿಕೊಳ್ಳುತ್ತಾನೆ "ಸ್ವಾಮಿಯವರ ನಾಮತೀರ್ಥದ ವೇಳೆಯಲ್ಲಿ ಪುರೋಹಿತರು ಮುಂತಾದ ಸ್ಮಾರ್ತ ವಿದ್ವಾಂಸರುಗಳೂ ಅರಮನೆಗೆ ನಾಮವನ್ನಿಟ್ಟುಕೊಂಡು ಬರಬೇಕೆಂಬುದಾಗಿಯೂ, ಹದಿಮೂರು ಮನೆತನದ ಅರಸುಗಳು ನಾಳೆ ಪ್ರಥಮೈಕಾದಶೀ ದಿವಸ ಸ್ವಾಮಿಯವರ ಆಚಾರ್ಯರ ಕಡೆಯಿಂದಲೇ ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂತ್ರೋಪಾಸನೆ, ನಾರಾಯಣಪೂಜೆ ಎಂಬ ಪಂಚಸಂಸ್ಕಾರಗಳನ್ನೂ ಹೊಂದಿ ಅನ್ಯದೇವತಾ ಪೂಜೆಯನ್ನು ಮಾಡದೆ ವೈಷ್ಣವ ದೀಕ್ಷೆಯನ್ನಂಗೀಕರಿಸಿದರೇ ಸ್ವಾಮಿಯವರ ಬಂಧುತ್ವಕ್ಕೆ ಯೋಗ್ಯರು, ಹಾಗಿಲ್ಲದ

1. ಚಿಕದೇವರಾಜ ವಿಜಯ 3–70
2. ಸಿಂಗರಾರ್ಯ : ಮಿತ್ರವಿಂದ ಗೋವಿಂದ. "ಪಿರಿದುಂ.........ಕರಮಿಾಸಾಹಿತ್ಯದೊಳ್ ಬಿತ್ತರಿಪೊಡೆ ರಸಮಂ ತಿರುಮಲಾರ್ಯಂಗೆಸಲ್ಗುಂ"
3. ಆರ್. ನರಸಿಂಹಾಚಾರ್ : ಕರ್ನಾಟಕ ಕವಿಚರಿತೆ, ಪುಟ 461
4. *Epigraphia Carnatica* Vol. iv (2) Ch 92.

ವರು ಬಂಧುಗಳಾಗತಕ್ಕವರಲ್ಲ ಎಂಬುದಾಗಿಯೂ, ಸ್ವಾಮಿಯವರ ಸೇವೆಯನ್ನು ಮಾಡುವ ಊಳಿಗದವರಲ್ಲಿ ಕೆಲವರು ಚಕ್ರಾಂಕನವನ್ನು ಮಾಡಿಸಿಕೊಳ್ಳುವಂತೆಯೂ ಅಪ್ಪಣೆ ಆಗಬೇಕು.''[1] ಹೀಗೆ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದ್ದ ತಿರುಮಲಾರ್ಯನು ಸಾಕಷ್ಟು ಪ್ರಭಾವಿತ ವ್ಯಕ್ತಿಯಾಗಿದ್ದನೆನ್ನುವುದು ವ್ಯಕ್ತವಾಗುತ್ತದೆ [2] 'ತಿರುಮಲಾರ್ಯಂ ವಿದ್ಯಾವಿಶಾರದನೆನಿಸಿದಂ', ಎಂದು ದೇವಚಂದ್ರನು ತನ್ನ ರಾಜಾವಳೀ ಕಥೆಯಲ್ಲಿ ಸ್ತುತಿಸಿದ್ದಾನೆ.

ಚಿಕದೇವರಾಜವಿಜಯಂ

ಈತನ ಕೃತಿಗಳಲ್ಲಿ 'ಚಿಕದೇವರಾಜ ವಿಜಯವು' ಚಂಪುವಿನಲ್ಲಿ ರಚಿತವಾಗಿದ್ದು ಆರು ಆಶ್ವಾಸಗಳನ್ನು ಹೊಂದಿದೆ. ಮಧ್ಯೆಮಧ್ಯೆ ಕೆಲವು ತ್ರಿಪದಿಗಳೂ, ಸಾಂಗತ್ಯಗಳೂ, ಹಾಡುಗಳೂ ಇವೆ. ಇದು ಅಪೂರ್ಣವಾದ ಕಾವ್ಯ. ಚಿಕದೇವರಾಜನವರೆವಿಗೆ ಸಂಕ್ಷೇಪವಾಗಿ ಮೈಸೂರರಸರ ಚರಿತ್ರೆಯನ್ನು ತಿರುಮಲಾರ್ಯ ನಿರೂಪಿಸಿಕೊಂಡು ಬಂದಿದ್ದಾನೆ. ಚಿಕದೇವರಾಜನ ದಿಗ್ವಿಜಯವೇ ಮೊದಲಾದ ಹಲವಾರು ಚಾರಿತ್ರಿಕ ಅಂಶಗಳನ್ನು ಈ ಕಾವ್ಯ ಒಳಗೊಂಡಿದ್ದು, ಮೈಸೂರು ಅರಸರ ಚರಿತ್ರೆಯನ್ನು ಸಂಕ್ಷೇಪವಾಗಿ ನಿರೂಪಿಸುತ್ತದೆ. ತಿರುಮಲಾರ್ಯನು ಇಲ್ಲಿ ವಿವರಿಸಿರುವ ಚರಿತ್ರಾಂಶಗಳು ಬಹುಮಟ್ಟಿಗೆ ಸತ್ಯಕ್ಕೆ ಹತ್ತಿರವಾದ ಅಂಶಗಳೆಂದು ನಂಬಬಹುದು. ಈಗ ನಾವು ಚಿಕದೇವರಾಜವಿಜಯದ ವಸ್ತುವಿನತ್ತ ದೃಷ್ಟಿಹರಿಸಬಹುದು.

"ಆರಂಭದಲ್ಲಿ ಚಿಕದೇವನ ಸ್ತುತಿಯಿಂದ ಅನಂತರ ಕ್ರಮವಾಗಿ ವಿಷ್ಣು, ಲಕ್ಷ್ಮಿ, ಸುದರ್ಶನ, ಪಾಂಚಜನ್ಯ, ಸೂರಿಗಳು ಮತ್ತು ದ್ರಾವಿಡ ಭಾಷೆಯಲ್ಲಿ ಪ್ರಸಿದ್ಧರಾಗಿರುವ ಹನ್ನೆರಡು ಜನ ದಿವ್ಯಸೂರಿಗಳ ಸ್ತುತಿಯನ್ನು ತಿರುಮಲಾರ್ಯ ಮಾಡುತ್ತಾನೆ. ದಿವ್ಯಸೂರಿಗಳನ್ನು ಕುರಿತ ತನ್ನ ಭಕ್ತಿಯನ್ನು ಹೀಗೆ ವರ್ಣಿಸುತ್ತಾನೆ. 'ತೊಲಗಿಸಿ ಕಾಮಮಂ ತುಳಿದು ಕೋಪಮನೋಡಿಸಿ ಲೋಭಮಂ ಶಮಂ। ನೆಲೆಗೊಳಿಸಂದು ಮೋಹಮದಮತ್ಸರಮೊಂದದ ದಿವ್ಯಸೂರಿಗಳ್'' (೧-೯). ಮುಂದಿನ 9 ಪದ್ಯಗಳಲ್ಲಿ 'ಕವಿತಾಪದ್ಧತಿ' ಹರಡಿಕೊಂಡು ಬಂದಿದೆ. ತನ್ನ ಪ್ರಕೃತ ಗ್ರಂಥದ ಬಗ್ಗೆ ಹೇಳಿಕೊಳ್ಳುವ ಈ ಮಾತುಗಳು ಗಮನಾರ್ಹ. 'ಸಕ್ಕದಗನ್ನಡವೆರಡಱೊಳಿಕ್ಕಸರಂಗೊಳ್ವುದೋಜೆಗಬ್ಬಂ ರಸದಿಂ । ದುಕ್ಕಳಿಸಿ ಪಾಯ್ವುವೆರ್ದೆಗಱೆಗಳ್ಕುಮೆ ತಡೆಪಳ್ಳದಿಂಟೆ ಕೆಱುದೊಱೆಗೆಱೆಗಳ್' (೧-೧೫). ಸಂಸ್ಕೃತ ಮತ್ತು ಕನ್ನಡದಿಂದ ಕೂಡಿದ ಈ ಓಜೆಗಬ್ಬ ಸೊಗಸನ್ನು ಪಡೆದಿದೆ.

---

1. Annals of the Mysore Royal family. pp. 132–133.
2. 'ಗೀತಗೋಪಾಲ'ದಲ್ಲಿ (ಪುಟ 50) 'ಕರ್ಮದ ಬಿಱುಗಂಟ ಕಳೆಯಿರೊ ನಿಮ್ಮ । ದುರ್ಮತಿ ಧೂಳಿಯ ತೊಳೆಯಿರೊ ಮಿಗೆ ॥ ನಿರ್ಮಲ ಚಿತ್ತದಿ ನೇಮವಿಡಿದು ನಮ್ಮ ತಿರ್ಮಲಾರ್ಯರಂತೆ ಸ್ಥಿರವಾಗಿ ಬಾಱಿರೋ', ಎಂದು ತಿರುಮಲಾರ್ಯನ ಸ್ತುತಿ ಇದೆ.

ಮುಂದಿನ ಏಳು ಪದ್ಯಗಳಲ್ಲಿ ಕವಿ 'ಸುಕವಿತಾ ಪದ್ಧತಿ'ಯನ್ನು ವರ್ಣಿಸುತ್ತಾನೆ. 'ಶುಕವಾಲ್ಮೀಕಿವ್ಯಾಸರ ಸುಕವಿತೆಯಿಂದೆನೆ ಕವೀಂದ್ರರೇನಗ್ಗಳರೋ', (೧-೨೦) ಎಂಬಲ್ಲಿ ಕವಿಗೆ ವ್ಯಾಸ ವಾಲ್ಮೀಕಿಯರ ಮೇಲಿರುವ ಭಕ್ತಿ, ಗೌರವಗಳು ಅಭಿವ್ಯಕ್ತವಾಗುತ್ತದೆ. ವ್ಯಾಸ ವಾಲ್ಮೀಕಿಯರ ಹೆಸರನ್ನು ಸ್ಮರಿಸುವಲ್ಲಿ ಕವಿ ಕನ್ನಡ ಕವಿಗಳನ್ನು ಬಿಟ್ಟಿರುವುದು ಸೋಜಿಗವೆನ್ನಿಸಬಹುದಾದರೂ ಅವನ ಒಲವು ಸಂಸ್ಕೃತ ಮಹಾ ಕವಿಗಳ ಕಡೆಗೇ ಹೆಚ್ಚು ವಾಲಿರುವುದು ವ್ಯಕ್ತವಾಗುತ್ತದೆ. ಸುಕವಿ ಪಟ್ಟ ಎಲ್ಲರಿಗೂ ದುರ್ಲಭ. ಸಾಧ್ಯವಲ್ಲದ ವಿಷಯಗಳನ್ನು ಕಾವ್ಯದಲ್ಲಿ ತಂದು ಸಾಧ್ಯವೆನಿಸಿ ತನ್ನ ಕವಿತಾ ನಿರೂಪಣೆಯಿಂದ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವವನು ಸೃಷ್ಟಿ ರಚನೆಯಲ್ಲಿ ಬ್ರಹ್ಮನನ್ನು ಹೋಲುತ್ತಾನೆ. ತಿರುಮಲಾರ್ಯನ ಈ ಪದ್ಯ ನಿಜಕ್ಕೂ ರಮಣೀಯವಾಗಿದೆ. 'ಕಡುಪಿಂ ಕೂರಾನೆ ಕಾಟ್ಕಿರ್ಚಡವಿ ಬಱಿಸಿಡಿಲ್ಪಳ್ಳಿಮಿಂಚೆಂಬಿನೆಲ್ಲಂ | ಪಡೆಗುಂ ನೋಟ್ಪರ್ಗೆ ಮೇಣುಬ್ಬಿಗಮೊದವನವೇ ಮತ್ತ ಮೊಳ್ಗಬ್ಬದೊಳ್ಪಂ ದೊಡನೊಳ್ಪಂ ಪೆತ್ತ ಮಾಟ್ಕಿಂ ಸಹೃದಯ ಹೃದಯಂ ಹ್ಲಾದಮಂ ನಾಡೆಯೆಂತಾ| ದೊಡಮಳ್ಕಿಂ ಕಬ್ಬಿಗರ್ತಾಮಘಟಿತಘಟನಾ ನೂತನ ಬ್ರಹ್ಮರಲ್ತೇ,'[1].

ಸತ್ಕವಿಗಳ ಪ್ರಶಂಸೆಯನ್ನು ಕುರಿತ ಐದು ಪದ್ಯಗಳು ಮುಂದುವರಿದಿವೆ, ಅನಂತರದಲ್ಲಿ. ಅಜ್ಞ ಪದ್ಧತಿ, ಪಿಶುನನಿಂದೆ, ಲೋಭಿನಿಂದೆ, ದುರ್ಜನ ಮತ್ತು ಸಜ್ಜನ ಪದ್ಧತಿ ಮೊದಲಾದ ಸಂಪ್ರದಾಯಗಳನ್ನು ಕ್ರಮವಾಗಿ ಹತ್ತಾರು ಪದ್ಯಗಳಲ್ಲಿ ಕವಿ ವರ್ಣಿಸಿ ಅನಂತರದಲ್ಲಿ ಚಿಕದೇವರಾಜ ವಿಜಯಕ್ಕೆ ಕಥಾ ಪ್ರಸ್ತಾಪವನ್ನು ಮಾಡುತ್ತಾನೆ. ತನ್ನ ಕೃತಿಗೆ ಕರ್ತೃವಾದ ಚಿಕ್ಕದೇವನನ್ನು ಕುರಿತು 'ಕೃತಿಪತಿ ಚಿಕದೇವೇಂದ್ರಂ | ಕೃತಿ ಚಿಕದೇವೇಂದ್ರ ವಿಜಯವಿಾ ಕೃತಿ ವೇಟ್ಟಂ | ಕೃತಮತಿಯವನೊಲ್ಮೆವುಮಾ | ಕೃತಿ ವೆತ್ತವೊಲೆಸೆವ ಸುಕೃತಿ ತಿರುಮಲೆಯಾರ್ಯಂ' | ಎಂದು (೧–೫೨) ಹೊಗಳಿ ಕೊಂಡಾಡಿದ್ದಾನೆ. ಸಾಮಾನ್ಯವಾಗಿ ತಮ್ಮ ಕೃತಿಗಳ ಮಹತ್ವವನ್ನು ಕವಿಗಳು ಹೇಳಿಕೊಳ್ಳುವಂತೆ, ಇಲ್ಲಿಯೂ ತಿರುಮಲಾರ್ಯ ತನ್ನ ಪ್ರಶಂಸೆಯನ್ನು ಮಾಡಿಕೊಂಡಿರುವಲ್ಲಿ ಸೋಜಿಗವೇನಿಲ್ಲ.

ಒಂದನೆಯ ಆಶ್ವಾಸದ ೫೯ನೆಯ ಪದ್ಯದಿಂದ 'ಚಿಕ ದೇವರಾಜ ವಿಜಯ'ವು ಪ್ರಾರಂಭವಾಗುತ್ತದೆ. ಮೊದಮೊದಲ ಪದ್ಯಗಳಲ್ಲಿ ಅಭಿವ್ಯಕ್ತವಾಗಿರುವ ಚಿಕ್ಕದೇವನ ವಂಶಜರ ಚರಿತ್ರೆ ಕೇವಲ ಕಾಲ್ಪನಿಕವಾದುದು. ಇಲ್ಲಿ ಚರಿತ್ರಾಂಶಕ್ಕಿಂತ ಹೆಚ್ಚಾಗಿ ಪೌರಾಣಿಕ ಅಂಶವನ್ನು ಕಾಣಬಹುದು. ಮೈಸೂರು ದೊರೆಗಳ ಮೂಲ ಪುರುಷ ಯದುರಾಯನವರೆವಿಗೆ ಬರುವ ಕಥೆ ಹೆಚ್ಚು ಕಡಿಮೆ ಪೌರಾಣಿಕ ಹಿನ್ನೆಲೆಯಿಂದ ಕೂಡಿದುದಾಗಿಯೋ ಇಲ್ಲವೆ ಕಲ್ಪನೆಯ ಅಂಶವೋ ಆಗಿರಬೇಕು. ಮೊದಲು ಕವಿ ಅತ್ರಿಯನ್ನು ವರ್ಣಿಸುತ್ತಾನೆ. 'ಬೊಮ್ಮನ ಮನದಿಂದಂ ಪೊಸಬೊಮ್ಮರ್'

---

1. ಚಿಕದೇವರಾಯವಿಜಯ ೧—೨೪.

ಉದಿಸಿದಂತೆ ಅತ್ರಿಯು ಜನ್ಮವಾಗುತ್ತದೆ. ಅತ್ರಿಯಾದ ಮೇಲೆ ನಂದನ. ಅತನು ಎಲ್ಲರ ಕಣ್ಣುಗಳಿಗೂ ನಂದನವನ್ನುಂಟುಮಾಡುವ ನಂದನ ಅತನೂ ಸಹ ವೈಷ್ಣವ ಭಕ್ತ; ಶ್ರೀರಾಮಾನುಜರಂತೆ ವಿರಾಜಿಸುವವನು. ಇಂತಹವನಾದ ಮೇಲೆ ಆಯುಃ ಕುಮಾರನ ಜನನವಾಗುತ್ತದೆ. ಆಯುವಿನಿಂದ ನಹುಷ, ನಹುಷನಾದ ಮೇಲೆ ಯಯಾತಿ, ಹೀಗೆ ಇವರ ವಂಶ ಮುಂದುವರಿಯುತ್ತದೆ. ಮುಂದೆ ಯದುರಾಯರು ಪ್ರಸಿದ್ಧಿಗೆ ಬರುತ್ತಾರೆ. ಒಮ್ಮೆ ಇವರು 'ಕಡಲೊಡೆಯನ ಬೀಡಿನ ಪಡಿನೆಬಿಲಂತೆ ಕಡುಬೆಡಂಗುವಡೆವ ದ್ವಾರಾವತೀಪುರಮಂ ಪರಿಪಾಲಿಸುತ್ತುಮಿರ್ದು ತಾಂ ತಮ್ಮ ಕುಲದೇವತೆಯುಂ ಕುಲಧನಮುಮಪ್ಪ ನಾರಾಯಣನ ಚರಣ ದ್ವಂದ್ವ ಸಂದರ್ಶನೋತ್ಕಂಠತೆ' (೧-೫೯) ಯಿಂದ ಭೂವೈಕುಂಠವೆಂದು ಪ್ರಸಿದ್ಧಿಪಡೆದಿರುವ ಮೇಲುಕೋಟೆಗೆ ಬರುತ್ತಾರೆ. ದ್ರಾವಿಡ ಸಂಸ್ಕೃತ ಭಾಷೆಗಳಿಗೆ ಮೊದಲಿಂದಲೂ ಪ್ರೋತ್ಸಾಹಕೊಟ್ಟ ಸ್ಥಳವದು. ತಂಗಾಳಿ, ಕೋಗಿಲೆ, ಇಮ್ಮಾವು, ಗಿಳಿಗಳು ಮೊದಲಾದ ಪರಿಸರಗಳನ್ನೊಳಗೊಂಡ ಸುಂದರವಾದ ಯಾದವಗಿರಿಗೆ ದಕ್ಷಿಣ ಭಾಗದಲ್ಲಿರುವ ಮಹಿಶೂರ ನಗರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಯಾದವರು ರಾಜ್ಯವನ್ನಾಳುತ್ತಿದ್ದರು. ಇಂತಹ ಯಾದವರು--'ಎಳಮೆಯನೋದಿನಿಂ ಬಟಿಕೆ ದಿಗ್ವಿಜಯ ಕ್ರಮದಿಂ ಯುವತ್ವಮಂ। ಫಳ ವಿಷಯಾಭಿಲಾಷ ವಿದುರಾನಘ ದಿವ್ಯ ತಪಸ್ಸಮಾಧಿನಿ॥ ರ್ಮಳ ಮತಿಯಿಂದೆ ವಾರ್ಧಿಕಮನೀಪರಿ' (೧--೯೪) ಯಾಗಿ ಕಳೆದ ಇವರ ಗುಣಗಳ ಮುಂದೆ ಸರಿದೂಗಬಲ್ಲವರು ಯಾರಿದ್ದಾರೆ ಎಂದು ಕವಿ ಪ್ರಶ್ನಿಸುತ್ತಾನೆ. ಒಡೆಯರ ಮೂಲ ಪುರುಷರ ವಿಷಯವಾಗಿ ಇನ್ನೂ ಹೆಚ್ಚಿನ ಸಂಗತಿಗಳು ತಿಳಿಯುವುದಿಲ್ಲ. ಮೊದಲನೆಯ ಆಶ್ವಾಸದಲ್ಲಿ ಒಡೆಯರ ಮೂಲ ಪುರುಷರ ವಿಷಯವಾಗಿ ತನಗೆ ತಿಳಿದ ವಿಷಯಗಳನ್ನು—ಆ ಕಾಲಕ್ಕೆ ಅವನಿಗೆ ದೊರೆತಿರ ಬಹುದಾದ ವಿಷಯಗಳನ್ನು—ಸಂಗ್ರಹಿಸಿ ಅವರ ಗುಣವರ್ಣನೆಯನ್ನು ತಿರುಮಲಾರ್ಯ ಮಾಡಿಕೊಟ್ಟಿದ್ದಾನೆ.

ಬೆಟ್ಟದ ಚಾಮರಾಜ ಒಡೆಯನು ಯದುರಾಯನ ಅನಂತರ ಪಟ್ಟಕ್ಕೆ ಬಂದನು. 'ಅಂತೆಂಬರ ಗಂಡ' ಎಂಬ ಬಿರುದು ಇವನಿಗಿದ್ದಿತು. ತಿರುಮಲಾರ್ಯನು ಇವನ ದಿಗ್ವಿಜಯವನ್ನಾಗಲಿ, ಕಾರ್ಯ ತತ್ಪರತೆಯನ್ನಾಗಲೀ ವಿವರಿಸಿಲ್ಲ. ಇವನಿಗೆ ಕಾಲಕ್ರಮದಲ್ಲಿ ತಿಮ್ಮರಾಜ, ಕೃಷ್ಣರಾಜ, ಚಾಮರಾಜರೆಂಬ ಮೂವರು ಮಕ್ಕಳಾದರು. ಇವರಲ್ಲಿ ತಿಮ್ಮರಾಜನು ನೀತಿವಿದನು ನಿಪುಣನೂ ಆಗಿದ್ದರೆ, ಕೃಷ್ಣರಾಜನು ಕ್ಷಾತ್ರ ತೇಜಸ್ಸಿನಿಂದ ಕೂಡಿ ಶತ್ರುರಾಜರುಗಳನ್ನು ಶಿಕ್ಷಿಸುವುದರಲ್ಲಿ ನಿರತನಾಗಿದ್ದನು. ಕೃಷ್ಣರಾಜನಾದ ಮೇಲೆ ಚಾಮರಾಜನು ಪಟ್ಟಕ್ಕೆ ಬಂದನು. ಈ ಚಾಮರಾಜನು ಪಟ್ಟಕ್ಕೆ ಬಂದು ಮೈಸೂರು ದೇಶವನ್ನು ಆಳುತ್ತಿರುವಾಗಲೇ, ಉತ್ತರದಲ್ಲಿ ವಿದ್ಯಾರಣ್ಯರಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ತನ್ನ ಮಹೋನ್ನತಿಯನ್ನು ಮುಟ್ಟಿತ್ತು. ಇಲ್ಲಿ ತಿರುಮಲಾರ್ಯನು ಸ್ಥೂಲವಾಗಿ

ವಿಜಯನಗರ ಸಾಮ್ರಾಜ್ಯದ ಅರಸುಗಳ ಪರಿಚಯವನ್ನು ಮಾಡಿಕೊಡುತ್ತಾನೆ. ಹರಿಹರ ಬುಕ್ಕರೇ ಮೊದಲಾದವರು ವಿಜಯನಗರ ಸಾಮ್ರಾಜ್ಯವನ್ನು ಆಳಿದನಂತರ ಹದಿಮೂರು ಜನ ಕುರುಂಬರಾಯ ಮನೆತನದವರು ರಾಜ್ಯವಾಳಿದರು (ಕುರುಂಬ = ಕುರುಬ. ಹಕ್ಕ ಬುಕ್ಕರು ಮೊದಲು ಕುರುಬ ವಂಶಜರಾಗಿದ್ದರೆಂದು ಪ್ರತೀತಿಯಿದೆ). ಕುರುಂಬರಾಯರಾದ ಮೇಲೆ ಐದು ಜನ ಶಕ್ತಿವಂತರಾದ ದೊರೆಗಳು ಆಗಿಹೋದರು. ಅವರ ವಿಷಯವಾಗಿ ಹೆಚ್ಚಿಗೇನೂ ತಿಳಿಯ ಬರುವುದಿಲ್ಲ. ತುಳುವವರಲ್ಲಿ ಪ್ರಸಿದ್ಧನಾದ ಸದಾಶಿವರಾಯನು ಇವರನಂತರ ಪಟ್ಟಕ್ಕೆ ಬಂದನು. ಇವನು ಇನ್ನೂ ಚಿಕ್ಕ ವಯಸ್ಸಿನವನಾಗಿದ್ದುದರಿಂದ ದಳವಾಯಿ ರಾಮರಾಜನು ರಾಜ್ಯಭಾರ ಕ್ರಮವನ್ನೆಲ್ಲಾ ತಾನೇ ನಿಯೋಜಿಸಿಕೊಂಡನು. ಮುಂದೆ ಅಳಿಯ ರಾಮರಾಯನೆಂಬ ಹೆಸರಿನಿಂದ ಪ್ರಸಿದ್ಧಿ ಪಡೆದು ಮಹಮ್ಮದೀಯರೊಂದಿಗೆ ಯುದ್ಧದಲ್ಲಿ ಕಾದಾಡಿ ಮಡಿಯುತ್ತಾನೆ. ಇವನ ತಮ್ಮ ಎರದಿಮ್ಮ ರಾಜನ ಮಗನಾದ ರಾಮರಾಜನು ತನ್ನ ಚತುರಂಗ ಬಲ ಸಮೇತನಾಗಿ ಚಾಮರಾಜನ ಮೇಲೆ ದಂಡೆತ್ತಿ ಬಂದು ಯುದ್ಧದಲ್ಲಿ ಸೋತು ಹಿಂದಿರುಗುತ್ತಾನೆ. ರಾಮರಾಜನ ದಳಪತಿಯಾದ ರೇಮಟಿ ವೆಂಕಟನೂ ಸಹ ಯುದ್ಧದಲ್ಲಿ ಪರಾಭವಗೊಂಡು ಹಿಂದಿರುಗುತ್ತಾನೆ. ಹೀಗೆ ತೆಲಗು ರಾಜರನ್ನು ಭಂಗಪಡಿಸಿದ ಚಾಮರಾಜನಿಗೆ ನಾಲ್ಕು ಜನ ಮಕ್ಕಳಾಗುತ್ತಾರೆ. ಅವರೇ ಕ್ರಮವಾಗಿ ರಾಜರಸ, ಬೆಟ್ಟದ ಚಾಮ, ದೇವರಾಜ ಮತ್ತು ಚೆನ್ನರಾಜರು. ಇವರಲ್ಲಿ ರಾಜನೃಪನು ಪಟ್ಟಕ್ಕೆ ಬರುತ್ತಾನೆ. ಕಾರುಗ ಹಳ್ಳಿಯ ಪಾಳೆಯಗಾರನು ಇವನ ಮೇಲೆ ಯುದ್ಧಕ್ಕೆ ದಂಡೆತ್ತಿ ಬಂದಾಗ ಇವನು ಆತನ ಮೂಗನ್ನು ತುಂಡರಿಸಿ ಯುದ್ಧರಂಗದಿಂದ ಪರಾಜಿತನನ್ನಾಗಿ ಮಾಡಿ ಕಳುಹಿಸುತ್ತಾನೆ. ಹೀಗೆ ರಾಜನೃಪ ಅಲ್ಲಿಂದ ಮುಂದೆ ಒಂದೊಂದು ಸಣ್ಣ ಪುಟ್ಟ ಪಾಳೆಯಪಟ್ಟುಗಳನೇಕವನ್ನು ತನ್ನ ಸ್ವಾಧೀನಪಡಿಸಿಕೊಳ್ಳುತ್ತಾನೆ. ಹೀಗೆ ಅವನ ಆಡಳಿತದಲ್ಲಿ ಬಂದ ರಾಜ್ಯಗಳು—ಮೂಗೂರು, ತಗಡೂರು, ಕಳಲೆ, ತಾಯೂರು, ಪೆಡತಲೆ, ಹೆಮ್ಮರಗಾಲ, ನಿಲುಸೋಗೆ, ಹುರುಮ, ಹುಲ್ಲನ ಹಳ್ಳಿ, ಬಿಳಿಕೆರೆ, ಕೊತ್ತಾಗಾಲ, ತಲಕಾಡು ಮತ್ತು ಅಮ್ಮಟವಾಡಿ. ಮುಂದೆ ರಾಜನೃಪನು ಮಂಡಲಾಧಿಪತಿಯಾಗಿದ್ದಾಗ ಅತ್ತ ಎರೆದಿಮ್ಮನು ಪೆನುಗೊಂಡೆಯಲ್ಲಿದ್ದುಕೊಂಡೇ ಸಮಯ ಕಾದು ಪುನಃ ಮೈಸೂರಿನ ಮೇಲೆ ದಾಳಿ ಮಾಡಿದನು. ಅವನ ಮೂವರು ಮಕ್ಕಳು ತೆಲುಗು, ಕನ್ನಡ, ತಮಿಳರಿಂದ ಕೂಡಿದ ನಾಡುಗಳನ್ನು ಆಕ್ರಮಿಸಿ ಕೊಂಡರು. ಶ್ರೀರಂಗ, ರಾಮ, ವೆಂಕಟರಾಯರೆಂಬಬಿಧಾನ ಹೊಂದಿದ್ದ ಅವರು ಕ್ರಮವಾಗಿ ಪೆನುಗೊಂಡೆ, ಶ್ರೀರಂಗಪಟ್ಟಣ, ಚಂದ್ರಗಿರಿಗಳನ್ನು ತಮ್ಮ ರಾಜಧಾನಿ ಗಳನ್ನಾಗಿ ಮಾಡಿಕೊಂಡರು. ರಾಮರಾಜನ ಮಗನಾದ ತಿರುಮಲರಾಜನು ಅನಂತರ ಶ್ರೀರಂಗಪಟ್ಟಣಕ್ಕೆ ರಾಜನಾದನು. ರಾಜನೃಪನಿಂದ ಪರಾಭವಗೊಂಡಿದ್ದ ಅನೇಕ ರಾಜರು ತೆಲುಗು ರಾಜನಾದ ತಿರುಮಲರಾಜನನ್ನು ಭೇಟಿಮಾಡಿ ಅವನಿಗೆ ಕಪ್ಪಕಾಣಿಕೆ

ಗಳನ್ನಿತ್ತು ಮೈಸೂರು ದೊರೆಯಿಂದ ತಮ್ಮನ್ನು ಪಾರು ಮಾಡಬೇಕೆಂದು ಬಿನ್ನೈಸಿದರು. ಇದೇ ಸಮಯವನ್ನು ತನ್ನ ಕೈಗೆ ತೆಗೆದುಕೊಂಡು ಮಲೆನಾಡು, ಬೇಡರು, ಒರಸರು (ತೆಲುಗರು) ಮತ್ತು ಇನ್ನುಳಿದ ತನ್ನ ಸೈನ್ಯದೊಂದಿಗೆ ರಾಜನೃಪನ ಮೇಲೆ ದಂಡೆತ್ತಿ ಹೊರಟನು. ಹಳ್ಳಿಗಳನ್ನು ಕೊಳ್ಳೆಯಿಕ್ಕಿ, ಬೆಳೆಗಳನ್ನು ನಾಶಮಾಡಿ, ದೇವಾಲಯಗಳನ್ನು ಬೀಳುಗೈದು ಕೆಸರೆಯ ಕೋಟೆಯನ್ನು ಮುತ್ತಿದನು. ಯುದ್ಧದಲ್ಲಿ ಕೆಸರೆಯ ಕೋಟೆ ಶತ್ರು ಪ್ರವೇಶಕ್ಕೆ ಅನುಕೂಲವಾಯಿತು. ಮೈಸೂರಿನ ದಳ ಬೆದರಿ ಹಿಂದೇಟು ಹಾಕುತ್ತಿರುವಾಗ, ರಾಜನೃಪನ ತಮ್ಮಂದಿರಾದ ಬೆಟ್ಟದಚಾಮ ಮತ್ತು ಚೆನ್ನರಾಜರು ಮುನ್ನುಗ್ಗಿ ಸೈನ್ಯವನ್ನು ಹುರಿದುಂಬಿಸಿದರು. ಶತ್ರು ಸೈನ್ಯವನ್ನು ಕವೆಗೋಲಿನಿಂದ ತಿವಿದು, ಅವರ ತಲೆಗಳನ್ನು ಕತ್ತರಿಸಿ ಅರಿಭಯಂಕರರಾಗಲು, ಅತ್ತ ರಾಜನೃಪನು ಇನ್ನುಳಿದ ಸೈನ್ಯವನ್ನು ಜೊತೆಮಾಡಿಕೊಂಡು ಮೈಸೂರಿನಿಂದ ಬಂದನು. ಹೀಗೆ ಮೈಸೂರಿನವರ ದಾಳಿಗೆ ಸಿಕ್ಕು ಮೊರಸರು, ಬೇಡರು ತೆಲುಗರು ಮತ್ತು ಕೊಂಗರು (ತಮಿಳು) ತಮ್ಮ ಸೋಲನ್ನೊಪ್ಪಿಕೊಂಡು ಪಲಾಯನ ಮಾಡಿದರು. ತನ್ನ ಪ್ರಾಣ ಉಳಿದುದಕ್ಕೆ ಸಂತಸಪಟ್ಟ ತಿರುಮಲರಾಜನು ಪುನಃ ತನ್ನ ಪಟ್ಟಣಕ್ಕೆ ಹಿಂದಿರುಗಿದನು. ರಾಜಒಡೆಯನು ತನ್ನ ತಮ್ಮಂದಿರೊಡಗೂಡಿ ಮಂತ್ರಾಲೋಚನೆಯನ್ನು ನಡೆಸಿ ತಿರುಮಲರಾಜನನ್ನು ಹೇಗಾದರೂ ಮಾಡಿ ಓಡಿಸಬೇಕೆಂದು ಸಂಕಲ್ಪಿಸಿದನು. ಒಡೆಯನ ಮುಂದೆ ಅವನ ಪರಾಕ್ರಮ ಹುಸಿಯಾಗಿ ಅವನು ಯಶಃಕಾಂತೆಯೊಡನೆ ತನ್ನ ಕಾಂತೆಯನ್ನೂ ತೊರೆದು ಓಡಿಹೋಗಲು, ರಾಜನು ಅವನ ರಾಣಿಯನ್ನು ಅವನೆಡೆಗೆ ಕಳುಹಿಸಿ ತಾನು ಶ್ರೀರಂಗಪಟ್ಟಣದಲ್ಲಿ ಅರಸನಾಗಿ ಪ್ರತಿಷ್ಠಿತಗೊಂಡನು. ಅವನಾದ ತರುವಾಯ ಅವನ ಮೊಮ್ಮಗನಾದ ಚಾಮರಾಜನು ಪಟ್ಟಕ್ಕೆ ಬಂದನು.* ತಲಕಾಡು, ಮಳವಳ್ಳಿಗಳನ್ನು ತನ್ನ ಸ್ವಾಧೀನಪಡಿಸಿಕೊಂಡು ಜಗದೇವರಾಯನನ್ನು ಸೋಲಿಸಿದನು, ತಮಿಳರನ್ನು ಸದೆ ಬಡಿದನು. ತನ್ನ ದಿಗ್ವಿಜಯವನ್ನು ಮುಂದುವರಿಸಿ ಕೊಡಗಿನ ಮೇಲೆ ದಾಳಿಯಿಟ್ಟು ಅವರನ್ನು ತನ್ನ ಪರಾಕ್ರಮದಿಂದ ನಡುಗಿಸಿದನು. ಹೀಗೆಯೇ ಕಳಲೆಯನ್ನೂ ಮಲೆನಾಡನ್ನೂ ಮುತ್ತಿದನು. ಅನಂತರ ಚನ್ನಪಟ್ಟಣವನ್ನು ಮುತ್ತಿ ಅದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಚಾಮರಾಜನಾದ ಮೇಲೆ ರಾಜಒಡೆಯನ ಮಗನಾದ ಇಮ್ಮಡಿ ರಾಜಒಡೆಯನು ಪಟ್ಟಕ್ಕೆ ಬಂದನು.[1] ಇವನ ಆಳ್ವಿಕೆ ಬಹುಕಾಲ ನಡೆಯಲಿಲ್ಲ. ಕಂಠೀರವ ನರಸ

* ಇವನು ವಾಲ್ಮೀಕಿ ರಾಮಾಯಣವನ್ನು ಗದ್ಯದಲ್ಲಿ ಬರೆದನೆಂದು ಹೇಳಲಾಗಿದ್ದು ಅದಕ್ಕೆ "ಚಾಮರಾಜೋಕ್ತಿ ವಿಲಾಸ" ಎಂದು ಹೆಸರಿಸಿದೆ. (M. A. R. ೧೯೦೮, Para ೭೫) ಶ್ರವಣಬೆಳಗೊಳವನ್ನು ಪುನರ್ ಸಂದರ್ಶಿಸಿ ಅಲ್ಲಿ ಪೂಜಾದಿಗಳ ವ್ಯವಸ್ಥೆಯನ್ನು ಮಾಡಿದನು. (ಚಿದಾನಂದ 'ಕವಿ ಮುನಿವಂಶಾಭ್ಯುದಯಂ').

1. ಇವನು ಬಹುಕಾಲ ರಾಜ್ಯಭಾರ ಮಾಡಲಿಲ್ಲ. ದೊರೆಯಾದ ಕೆಲವೇ ದಿನಗಳಲ್ಲಿ ತನ್ನ ದಳವಾಯಿಯ ಕೃತ್ರಿಮಕ್ಕೆ ಸಿಕ್ಕು, ಅವನಿಂದ ವಿಷಪ್ರಾಶನಗೊಂಡು ಮೃತಪಟ್ಟನು. C. Hayavadana Rao : *Mysore Gazeteer* ಪುಟ ೨೪೫.

ರಾಜನು ಇವನಾದಮೇಲೆ ಪಟ್ಟಕ್ಕೆ ಬಂದನು. ಇವನು ಬೆಟ್ಟದ ಚಾಮರಾಜನ ಮಗ. ಇಕ್ಕೇರಿ, ಬಸವಾಪಟ್ಟಣದ ಅರಸರು ಇವನ ಪ್ರಾಬಲ್ಯವನ್ನು ನೋಡಿ ಧೃತಿಗುಂದಿದರು. ಅವರಲ್ಲಿ ಒಬ್ಬನಾದ ಕೆಂಗೆಯ ಹನುಮನು ವಿಜಯಪುರದ ಶಾಹನ ದಳವನ್ನು ಕೂಡಿ ಸುಮಾರು ನಲವತ್ತು ಸಾವಿರ ಯೋಧರೊಂದಿಗೆ-ಯುದ್ಧಕ್ಕೆ ಬಂದನು. ತಿರುಮಲಾರ್ಯನು ಇಲ್ಲಿ ಯುದ್ಧದ ವರ್ಣನೆಯನ್ನು ಬಹು ಸೊಗಸಾಗಿ ನಿರೂಪಿಸಿದ್ದಾನೆ. ಶತ್ರುರಾಜರ ವಶದಲ್ಲಿದ್ದ ಕುದುರೆಗಳೋ ಬಹು ಶಕ್ತಿಯುತವಾದವುಗಳು 'ಕಿಱುಗಿವಿ ದೇಸೆವೆತ್ತಸಿಮೊಗಂ ಸಘುರುಸ್ವನ ನಾಸಿಕಾಪುಟಂ ಮಿಱುಗುವ ಕಂದಮುರ್ಬಿದೆರ್ದೆ, ನುಣ್ಬೊಡೆ' .... (೨-೯೫) ಹೀಗೆ ಸರ್ವಲಕ್ಷಣ ಸುಶೋಭಿತವಾದ ವಾಜಿಗಳು ಇನ್ನು ಸೈನಿಕರ ವಿಷಯವಾಗಿ ಹೇಳುವುದೇ ಬೇಡ. "ಇಕ್ಕಿದ ಪಕ್ಕರಕ್ಕೆ ನಿಡುರ್ಝಲ್ಲಿ ತೊಡಂಕುವ ತೋಱಿಗೊಂಡೆಯಂ। ಸೆಕ್ಕಿದ ಖಂಡೆಯಂ ಬಿಗಿದ ಬಿಲ್ ಪೊದೆದುಂಬಿದ ಬೋಳೆಯುಂಬು ಕಂದಕ್ಕಮರ್ದಿಟ್ಟದಿಟ್ಟಸರಪೊಂಬಲೆಗಳ್ ಮೊಗರಂಬವೊಂದು ಪೊಂ। ಬಕ್ಕಿಯ ತೊಕ್ಕು ಮೆಯ್ಗೞಿಯೆ ಬಾಸಿಗದಿಂ ಮೆಱೆದತ್ತು ಪಸ್ತಿಗಳ್" (೨-೯೬). ಮುಂದೆ ಕಂಠೀರವನು ಹನುಮನ ಸೈನ್ಯವನ್ನು ಕಂಡು ಕಂಗೆಡದೆ ಮುನ್ನುಗ್ಗಿ ಬೆಂಗಳೂರು ಪಟ್ಟಣವನ್ನು ಕೆಂಪೇಗೌಡನಿಂದ ಕಸಿದುಕೊಂಡು ಹಿಂದಿರುಗಿದನು ಇದೇ ಸಂಧಿಯನ್ನು ಕಾದುನೋಡಿ ರಣದುಲ್ಲಾಖಾನನು-ಬಿಜಾಪುರದ ದಂಡನಾಯಕ-ಶ್ರೀರಂಗಪಟ್ಟಣದ ಮೇಲೆ ಧಾಳಿ ಮಾಡಿದನು. ತಿರುಮಲಾರ್ಯನು ಇಲ್ಲಿ ಯುದ್ಧದ ಸಹಜಸುಂದರವಾದ ಚಿತ್ರವನ್ನು ಕೊಡುತ್ತಾನೆ. ಶತ್ರು ಸೈನಿಕರು ಅಟ್ಟಣೆಗೆಗಳನ್ನು ಕಟ್ಟಿ ಕೋಟೆಯನ್ನು ಏರಲು ಪ್ರಯತ್ನಿಸುತ್ತಾರೆ. ಅವರ ಮೇಲೆ 'ಪುರಿಮುಟಿಲಂಪೊಯ್ದು' 'ಕಾಯ್ದಂಬಲಿಯನ್ನು ಕೌಚಿ', ಆ ತುರುಷ್ಕರನ್ನು ಸೀದು ಉರುಳಿಸಿದರು. ಅಷ್ಟೇ ಅಲ್ಲದೆ 'ಕವೆಗೋಲಿಂದೌಂಕಿದರಿದಿರಿದು ಕೊಂತದಿಂತಲೆಗೊಯ್ದರ್, ವಂಕಿಗಳಿಂ ಭೋಂಕನೆ ನಿಡುಗೊಂಕುವ ಡೆಂಕಣಿಯ ಕಲ್ಗಳಿಂ' (೨-೧೧೨) ಕುಗ್ಗಿಸಿದರು. ಈ ಲಗ್ಗೆಯಲ್ಲಿ ಹತ್ತು ಸಹಸ್ರಜನ ಯೋಧರು ಮೃತಪಟ್ಟುದರಿಂದ, ಅಳಿದುಳಿದವರು ದಿಕ್ಕುಗೆಟ್ಟುದನ್ನು ನೋಡಿದ ರಣದುಲ್ಲಾಖಾನನು ಹೀಗೆ ಯೋಚಿಸಿದನು. 'ಮದನಿೞಿದತ್ತು ವೈಮೆಯುೞಿದತ್ತಿಳೆಯೊಳ್ ಬಳೆದತ್ತು ದುರ್ಯಶಂ। ಪದೆದು ಪಠಾಣ ಹಬ್ಬಸಿಗ ರೋಹಿಲ ಸೈದಬಲಂ ನುಲಂಗಿದ। ತ್ರೊತ್ತದವಿ ಪಲಾಯನಂ ಬಡೆವುದರ್ಕಮುದರ್ಕದ ದಿಕ್ಕುಗಾಣೆನಾಂ। ಬಿದಿಗಡ! ಬಲ್ಲಿದಂ ಜಗದೊಳಿಲ್ಲರಿನಲ್ತೆ 'ಖುದಾಮುಹಮ್ಮದಾ' (೨-೧೧೬). ಅನಂತರ ಅವನು ಕೆಂಗೆಯ ಹನುಮನ ಬಳಿ ಬಂದು ತನ್ನ ಪರಾಭವವನ್ನು ಹೇಳಿಕೊಳ್ಳಲು ಅವರಿಬ್ಬರೂ ಕಂಠೀರವನಲ್ಲಿ ಕ್ಷಮೆಯನ್ನು ಯಾಚಿಸಿದರು. ಹೀಗೆ ಕಂಠೀರವನು ತನ್ನ ಶೌರ್ಯದಿಂದ ಅವರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡು ಮತ್ತೆ ತನ್ನ ದಿಗ್ವಿಜಯವನ್ನು ಮುಂದುವರಿಸಿದನು. ಪೂರ್ವದಿಕ್ಕಿನಲ್ಲಿ ನಡೆದು ಕಾನಕಾನಹಳ್ಳಿಯನ್ನು ತನ್ನ ವಶಪಡಿಸಿಕೊಂಡನು. ದಕ್ಷಿಣದಲ್ಲಿ ಮಧುರೆಯ ನಾಯಕ

ರೊಂದಿಗೆ ಯುದ್ಧಮಾಡಿ ಅವರನ್ನು ಸೋಲಿಸಿ ದಣ್ಣಾಯಕನ ಕೋಟೆಯನ್ನು ವಶಪಡಿಸಿಕೊಂಡನು ಕೊಂಗರಿಂದ 'ಪಣಂಗಾಮುಡಿ' ಎಂಬ ಬಿರುದನ್ನು ಪಡೆದಿದ್ದ ಆ ನಾಯಕನ ಗರ್ವವನ್ನು ಮುರಿದು ಸತ್ಯಮಂಗಲವನ್ನು ಸ್ವಾಧೀನಮಾಡಿಕೊಂಡನು. ಅಲ್ಲಿಂದ ಮುಂದೆ ಪಶ್ಚಿಮಕ್ಕೆ ಹೊರಟು ಕೊಡಗುನಾಡನ್ನು ಸುತ್ತಿ ನಂಜುಂಡರಾಯನ ರಾಜಧಾನಿಯನ್ನು ಮತ್ತೆ ಪಿರಿಯಾಪಟ್ಟಣವನ್ನು ವಶಪಡಿಸಿಕೊಂಡನು. ಉತ್ತರದಲ್ಲಿ ತುರುಗೆರೆಯನ್ನು ಗೆದ್ದನು. ತನ್ನ ಉಳಿದ ಕಾಲವನ್ನು 'ನಾರಾಯಣ ಚರಣ ಪರಿಚರಣಪರ'ನಾಗಿ ಕಳೆದನು. ದೇವಾಲಯಗಳನ್ನು ಕೊಳಗಳನ್ನು ಕಟ್ಟಿಸಿದನು[1].

ಕಂಠೀರವ ನರಸರಾಜನಿಗೆ ಮಕ್ಕಳಿಲ್ಲದ್ದರಿಂದ ಅವನ ಅನಂತರ ದೇವರಾಜನು ಪಟ್ಟಕ್ಕೆ ಬಂದನು. ದೇವರಾಜನಿಗೆ ನಾಲ್ಕು ಮಕ್ಕಳಾದರು. ಅವನ ತರುವಾಯ ದೊಡ್ಡದೇವರಾಜ ಒಡೆಯನು ಪಟ್ಟಕ್ಕೆ ಬಂದನು. 'ಸಸಿಯುಂ ನೇಸರುಮೊಂದು ವೆರಸಿದಂತೆ' ಯಶಸ್ಸು ಮತ್ತು ತೇಜಸ್ಸಿನಿಂದ ದೊಡ್ಡದೇವರಾಜನು ಕೂಡಿ ಬೆಳೆದನು. 'ನಡುವಂ ಬಿಗಿದುಡೆ ಪಟ್ಟೆಯ ! ನೊಡನರಿವನಿತಾಜನಕ್ಕೆ ಜಗಳ್ಗ್ಗಂ ಮುಡಿಗಳ್ ! ಪೊರಮಟ್ಟಡಿವಿಡಿಯೆ ಪರರ್ ! ಪಡೆಗುಂ ಸೋಮರ್ಡಿಯ ಗಂಟು ಬಿಗುಪನದೆಂತೊ' (೩–೨೩). ಹೀಗೆ ಅವನ ಸೌಂದರ್ಯ ಶೌರ್ಯಗಳನ್ನು ಕಂಡ ಅಮೃತಾಂಬೆಯು ಗೋವಿಂದನಿಗೆ ರುಕ್ಮಿಣಿಯೊಲಿದಂತೆ, ರಾಮಚಂದ್ರನಿಗೆ ಸೀತೆ ಯೊಲಿದಂತೆ, ದೊಡ್ಡದೇವರಾಯನಿಗೆ ಒಲಿದಳು. ಒಂದು ದಿನ ಅರಸಿ ಚಿಂತೆಯಿಂದ ಯೋಚನೆಗೊಂಡು ಕಣ್ಣಲ್ಲಿ ನೀರು ತುಂಬಿಕೊಂಡು ಬಿಸುಸುಯ್ಯುತ್ತಿರಲು, ಎಂದಿ ನಂತೆಯೆ ಅರಸನು ಬಂದು ಅಂತಃಪುರವನ್ನು ಹೊಕ್ಕಾಗ ದುಗುಡಗೊಂಡು ಬಸವಳಿದಿದ್ದ ತನ್ನ ರಾಣಿಯನ್ನು ಕಂಡನು. ಅವಳ ಮನಸ್ಸಿನ ಚಿಂತೆಯನ್ನು ಅರಿಯಲು ಯತ್ನಿಸಿದನು. ಕೊನೆಗೆ ದಾಸಿಯರು 'ಮಿಕ್ಕಿರ್ಕಂ ಪಲವಗಲಿಂ ಮಕ್ಕಳ ಮೇಲಾಸೆ ತೋರ್ಕುಂ' ಎಂದು ಬಿನ್ನವಿಸಿದರು. ಹೀಗೆಯೆ ಹಲವುದಿನಗಳು ಕಳೆದವು. ಅವರಿಬ್ಬರೂ ಭಾಗವತದ ಕತೆಯನ್ನು ಕೇಳುತ್ತಾ ಆ ಮಾಯಾ ಮಾಧವನ ಬಾಲಲೀಲೆಗಳನ್ನು ಕೇಳಿ ಹರ್ಷಪಡುತ್ತಿದ್ದರು ಭಾಗವತ ಪ್ರಿಯನಾದ ತಿರುಮಲ ರಾಯನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಶ್ರೀಕೃಷ್ಣನ ಬಾಲಲೀಲೆ ಗಳನ್ನು ವಿವರಿಸುತ್ತಾನೆ; ಹೀಗೆ ವಿವರಿಸುವಲ್ಲಿ ತನ್ನ ವೈಷ್ಣವ ಭಕ್ತಿಯನ್ನು ಮೆರೆಯುತ್ತಾನೆ. ಜಗತ್ತಿಗೇ ಕಂದನಾದ ಶ್ರೀಕೃಷ್ಣನು 'ಎಳೆಗಲ್ಲದೊಳಿಟ್ಟ ದಿಟ್ಟ

1. ಇವನು ಶ್ರೀರಂಗಪಟ್ಟಣದಲ್ಲಿ ನರಸಿಂಹ ದೇವಾಲಯವನ್ನು ಕಟ್ಟಿಸಿದನು; ಅಲ್ಲಿಯೇ ಅವನ ಪ್ರತಿಮೆಯೂ ಇದೆ. (M.A.R. 1914–15, Para 107). ಇವನು ಮೊಟ್ಟ ಮೊದಲು ತನ್ನ ಹೆಸರಿನಲ್ಲಿ ಟಂಕಸಾಲೆಯನ್ನು ಸ್ಥಾಪಿಸಿ 'ಕಂಠೀರವ ವರಹ' (ಹಣ) ಎಂದು ಪ್ರಸಿದ್ಧವಾದ ವರಹಗಳನ್ನು ಜಾರಿಗೆ ತಂದನು. (E.C.V. ಅರಕಲಗೂಡು, 64). ಇವನ ಗೌರವಾರ್ಥವಾಗಿ ೧೬೭೨ರಲ್ಲಿ ಇವನ ರಾಣಿ ಕಳಲೆಯಲ್ಲಿ ಒಂದು ಮಠವನ್ನು ಕಟ್ಟಿಸಿದಳು. (E.C. III. ನಂಜನಗೂಡು, ೮೧).

ಬೊಟ್ಟು ಕೆಳಗೊಂಡೊಪ್ಪುವ ಪಚ್ಚೆಗನ್ನವಚ್ಚು, ಮೊಳೆವಲ್ಲಿ'ನಿಂದ ಶೋಭಿಸಿದನು. ತನ್ನ ಮುದ್ದುಕಂದನನ್ನು ಯಶೋದೆ ಪರಿಪರಿಯಾಗಿ ಉಪಚರಿಸಿ ಅವನ ಕಿರು ಚಂಡಿಕೆಗೆ ಬಂಗಾರದ ನೊಗ್ಗನ್ನು ಮುಡಿಸಿ, ಮುತ್ತಿನ ಹಾರವನ್ನು ತೊಡಿಸಿ, ಹಣೆ ಯಲ್ಲಿ ಕಸ್ತೂರಿಯ ನಾಮವನ್ನಿಟ್ಟು, ಅವನನ್ನು ಮುದ್ದಾಡಿದಳು. ಕಾಲಕ್ರಮದಲ್ಲಿ ಈ ಮಾಯಾ ಕಿಶೋರನ ಚೇಷ್ಟೆ ಸಹಿಸಲಸಾಧ್ಯವಾಯಿತು. ಇಟ್ಟ ಹಾಲು ಬೆಣ್ಣೆಗಳು ಮಾಯವಾದವು. ಹೀಗೆ ಅನೇಕ ವಿಧವಾದ ಶ್ರೀಕೃಷ್ಣನ ಬಾಲ ವರ್ಣನೆ ಯನ್ನು ಕೆಳದಿಯರಿಂದ ಕೇಳಿದ ಅರಸಿಗೆ ಪುತ್ರವ್ಯಾಮೋಹ ಹೆಚ್ಚಿತು. ತನಗೂ ಮಕ್ಕಳಾಗಬೇಕೆಂಬ ಹಂಬಲ ಹೆಚ್ಚಿತು. ದೊರೆಗೂ ಅದಿಲ್ಲವೆಂದಲ್ಲ ಆದರೆ ಅವನು 'ತೊಲಗಿಸಿ ಚಿಂತೆಯಂ ತೊಳೆದು ನುಣ್ಮೊಗಮಂ ಪೆಱನಾಮವಿಟ್ಟು' ಪ್ರತಿದಿನವೂ ಯಾದವ ಗಿರೀಶನ ಪಾದಾರವಿಂದದಲ್ಲಿ ಹಲವು ಬಗೆಯ ವ್ರತೋಪಾಸನೆಗಳಿಂದ ಕಾಲ ವನ್ನು ಕಳೆದನು. ಇವನ ಸಂಗಾತಿಯಾದ ಅಳಸಿಂಗರಾರ್ಯನು ವಸಿಷ್ಠ ವಿಶ್ವಾಮಿತ್ರ ನಂತೆ ರಾಜನಿಗೆ ಅವನ ಆಂತರಿಕ ವ್ಯವಹಾರದಲ್ಲಿ ಸಲಹೆಗಾರನಾಗಿದ್ದನು. ತನ್ನ ತಂದೆಯಗುಣ ಪ್ರಶಂಸೆ ಮಾಡುವಲ್ಲಿ ತಿರುಮಲಾರ್ಯನೇನು ಹಿಂದೆ ಬಿದ್ದಿಲ್ಲ. ಅವನನ್ನು ಹೀಗೆ ವರ್ಣಿಸುತ್ತಾನೆ. 'ಕ್ಷಮೆಯಿಂದಂ ಕರುವಿಟ್ಟು ಶಾಂತಿರಸದಿಂದಂ ತೀವಿ ವಿಜ್ಞಾನದಿಂ। ಸಮೆದಂಗಂಗಳನೊಪ್ಪವಿಟ್ಟು ದಯೆಯಿಂ ಕೈಗೆಯ್ದು ಸದ್ಭಕ್ತಿಯಿಂ। ಸಮೆದಿಂತೀಯಳಸಿಂಗರಾರ್ಯನೆಸಗುಂ ವೇದಾಂತ ವೇಷಾಂತರಂ। ಶಮಿತಾಭ್ಯಂತರ ಬಾಹ್ಯಚಾರಿಕರಣ ವ್ಯಾಪಾರ ಚಿಂತಾಂತರಂ ॥ (೩-೭೦). ಇಂತಹ ಮಹಿಮಾನ್ವಿತನೂ, ಒಳ್ಗೆಳೆಯನೂ ಆದ ಅಳಸಿಂಗರಾರ್ಯನನ್ನು ತನ್ನೆಡೆಗೆ ಬರ ಮಾಡಿಕೊಂಡು ತನ್ನ ಮನೋನಿರ್ಧಾರವನ್ನು ತಿಳಿಸಿದನು. ಅಂತೆಯೇ ಭೂವೈಕುಂಠ ಸದೃಶವಾದ, ಯಾದವ ನಾರಾಯಣನಿರುವ ಮೇಲುಕೋಟೆಯಲ್ಲಿ, ಆ ಸ್ವಾಮಿಯ ಸೇವಾಮನೋಭಾವದಿಂದ ಕೂಡಿದವನಾಗಿ ದೊಡ್ಡದೇವರಾಜನು ತನ್ನ ಪರಿವಾರ ಸಮೇತ ಅಲ್ಲಿಗೆ ಬಂದನು. ಹಾಗೆ ಬಂದು ದೇವಾಲಯವನ್ನು ಒಳಹೊಕ್ಕು ಭಗವಂತನ ಎದುರಿಗೆ ನಿಂತು ಅವನು ಆನಂದ ಬಾಷ್ಪಗಳನ್ನು ಸುರಿಸಿದನು. 'ಪೊಳೆವ ಮಣಿಕಿರೀಟಂ ಭೂರಿ ತೇಜೋಲಲಾಟ'ದಿಂದ ಕೂಡಿದ್ದ ಶೌರಿಯನ್ನು ನೋಡಿ ಅವನಲ್ಲಿಯೇ ತಾದಾತ್ಮ್ಯವನ್ನು ಪಡೆದನು. ಆವನ ಭಕ್ತಿಭಾವಕ್ಕೆ ಮೆಚ್ಚಿ ಯದುಗಿರಿಯ ನಾರಾಯಣನೇ ಅವನ ಹೃತ್ಕಮಲದಲ್ಲಿ ನೆಲಸಿ ನುಡಿದಂತಾಯಿತು. 'ನಿನ್ನೆರ್ದೆವೊಕ್ಕು ನಿನ್ನ ಮಗನೆಂದೆನೆ ನಾಡುಗರುಣ್ಮೆ ಹರ್ಷದಿಂ। ನಿನ್ನೊಡನಾಡಿ ನಿನ್ನ ಕುಲಮಂ ಬೆಳೆವರ್ತಿಸಿ ನಿನ್ನನುಜ್ಞೆಯಿಂ ॥ ದನ್ನೆಗಟ್ಟಲ್ಲಿ ಪಲ್ಲವಿಪ ದುಷ್ಟರ ಶಿಷ್ಟರ ಶಿಕ್ಷೆರಕ್ಷೆಯಂ। ನನ್ನಿಯೊಳಾಳ್ವೆ ನೀ ನೆಲನನದ್ಭುತ ದಿವ್ಯ ವಿಚಿತ್ರ ಶಕ್ತಿಯಿಂ' (೩-೯೯) ಎಂಬ ನುಡಿ ರಾಜನ ಹೃದಯದಲ್ಲಿ ಅನುರಣನಗೊಳ್ಳಲು, ಆ ದೇವ ದೇವನಿಗೆ ಸಾಷ್ಟಾಂಗ ನಮಸ್ಕಾರಮಾಡಿ ತೀರ್ಥ ಪ್ರಸಾದವನ್ನು ತೆಗೆದುಕೊಂಡು ಪಟ್ಟಣಕ್ಕೆ ಹಿಂದಿರುಗಿದನು. ತನಗಾದ ದಿವ್ಯ ಅನುಭವವನ್ನು ತನ್ನಾಪ್ತನಾದ

ಅಳಸಿಂಗರಾರ್ಯನಿಗೆ ಹೇಳಿ ಅಲ್ಲಿಂದ ರಾಜ ಅಂತಃಪುರವನ್ನು ಹೊಕ್ಕು ತನ್ನ ರಾಣಿಗೆ ಈ ಸಂತಸದ ವಾರ್ತೆಯನ್ನು ತಿಳಿಸಿದನು. ಹೀಗೆ ಆ ರಾತ್ರಿಯನ್ನು ಕಳೆದು ಮರುಹಗಲಿನಲ್ಲಿ ತನ್ನ ಗೆಳೆಯನಾದ ಅಳಸಿಂಗರಾರ್ಯನನ್ನು ಕರೆತರಲು ದೂತರನ್ನು ಅಟ್ಟಿದನು. ಅವರು ತ್ವರಿತವಾಗಿ ಬಂದು ಸಿರಿವಾಳಿಗೆಯ ಬಾಗಿಲಿಗೆ ಬಂದಾಗ ಆ ಮಹಾಮನೆಯ ಬೆರಗನ್ನು ನೋಡಿ ಆಶ್ಚರ್ಯಚಕಿತರಾದರು. 'ಓದುವ ಖುಕ್ಕುಕಲ್ವ ನಿಗಮಾಂತಯುಗಂ ತಿಳಿವರ್ಥಂಪಂಚಕಂ । ಭೇದಿಸಿ ಕಾಣ್ಬ ತತ್ವದಿರವುಣ್ಮೆಪ ಬಣ್ಣಿಗೆ ವೆತ್ತ ಬಿನ್ನಣಂ ॥ ಸ್ವಾದಿಪ ತೀರ್ಥಮಂಚಿಸುವ ವೈಷ್ಣವಲಾಂಛನಮಿಂತಿವೆಲ್ಲಮಂ । ಸಾದರವಿಕ್ಷಿಸುತ್ತೆ ಚರರಾಸಿರಿವಾಳಿಗೆವೊಕ್ಕು ಸೊರ್ಕಿದರ್ (೩-೧೧೨). ಹಾಗೆ ಒಳಹೊಕ್ಕು ತಾವು ಬಂದ ಕಾರ್ಯವನ್ನು ಬಿನ್ನೈಸಿಕೊಂಡರು. ಆಗ ಅವನು ಕನಕದಂಡಿಗೆಯನ್ನೇರಿ ಅರಮನೆಯ ಓಲಗ ಶಾಲೆಯನ್ನು ಹೊಕ್ಕು ರಾಜನನ್ನು ಇದಿರ್ಗೊಂಡು ಅವನನ್ನು ಆಶೀರ್ವಚನಗಳಿಂದ ಆಶೀರ್ವದಿಸಿದನು. ರಾಜನು ಅವನನ್ನು ಗದ್ದುಗೆಯೊತ್ತಿನಲ್ಲಿ ಕುಳ್ಳಿರಿಸಿಕೊಂಡು ತನಗೆ ಹಿಂದಿನ ರಾತ್ರಿ ನಾರಾಯಣನು ಕನಸಿನಲ್ಲಿ ಕಂಡಂತೆಯೂ, ಕನಸಿನಲ್ಲಿ ಇನ್ನೊಂದು ವರವನ್ನು ಬೇಡಿಕೊಳ್ಳುವಂತೆಯೂ, ಆಗ ರಾಜನು ತನ್ನ ಗೆಳೆಯನಾದ ಅಳಸಿಂಗರಾರ್ಯನಿಗೂ ಪುತ್ರೋತ್ಸವವಾಗಬೇಕೆಂಬ ಹೆಬ್ಬಯಕೆ ತನಗಿರುವುದಾಗಿಯೂ, ಅವನ ಆ ಕೋರಿಕೆಯನ್ನು ನೆರವೇರಿಸಿಕೊಡಲು ಸ್ವಾಮಿಯು ಒಪ್ಪಿದನೆಂದು ಸಂತೋಷದಿಂದ ಹೇಳಿದನು. ಅಳಸಿಂಗಾರ್ಯನಿಗೆ ಯಾತ್ರಾದಾನವನ್ನು ಕೊಟ್ಟು ಕಳುಹಿಸಿ ರಾಜನು ತನ್ನ ಮನಸ್ಸನ್ನು ರಾಜ್ಯದ ಕಡೆ ಹರಿಸಿದನು. ಅವನ ರಾಜನೀತಿಯೂ ಅಷ್ಟೇ ದಕ್ಷತೆಯಿಂದಿತ್ತು. ದ್ವಿಜರಲ್ಲಿ ಮಾರ್ದವ, ತನ್ನ ಸ್ನೇಹಿತರಲ್ಲಿ ಸೌಹಾರ್ದ, ತನ್ನವರಲ್ಲಿ ಸೌಜನ್ಯ ಸರಸಭಾವಗಳು, ವಿರೋಧಿಗಳಿಗೆ ಕ್ರೌರ್ಯ, ಇವೇ ಮುಂತಾದ ಗುಣಗಳಿಂದ ತನ್ನ ಪ್ರಜೆಗಳಿಗೆ ಪ್ರಿಯನಾಗಿದ್ದನು. ಮುಂದೆ ತಿರುಮಲಾರ್ಯ ರಾಜನ ಗುಣವರ್ಣನೆಯನ್ನು ಮಾಡುತ್ತಾನೆ. ಅವನ ಮಾತುಗಳಿಂದಲೇ ದೊಡ್ಡದೇವನ ಗುಣ ಪ್ರಶಂಸೆಯನ್ನು ನಾವು ಮನಗಾಣಬಹುದು. 'ಮತ್ತಮಾರಾಯಂ ಪರಮಾತ್ಮನಂತೆ ಸಕಲ ಜನಹೃದಯಂಗಮನುಂ, ವಿಷ್ಣ್ವವತಾರದ ಮತ್ಸ್ಯನಂತೆ ವೇದೋದ್ಧರಣ ನಿಪುಣನುಂ, ಕೂರ್ಮನಂತೆ ಕುಲಗೋತ್ರ ನಿರ್ವಾಹಕನುಂ, ಯಜ್ಞವರಾಹನಂತೆ ಮಹೀ ನಿರ್ವೃತಿಕರನುಂ, ನೃಸಿಂಹನಂತೆ ಹಿರಣ್ಯದಾನಾನುರಕ್ತಕರನುಂ, ವಾಮನನಂತುದ್ವೃತ್ತಬಲಿಬಂಧಕನುಂ, ಜಾಮದಗ್ನ್ಯನಂತೆ ದುರ್ದಾಂತರಾಜನ್ಯದಮನನುಂ, ರಾಘವನಂತೆ ಸತ್ಯಸಂಧನುಂ, ರೌಹಿಣೇಯನಂತೆ ಬಲಭದ್ರನುಂ, ಕೃಷ್ಣನಂತೆ ಚಕ್ರಧರನುಂ ಕಲ್ಕಿಯಂತೆ ಸಕಲಮ್ಲೇಚ್ಛವಿಚ್ಛೇದಕರನುಮೆನಿಸುಗುಂ । (೩-೧೩೭, ವಚನ).

ನಾಲ್ಕನೆಯ ಆಶ್ವಾಸದಲ್ಲಿ ಕವಿ ಚಿಕ್ಕದೇವರಾಯನ ಜನನ ವೃತ್ತಾಂತದಿಂದ ಹಿಡಿದು ಯೌವನೋದಯದವರೆಗೆ ವರ್ಣಿಸುತ್ತಾನೆ. ಹೀಗೆ ವರ್ಣಿಸುವಲ್ಲಿ ಕವಿ

ತನ್ನ ವೃತ್ತಾಂತವನ್ನೂ ಮಧ್ಯೆ ಮಧ್ಯೆ ಸೇರಿಸಿ, ತನಗೂ ದೊರೆಗೂ ಇದ್ದಿರಬಹುದಾದ ಗೆಳೆತನದ ಸೂಕ್ಷ್ಮಪರಿಚಯವನ್ನು ಓದುಗರಿಗೆ ಮಾಡಿಕೊಡುತ್ತಾನೆ

ಕಾಲಕ್ರಮದಲ್ಲಿ ಅಮೃತಾಂಬೆ ಗರ್ಭವನ್ನು ಧರಿಸಿದಳು. 'ಪೊಱಲಾರಳ್ ತೊಡವುಗಳಂ । ಪೊಱುವಳ್ ಪೊಡೆಗೊಂಡ ವಿಶ್ವಗರ್ಭನನೊಳ್ಪಂ ॥ ಕಿಱುವೊಱೆಯ ನಾನಲರಿಯುದ । ಕಿಱುವಳ್ಳಿಗೆ ತನ್ನ ಕಾಯ್ತು ಬಲ್ಗಾಯ್ ಪೊಱೆಯೇ' (೪–೬) ಎಂದು ಕವಿ ಪ್ರಶ್ನಿಸುತ್ತಾನೆ. ಕೆಲವು ಕಾಲಾನಂತರ ರಾಜರಾಣಿಯರು ಒಂದು ದಿನ ಅರಮನೆಯಲ್ಲಿ ಕುಳಿತು ವಿನೋದವಾಗಿ ಮಾತನಾಡುತ್ತಿರುವಾಗ ಕೆಳದಿಯೊಬ್ಬಳು ಬಂದು ಅಳಸಿಂಗರಾರ್ಯನಿಗೆ ಪುತ್ರೋತ್ಸವವಾದ ಸಮಾಚಾರವನ್ನು ತಿಳಿಸಿದಳು. 'ತಮ್ಮ ತನಯ ಸೂರ್ಯೋದಯಕ್ಕೆ ದರುಣೋದಯ'ವೆಂದು ತಿಳಿದು ರಾಜನು ಅಳಸಿಂಗ ರಾಯನಿಗೆ ಕರೆಕಳುಹಿಸಿದನು. ರಾಜನು ಈ ಶುಭವಾರ್ತೆಯಿಂದ ಹರ್ಷಿತಗೊಂಡು ಒಳ ಬೊಕ್ಕಸದಿಂದ ಹಣವನ್ನು ತರಿಸಿ ಬ್ರಾಹ್ಮಣರಿಗೆ ದಾನಮಾಡಿದನು. ಇದಾದ ಕೆಲವೇ ದಿನಗಳಲ್ಲಿ ರಾಜನಿಗೂ ಪುತ್ರೋತ್ಸವವಾಯಿತು. ಮಗುವಿನ ಜಾತಕವನ್ನು ದೈವಜ್ಞರು ಪರೀಕ್ಷಿಸಿದ ಮೇಲೆ ಅಳಸಿಂಗರಾರ್ಯನೂ ಪರಿಶೀಲಿಸಿ 'ಚಕ್ರವರ್ತಿ' ಯಾಗುವನೆಂದು ಭವಿಷ್ಯವನ್ನು ನುಡಿದನು. ಕಾಲಕ್ರಮೇಣ ಹುಣ್ಣಿಮೆಯ ಚಂದಿರನಂತೆ ಆ ಮಗು ಬೆಳೆಯತೊಡಗಿತು. ಆ ಕುವರನ ಗೆಳೆತನಕ್ಕೆ ಸಿಂಗರಾರ್ಯನ ಮಗನೇ ತಕ್ಕವನೆಂದೆಣಿಸಿ, 'ಗರಿಮೆಯುಮಪೂರ್ವಂ ಸಿರಿಯುಂ । ದೊರೆಗುವರನ ಕೆಳೆತನಕ್ಕೆ ಬೇಟ್ಪಗುಣಂಗಳ್ ನೆರೆದಿರೆ ನಿರವಿಸಿ ರಾಯಂ । ತಿರುಮಲೆಯಾ[ರ್ಯಾ ಖ್ಯೆಯಂ ವಲಂ] ನೆಗೞಿಸಿದಂ' (೪–೮೮). ದಿನ ಕಳೆದಂತೆಲ್ಲಾ ಈ ಬಾಲನ ಚೇಷ್ಟೆ ಬಹುವಿಧವಾಯಿತು. ಅರಮನೆಯಲ್ಲೇ ಇವನ ವಿದ್ಯಾಭ್ಯಾಸವೂ ಆರಂಭವಾಯಿತು. ಯಾವ ಯಾವ ಅಕ್ಷರಗಳನ್ನು ಯಾವ ಯಾವ ತಾಣಗಳಲ್ಲಿ ಹೇಗೆ ಹೇಗೆ ಉಚ್ಚರಿಸ ಬೇಕೆಂಬ ಅಂಶಗಳನ್ನು ಚಿಕ್ಕದೇವರಾಯನು ಕಂಡುಕೊಂಡು ಅಂತೆಯೇ ಸೊಬಗಿನಿಂದ ಉಚ್ಚಾರಣೆಯನ್ನು ಮಾಡತೊಡಗಿದನು. ಕಾಲ ಕ್ರಮೇಣ ಅವನ ಅಭಿರುಚಿ ತರ್ಕ, ಶಾಸ್ತ್ರ, ಪುರಾಣಗಳತ್ತಲೂ ಹರಿದವು. ಒಮ್ಮೊಮ್ಮೆ ತನ್ನಲ್ಲಿಯೇ ಹರ್ಷ ಉಕ್ಕಿದಾಗ ವೀಣೆಯನ್ನು ಬಾರಿಸತೊಡಗಿದರೆ 'ಜಂತ್ರಬಿಜ್ಜೆಗೆ ಪ್ರಾಣಂ ಬಂದುದು'. ಅಷ್ಟೇ ಅಲ್ಲ ಸಂಗೀತ ಯಶಸ್ಸನ್ನು ಪಡೆಯುತ್ತಿತ್ತು. ವಾಣಿಯ ನೂಪುರಸ್ವರ, ತುಂಬಿಯ ಸ್ವರ ಮತ್ತು ಕೈಯಲ್ಲಿರುವ ಗಿಳಿಮಾತಿನ ನುಣ್ಚರಗಳು ಮುಪ್ಪುರಿಗೊಂಡಂತೆ ಚಿಕ್ಕದೇವ ರಾಯನ ವೀಣೆಯಧ್ವನಿ ಕೇಳಿಬರುತ್ತಿತ್ತು. ಆ ನಾದ ಕಿವಿಗೆ ಹೊಕ್ಕೊಡನೆಯೇ ಹೃದಯಕ್ಕೆ ಚೇತನವನ್ನು ನೀಡುತ್ತಿತ್ತು. ಅವನ ಚಟುವಟಿಕೆಗಳು ಇಷ್ಟಕ್ಕೇ ಸೀಮಿತ ವಾಗಿರಲಿಲ್ಲ. ಗರುಡಿಯಲ್ಲಿಯೂ ಅವನಿಗೆ ಆಸಕ್ತಿ ಇದ್ದಿತು. ಚಿಕ್ಕದೇವರಾಯನು ಗರುಡಿಯ ಸಾಧನೆಗೆ ಹೋಗುವ ವೇಷವನ್ನು ತಿರುಮಲಾರ್ಯ ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾನೆ. ಕಟ್ಟಿದ ದಟ್ಟಿ, ಕೈಯಲ್ಲಿ ಪುಟ್ಟ ಹೊನ್ನಿನ ಕೋಲು, ಹೆಗಲ ಮೇಲೆ ಶಲ್ಯ ಮತ್ತು ಹಣೆಯಲ್ಲಿ ನಾಮವನ್ನಿಟ್ಟುಕೊಂಡು ಸಾಧನೆಗೆ ಹೋದರೆ ಮಿಕ್ಕ ಜಟ್ಟಿ

ಗಳು 'ಚಿತ್ತರ ಬೊಂಬೆ'ಯಂತೆ ಕಾಣುತ್ತಿದ್ದರು. ಅಂತಹ 'ಗರುಡಿಯ ಗೆಯ್ಮೆ'ಯಲ್ಲಿ ಅಂಗಸಾಧನೆಯನ್ನು ಮಾಡಿ ಕಡೆಮಿಂಚಿನಂತೆ ಕಾಣುವ ಅಂಗಸೌಷ್ಠವ ಹೊಂದಿದ್ದ ರಾಜನನ್ನು ಉಳಿದೆಲ್ಲ ಜಟ್ಟಿಗಳೂ ಗೌರವಿಸುತ್ತಿದ್ದರು. ಹೀಗೆ ದಿನದಿನಕ್ಕೂ ಪ್ರಬುದ್ಧ ಮಾನನಾಗುತ್ತಿದ್ದ ಕುಮಾರನನ್ನು ಕಂಡು 'ಈ ಕುವರಂ ಜಗದೀಶ್ವರನಾದಪದಜಿಂ ಜಗಮನಿತರ್ಕಂ ಇವನ ಗುಣಶ್ರವಣದಿಂದಾನಂದಮೊಂದಿತೆಅಿನ್' ಎಂದು ದೊಡ್ಡ ದೇವನು ಸಂತಸದಿಂದಿದ್ದನು. ಚಿಕ್ಕದೇವರಾಯನಿಗೆ ಆ ವೇಳೆಗೆ ಯೌವನವು ಪ್ರಾಪ್ತ ವಾಯಿತು. ಅವನು ಪ್ರಾಪ್ತವಯಸ್ಕನಾದುದನ್ನು ಕಂಡ ದೊರೆಯು ಅಳಸಿಂಗ ರಾರ್ಯನನ್ನು ಒಳಿಗೆ ಕರೆದು 'ಎನ್ನೊಡವಂದಪೆನೆನ್ನದೆ। ನನ್ನಿಯೊಳೆನ್ನನುಜತನುಜ ರೊಳ್ ಮನ್ನಣೆಯಿಂ। ದಿನ್ನುಂ ಲೌಕಿಕವೈದಿಕಮನ್ನಿರವಿಸು ನೆಗಟ್ತೆನಮ್ಮ ದೊರೆತನ ದಿರವಂ' ಎಂದನು (೪–೧೬೭). ಅನಂತರ ದೊಡ್ಡದೇವರಾಜನು ತನ್ನ ಸಹೋದರನಾದ ಕೆಂಪದೇವಯ್ಯರಸನಿಗೆ ಅರಸುತನವನ್ನು ಕೊಟ್ಟು ಅವನ ರಕ್ಷಣೆಯಲ್ಲಿ ಮರಿಯ ದೇವಯ್ಯ ಅರಸನನ್ನು ಇಟ್ಟು ಚಿಕ್ಕದೇವರಾಜನು ಕುಮಾರನಾಗಿದ್ದುದರಿಂದ ಅವನಿಗೆ ಕಿರಿಯ ಅರಸುತನವನ್ನು ಕೊಟ್ಟು ಅವನಿಗೆ ಸಹಾಯಕನಾಗಿ ಕಿರಿಯ ಮಗನಾದ ಕಂಠೀರವನನ್ನು ಬಿಟ್ಟು ತನ್ನ ನಂತರ ಹುಟ್ಟಿದ ಸೋದರ ಚಿಕದೇವನನ್ನು ಬಿಟ್ಟಿರ ಲಾರದೆ, ತೀರ್ಥಯಾತ್ರೆಗೆ ಹೋಗುವ ಮುನ್ನ ಪಟ್ಟದ ದೇವರಾಜರಸನನ್ನು ಕರೆದು ಅವನಿಗೆ ಉಪದೇಶವನ್ನು ಮಾಡಿದನು. ಧರ್ಮದಿಂದ ರಾಜ್ಯವನ್ನಾಳಿಕೊಂಡಿರು ಎಂದು ಹೇಳಿ ಅನಂತರ ತನ್ನ ಕಿರಿಯ ತಮ್ಮನನ್ನು ಕರೆದು, ರಾಮನ ಪಾದಸೇವೆಯನ್ನು ಸೌಮಿತ್ರಿ ಮಾಡಿದಂತೆ ನೀನು ನಿಮ್ಮಣ್ಣನ ಪಡಿನೆಳಲಿನಂತಿರು ಎಂಬುದಾಗಿ ಉಪ ದೇಶಿಸಿದನು. ಅಂತೆಯೇ ತನ್ನ ಮಕ್ಕಳಾದ ಚಿಕದೇವೇಂದ್ರ, ಕಂಠೀರವರಿಗೂ 'ಯಥೋಚಿತಂ ಹಿತೋಪದೇಶ'ವನ್ನು ಹೇಳಿ ತೀರ್ಥಯಾತ್ರೆಯನ್ನು ಕೈಗೊಂಡನು.

ಐದನೆಯ ಆಶ್ವಾಸದಲ್ಲಿ ತಿರುಮಲಾರ್ಯನು ದೇವರಾಜನ ದಿಗ್ವಿಜಯ, ಚಿಕದೇವರಾಯನ ದಿನಚರ್ಯೆ ಇವೇ ಮೊದಲಾದ ವಿಷಯಗಳನ್ನು ವರ್ಣಿಸುತ್ತಾನೆ. ಈ ಆಶ್ವಾಸದಲ್ಲಿ ಇತಿಹಾಸದ ವಿಷಯದ ಬಗ್ಗೆ ಹೆಚ್ಚು ಒಲವನ್ನು ತಿರುಮಲಾರ್ಯನು ಹರಿಸಿದಂತೆ ಕಾಣುತ್ತದೆ.

ದೇವರಾಜನು ಅನಂತರ ಅರಸನಾದನು. ಪ್ರತಿದಿನವೂ ನೇಸರು ಮೂಡುವ ಮುನ್ನ ಎದ್ದು ನಿತ್ಯಕರ್ಮಗಳನ್ನು ಪೂರೈಸಿಕೊಂಡು ದೇವಮಂದಿರಕ್ಕೆ ಬಂದು ದೇವಪೂಜೆಯನ್ನು ತೀರಿಸಿಕೊಂಡು ಆಳಸಿಂಗರಾರ್ಯನನ್ನು ಬರಮಾಡಿಕೊಂಡು ಅವನಿಂದ ಪುರಾಣ ಪುಣ್ಯಕಥೆಗಳನ್ನು ಕೇಳುತ್ತಿದ್ದನು[1]. ಶುಕ ಮತ್ತು ವ್ಯಾಸ

---

1 ಮೇಲುಕೋಟೆಯ ರಾಮಾನುಜಾಚಾರ್ಯರ ದೇವಾಲಯದ ಶಾಸನವು ಇದರ ಕಾಲ (ಕ್ರಿ. ಶ. ೧೬೭೮–೭೯) ಆಳಸಿಂಗರಾರ್ಯನು ಮಹಾಭಾರತವನ್ನು ಪ್ರತಿನಿತ್ಯವೂ ವಾಚಿಸುತ್ತಿದ್ದುದಕ್ಕಾಗಿ ಇದನ್ನು ಕೊಟ್ಟಂತೆ ತಿಳಿದುಬರುತ್ತದೆ. (E. c. III ಶ್ರೀರಂಗಪಟ್ಟಣ, ೯೪).

ಮುನಿಗಳ ಭಾಗವತ ಮತ್ತು ಭಾರತಗಳನ್ನು ಕೇಳುತ್ತಿದ್ದ ಪರೀಕ್ಷಿತು ಮತ್ತು ಜನಮೇಜಯರಂತೆ ಇವರಿಬ್ಬರು ಸಹ ಶಾಸ್ತ್ರತತ್ವಗಳ ಸಮಾಲೋಚನೆಯಲ್ಲಿ ದಿನಗಳನ್ನು ನೂಕುತ್ತಿದ್ದರು. ಹೀಗಿರುವಲ್ಲಿ ಇಕ್ಕೇರಿಯ ದೊರೆಯಾದ ಶಿವಪ್ಪನಾಯಕನು ಮೈಸೂರು ದೊರೆಗಳ ಮೇಲೆ ದಂಡೆತ್ತಿ ಬಂದನು. ಆದರೆ ಮೈಸೂರು ಸೈನ್ಯವು ಅವರನ್ನು ಸದೆಬಡಿಯಲು ಶಿವಪ್ಪನಾಯಕನು 'ಹರಣ ಗೊಂಡಳವಾಗಿ ಭಂಗದ ಶಿವಂ ಬಟ್ಟಾಡಿ ಬಿಟ್ಟೋಡಿ'ದನು. ಅವನ ದಳವಾಯಿಯು ಇಕ್ಕೇರಿಯನ್ನು ಹೊಕ್ಕನು. ದೊರೆಯು ಪಟ್ಟಣದಲ್ಲಿಯೇ ಇದ್ದುಕೊಂಡು ತನ್ನ ಸೈನ್ಯದಿಂದ ಹಾಸನವನ್ನು ಮತ್ತು ಸಕ್ಕರೆಪಟ್ಟಣವನ್ನೂ ವಶಪಡಿಸಿಕೊಂಡನು. ಅಷ್ಟೇ ಅಲ್ಲದೆ ಮಲೆನಾಡವರನ್ನು, ಕಳಸ, ಬಿದನೂರು, ಖಾಂಡೆಯ, ದಾನಿವಾಸ, ಜಾಗರ, ಬಿದನೂರು, ಪೊನ್ನೂರು ಇವೇ ಮೊದಲಾದ ಪಟ್ಟಣಗರ ಸೊಕ್ಕನ್ನು ಅಡಗಿಸಿದನು. ಇಕ್ಕೇರಿಯ ಅರಸನಾದ ಶಿವಪ್ಪನಾಯಕನ ಮಗ ಸೋಮಶೇಖರನಾಯಕನು ತನ್ನ ರಾಯಭಾರಿಯನ್ನು ಮೈಸೂರರಸನ ಬಳಿಗೆ ಕಳುಹಿಸಿ ಕಪ್ಪಕಾಣಿಕೆಗಳನ್ನು ಕೊಟ್ಟನು. ಆ ರಾಯಭಾರಿಯು ಬಂದು 'ದೇವರಾಜನಿಗೆರಗಿ ನೀಂ ತಂದೆಯಿಂದಿನಿಂದೆನ । ಗಾಂ ತನಯಂ ನಿನಗೆ ನೆನೆದು ಪೊರ್ದುಗೆಯಿದನಿಂ । ಪಿಂತಣ ಬೇರಮನೆಣಿಸದೆ । ಸಂತತಮುಂ ಮಱುಕವೆರಸಿ ಮನ್ನಿಪುದೆನ್ನಂ (೫–೨೯) ಎಂದು ಬಿನ್ನೈಸಿಕೊಂಡನು. ಹೀಗೆ ಇಕ್ಕೇರಿಯವರ ಸೊಕ್ಕನ್ನು ತಗ್ಗಿಸುವಷ್ಟರಲ್ಲಿ ಕೊಂಗರ ನಾಯಕನಾದ ಚೊಕ್ಕಲಿಂಗನು ತನ್ನ ಸೈನ್ಯವನ್ನು ತೆಗೆದುಕೊಂಡು ಗಡಿಯಲ್ಲಿ ನಿಲ್ಲಿಸಿದನು. ಒಂದು ಲಕ್ಷ ಜನ ಕಾಲಾಳು, ನೂರು ಸೊಕ್ಕಾನೆಗಳು ಮತ್ತು ಹಲವಾರು ಕುದುರೆಗಳಷ್ಟೇ ಅಲ್ಲದೆ ಜೊತೆಗೆ ಶ್ರೀರಂಗರಾಯನನ್ನೂ ಕರೆತಂದನು. ತಂಜಿಯ ದೊರೆಯಾದ ವೇದೋಜಿಯು ಜಗತ್ತಿನಲ್ಲಿ ತನಗೆ ಸರಿಸಾಟಿಯಿಲ್ಲವೆಂದು ತಂಜಾವೂರು ಮತ್ತು ಮಧುರೆಯವರನ್ನು ಹೆದರಿಸಿ ಮೆರೆಯುತ್ತಿದ್ದ ದಾಮರ್ಲ ದೊರೆಯನ್ನು ನಾಶಮಾಡಿದನು. ಹೀಗೆ ತೆಲುಗನಾದ ಶ್ರೀರಂಗರಾಯನೂ, ವಿಜಯಪುರದ ವಜೀರನಾಗಿದ್ದ ವೇದೋಜಿ ಪಂಡಿತನೂ, ದಾಮರ್ಲ, ತುಪಾಕ ಮೊದಲಾದ ಹಲವಾರು ದೊರೆಗಳ ಸೈನ್ಯದೊಂದಿಗೆ ತನ್ನ ಮೂಲಬಲವನ್ನೂ ಸೇರಿಸಿಕೊಂಡು ಈರೋಡು ಕೋಟೆಯನ್ನು ಸುತ್ತಿ ಹಾಕಿ ತನ್ನ ಬಲವನ್ನು ಹೆಚ್ಚಿಸಿಕೊಂಡನು. ಇತ್ತಕಡೆ ಶ್ರೀರಂಗಪಟ್ಟಣದಲ್ಲಿ ದೇವರಾಯನು ತನ್ನ ಮಂತ್ರಿಗಳನ್ನು ಸೇರಿಸಿಕೊಂಡು ಮಂತ್ರಾಲೋಚನೆಯನ್ನು ಮಾಡತೊಡಗಿದನು. ಕೊಂಗರ ಬಳಿ ಸೈನ್ಯ ಜಮಾವಣೆ ಹೆಚ್ಚಿರುವುದರಿಂದಲೂ ದೊಡ್ಡ ದೊಡ್ಡ ಫಿರಂಗಿಗಳಿರುವುದರಿಂದಲೂ ಅವರೊಂದಿಗೆ ಸಂಧಾನವೇ ಹೆಚ್ಚು ಸೂಕ್ತವೆಂದು ಹಲವಾರು ಮಂತ್ರಿಗಳು ಅಭಿಪ್ರಾಯಪಟ್ಟರು. ತಮ್ಮ ರಾಯಭಾರಿಯನ್ನು ಅವರಲ್ಲಿಗೆ ಕಳುಹಿಸಬೇಕೆಂದು ಬಿನ್ನವಿಸಿಕೊಳ್ಳುವಷ್ಟರಲ್ಲಿ ಚಿಕದೇವನು ಅಲ್ಲಿಗೆ ಬಂದನು. ವಿಷಯವು ಅವನಿಗೆ ತಿಳಿಯಲು ಅವನು ಹೀಗೆ ಹೇಳಿದನು.

"ಲೆಕ್ಕಂಗೊಳೆ ಕೊಂಗಬಲಂ ಲಕ್ಕಂಬರಮಿರ್ಕುವೆಂಬರಾದೊಡಮೇನೆ ॥ಲ್ಲಕ್ಕಂ ಮಿಗಿಲೆಮ್ಮೃದಟಿಂ । ಲಕ್ಕಂ ಕೂರ್ಪೊಂದೆ ಪಿರಿದು ಕಿಱಿದಾದೊಡಮೇಂ" (5-65). ದೊರೆಯನ್ನು ಒಪ್ಪಿಸಿ ಕೊಂಗಬಲವನ್ನು ವಿಶೇಷವಾಗಿ ನಿರ್ನಾಮಮಾಡಲು ರಣವೀಳೆಯವನ್ನು ಅವನು ಬೇಡಿದನು. ಚಿಕದೇವನ ಈ ನುಡಿಗಳನ್ನು ಕೇಳಿ ದೊರೆಯು ತನ್ನ ಬಳಸಿ ಕುಳಿತುಕೊಂಡಿರುವವರ ಮುಖಗಳನ್ನು ನೋಡಲಾಗಿ ಅವರು ಅವನ ಸಾಹಸ, ಸ್ಥೈರ್ಯ, ಪರಾಕ್ರಮಗಳನ್ನೂ ಹೊಗಳಿದರು. ಆಗ ದೊರೆಯು ಸಂತುಷ್ಟನಾಗಿ ಚಿಕದೇವನಿಗೆ ಪಾವುಡಗಳನ್ನು, ವೀಳೆಯಗಳನ್ನೂ ಕೊಟ್ಟು ಹರಸಿ ಕಳುಹಿಸಿದನು. ಚಿಕದೇವನು ತನ್ನ ರಾಯಸದವರನ್ನು ಕರೆಕಳುಹಿಸಿ ಅವರಿಂದ ಗಡಿಗಳಲ್ಲಿರುವವರಿಗೆ ತಮ್ಮ ಸೈನ್ಯದೊಡನೆ ಪ್ರಯಾಣ ಸನ್ನದ್ಧರಾಗಿರುವಂತೆ ನಿರೂಪವನ್ನು ಕಳುಹಿಸಿದನು. ಈ ವಿಷಯವು ಮಧುರೆಯ ನಿಯೋಗಿಗೆ ತಿಳಿಯಲು ಅವನು ಚಿಕದೇವನು ಯುದ್ಧ ಸನ್ನದ್ಧನಾಗುತ್ತಿರುವ ವಿಷಯವನ್ನು ಬರೆದು ತನ್ನ ಗುರಿಕಾರನೊಡನೆ ಕಳುಹಿಸಿಕೊಟ್ಟನು. ಹೀಗೆ ಬಂದ ಬಿನ್ನವತ್ತಳೆಯನ್ನು ಓದಿಸಿಕೊಂಡು ಚೊಕ್ಕಲಿಂಗನು ತನ್ನ ಆಪ್ತರಾದ ಶ್ರೀರಂಗರಾಯ ತುಪಾಕದ ಲಿಂಗಮನಾಯಕ ಮತ್ತು ದಾಮರ್ಲದ ಅಯ್ಯಪ್ಪ ನಾಯಕರಿಗೂ ತಿಳಿಸದೆ ಬಹುವೇಗವಾಗಿ ತಿರುಚನಾಪಳ್ಳಿಯನ್ನು ಹೋಗಿ ಸೇರಿದನು. ಈ ವಿಷಯವು ಮರುದಿನ ಶ್ರೀರಂಗರಾಯನಿಗೆ ತಿಳಿಯಲು ಅವನು ಅಲ್ಲಿಗೆ ಬಂದು ಅಲ್ಲಿರುವ ದಾಮರ್ಲ, ತುಪಾಕದವರ ಬಲದೊಂದಿಗೆ ತೆಂಜಿಯ ತುರಗ ಸಮೂಹದ ಬಲವನ್ನು ನೆಚ್ಚಿಕೊಂಡು ಮಧುರೆಯ ನಾಯಕನಿಗೆ 'ನೀನು ಅಲ್ಲಿಗೆ ಹೋದದ್ದು ಒಳ್ಳೆಯದೇ ಆಯಿತು. ನೀನು ಎಲ್ಲರನ್ನೂ ಕಾಪಾಡತಕ್ಕದ್ದು, ನಾವು ಯುದ್ಧಕ್ಕೆ ಸಿದ್ಧರಾಗುತ್ತೇವೆ,' ಎಂದು ಬರೆದು ಕಳುಹಿಸಿದನು. ಈ ವಿಷಯವು ಮಹಾರಾಜನಿಗೆ ತಿಳಿಯಲು ಅವನು ಯುವರಾಜನಾದ ಚಿಕದೇವನನ್ನು ಕರೆದು 'ಸಿಂಗಮಿರೆ ತನ್ನ ನೆಲೆಯೊಳ್ । ಪೊಂಗುವ ಪಡಿದನಿಗೆ ಬೆದಱಿ ಮದಕರಿನಿಕರಂ । ಬಂಗಂ ಬಡೆದೋಡುವವೋಲ್ । ಕೊಂಗಂ ನೀಂಬರ್ಪ ಮಾತಿನಿಂದಲೆ ಪರಿದಂ । (5-83) ಎಂದು ಅವನ ಪ್ರಶಂಸೆಯನ್ನು ಮಾಡಿದನು. ಯುವರಾಜನು ಕೊಂಗರದಳವನ್ನು ಸೋಲಿಸಿ ಅವರಲ್ಲಿದ್ದ ಕುಲಶೇಖರನೆಂಬ ಪ್ರಸಿದ್ಧವಾದ ಆನೆಯನ್ನು ಸೆರೆಹಿಡಿದು ತಂದನು. ದೇವರಾಜನು ಉತ್ತರದಿಕ್ಕಿನಲ್ಲಿ ದಿಗ್ವಿಜಯವನ್ನು ಕೈಗೊಂಡು ಪುಲಿಯೂರು, ನೆಲೆಯೂರು ಮತ್ತು ಚಿಕ್ಕನಾಯಕನ ಹಳ್ಳಿಗಳನ್ನು ವಶಪಡಿಸಿಕೊಂಡನು. ಕುಣಿಗಲ್ ಮತ್ತು ನರಸಿಂಗಪುರದ ಕೋಟೆಗಳನ್ನು ಆಕ್ರಮಿಸಿಕೊಂಡು ಅಲ್ಲಿಯ ನಾಯಕರನ್ನು ಸೆರೆಯಲ್ಲಿಟ್ಟನು. ಹೀಗೆ ದಿನದಿನಕ್ಕೂ ಪ್ರವರ್ಧಮಾನನಾಗಿ ಏರುತ್ತಿದ್ದ ಈತನ ಅದೃಷ್ಟವನ್ನು ನೋಡಿ ಮಧುರೆಯ ದೊರೆಯೇ ಮೊದಲಾದವರು 'ಇವನಂ ಮಱಿವೊಕ್ಕಲ್ಲದೆ ತಾಂ ಬಾಟಲ್ಕಿಲ್ಲೆಂದು' ತಿಳಿದು ತಮ್ಮ ಬಳಿಯಿದ್ದ ಐಶ್ವರ್ಯವನ್ನು ತಂದು ಇವನಿಗೊಪ್ಪಿಸಿದರು. ಮಧುರೆಯ ಚೊಕ್ಕನು ದೇವರಾಜನಿಗೆ ಲಕ್ಷರೂಪಾಯಿಗಳನ್ನು ಕಪ್ಪವಾಗಿ ಕೊಟ್ಟನು.

6

ಮುಂದೆ ತಿರುಮಲಾರ್ಯನು ತನಗೂ ಯುವರಾಜನಾದ ಚಿಕದೇವರಾಜ ಒಡೆಯನಿಗೂ ಇರುವ ಸಂಬಂಧವನ್ನು ಕುರಿತು ವರ್ಣಿಸುತ್ತಾನೆ. ತಿರುಮಲಾರ್ಯನನ್ನು ಕಂಡರೆ ಚಿಕದೇವನಿಗೆ ಇನ್ನಿಲ್ಲದ ಪ್ರೇಮ. ತಂದೆಯ ಸ್ನೇಹಿತನ ಮಗನೆಂದು ವಾತ್ಸಲ್ಯ. ಇದಕ್ಕೂ ಮಿಗಿಲಾಗಿ 'ನನ್ನಿಂದ ಏಳ್ಗೆಹೊಂದುತ್ತಿರುವನು', ಎಂಬ ಅಭಿಮಾನ ಬೇರೆ. ತಿರುಮಲಾರ್ಯ ಎಂಬ ಹೆಸರೇ ಸಾಕು, ಚಿಕದೇವನ ಅಂತಃಕರಣ ಹೆಚ್ಚುವುದಕ್ಕೆ. ನೆವವಿಲ್ಲದೆಯೆ ಒಲಿದು ತಿರುಮಲಾರ್ಯನನ್ನು ಕರೆ ಕಳುಹಿಸುತ್ತಿದ್ದನು ಆದರಿಸುತ್ತಿದ್ದನು, ಮನವಾರೆ ಮನ್ನಿಸುತ್ತಿದ್ದನು. ಸವಿನುಡಿಯನ್ನು ನುಡಿದು, ಅಭೀಪ್ಸಿತವಸ್ತುಗಳನ್ನು ನೀಡುತ್ತಿದ್ದನು. 'ಮನ್ನಿಪನಾವಗಂ ತಿರುಮಲ್ಯಾರಂಗೆ' ಎಂದು ವಿದ್ವಾಂಸರೆಲ್ಲರೂ ಹೊಗಳುತ್ತಿದ್ದರೆಂದಮೇಲೆ ತಿರುಮಲಾರ್ಯನನ್ನು ಕಂಡರೆ ಚಿಕದೇವನಿಗೆ ಎಂತಹ ಪ್ರೀತಿ ಇತ್ತೆಂಬುದು ವ್ಯಕ್ತವಾಗುತ್ತದೆ. ಹೆಚ್ಚೇನು, ಇವನು ಯುವರಾಜನಿಗೆ ಧರ್ಮಸಚಿವನೂ, ಕರ್ಮಸಚಿವನೂ ಅಲ್ಲದೆ ಜೊತೆಗೆ ನರ್ಮಸಚಿವನೂ ಆಗಿದ್ದನು. ದೊರೆಯನ್ನು ಕಂಡರೆ ತಿರುಮಲಾರ್ಯನಿಗೂ ಅಷ್ಟೇ ಪ್ರೀತಿ. ತಿರುಮಲಾರ್ಯನೂ ಅಷ್ಟೇ ಸಹೃದಯತೆಯಿಂದ ಚಿಕದೇವನ ಗುಣಗಳನ್ನು ವರ್ಣಿಸುತ್ತಾನೆ. 'ಚದುರಂ ಚಾಗಿಯಲಂಪುಗಾಜಿನೆಱೆಯುಂ ಸಂಗೀತ ಸಾಹಿತ್ಯ ಕೋವಿದಂ' ಎಂದು ಬಣ್ಣಿಸುತ್ತಾನೆ. ಅಷ್ಟೇ ಅಲ್ಲ; ಇವನು ವಿವೇಕಶಾಲಿ, ನಯಶೀಲ, ಕಲಾವಿದ, ಒಳ್ಳೆಯ ಮಾತುಗಳನ್ನಾಡುವವನು, ಭಾಮಿನೀ ಹೃದಯಗ್ರಾಹಿ, ಇತ್ಯಾದಿ ಗುಣಗಳನ್ನು ಹೊಂದಿದವನು. ಹೀಗೆ ತಮ್ಮಿಬ್ಬರ ಗುಣವರ್ಣನೆಗಳನ್ನುಮಾಡಿದನಂತರ ಮುಂದಿನ ಆಶ್ವಾಸದಲ್ಲಿ ತಾವಿಬ್ಬರೂ ಕಂದರ್ಪ ಕಲಾಧರರೆಂದು ಹೇಳಿಕೊಂಡು ಕೇವಲ ಶೃಂಗಾರ ವರ್ಣನೆಯನ್ನು ವೇಶ್ಯಾವಾಟದ ಚಿತ್ರಣವನ್ನೂ ಕೊಡುತ್ತಾನೆ. 'ರಾಯಗುವರರೊಳಂ ಪಾರ್ವಗುವರರೊಳಂ ಕಂದರ್ಪ ಕಲಾಧರರೆಂಬಿವರ್ ಚಿಕದೇವರಾಯ ತಿರುಮಲಾರ್ಯಗ್ರಪ ಶರೀರಮೆನಿಸಿ ಮೆಯ್ಮೆಯೊಳಂ ಮೆಯ್ಸಿರಿಯೊಳಂ ಬೇರ್ಪಡಿಸಲರಿದೆನಿಸಿ ತೋರ್ಪರ್'[1] ಎಂದು ಹೇಳುತ್ತಾನೆ.

ಮೇಲೆ ಹೇಳಿದಂತೆ ಆರನೆಯ ಆಶ್ವಾಸದಲ್ಲಿ ತಿರುಮಲಾರ್ಯನು ಕಂದರ್ಪ ಕಲಾಧರರ ವಿಹಾರ ವರ್ಣನೆಯನ್ನು ವರ್ಣಿಸುತ್ತಾನೆ. ಆ ವರ್ಣನೆಗಳಲ್ಲಿ ಹಲವನ್ನಿಲ್ಲಿ ನೋಡಬಹುದು.

ಚಂದ್ರ ಮಂಡಲವನ್ನು ಕುರಿತ ಕಲ್ಪನೆ ತಿರುಮಲಾರ್ಯನ ದೃಷ್ಟಿಯಲ್ಲಿ ಹೀಗಿದೆ:

1. ಚಿಕದೇವರಾಜ ವಿಜಯ, ಪುಟ ೧೧೯ ೫–೧೧೨, ವಚನ.

ಎಸೆದುದು ಸಂಜೆಗೆಂಪೆನಿಪ ಕಾಮನ ಚೂಳಿಯ ದೂಳ ದಾಟಿಗಂ
ಮುಸುಕುವ ಮರ್ಬೆನಿಪ್ಪಿಡುವ ಬಾಣತುಪಾಕದ ಧೂಮದುರ್ಬುಗಂ
ಮಿಸುವಚಿಲೆಂಬರಲ್ಗಣೆಗಮುಳ್ಕದ ಕಲ್ಲೆರ್ದೆವೆಣ್ಗಳೊಡ್ಡನಾ
ರ್ದಿಸೆಯುರಿಗೊಂಡು ಪೊಣ್ಮುವ ಪಿರಂಗಿಯ ಗುಂಡೆನೆ ಚಂದ್ರಮಂಡಲಂ[1]

ಇಲ್ಲಿ ತಿರುಮಲಾರ್ಯನ ಹೊಸ ದೃಷ್ಟಿಯನ್ನು ಕಾಣಬಹುದು. ಇಲ್ಲಿ ಇವನ ಕಲ್ಪನೆಯಲ್ಲಿ ನಾವೀನ್ಯತೆ ಇದೆ.

ತಿಂಗಳುಮೋಡನುರ್ಕುವ ಬೆ
ಳ್ದಿಂಗಳುಮುಕ್ಕುಂ ನಿರೂಪಿಕಾಂತಃಕರಣ
ಕ್ಕಿಂಗಡಲ ಕುವರಿ ತಾಂ ಪಡೆ
ದಂಗಜ ಶಿಶುಗೆಚಿಯಲಿಟ್ಟ ಪಾಲ್ಬೆಣ್ಣೆಯವೋಲ್[2]

ಬೆಳುದಿಂಗಳ ವರ್ಣನೆ ಹೀಗೆ ಹರಿದುಬಂದಿದೆ. ವಿಟರ- ವೇಶ್ಯೆಯರ ಪಾತ್ರವು ಈ ಆಶ್ವಾಸದುದ್ದಕ್ಕೂ ಹರಿದುಬಂದಿದೆ. ಶೃಂಗಾರವರ್ಣನೆಗೇ ಇಲ್ಲಿ ತಿರುಮಲಾರ್ಯನು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾನೆ.

ಆರನೆಯ ಆಶ್ವಾಸಕ್ಕೆ ಅಪೂರ್ಣವಾದ ಈ ಗ್ರಂಥದಲ್ಲಿ ಶೃಂಗಾರ ಭಾವಗಳನ್ನು ವಿವರಿಸುವ ಅನೇಕ ಹಾಡುಗಳೂ, ತ್ರಿಪದಿಗಳು ಕಾಣಸಿಗುತ್ತವೆ. ಅವುಗಳಲ್ಲಿ ಯಾವ ವೈವಿಧ್ಯವಾಗಲಿ, ಸಾಹಿತ್ಯಕ ಗುಣಗಳಾಗಲಿ ಕಂಡು ಬರುವುದಿಲ್ಲ. ಸಾಲದೆಂಬಂತೆ ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಪದ್ಯವೊಂದನ್ನು ಕಾಣಬಹುದು ! ಷಟ್ಪದಿ, ತ್ರಿಪದಿಗಳ ಬಗ್ಗೆ ಇವನಿಗಿರುವ ತಾತ್ಸಾರ ಮನೋಭಾವವನ್ನು ಅವನ ಈ ಮಾತುಗಳಲ್ಲಿ ನೋಡಬಹುದು. 'ಅಯ್ಯೊ ಬೀರದಿಂದೆನ್ನ ನುಡಿ ನಿನ್ನ ನುಡಿಗಳ ನಿರ್ಮಾಡಿಸಿ ಪೆರ್ಚಿದಂತೆ ಡೊಂಬಿಯ ತಂಬಟೆಗರ್ ಪಾಡುವ ತಿವದಿಯನಿರ್ಮಾಡಿಸಿ ಷಟ್ಪದಿಯಾದುದು...'[3] 'ಡೊಂಬಿಯ ತಂಬಟೆಗರು ಹಾಡುವ ಪದ್ಯಗಳೆಂಬಲ್ಲಿ ವಿದ್ವಾಂಸನಾದ ಅವನಿಗೆ ತ್ರಿಪದಿಗಳ ವಿಷಯದಲ್ಲಿರುವ ಅಸಡ್ಡೆಯೂ ತ್ರಿಪದಿಯು ಇಮ್ಮಡಿಯಾಗಿ ಷಟ್ಪದಿಯಾಯಿತೆಂಬಲ್ಲಿ ಅವನ ಅಜ್ಞಾನವೂ ವ್ಯಕ್ತಪಟ್ಟಿದೆ'[4] ಎಂಬ ವಿಮರ್ಶಕರ ಪೂರ್ವಾರ್ಧ ವಿಮರ್ಶೆ ಸರಿಯೆನಿಸುತ್ತದೆ. ಆದರೆ ತ್ರಿಪದಿ, ಷಟ್ಪದಿಗಳ ಬಗ್ಗೆ ಅಸಡ್ಡೆ ಇದ್ದಿರಬಹುದಾದರೂ, ಅಜ್ಞಾನವಿತ್ತೆಂದು ಸಮರ್ಥಿಸುವುದು ಸ್ವಲ್ಪ ಕಠಿಣವಾಗುತ್ತದೆ. ಅವನ ಕಾಲದಲ್ಲಿ ಮೇಲಿನ ಎರಡು ಸಾಹಿತ್ಯ ಪ್ರಕಾರಗಳು ಪೂರ್ಣ

---

1. ಅದೇ : ಪುಟ 134, 6–17.
2. ಅದೇ ಪುಟ 134, 6–25.
3. ಅದೇ : ಪುಟ 170
4. ಡಾ. ಎಂ. ಚಿದಾನಂದಮೂರ್ತಿ : ಸಂಶೋಧನ ತರಂಗ, ತ್ರಿಪದಿ : ಮತ್ತು ಅದರ ಇತಿಹಾಸ, ಪುಟ, 233.

ವಾಗಿ ಬೆಳೆದು ನಿಂತಿದ್ದವು. ಆದ್ದರಿಂದ ತ್ರಿಪದಿ, ಷಟ್ಪದಿಗಳ ವಿಷಯವಾಗಿ ತಿರುಮಲಾರ್ಯನು ಸಾಕಷ್ಟು ತಿಳಿದುಕೊಂಡಿದ್ದನೆಂದು ಭಾವಿಸಬಹುದು.

ಇಲ್ಲಿ ವಿವರಿತವಾಗಿರುವ ತ್ರಿಪದಿಗಳೆಲ್ಲವೂ ಮಾತ್ರಾ ಗಣಘಟಿತವಾದವುಗಳು. ಐದು ಮಾತ್ರೆಗಳ ಗಣಗಳು ಇಲ್ಲಿ ಬರುತ್ತವೆ. ಇದಲ್ಲದೆ ಈ ಆಶ್ವಾಸದ ಕೊನೆ ಕೊನೆಗೆ ಸುಮಾರು ಎಂಬತ್ತು ಸಾಂಗತ್ಯ ಪದ್ಯಗಳೂ ಕಾಣಸಿಗುತ್ತವೆ. ತ್ರಿಪದಿಗಳಲ್ಲೇ ಆಗಲಿ, ಸಾಂಗತ್ಯಗಳಲ್ಲೇ ಆಗಲಿ ಹಿಂದಿನ ಕವಿಗಳನ್ನು ಅನುಸರಿಸಿ, ವೇಶ್ಯೆಯರ ಬಾಯಲ್ಲಿ ಹಾಡಿಸಿದ್ದಾನೆ. ಇವುಗಳನ್ನು 'ಬಣ್ಣವಾಡು'ಗಳೆಂದು ಹೆಸರಿಸಿದ್ದಾನೆ. ಈ ಗ್ರಂಥದಲ್ಲಿ ಸಂಸ್ಕೃತ ಛಂದಸ್ಸಿನ 'ಇಂದ್ರವಜ್ರ' 'ಅನುಷ್ಟುಪ್' 'ವಸಂತ ತಿಲಕ' ಮೊದಲಾದವುಗಳನ್ನು ಉಪಯೋಗಿಸಿದ್ದಾನೆ.

'ಚಿಕ್ಕದೇವರಾಜ ವಿಜಯ'ವು ತಿರುಮಲಾರ್ಯನು ರಚಿಸಿರುವ ಚಂಪೂಗ್ರಂಥ. ಐತಿಹಾಸಿಕ ದೃಷ್ಟಿಯಿಂದ ಇದಕ್ಕೆ ಬೆಲೆಕೊಡುವಷ್ಟೆ, ಈ ಗ್ರಂಥವನ್ನು ಚಂಪೂ ಸಾಹಿತ್ಯದಲ್ಲಿ ರಚಿಸಿರುವುದಕ್ಕೂ ಕೊಡಬೇಕಾಗುತ್ತದೆ. ಪಂಪ, ರನ್ನರಲ್ಲಿ ಹರಿದು ಬಂದ ಚಂಪೂ ಸಾಹಿತ್ಯವಾಹಿನಿ ಅನಂತರದ ಶತಮಾನಗಳಲ್ಲಿ ಬತ್ತಿಬರಡಾಗಿದ್ದು, ಮತ್ತೆ ಹದಿನೇಳನೆಯ ಶತಕದ ಉತ್ತರಾರ್ಧದಲ್ಲಿ ತೊರೆಯಾಗಿ ಕಾಣಿಸಿಕೊಂಡಿತು. ಚಂಪೂ ಸಂಪ್ರದಾಯ ಪುನರುಜ್ಜೀವನಗೊಂಡಿತು.

ಈ ಗ್ರಂಥದ ಶೈಲಿಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬಹುದು. ತಿರುಮಲಾರ್ಯನದು ಒಳ್ಳೆಯ ಪಳಗಿದ ಕೈ. ಚಂಪುವಿನಲ್ಲಿ ಕೃತಿ ರಚನೆಮಾಡಿದರೂ ಅವನ ಪದ ಬಂಧಗಳು ಲಾಲಿತ್ಯದಿಂದ ಕೂಡಿವೆ. ಕನ್ನಡ–ಸಂಸ್ಕೃತಗಳನ್ನು ಸಮಸಮ ನಾಗಿ ಬಳಸುವ ಪ್ರಯತ್ನವನ್ನು ಕೈಗೊಂಡಿದ್ದರೂ ಸಂಸ್ಕೃತದ ಕಡೆಗೇ ಅವನ ಒಲವು ಜಾಸ್ತಿ. ತನ್ನ ಕೃತಿಯ ಬಗ್ಗೆ ಅವನು ಹೇಳಿಕೊಂಡಿರುವ ಅವನ ಮಾತುಗಳೇ ಪ್ರಮಾಣ. ಅವನು ಹೀಗೆ ಹೇಳುತ್ತಾನೆ :

ಸಕ್ಕದಗನ್ನಡವೆರಡಱೊ
ಳೆಕ್ಕಸರಂಗೊಳ್ವುದೋಜೆಗಬ್ಬಂ ರಸದಿ !
ದುಕ್ಕಳಿಸಿ ಪಾಯ್ವುಪೆರ್ದೊಱೆ
ಗಕ್ಕುಮೆ ತಡೆಪಳ್ಳದಿಂಟೆಕಿಱುದೊಱೆಗೆಱೆಗಳ್.1

ಯುದ್ಧದ ವರ್ಣನೆಯನ್ನು ವಿವರಿಸುವಾಗ ಅದನ್ನು ನಮ್ಮ ಮನಸ್ಸಿಗೆ ಮುಟ್ಟುವಂತೆ ಚಿತ್ರಿಸುತ್ತಾನೆ. ಯಾವ ತಡೆಯಿಲ್ಲದೆಯೂ ಅವನ ಮಾತು ಹರಿಯುತ್ತದೆ.

1 ಚಿಕ್ಕದೇವರಾಯ. ವಿಜಯ ೧–೧೫

ಕವೆಗೋಲಿಂ ತಿವಿದಿಕ್ಕಿ ಕಕ್ಕಡೆಗಳಾ ಕೈಯಿಟ್ಟೆಯಿಂದಿಟ್ಟುಮು
ಟ್ಟುವರಲ್ ಪಟ್ಟೆಯದಿಂದೆ ಕುಟ್ಟಿ ಗದೆಯಿಂದಂ ಮೋದಿ ಕಾಯ್ದೆಣ್ಣೆಗುಂ
ಬವನೇ ಕೌಚಿಯುರುಳ್ಚಿ ಪಂದಿದಲೆಯಂ ಪುಲ್ಗಿರ್ಚಿನೊಳ್ ಸೀದುಮಂ
ದವರಂ ಪಂದಲೆಗುಟ್ಟಿಯೊಟ್ಟಿದರದೆಂತೋ ಬೆಟ್ಟೆನಲ್ಕಟ್ಟೆಯಂ[1]

ಮೇಲಿನ ವರ್ಣನೆ ನಿಜಕ್ಕೂ ಸಹಜ ಸುಂದರವಾಗಿದೆ. ಯುದ್ಧದ ಚಿತ್ರಣ, ಅದನ್ನು ಓದುತ್ತಿದ್ದಂತೆ, ನಮ್ಮ ಕಣ್ಣಿಗೆ ಕಟ್ಟುತ್ತದೆ.

ಅಳಸಿಂಗರಾರ್ಯನು ದೊರೆಗೆ ಆಶೀರ್ವಾದವನ್ನು ಮಾಡುವ ಸಂದರ್ಭವನ್ನು ಬಹುಸರಳವಾಗಿ ಅಷ್ಟೇ ಕ್ರಿಯಾತ್ಮಕವಾಗಿ ತಿರುಮಲಾರ್ಯನು ಹೇಳಿದ್ದಾನೆ.

ಧರೆಯಂ ಪಾಲಿಸುದೇವರಂ ಭಜಿಸು ಪಾರ್ವರ್ಗೀ ಪ್ರಜಾವರ್ಗಮಂ
ಪೊರೆ ತತ್ತತ್ಕುಲಧರ್ಮದೊಳ್ ಸ್ವಜನಮಂ ಪೆಂಪೇಱಿ ಸೊಲ್ದಾರ್ತರೊಳ್
ಕರುಣಂಗೆಯ್ ಪಿರಿಯರ್ಗೆ ಮೊಟ್ಗು ಜಸಮಂ ಕೈಕೊಳ್ ಸರೋಜಾಕ್ಷನಂ
ದೊರೆಗೊಂಬೊರ್ವ ಕುಮಾರನಂ ಪಡೆದುತಾ ಶಿಷ್ಟರ್ಗಭೀಷ್ಟಾರ್ಥಮಂ[2]

ವೃತ್ತಗಳಷ್ಟೇ ಸರಳವಾಗಿ ತಿರುಮಲಾರ್ಯನು ಕಂದಪದ್ಯಗಳನ್ನೂ ಬರೆಯ ಬಲ್ಲನೆಂಬುದಕ್ಕೆ ಒಂದೆರಡು ನಿದರ್ಶನಗಳನ್ನು ನೋಡಬಹುದು. ಅಮೃತಾಂಬೆ ಗರ್ಭವನ್ನು ಧರಿಸಿದ ಸಂದರ್ಭವನ್ನು ಕುರಿತು 'ಬಳ್ಳಿಗೆ ತನ್ನ ಕಾಯಿ ಹೊರೆಯೆ' ಎನ್ನುವ ಗಾದೆಯ ಮಾತು ಹೀಗೆ ಉಪಯೋಗಿಸಿಕೊಂಡಿದ್ದಾನೆ.

ಪೊಱಲಾರಳ್ ತೊಡವುಗಳಂ
ಪೊಱುವಳ್ ಪೊಡೆಗೊಂಡ ವಿಶ್ವಗರ್ಭನನೊಳ್ಪಿಂ
ಕಿಱುವೊಱೆಯ ನಾನಲರಿಯದ
ಕಿಱುವಳ್ಳಿಗೆ ತನ್ನ ಕಾಯ್ತು ಬಲ್ಗಾಯ್ ಪೊಱೆಯೇ (೪-೬)

ಪೂರ್ವ ಕವಿಗಳನ್ನು ಸ್ಮರಿಸುವಲ್ಲಿ ಹೀಗೆ ಹೇಳುತ್ತಾನೆ.

ಸಕಲವಿಭವಾಕೃತಿಯೊಳಂ
ಪ್ರಕಟಿತಮೆನಿಸಿತ್ತು ರಾಮಕೃಷ್ಣಾಕೃತಿಗಳ್
ಶುಕವಾಲ್ಮೀಕಿವ್ಯಾಸರ
ಸುಕವಿತೆಯಿಂದೆನೆ ಕವೀಂದ್ರರೇನಗ್ಗಳರೋ.[3]

---

1 ಅದೇ ೨-೪೭

2 ಅದೇ ೩-೧೨೦ : ಕ್ರಿ.ಶ. ೧೪೧೧ರಲ್ಲಿ ಪ್ರೌಢಪ್ರತಾಪ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನನ್ನು ವರ್ಣಿಸುವ ಶಾಸನದ ಈ ಭಾಗವನ್ನು ಮೇಲಿನದಕ್ಕೆ ಹೋಲಿಸಿ ನೋಡಿ. ಈ ಶಾಸನದ ಕರ್ತೃ ಮಧುರ ಕವಿ.

ಕೆಱೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿಂತ್ರರ್ಗಿಂಬುಕೆಯ್ ನಂಬಿದ........ಶಾಸನ ಸಾಹಿತ್ಯ ಸಂಚಯ : ಎ. ಎಂ. ಅಣ್ಣೀಗೇರಿ, ಪುಟ ೧೬೨

3 ಚಿಕ್ಕದೇವರಾಯ. ವಿಜಯ : I-೨೦,

ಕೇವಲ ಒಂದೆರಡು ಉದಾಹರಣೆಗಳ ಮೂಲಕ ತಿರುಮಲಾರ್ಯನ ಶೈಲಿಯ ಸ್ವರೂಪವನ್ನು ಪರಿಚಯ ಮಾಡಿಕೊಡುವ ಒಂದು ಪುಟ್ಟ ಪ್ರಯತ್ನವನ್ನು ಮೇಲೆ ಮಾಡಿದೆ. ಇದರಿಂದ ತಿರುಮಲಾರ್ಯನು ತನ್ನ ಗ್ರಂಥದುದ್ದಕ್ಕೂ ಇಷ್ಟೇ ಲಲಿತವಾಗಿ ಬರೆದುಕೊಂಡು ಹೋಗಿರುವನೆಂದು ಅರ್ಥವಲ್ಲ. ಸಂಸ್ಕೃತದ ಮೇಲೆ ಇವನಿಗಿರುವ ಪ್ರಭುತ್ವ ವ್ಯಾಮೋಹಗಳು ಇವನ ಕಾವ್ಯದುದ್ದಕ್ಕೂ ಹರಿದುಕೊಂಡು ಬಂದಿರುವುದನ್ನು ನೋಡಬಹುದು. ಇದರಿಂದ ಕನ್ನಡವನ್ನು ಕಡೆಗಾಣಿಸಿರುವನೆಂದು ಅರ್ಥವಲ್ಲ. ಅನೇಕ ತದ್ಭವಗಳನ್ನು ಉಪಯೋಗಿಸಿ ಕನ್ನಡ ಸಾಹಿತ್ಯಕ್ಕೆ ತನ್ನ ಕಾಣಿಕೆಯನ್ನು ನೀಡಿದ್ದಾನೆ. ೧೭ನೆಯ ಶತಮಾನದಲ್ಲಿ ಚಿಕ್ಕದೇವರಾಜ ಒಡೆಯನ ಕಾಲದಲ್ಲಿ ಪುನರುಜ್ಜೀವನಗೊಂಡ ಚಂಪೂ ಸಾಹಿತ್ಯ ಪ್ರಕಾರವು ಪಂಪರನ್ನಾದಿಗಳ ಮೇಲ್ಮಟ್ಟಕ್ಕೆ ಏರದಿದ್ದರೂ, ದ್ವಿತೀಯ ದರ್ಜೆಯ ಚಂಪೂಗ್ರಂಥಗಳಲ್ಲಿ ತಿರುಮಲಾರ್ಯನ ಈ ಗ್ರಂಥ ಒಂದು ಪ್ರಮುಖವಾದ ಸ್ಥಾನವನ್ನು ಸಂಪಾದಿಸಲು ಬೇಕಾದ ಎಲ್ಲ ಅರ್ಹತೆಗಳನ್ನೂ ಹೊಂದಿದೆಯೆಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಆಗಲಾರದು.

ಡಾ. ಬಸವರಾಜ ಸಬರದ

ಹಳೆಮನೆಯವರ ಐತಿಹಾಸಿಕ ನಾಟಕಗಳಲ್ಲಿ ಸಮಕಾಲೀನ ಪ್ರಜ್ಞೆ

ಇತಿಹಾಸವನ್ನು ವೈಭವೀಕರಿಸಿ ವರ್ಣಿಸುವುದೇ ಕೆಲವು ಲೇಖಕರ ಉದ್ದೇಶವಾದರೆ, ಇತಿಹಾಸವನ್ನು ತಿರುಚಿ, ಅದರ ಒಳನೋಟಗಳನ್ನರಿಯದೆ ಅದಕ್ಕೆ ಅಪಚಾರ ಮಾಡುವಂಥವರೂ ಕೆಲವು ಲೇಖಕರಿದ್ದಾರೆ. ಇವೆರಡೂ ತುಂಬಾ ಅಪಾಯಕಾರಿ ದೃಷ್ಟಿಕೋನಗಳು. ಮೊದಲೇ ನಮ್ಮಲ್ಲಿ ಅಥೆಂಟಿಕ್ ಆದ ಇತಿಹಾಸ ಸಿಗುವುದು ಅಪರೂಪ. ಇದ್ದ ಎಳೆಗಳನ್ನೇ ತೊಟ್ಟುಕೊಂಡು ನಿಂತು ಕಣ್ಣೆದುರಿಗಿನ ಇತಿಹಾಸ ಇಂದಿನ ಚಲನಶೀಲ ಬದುಕಿಗೆ ತುಂಬಾ ಸಹಕಾರಿಯಾಗಬಲ್ಲದು. ವರ್ತಮಾನವೆಂಬುದು ಭೂತ ಮತ್ತು ಭವಿಷತ್‌ಗಳ ನಡುವೆ ಇರುವ ಒಂದು ಅರ್ಥಪೂರ್ಣಕೊಂಡಿ. ಭೂತ ಕಾಲದ ಎದೆಯ ಮೇಲೆ ವರ್ತಮಾನದ ಸವಾರಿ ನಡೆದಿರುತ್ತದೆ. ಆದ್ದರಿಂದ ವರ್ತಮಾನದ ಲೇಖಕರಿಗೆ ಇತಿಹಾಸ ಚಲನಶೀಲವಾದದ್ದೆಂಬುದು ಸ್ಪಷ್ಟವಾಗಬೇಕಾಗುತ್ತದೆ.

ಇತಿಹಾಸದುದ್ದಕ್ಕೂ ಮಾನವನ ವೈವಿಧ್ಯಮಯ ಬದುಕು ಹಾಸುಹೊಕ್ಕಾಗಿದೆ, ಚಿರಂತನ ಮೌಲ್ಯಗಳಾದ ಪ್ರೀತಿ–ವಾತ್ಸಲ್ಯ ದಯೆ–ಅನುಕಂಪಗಳ ಜತೆಗೆ ದ್ವೇಷ–ಮತ್ಸರ–ಸ್ವಾರ್ಥದಂತಹ ಭಾವನೆಗಳು ಮನುಷ್ಯ ಹುಟ್ಟಿದಾಗಿನಿಂದಲೂ ಕಾಡುತ್ತಲೇ ಬಂದಿವೆ. ಕಾಲ–ದೇಶ–ಭಾಷೆ ಸಂದರ್ಭ ಬೇರೆ ಬೇರೆಯಾದರೂ ಕೂಡ ಮನುಷ್ಯನ ಬದುಕಿನ ನೆಲೆಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿರುತ್ತವೆ. ಇತಿಹಾಸವನ್ನು ಅದರ ಕಾಲ–ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುತ್ತಾ, ಸಮಕಾಲೀನ ಸಮಸ್ಯೆಗಳೊಂದಿಗೆ ತೂಗಿ ನೋಡಿದಾಗ ಇತಿಹಾಸದ ಅನೇಕ ಸಂದರ್ಭಗಳೂ ಕೂಡ ಪ್ರಸ್ತುತವೆನಿಸುತ್ತವೆ. ಇಂತಹ ಒಂದು ದೃಷ್ಟಿಕೋನ ಐತಿಹಾಸಿಕ ಸಾಹಿತ್ಯ ಕೃತಿಗಳಲ್ಲಿ ಬೆಳೆಯಬೇಕಾಗಿದೆ.

ಈಗಾಗಲೇ ನಾಟಕ ಸಾಹಿತ್ಯದಲ್ಲಿ ತಮ್ಮನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿರುವ ಲಿಂಗದೇವರು ಹಳೆಮನೆಯವರ ಎರಡು ಐತಿಹಾಸಿಕ ನಾಟಕಗಳಲ್ಲಿ ಇಂತಹ ಒಂದು

ದೃಷ್ಟಿಕೋನವಿರುವುದರಿಂದ ಆಕೃತಿಗಳು ಇಂದಿನ ಸಾಹಿತ್ಯ ಮತ್ತು ಸಾಮಾಜಿಕದ ಸಂದರ್ಭದಲ್ಲಿ ಬಹಳ ಮುಖ್ಯವಾಗುತ್ತವೆ.

೧೯೮೩ರಲ್ಲಿ ಪ್ರಕಟವಾದ ಹಳೆಮನೆಯವರ ಪ್ರಥಮ ನಾಟಕ 'ಚಿಕ್ಕದೇವ ಭೂಪ', ೧೯೮೯ರಲ್ಲಿ ಪ್ರಕಟವಾದ ಎರಡನೇ ನಾಟಕ 'ಹೈದರ'. ಈ ಎರಡೂ ನಾಟಕಗಳಲ್ಲಿ ಐತಿಹಾಸಿಕ ಘಟನೆಗಳೊಂದಿಗೆ ಸಮಕಾಲೀನ ಕಾಳಜಿಗಳು ಎದ್ದು ಕಾಣುತ್ತವೆ. ಈ ಕಾರಣದಿಂದಲೇ ಹಳೆಮನೆ ಗಮನಾರ್ಹ ನಾಟಕಕಾರರಾಗಿ ಕಾಣಿಸುತ್ತಾರೆ. ಇವೆರಡೂ ನಾಟಕಗಳೂ ಈಗಾಗಲೇ ಅನೇಕ ಪ್ರಯೋಗಗಳನ್ನು ಕಂಡು ಜನಪ್ರಿಯತೆಯನ್ನು ಕೂಡ ಪಡೆದಿವೆ.

"ಇತಿಹಾಸ ಸೃಷ್ಟಿಸುವುದಕ್ಕಲ್ಲ ಪುನರ್ ಪ್ರತಿಪಾದಿಸುವುದಕ್ಕೆ ಎಂದು ನಾನು ನಂಬಿದವನು" ಎಂದು 'ಚಿಕ್ಕದೇವಭೂಪ' ನಾಟಕದ ಪ್ರಾರಂಭದಲ್ಲಿ ಹೇಳುವ ಹಳೆಮನೆಯವರ ಬರಹದಲ್ಲಿ ಇಂತಹ ಒಂದು ಸ್ಪಷ್ಟತೆ ಇದೆ. ಇತಿಹಾಸವನ್ನು ವೈಭವೀಕರಿಸದೆ ಅಥವಾ ತಿರುಚದೆ ಅಲ್ಲಿಯ ಘಟನೆ–ಅನುಭವಗಳನ್ನು ಪ್ರಸ್ತುತ ಸಮಾಜದ–ಹಿನ್ನೆಲೆಯಲ್ಲಿಟ್ಟು ನೋಡುವ ಹೊಸ ದೃಷ್ಟಿಕೋನ, ವಸ್ತುನಿಷ್ಠತೆ, ವೈಚಾರಿಕತೆ ಇವೆಲ್ಲಾ ಸಮಕಾಲೀನ ಕಾಳಜಿಗಳೊಂದಿಗೆ ಮೇಳೈಸಿವೆ. ಹೀಗಾಗಿ ಈ ಎರಡೂ ನಾಟಕಗಳು ಕೇವಲ ಐತಿಹಾಸಿಕವಾಗದೆ ಅಥವಾ ಕೇವಲ ಸಮಕಾಲೀನವಾಗದೆ; ಐತಿಹಾಸಿಕ ಪ್ರಕ್ರಿಯೆಯಲ್ಲಿ ಸಮಕಾಲೀನ ಪರಂಪರೆಯನ್ನು ಗುರುತಿಸುವ, ಆ ಮೂಲಕ ಬದುಕಿನ ಒಳನೋಟಗಳನ್ನು ಕಂಡುಕೊಳ್ಳುವ ಒಂದು ಹೊಸ ಪ್ರಯತ್ನಗಳಾಗಿ ಕಾಣಿಸುತ್ತವೆ.

ಮಾನವ ಪ್ರಯತ್ನ–ಹೋರಾಟಗಳು ಇತಿಹಾಸದುದ್ದಕ್ಕೂ ಅಲ್ಲಲ್ಲಿ ಕಂಡು ಬರುತ್ತವೆ. ಇವತ್ತಿನ ಹೋರಾಟಗಾರ ಅಂತಹ ಒಂದು ಪರಂಪರೆಯನ್ನು ತಿಳಿದುಕೊಳ್ಳುವುದು ತೀರಾ ಅಗತ್ಯವಾಗಿದೆ. ಹೋರಾಟದ ಇಂತಹ ಒಂದು ಪರಂಪರೆಯನ್ನು ಇವೆರಡೂ ನಾಟಕಗಳು ಅಧಿಕೃತವಾಗಿ ತಿಳಿಸುತ್ತವೆ.

ಮೊದಲನೆಯ ನಾಟಕ 'ಚಿಕ್ಕದೇವಭೂಪ' ಮೈಸೂರ ಅರಸರ ಚರಿತ್ರೆಗೆ ಸಂಬಂಧಿಸಿದ್ದಾಗಿದೆ. ೧೬೭೩ರಲ್ಲಿ ಅಧಿಕಾರಕ್ಕೆ ಬಂದ ಚಿಕ್ಕದೇವರಾಜ ಅರಸರ ಕಾಲದ ಆಡಳಿತ ಮತ್ತು ಅಂದಿನ ಸಾಮಾಜಿಕ ಸಂದರ್ಭವನ್ನು ಈ ನಾಟಕ ಹೇಳುತ್ತದೆ. ಪ್ರಾರಂಭದಲ್ಲಿಯೇ ನಾಟಕಕಾರರು ಸ್ಪಷ್ಟಪಡಿಸುವಂತೆ ಇಲ್ಲಿಯ ಪ್ರಧಾನ ವಸ್ತು ರೈತರ ಬಂಡಾಯವಾಗಿದೆ.

ನಾಟಕಕಾರ ಹಳೆಮನೆಯವರು ಅಧಿಕೃತ–ದಾಖಲೆಗಳನ್ನೆಲ್ಲ ಸಂಗ್ರಹಿಸಿ ಈ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. 'ಚಿಕ್ಕದೇವ ಭೂಪ' ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಇತಿಹಾಸಕಾರರಲ್ಲಿ ಎರಡು ರೀತಿಯ ಅಭಿಪ್ರಾಯಗಳಿರುವುದನ್ನು ಸ್ಪಷ್ಟಪಡಿಸಿಕೊಂಡ ಹಳೆಮನೆಯವರು ಮೈಸೂರು ಗೆಜೆಟಿಯರ್, ದೇವಚಂದ್ರನ ರಾಜಾವಳಿ ಕಥೆ (೧೬೭೦) ಕರ್ನಲ್ ಮಾರ್ಕ್‌ವಿಲ್ಕ್ಸನ

Historical Sketch of South India (೧೮೧೦) ಈ ಮುಂತಾದ ಅಧಿಕೃತ ದಾಖಲೆಗಳ ಜತೆಗೆ ಮ. ನ. ಮೂರ್ತಿಯವರ 'ಚಿಕ್ಕದೇವರಾಜ' ಕಾದಂಬರಿ, ತಿರುಮಲಾರ್ಯನ 'ಗ್ರಂಥಗಳು' ಮಾಸ್ತಿಯವರ 'ಪಂಡಿತನ ಮರಣ ಶಾಸನ' ವೆಂಬ ಕಥೆಯಂತಹ ಸೃಜನಶೀಲ ಸಾಹಿತ್ಯದ ಕೃತಿಗಳನ್ನೂ ಗಮನಿಸಿದ್ದಾರೆ. ಹೀಗಾಗಿ ಇಲ್ಲಿ ನಾಟಕಕಾರರು ಚಿಕ್ಕದೇವರಾಜ ಅರಸನ ಆಡಳಿತದಲ್ಲಿ ನಡೆದ ಬಡವರ ಶೋಷಣೆ ಮತ್ತು ರೈತರ ಬಂಡಾಯದ ಕಡೆಗೆ ಹೆಚ್ಚು ಗಮನ ಕೊಡುತ್ತಾ ಅಂದಿನ ಸಮಾಜದ ಅನೇಕ ಒಳನೋಟಗಳನ್ನು ಪರಿಚಯಿಸುತ್ತಾರೆ.

ಚಿಕ್ಕದೇವರಾಜ ಅಧಿಕಾರಕ್ಕೆ ಬಂದಾಗ ಪರಿಸ್ಥಿತಿ ತುಂಬಾ ಕಠಿಣವಾಗಿತ್ತು. ಉತ್ತರದಲ್ಲಿ ಔರಂಗಜೇಬನಂತಹ ಅರಸನು ಆಳುತ್ತಿದ್ದರೆ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಪತನವಾಗಿ ಬಿದನೂರಿನ ಶಿವಪ್ಪನಾಯಕ ಅಧಿಕಾರದಲ್ಲಿದ್ದ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎರಡು ಸಮಸ್ಯೆಗಳನ್ನೆದುರಿಸಬೇಕಾಗಿತ್ತು. ಒಂದು ದಂಗೆ ಯೇಳಲು ಪ್ರಯತ್ನಿಸುತ್ತಿದ್ದ ಪಾಳೇಗಾರರನ್ನು ಹತ್ತಿಕ್ಕುವುದು; ಇನ್ನೊಂದು, ಹೊರಗಿನ ಶತ್ರುಗಳ ದಾಳಿಗಳನ್ನೆದುರಿಸಲು ಸಿದ್ಧವಾಗುವುದು. ಇದಕ್ಕೆಲ್ಲ ಬೊಕ್ಕಸ ತುಂಬಿರಬೇಕಾದದ್ದು ಅಗತ್ಯವಾಗಿತ್ತು. ಹೀಗಾಗಿ ಚಿಕ್ಕದೇವರಾಜ ರೈತರ ಮೇಲೆ ಕೂಲಿಕಾರ್ಮಿಕರ ಮೇಲೆ, ಆವಶ್ಯಕ ವಸ್ತುಗಳ ಮೇಲೆ ಹೆಚ್ಚಿನ ಕರಭಾರ ಹೇರಿದಾಗ ರೈತರೆಲ್ಲಾ ಒಗ್ಗಟ್ಟಾಗಿ ನಿಂತು ಈ ಕರಭಾರದ ವಿರುದ್ಧ ಬಂಡೇಳುತ್ತಾರೆ. ಅರಸರ ಅಧಿಕಾರಶಾಹಿಯನ್ನು ಪ್ರಶ್ನಿಸುತ್ತಾರೆ. ಕರ್ನಾಟಕದಲ್ಲಿಯೇ ನಡೆದ ಪ್ರಥಮ ರೈತ ಬಂಡಾಯವಿದೆಂದು ಲೇಖಕರು ಹೇಳುತ್ತಾರೆ.

ಮೂರುನೂರು ವರ್ಷಗಳ ಹಿಂದೆ ನಡೆದ ರೈತ ಬಂಡಾಯದ ಆಶಯವನ್ನು ಸಮಕಾಲೀನ ಚಳುವಳಿಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಅಂದು ನಡೆದ ಹೋರಾಟಕ್ಕೂ ಇಂದು ನಡೆಯುವ ಹೋರಾಟಗಳಿಗೂ ಇರುವ ಸಮಾನ ಅಂಶಗಳನ್ನು ಗುರುತಿಸಿ ರೈತರ ಬಂಡಾಯಕ್ಕೆ ಒಂದು ಪರಂಪರೆಯನ್ನು ಕಟ್ಟಿಕೊಡು ತ್ತಾರೆ. ಚಿಕ್ಕದೇವರಾಜ ತನ್ನ ಬೊಕ್ಕಸ ತುಂಬಿಸಲು ರೈತರ ಮೇಲೆ ವಿವಿಧ ರೀತಿಯ ಸುಂಕಗಳನ್ನು ಹೇರಿದಾಗ ರೈತರೆಲ್ಲಾ ಜಾಗೃತರಾಗಿ ಇದರ ವಿರುದ್ಧ ಬಂಡೇಳುವುದು ರಾಜಸತ್ತೆಯ ಸಂದರ್ಭದಲ್ಲಿ ನಡೆದ ತುಂಬಾ ಮುಖ್ಯವಾದ ಸಂಗತಿ ಯಾಗುತ್ತದೆ.

ಈ ನಾಟಕದ ಆಶಯದ ಸ್ಪಷ್ಟತೆಗಾಗಿ ನಾಟಕಕಾರ ಇಲ್ಲಿ ಎರಡು ಪಾತ್ರಗಳ ಮೂಲಕ ಪ್ರಮುಖ ಘರ್ಷಣೆಯನ್ನುಂಟು ಮಾಡುತ್ತಾನೆ. ಆ ಎರಡು ಪಾತ್ರ ಗಳೆಂದರೆ ಸೂತ್ರಧಾರ ಮತ್ತು ಲಾವಣಿಕಾರ–ಚಿಕ್ಕದೇವರಾಜ ಅರಸು ತನ್ನ ಚರಿತ್ರೆ ಯನ್ನು–ಆಡಳಿತಾಧಿಕಾರವನ್ನು ವೈಭವೀಕರಿಸಿ ಚರಿತ್ರೆ ಬರೆಸಿರುತ್ತಾನೆ. ಕೆಲವು ಆಸ್ಥಾನ ಕವಿಗಳು ಇವನನ್ನೇ ಇಂದ್ರ–ಚಂದ್ರ ಎಂದು ಹೊಗಳಿ ವರ್ಣನಾತ್ಮಕವಾದ ಕಾವ್ಯವನ್ನೂ ರಚಿಸುತ್ತಾರೆ. ಇಂತಹ ಚರಿತ್ರೆ–ಕಾವ್ಯವನ್ನೂ ನಂಬಿ ಅರಸನ ಬಗೆಗೆ

ಅತ್ಯಂತ ಗೌರವವನ್ನಿಟ್ಟುಕೊಂಡು ' ಚಿಕ್ಕದೇವರಾಜವಿಜಯ 'ವನ್ನು ನಟರಿಗೆ ಕಲಿಸಿ ನಾಟಕವಾಡಿಸಲು ಸೂತ್ರಧಾರ ಪ್ರಯತ್ನಿಸಿದರೆ; ಅದಕ್ಕೆ ತುಂಬಾ ಭಿನ್ನವಾದ ಅಭಿಪ್ರಾಯಗಳೊಂದಿಗೆ ಇತಿಹಾಸವನ್ನು ಸತ್ಯದ ಹಿನ್ನೆಲೆಯಲ್ಲಿ ಗಮನಿಸಿದ ಲಾವಣಿಕಾರ ಚಿಕ್ಕದೇವರಾಜನನ್ನು ವೈಭವೀಕರಿಸದೆ, ಚರಿತ್ರೆಯನ್ನೂ ವಿಕೃತಗೊಳಿಸದೆ, ನಡೆದಿರಬಹುದಾದ ಘಟನೆಗಳನ್ನು ಆಧಾರಗಳೊಂದಿಗೆ ಅದೇ ನಟರ ಮೂಲಕ ದಾಖಲಿಸುತ್ತಾನೆ. ಪ್ರಾರಂಭದಲ್ಲಿ ವೈಭವೀಕರಣವನ್ನೇ ಸತ್ಯವೆಂದು ನಂಬಿದ್ದ ಸೂತ್ರಧಾರ, ಲಾವಣಿಕಾರನ ಆಧಾರ ಸಾಮಗ್ರಿಗಳು ಪರಿಣಾಮ ಬೀರಿ, ವಿಷಯ ಮನದಟ್ಟಾದಾಗ ತನ್ನ ನಂಬಿಕೆಗಳನ್ನು ಕೈಬಿಟ್ಟು ಲಾವಣಿಕಾರನ ಆಶಯವನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲಿ ನಾಟಕಕಾರರು ತುಂಬಾ ವಿಶಿಷ್ಟವಾದ ತಂತ್ರವೊಂದನ್ನು ಬಳಸಿದ್ದಾರೆ. ಸೂತ್ರಧಾರ ಅನೇಕ ಪ್ರೇಕ್ಷಕರ-ಓದುಗರ ಪ್ರತಿನಿಧಿಯಂತಿದ್ದರೆ ಲಾವಣಿಕಾರ ನಾಟಕಕಾರನ ಆಶಯವನ್ನು ಪ್ರತಿನಿಧಿಸುತ್ತಾನೆ. ಹೀಗಾಗಿ ನಾಟಕದ ಪ್ರಾರಂಭದಲ್ಲಿ ಸೂತ್ರಧಾರನಿಗೂ - ಲಾವಣಿಕಾರನಿಗೂ ನಡೆಯುವ ಘರ್ಷಣೆ; ಪ್ರೇಕ್ಷಕ–ನಾಟಕಕಾರರ ಘರ್ಷಣೆಯಾಗಿ ಕಾಣುತ್ತದೆ. ಸತ್ಯ ಸ್ಪಷ್ಟವಾದಂತೆಲ್ಲಾ ಸೂತ್ರಧಾರ–ಲಾವಣಿಕಾರನಲ್ಲಿ ಒಂದಾಗುವುದು, ಪ್ರೇಕ್ಷಕರಿಗೆ–ಓದುಗರಿಗೆ ಕೊಡುವ ಗೌರವವಾಗಿದೆ. ಸತ್ಯ ತಿಳಿಯಲಾರದೆ ಅನೇಕರು ಇತಿಹಾಸವನ್ನು ವೈಭವೀಕರಿಸುತ್ತಾರೆ. ಸತ್ಯ ಅವರಿಗೆ ಒಮ್ಮೆ ಸ್ಪಷ್ಟವಾದರೆ ಅವರೆಂದೂ ಹಾಗೆ ಮಾಡಲಾರರೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ. ಹೀಗಾಗಿ ಇಲ್ಲಿ ಚಿಕ್ಕದೇವರಾಜನ ಬಗೆಗೆ ಇದ್ದ ಎರಡು ರೀತಿಯ ಇತಿಹಾಸಗಳಲ್ಲಿ ಘರ್ಷಣೆ ನಡೆದು ನಿಜವಾದ ಇತಿಹಾಸ ದುಡ್ಡು ಕೊಟ್ಟು ಬರೆಯಿಸದೇ ಇದ್ದ ಇತಿಹಾಸ, ಬಡವರ–ರೈತರ ನೋವಿನಲ್ಲಿ ನರಳಿದ ನಿಜವಾದ ಇತಿಹಾಸ ಕಣ್ಣೆದುರಿಗೆ ಬಂದು ನಿಲ್ಲುತ್ತದೆ.

ಈ ನಾಟಕದಲ್ಲಿ ನಡೆಯುವ ಇನ್ನೊಂದು ಮಹತ್ವದ ಸಂಗತಿಯೆಂದರೆ, ಕೆಲವು ಜಂಗಮರು ತಮ್ಮ ಸ್ವಾರ್ಥಕ್ಕಾಗಿ ರೈತ ಬಂಡಾಯವನ್ನು ಬಳಸಿಕೊಂಡು ಚಿಕ್ಕದೇವರಾಜನ ಪ್ರಧಾನಿ ವಿಶಾಲಾಕ್ಷ ಪಂಡಿತನ ಕೊಲೆ ಮಾಡುತ್ತಾರೆ. ಹೀಗಾಗಿ ನಿಗಿನಿಗಿಸಬೇಕಾಗಿದ್ದ ರೈತ ಬಂಡಾಯ ಇಂತಹ ಸ್ವಾರ್ಥ ಸಂಗತಿಗಳಿಂದ ತಣ್ಣಗಾಗಿ ಬಿಡುತ್ತದೆ. ಜೋಗಿ ಜಂಗಮರ ಮೇಲೂ ತೆರಿಗೆ ಹಾಕಿದ್ದರಿಂದ ತುಂಬಾ ಉಗ್ರವಾಗಿದ್ದ ಜಂಗಮರು ತಮ್ಮ ಸ್ವಾರ್ಥಕ್ಕಾಗಿ ತನ್ನಷ್ಟೇ ಸ್ವಾರ್ಥನಾಗಿದ್ದ ಮಂತ್ರಿ ವಿಶಾಲಾಕ್ಷಪಂಡಿತನ ಕೊಲೆ ಮಾಡಿಸುವುದು. ಆ ಮೇಲೆ ತಿರುಮಲಾರ್ಯ ಅಮಾತ್ಯ ಪದವಿ ವಹಿಸಿಕೊಳ್ಳುವುದು, ರಕ್ತಖಚಿತ ಸಿಂಹಾಸನದ ದರ್ಬಾರದಲ್ಲಿ ನೋಡಿದಲ್ಲೆಲ್ಲಾ ಹೆಣ ತೇಲುವುದು, ಇದೆಲ್ಲದರ ನಡುವೆಯೂ ಕೊನೆಗೆ ರೈತರ ಆಶಾದಾಯಕ ಹಾಡಿನ ಧ್ವನಿಯೊಂದಿಗೆ ನಾಟಕ ಮುಕ್ತಾಯವಾಗುವುದು, ನಾಟಕಕಾರರ ಹೋರಾಟದ ನಿಜವಾದ ಆಶಯವನ್ನು ಸ್ಪಷ್ಟಪಡಿಸುತ್ತದೆ. ಈ ರೈತ ಬಂಡಾಯದ ವಿಫಲತೆಗೆ

ಜಂಗಮರ ಸ್ವಾರ್ಥದಾಹವೇ ಪ್ರಮುಖ ಕಾರಣವಾಯಿತೆಂದು ಹೇಳುವಲ್ಲಿ ನಾಟಕಕಾರರ ವಸ್ತುನಿಷ್ಠತೆ–ಸ್ಪಷ್ಟವಾಗುತ್ತದೆ.

"ಆದರೆ, ರೈತರ ಬಂಡಾಯದ ವಸ್ತು ನಾಟಕದಲ್ಲಿ ಎಷ್ಟರ ಮಟ್ಟಿನ ಪ್ರಮಾಣದಲ್ಲಿ ಬೆಳೆಯಬೇಕಾಗಿತ್ತೊ ಆ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಹಾಗೆ ಬೆಳವಣಿಗೆ ಪಡೆಯುವುದಕ್ಕೆ ಮೊದಲೆ ವಿಫಲವಾಗಿ ಬಿಡುತ್ತದೆ"[1] ಎಂದು ಈ ನಾಟಕಕ್ಕೆ ಮುನ್ನುಡಿ ಬರೆದ ಎಚ್. ಎಮ್ ಚನ್ನಯ್ಯನವರು ಅಭಿಪ್ರಾಯಪಡುತ್ತಾರೆ. ಜಂಗಮರ ಸ್ವಾರ್ಥ, ವಿಶಾಲಾಕ್ಷ ಪಂಡಿತ ಮಂತ್ರಿ ಮತ್ತು ಚಿಕ್ಕ ದೇವರಾಜ ಅರಸರ ಸ್ವಾರ್ಥದಷ್ಟೇ ಪ್ರಧಾನತೆಯನ್ನು ಪಡೆದಾಗ ಹಿಂಸೆ ಅನಿವಾರ್ಯವಾಗುತ್ತದೆ. ಸೈದ್ಧಾಂತಿಕವಾಗಿ ಸಂಘಟನೆಗೊಂಡಿರದ ರೈತರು ಅಂದಿನ ಸಂದರ್ಭದಲ್ಲಿ ಸಹಜವಾಗಿ ಸ್ವಾರ್ಥಿಜಂಗಮರ ಪರವಾಗಿ ನಿಲ್ಲುತ್ತಾರೆ. ಜಂಗಮರಿಗೆ ಬೇಕಾದದ್ದು ನಿಜವಾದ ರೈತ ಬಂಡಾಯವಲ್ಲ; ಅವರಿಗೆ ಬೇಕಾದದ್ದು ಅಧಿಕಾರದ ಸ್ಥಾನಮಾನ. ಇಂತಹ ಸ್ವಾರ್ಥ ಒಳಸಂಚನ್ನರಿಯದ ಮುಗ್ಧ ರೈತರು ಜೋಗಿ ಜಂಗಮರಂತವರ ಬಲಿಪಶುಗಳಾಗುವುದು ಚರಿತ್ರೆಯುದ್ದಕ್ಕೂ ನಡೆದುಬಂದ ಸಂಗತಿ. ಎಲ್ಲೆಲ್ಲಿ ಮಾನವನ ಪ್ರಯತ್ನ ಹೋರಾಟ–ಚಳವಳಿನಡೆದಿವೆಯೋ, ಅಲ್ಲಲ್ಲಿ ಇಂತಹ ಸ್ವಾರ್ಥಶಕ್ತಿಗಳ ಕೈವಾಡವೇ ಮೆರೆದಿರುವುದನ್ನು ಚರಿತ್ರೆ ತಿಳಿಸುತ್ತದೆ. ನಾಟಕಕಾರರಿಗೆ ಇಲ್ಲಿ ಪ್ರಸ್ತುತ ಸಾಮಾಜಿಕ ಕಳಕಳಿಯ ಹಾಗೆ, ಚರಿತ್ರೆಯ ವಸ್ತು ನಿಷ್ಠತೆಯೂ ಪ್ರಧಾನವಾಗುತ್ತದೆ. ಹೀಗಾಗಿ ಅವರು ಅಲ್ಲಿ ಅದರ ಆಶಯವನ್ನು ತಿಳಿಸಬಲ್ಲರೇ ಹೊರತು, ಸೈದ್ಧಾಂತಿಕ ಶಿಸ್ತಿನಿಂದ ಸಫಲವಾಗದೇ ಇದ್ದ ರೈತ ಬಂಡಾಯವನ್ನು ಸಫಲವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಬಂಡಾಯದ ಸೋಲಿನ ಹಿಂದಿರುವ ಕಾರಣಗಳನ್ನವರು ಕೊಡುತ್ತಾರೆ. ಆದ್ದರಿಂದ ಚನ್ನಯ್ಯನವರ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿಯೆನ್ನಿಸಿದರೂ ಕೂಡಾ ಅದೇ ಸಮರ್ಪಕವಾಗಲಾರದು. ರೈತ ಬಂಡಾಯಕ್ಕೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಚಿಕ್ಕದೇವರಾಜ ಮತ್ತು ವಿಶಾಲಾಕ್ಷ ಪಂಡಿತರ ರಾಜಕೀಯ ತಂತ್ರಗಳನ್ನು ನಾಟಕಕಾರ ಹಿಂದೆತಳ್ಳಿದ್ದರೆ ಅದು ನಿಜವಾದ ಚರಿತ್ರೆಯ ಪ್ರಕ್ರಿಯೆಯಾಗದೆ; ಇವತ್ತಿನ ಬೀದಿನಾಟಕದ ಹಾಗೆ ಇರುತ್ತಿತ್ತು. ನನಗೆ ತಿಳಿದಂತೆ, ಇಲ್ಲಿ ನಾಟಕಕಾರ ತುಂಬಾ ಪ್ರಾಮುಖ್ಯನಾಗಿ ಕಾಣುತ್ತಾನೆ. ಅನೇಕ ಸೂಕ್ಷ್ಮಸಂಗತಿಗಳನ್ನು ಪ್ರಕಟಿಸುತ್ತಾನೆ. ರೈತಬಂಡಾಯದ ಪರಂಪರೆ–ಬೆಳವಣಿಗೆಯ ಬಗೆಗೆ ನಾಟಕಕಾರನಿಗೆ ಅತ್ಯಂತ ಕಾಳಜಿಯಿದೆ. ಅಂತೆಯೇ ಆತ–ಐತಿಹಾಸಿಕ ನಾಟಕವೊಂದರಲ್ಲಿ ಅದನ್ನು ಕಾಣಲು ಪ್ರಯತ್ನಿಸುತ್ತಾನೆ. ಆದರೆ ಈ ಬಂಡಾಯ ಸೈದ್ಧಾಂತಿಕ ಶಿಸ್ತಿನಲ್ಲರಳದೆ–ಜೋಗಿ ಜಂಗಮರ ಸ್ವಾರ್ಥದ ಜೋಳಿಗೆಯಲ್ಲಿ ಮುಚ್ಚಿಕೊಂಡು ಬಿಡುತ್ತದೆ. ಈ ಸತ್ಯವನ್ನು ಆತ ನಿರಾಕರಿಸುವಂತಿಲ್ಲ. ಈ ಎಲ್ಲ ಅಂಶಗಳನ್ನು

1 ಎಚ್. ಎಮ್. ಚನ್ನಯ್ಯ, "ಮುನ್ನುಡಿ" ಪುಟ xiii, "ಚಿಕ್ಕದೇವಭೂಪ"

ಸೂಕ್ಷ್ಮವಾಗಿ ವಿಶ್ಲೇಷಿಸುವುದರ ಮೂಲಕ ನಿಜವಾದ ಬಂಡಾಯದ ನೆಲೆಯನ್ನೂ ಆತ ಇಲ್ಲಿ ಪರೋಕ್ಷವಾಗಿ ಪ್ರಕಟಿಸುತ್ತಾನೆ. ಮುನ್ನುಡಿಯ ಕೊನೆಯಲ್ಲಿ ಹೇಳುವ ಚನ್ನಯ್ಯನವರ ಮಾತುಗಳು ಈ ನಾಟಕದ ಬಗೆಗಿನ ಸ್ಪಷ್ಟ ಚಿತ್ರಣಗಳಾಗಿವೆ.

"ಹಳೆಮನೆಯವರ ಮೊದಲ ನಾಟಕವಾದ 'ಚಿಕ್ಕದೇವ ಭೂಪ' ಉಳಿದ ಸಾಂಪ್ರದಾಯಿಕ ಚಾರಿತ್ರಿಕ ನಾಟಕಗಳಿಂದ ಭಿನ್ನವಾಗಿದೆ. ಅವರು ರಾಜತ್ವವನ್ನು ವೈಭವೀಕರಿಸದೆ, ಸಂಸ್ಕೃತಿಯ ವಾರಸುದಾರರು ರಾಜರೇ ಎಂದು ಆದರ್ಶೀಕರಿಸದೆ, ಅವರ ಕೃತ್ಯಗಳನ್ನು ವೀರಕಾರ್ಯಗಳೆಂಬಂತೆ ಉತ್ಪ್ರೇಕ್ಷಿಸಿ ಚಿತ್ರಿಸದೆ, ಚರಿತ್ರೆಯನ್ನು ಸರಿಯಾದ ಪ್ರಗತಿಪರ ದೃಷ್ಟಿಯಲ್ಲಿ ಕಂಡು ನಾಟಕವಾಗಿಸುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುವುದು ವಿಶಿಷ್ಟ ಅಂಶವಾಗಿದೆ"[1] ಎನ್ನುವಲ್ಲಿ ನಾಟಕದ ಪದಾರ್ಥವನ್ನು ಕುರಿತಂತೆ–ಮೂಡಿಬಂದ ನೈಜ ವಿಶ್ಲೇಷಣೆಯಾಗಿದೆ.

ಅಂದಿನ ಸಂದರ್ಭದಲ್ಲಿಯೇ ರೈತರು ಜಾಗೃತರಾಗಿ ಪ್ರಭುತ್ವದಿಂದುಂಟಾಗುವ ಅನಾಹುತವನ್ನು ಅರಿತು ದಬ್ಬಾಳಿಕೆಯ ವಿರುದ್ಧ ದನಿಎತ್ತಿ ನಿಲ್ಲುವುದು ಇಂದಿಗೂ ಕೂಡ ತುಂಬಾ ಪ್ರಸ್ತುತವೆನಿಸುತ್ತದೆ. ರೈತರ ಸಂಭಾಷಣೆ ನಡೆದಾಗ ಯುವಕ ರೈತ ಹೀಗೆ ಹೇಳುತ್ತಾನೆ. "ಪ್ರಭುತ್ವ ನಮಗೆ ಯಾವ ಸೌಕರ್ಯ ಮಾಡಿದೆ. ಅರಮನೆ ಕಟ್ಟಿಸಿಕೊಳ್ಳೋಕೆ, ಕೋಟೆ ಎತ್ತಿಸೋಕೆ ನಾವು ಸಂಪತ್ತು ಕೊಡಬೇಕು. ಶತ್ರುಗಳು ದಾಳಿ ಮಾಡಿದರೆ ಮೊದಲು ಕೊಲ್ಲೋದು ನಮ್ಮನ್ನು. ಪ್ರಭುಗಳನ್ನು ಉಳಿಸೋಕೆ ಕೋಟೆ ಇರುತ್ತೆ ಸೈನ್ಯ ಇರುತ್ತೆ"[2] ಎನ್ನುವಂತಹ ರೈತರ ಮಾತುಗಳಲ್ಲಿ ಪ್ರಭುತ್ವ ಹಾಗೂ ವ್ಯವಸ್ಥೆಯ ಬಗೆಗೆ ಸ್ಪಷ್ಟ ಕಲ್ಪನೆಯಿದ್ದುದು ಗೊತ್ತಾಗುತ್ತದೆ. ಆದರೆ ಮುಂದೆ ಈ ಹೋರಾಟ ಜಂಗಮರ ಸ್ವಾರ್ಥದ ದವಡೆಯಲ್ಲಿ ಸಿಕ್ಕು ಕರಗಿ ಹೋದಾಗ ಈ ಸಮಾಜ ವ್ಯವಸ್ಥೆಗೆ ದುರಂತದ ಒಂದು ಪರಂಪರೆಯಿದೆ ಎಂದೆನಿಸುತ್ತದೆ.

"ಸತ್ತವರು ನಾವಲ್ಲ
ಸಾವೆಂದೂ ನಮಗಿಲ್ಲ
ಸತ್ತರೂ ಹುಟ್ಟುವೆವು
ಮತ್ತೆ ಮತ್ತೆ
ಮತ್ತೆ ಮತ್ತೆ"[3]

ಎಂಬಂತಹ ಕಂಸಾಳೆಯ ಹಾಡಿನೊಂದಿಗೆ ಮುಕ್ತಾಯವಾಗುವ ಈ ನಾಟಕದಲ್ಲಿ ನಾಟಕಕಾರರು–ಆಶಾದಾಯಕವಾದ ಬೆಳವಣಿಗೆಯನ್ನು ಸೂಚಿಸಿದ್ದಾರೆ. ಇಷ್ಟೆಲ್ಲ

---

1 ಎಚ್. ಎಮ್. ಚನ್ನಯ್ಯ "ಮುನ್ನುಡಿ" ಪುಟ xiii 'ಚಿಕ್ಕದೇವಭೂಪ' ಪುಟ xiv

2 ಚಿಕ್ಕದೇವಭೂಪ ಪುಟ ೪೯

3 ಚಿಕ್ಕದೇವಭೂಪ ಪುಟ ೮೦

ಗೊಂದಲ ಸ್ವಾರ್ಥಗಳ ನಡುವೆಯೂ ಇಂದಿಲ್ಲ ನಾಳೆ ಹೋರಾಟಕ್ಕೆ ಜಯಸಿಗಬಲ್ಲ ದೆಂಬ ಆಶಯವನ್ನು ಇಲ್ಲಿ ನಾಟಕಕಾರ ವ್ಯಕ್ತಪಡಿಸಿದ್ದಾರೆ.

ಹಳಿಮನೆಯವರ ಇನ್ನೊಂದು ಐತಿಹಾಸಿಕ ನಾಟಕ 'ಹೈದರ್' ಹದಿನೆಂಟನೆಯ ಶತಮಾನದಲ್ಲಿದ್ದ ಮೈಸೂರ ಪ್ರಾಂತ್ಯದ ನವಾಬ ಹೈದರಲಿಗೆ ಸಂಬಂಧಿಸಿದ್ದು. ಇಲ್ಲಿಯೂ ಕೂಡ ನಾಟಕಕಾರರು ಕೇವಲ ಹೈದರಾಲಿಯ ವ್ಯಕ್ತಿತ್ವ ವರ್ಣನೆಗೆ ಕೈ ಹಾಕದೆ; ಸಾಮಾನ್ಯ ಕುದುರೆ ಸವಾರನ ಮಗನೊಬ್ಬ, ನವಾಬನಾಗಿ ಬೆಳೆಯುವ ಕ್ರಮವನ್ನು ಕುರಿತು ಆಲೋಚಿಸುತ್ತಾರೆ. ಅನಕ್ಷರಸ್ಥನಾದ ಹೈದರ್ ಹೆಬ್ಬೆಟ್ಟಿನ ಸಹಿ ಹಾಕುವ ಹೈದರ್, ಏಕಕಾಲಕ್ಕೆ ಒಳಗಿನ ಮತ್ತು ಹೊರಗಿನ ಶತ್ರುಗಳನ್ನು ಮೆಟ್ಟಿನಿಲ್ಲುತ್ತಾನೆ. ಸಾಮಾನ್ಯ ಸೈನಿಕನೊಬ್ಬ ನಿಷ್ಠೆ, ಪರಾಕ್ರಮ, ಮುಂದಾಲೋಚನೆಯಿಂದ ಹೇಗೆ ಮುಂದೆ ಸಾಗಬಲ್ಲ, ಇತಿಹಾಸದ ವ್ಯಕ್ತಿಯಾಗಬಲ್ಲನೆಂಬುದನ್ನಿಲ್ಲಿ ಒತ್ತುಕೊಟ್ಟು ಹೇಳಿದ್ದಾರೆ. ಊಳಿಗಮಾನ್ಯ ಸಂಸ್ಕೃತಿಯಲ್ಲಿ ಬೆಳೆದು ನಿಂತಿರುವ ಸ್ವಾರ್ಥ ದಾಹಗಳ ಪರಿಯನ್ನು ಹೇಳುತ್ತ ಅದಕ್ಕೆ ಉತ್ತರವಾಗಿ ಪ್ರತಿಭಟನೆ ಬಂಡಾಯದ ಅಂಶಗಳನ್ನು ಹೈದರನಂತಹ ಒಂದು ಪಾತ್ರ ನಿಷ್ಠ ಹಿನ್ನೆಲೆಯಲ್ಲಿ ವಿವೇಚಿಸುತ್ತಾರೆ.

ಮೈಸೂರು ಸಂಸ್ಥಾನದ ರಾಜಧಾನಿ ಶ್ರೀರಂಗಪಟ್ಟಣ ಅಂದು ರಾಜಕೀಯದ ಆಯಕಟ್ಟಿನ ಸ್ಥಳವಾಗಿತ್ತು. ಮರಾಠರ, ನಿಜಾಮ, ಮಲಬಾರಿನ ಸಾಮುರ್ ಹೀಗೆ ಎಲ್ಲರ ಕಣ್ಣು ಮೈಸೂರ ಸಂಸ್ಥಾನದ ಮೇಲೆ ಇಡೀ ದೇಶದಲ್ಲಿ ಮೊಗಲರು ಕ್ಷೀಣಿಸಿ ಮರಾಠರು ಪ್ರಬಲರಾಗುತ್ತಿದ್ದ ಕಾಲವದು. ಬ್ರಿಟಿಷರ ಆಕ್ರಮಣ ತೀವ್ರವಾಗಿತ್ತು. ಅರಸೊತ್ತಿಗೆ ವಂಶಪಾರಂಪರ್ಯವಾಗಿದ್ದರಿಂದ ಎಲ್ಲ ಸಿಂಹಾಸನಗಳಲ್ಲಿಯೂ ಹೆಸರಿಗೆ ಮಾತ್ರ ರಾಜ. ಅಧಿಕಾರ ಇರುವುದು ದಳವಾಯಿಗಳ ಕೈಯಲ್ಲಿ. ಇದಕ್ಕೆ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಇಮ್ಮಡಿ ಕೃಷ್ಣರಾಜ ಹೆಸರಿಗೆ ಮಾತ್ರ ಅರಸ. ಸದಾ ಕೈಯಲ್ಲಿ ಮದಿರೆ, ಸುತ್ತ ಮುತ್ತ ಮಾನಿನಿಯರು. ಈ ಸದವಕಾಶವನ್ನುಪಯೋಗಿಸಿಕೊಂಡು ಸಂದರ್ಭದ ಲಾಭಪಡೆದವರು ಕಳಲೆಯ ದಿವಾನರಾದ ನಂಜರಾಜ, ಸರ್ವಾಧಿಕಾರಿ ಮತ್ತು ಆತನ ಅಣ್ಣ ದೇವರಾಜ ದಳವಾಯಿ. ಕೋಲಾರದ ಬಳಿಯ ಬೂದಿಕೋಟೆಯಲ್ಲಿ ಸಾಮಾನ್ಯ ಸೈನಿಕನೊಬ್ಬನ ಮಗನಾಗಿ ಹುಟ್ಟಿದ ಹೈದರ್ ಬೆಂಗಳೂರ ಸೈನ್ಯದಲ್ಲಿ ಸೈನಿಕನಾಗಿ ಸೇರಿ, ನಂಜರಾಜಯ್ಯ ದೇವನಹಳ್ಳಿಯ ಕೋಟೆಗೆ ಮುತ್ತಿಗೆ ಹಾಕಿದಾಗ ಹೈದರ್ ಆತನಪರವಾಗಿ ಹೋರಾಡಿ ನಂಜರಾಜಯ್ಯನನ್ನು ಮೆಚ್ಚಿಸಿ ಮೈಸೂರು ಸಂಸ್ಥಾನಕ್ಕೆ ಬರುವುದು, ಅಲ್ಲಿ ತನ್ನ ಪರಾಕ್ರಮ ಮುಂದಾಲೋಚನೆಯಿಂದ ತಿರುಚಿರಾಪಳ್ಳಿಯನ್ನು ವಶಪಡಿಸಿಕೊಂಡು ಸರ್ವಾಧಿಕಾರಿಯ ಮನ್ನಣೆಗೆ ಪಾತ್ರನಾಗುವುದು, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಉದ್ದೇಶದಿಂದ ಇತ್ತ ಲಕ್ಷ್ಮಮ್ಮಣಿ ಮತ್ತು ಖಂಡೇರಾಯರೊಂದಿಗೆ ಶಾಮೀಲಾಗಿ ನಂಜರಾಜಯ್ಯನನ್ನು ಸರ್ವಾಧಿಕಾರದಿಂದ ಕೆಳಗಿಳಿಸುವುದು, ಖಂಡೇರಾಯ ದ್ರೋಹ ಬಗೆ

ದಾಗ ಸಂಯಮದಿಂದ ಸೈನ್ಯ ಸಜ್ಜುಗೊಳಿಸಿ ಮೈಸೂರು ಪ್ರಾಂತದ ನವಾಬನಾಗುವುದು. ಹೊರಗಡೆಯಿಂದ ದಾಳಿನಡೆಸಲೆತ್ನಿಸಿದ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗುವದು ಈ ಮುಂತಾದ ನಿರಂತರ ಸಾಧನೆಗಳಲ್ಲಿ ಹೈದರ್ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಹೈದರ್ ತನ್ನ ಕೊನೆಯ ಕಾಲದಲ್ಲಿ ತಾನು ಕೊಳ್ಳೆಹೊಡೆದಿರುವ ಹಣವನ್ನು ಸೈನಿಕರಿಗೆ ಹಂಚಿಬಿಡುತ್ತಾನೆ. ಟಿಪ್ಪು ಮಲಬಾರಿನಲ್ಲಿ ಯುದ್ಧ ಮಾಡುತ್ತಿದ್ದಾಗ ಹೈದರ್ ಕೊನೆಯುಸಿರೆಳೆಯುವ ಸಂದರ್ಭದಲ್ಲಿ ಟಿಪ್ಪುವೇ ಉತ್ತರಾಧಿಕಾರಿಯಾಗಬೇಕೆಂದು ಪೂರ್ಣಯ್ಯನಲ್ಲಿ ಹೇಳುತ್ತಾನೆ. ಚರಿತ್ರೆಯ ಈ ಎಲ್ಲ ಅಂಶಗಳ ಮುಖಾಂತರ ನಾಟಕಕಾರ ಸಮಕಾಲೀನ ಕಾಳಜಿಗಳ ಕಡೆಗೆ ಗಮನ ಹರಿಸುತ್ತಾರೆ.

ಹೈದರ ಪರಾಕ್ರಮಿ ಹೋರಾಟಗಾರ, ಒಳ್ಳೆಯ ರಾಜಕೀಯ ಮುತ್ಸದ್ದಿ ನಿಜ ; ಆದರೆ ಅವನಿಗೆ ಸಾಮಾನ್ಯ ಜನತೆಯ ಅಥವಾ ಸೈನಿಕರ ಕಾಳಜಿಯೇ ಪ್ರಧಾನವಾಗುವುದಿಲ್ಲ. ಅವನೂ ಕೊಳ್ಳೆಹೊಡೆಯುತ್ತಾನೆ, ಸೈನಿಕರನ್ನೆತ್ತಿಕಟ್ಟುತ್ತಾನೆ, ಸಮಯಸಾಧಿಸುತ್ತಾನೆ. ನಂಜರಾಜಯ್ಯನಂತಹ ಸರ್ವಾಧಿಕಾರಿಗೆ, ಖಂಡೇರಾಯನಂತಹ ದ್ರೋಹಿಗಳಿಗೆ ಸವಾಲಾಗಿ ನಿಲ್ಲುತ್ತಾನೆ. ಆದರೆ ಅವನು ರಾಜಸತ್ತೆಯನ್ನು ವಿರೋಧಿಸುವದಿಲ್ಲ, ಅಧಿಕಾರ ಶಾಹಿಯನ್ನು ಅಲ್ಲಗಳೆಯುವುದಿಲ್ಲ. ರಾಜಸತ್ತೆಯಲ್ಲಿದ್ದುಕೊಂಡೇ ತಾನು ಮೇಲೆ ಬರಲು ಪ್ರಯತ್ನಿಸುತ್ತಾನೆ. ಸರ್ವಾಧಿಕಾರಿಗೆ ಬೇಕಾದವನಾಗಿಯೇ ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಆ ಅಧಿಕಾರವನ್ನು ತಾನು ಪಡೆಯುತ್ತಾನೆ. ತಾನು ಸಾಯುವ ಸಂದರ್ಭದಲ್ಲಿ ತನ್ನ ಮಗ ಟಿಪ್ಪುವನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಲು ಸೂಚಿಸುತ್ತಾನೆ. ಇದನ್ನೆಲ್ಲಾ ಗಮನಿಸಿದಾಗ ಹೈದರ್ ಇವತ್ತಿನ ಒಬ್ಬ ಚಾಣಾಕ್ಷ ರಾಜಕಾರಣಿಯಂತೆ ಕಾಣಿಸುತ್ತಾನೆ. ಹೀಗಾಗಿ ಹೈದರನಿಗೆ ಅನೇಕ ಮಿತಿಗಳಿವೆ. ಇವತ್ತಿನ ಪ್ರಜಾಸತ್ತಾತ್ಮಕ ನೆಲೆಯಲ್ಲಿ ನಿಂತು ಅವನ ವ್ಯಕ್ತಿತ್ವವನ್ನಳೆಯುವಂತಿಲ್ಲ. ಅವತ್ತಿನ ಸಂದರ್ಭದಲ್ಲಿ ರಾಜಸತ್ತೆಯ ಅಹಂಭಾವ, ಸರ್ವಾಧಿಕಾರಿಗಳ ದಬ್ಬಾಳಿಕೆ ತೀವ್ರವಾಗಿದ್ದ ಸಂದರ್ಭದಲ್ಲಿ ಒಬ್ಬ ಸಾಮಾನ್ಯ ಸೈನಿಕನಾದ ಹೈದರ್ ಹೇಗೆ ಇವೆಲ್ಲ ಸಮಸ್ಯೆಗಳಿಗೆ ಉತ್ತರವಾಗುತ್ತಾನೆಂಬುದು ಮಾತ್ರ ಮುಖ್ಯವಾಗುತ್ತದೆ. ಈ ಅಂಶವನ್ನೇ ನಾಟಕಕಾರರಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದಾರೆ. ಹೈದರ್‌ನ ಇಡೀ ವ್ಯಕ್ತಿತ್ವ ಇಲ್ಲಿ ಸ್ಪಷ್ಟವಾಗಿ ಮೂಡಿರುವುದರಿಂದ ಅವನ ಸಾಧನೆಗಳ ಜತೆಗೆ ಅವನ ಮಿತಿಗಳೂ ಎದ್ದು ಕಾಣುತ್ತವೆ. ಹೀಗೆ ಚರಿತ್ರೆಯನ್ನು ತೆರೆದಿಟ್ಟು ನೋಡಿದಾಗ ಹೋರಾಟದ ಪರಂಪರೆಯೊಂದು ಕಾಣಿಸಿಕೊಂಡು, ಅದರಲ್ಲಿ ಯಾವುದು ನಿಜವಾದ ಹೋರಾಟ, ಯಾವುದು ವ್ಯಕ್ತಿಗತ ಹೋರಾಟ, ಯಾವುದು ಸ್ವಾರ್ಥಪರ ಹೋರಾಟವೆಂಬ ಸಂಗತಿಗಳು ನಿಚ್ಚಳವಾಗುತ್ತವೆ

"ಚಾಚಾ ಈ ಹೈದರ್‌ಗೆ ಒಳ್ಳೇದು ಮಾಡೋದು, ಕೆಟ್ಟದು ಮಾಡೋದು ಈ ಹೈದರ್ ಮಾತ್ರಾನೇ. ನನ್ ಪಾಲಿಗೆ ಅಲ್ಲಾನೂ ಇಲ್ಲ, ಮುಲ್ಲಾನೂ

ಇಲ್ಲ"[1] ಎನ್ನುವ ಹೈದರ್‌ನ ಈ ಮಾತಿನಲ್ಲಿ ಮನುಷ್ಯನ ಸ್ವಪ್ರಯತ್ನದ ಬಗೆಗಿನ ನಂಬಿಕೆಯಿದೆ. ಮತಾಂಧ ಸಮಾಜ ವ್ಯವಸ್ಥೆಯಲ್ಲಿ ಬೆಳೆದು ಬಂದ ಹೈದರ್, ಅಂದಿನ ಸಂದರ್ಭದಲ್ಲಿ, ಹೇಳುವ ಈ ಮಾತುಗಳು ಇಂದಿಗೂ ಪ್ರಸ್ತುತವೆನಿಸುತ್ತವೆ.

ಅಧಿಕಾರದ ದಾಹ ಎಂತಹ ಕ್ರೂರವಾದದ್ದೆಂಬುದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ. ಸರ್ವಾಧಿಕಾರಿಯಾಗಿದ್ದ ನಂಜರಾಜಯ್ಯನ ಮುಖಾಂತರವೇ ನಾಟಕಕಾರರು ಈ ಮಾತುಗಳನ್ನಾಡಿಸುತ್ತಾರೆ.

"ಅಧಿಕಾರದ ಆಸೆ ಎಂತೆಂಥವರನ್ನೂ ಬಲಿ ತೆಗೆದುಕೊಂಡು ಮಾಡಬಾರದ ಕೆಲಸಗಳನ್ನು ಮಾಡಿಸುತ್ತದೆ. ಈ ವಯಸ್ಸಿನಲ್ಲಿ ಆ ಹಿಂದಿನ ನೆನಪುಗಳ ಭಯದಲ್ಲಿ ನಾನು ಕಾಲ ಕಳೆಯುತ್ತಿದ್ದೇನೆ. ಮುಂದೆ ನೀನೊಂದು ದಿನ ನನ್ನ ಹಾಗೇ ಕಾಲ ಕಳೆಯಬಹುದು. ಎಲ್ಲಾ ಸರ್ವಾಧಿಕಾರಿಗಳ ಹಣೆಬರಹವೂ ಹೀಗೇ"[2] ಎಂದು ನಂಜರಾಜಯ್ಯ ಹೈದರನಿಗೆ ಹೇಳುವ ಈ ಮಾತುಗಳ ಮುಖಾಂತರ ನಾಟಕಕಾರ ಇಡೀ ಚರಿತ್ರೆಯನ್ನೇ ಚಲನಶೀಲಗೊಳಿಸುತ್ತಾನೆ. ಸರ್ವಾಧಿಕಾರಿಯಾದವನೊಬ್ಬ ವಿಳಾಸವಿಲ್ಲದೆ ಹೋಗುವುದು, ಅಧಿಕಾರ ಕಳೆದುಕೊಂಡ ನಂತರ ತೀವ್ರವಾಗಿ ನರಳುವುದು ; ಪಶ್ಚಾತ್ತಾಪ ಪಡುವುದು ಈ ಎಲ್ಲ ಅಂಶಗಳನ್ನು ಯಥಾವತ್ತಾಗಿ ಪ್ರಕಟಿಸುವುದರ ಮೂಲಕ ಪ್ರಸ್ತುತ ಸಮಾಜ ವ್ಯವಸ್ಥೆಯ ಮೇಲೆ ಚರಿತ್ರೆಯ ತೀವ್ರ ಪರಿಣಾಮವನ್ನು ನಾಟಕಕಾರ ಉಂಟು ಮಾಡುತ್ತಾನೆ.

ಇತಿಹಾಸದ ಚಕ್ರದಲ್ಲಿ ರಾಜ ಮಹಾರಾಜರು ಆಳಿ ಹೋಗಿದ್ದಾರೆ. ಅಲ್ಲಲ್ಲಿ ಕೆಲವು ಸಾಮಾನ್ಯರೂ ಅಧಿಕಾರದ ಲಾಭ ಉಂಡಿದ್ದಾರೆ. ಆದರೆ ಒಮ್ಮೆ ಅಧಿಕಾರ ಸಿಕ್ಕ ಮೇಲೆ, ಸಿಂಹಾಸನ ದೊರೆತ ಮೇಲೆ ಅದನ್ನು ತಿರಸ್ಕರಿಸಿ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದವರು ಬಹಳ ಕಡಿಮೆ. ವಚನಕಾರರು ಮತ್ತು ದಾಸರು ಮಾತ್ರ ಈ ಅಧಿಕಾರದಿಂದ ದೂರವಿದ್ದು ಸಮಾನತೆ ತರಲು ಪ್ರಯತ್ನಿಸಿದರು. ಉಳಿದ ಯಾವುದೇ ಆಳರಸನಾಗಲಿ, ನವಾಬನಾಗಲಿ, ದಳವಾಯಿಯಾಗಲಿ ಎಲ್ಲರೂ ತಮ್ಮ ತಮ್ಮ ಸ್ವಾರ್ಥಕ್ಕಾಗಿ ತಮ್ಮ ತಮ್ಮ ಸುಖಕ್ಕಾಗಿಯೇ ಹೋರಾಡಿದ್ದಾರೆ. ನಾಟಕಕಾರ ಚರಿತ್ರೆಯನ್ನು ಹೀಗೆ ವಸ್ತುನಿಷ್ಠವಾಗಿ ದಾಖಲಿಸುವುದರ ಮೂಲಕ ಈ ಎಲ್ಲ ಅಂಶಗಳತ್ತ ಗಮನಸೆಳೆಯುತ್ತಾರೆ.

ಇವೆರಡೂ ನಾಟಕಗಳಲ್ಲಿ ತಟಸ್ಥ ಭಾಷೆಯನ್ನು ಬಳಸಲಾಗಿದೆ. ಐತಿಹಾಸಿಕ ನಾಟಕಗಳಿಗೆ ಭಾಷೆ ತಟಸ್ಥವಾಗಿದ್ದಷ್ಟು ಹೆಚ್ಚು ಅನುಕೂಲವೆಂಬುದನ್ನು ನಾಟಕಕಾರ ಮೊದಲೇ ಈ ಭಾಷೆಗೆ ಸಂಬಂಧಿಸಿದಂತೆ ಖಚಿತ ನಿಲುವು ತಾಳಿರುವುದು ಹೆಚ್ಚು ಸೂಕ್ತವಾಗಿ ಕಾಣುತ್ತದೆ.

---

1 ಹೈದರ್ ಪುಟ ೨೧

2 ಹೈದರ್ ಪುಟ ೮೦

ಇವೆರಡೂ ನಾಟಕಗಳ ವೈಶಿಷ್ಟ್ಯವೆಂದರೆ ಕಂಸಾಳೆಯ ನಿರೂಪಣಾ ತಂತ್ರವನ್ನು ಕಥೆ ಹೇಳುವುದಕ್ಕಾಗಿ ಬಳಸಿಕೊಂಡಿರುವುದು. ಕಂಸಾಳೆಗೂ ಈ ನಾಟಕಗಳಿಗೂ ಸಂಬಂಧವೇ ಇರದಿದ್ದರೂ ಕೂಡ, ಮೈಸೂರ ಪ್ರಾಂತ್ಯದ ಜಾನಪದ ಸೊಗಡಿನಿಂದ ಕೂಡಿದ ಕಂಸಾಳೆಯನ್ನು ಇಲ್ಲಿ ಬಳಸಿಕೊಂಡಿರುವುದರಿಂದ ಈ ನಾಟಕಗಳಿಗೆ ಹೆಚ್ಚು ಕಸುವು ದೊರೆತಿದೆ. "ಚಿಕ್ಕದೇವಭೂಪ" ಬ್ರೆಕ್ಟ್‌ನ ಎಪಿಕ್ ಥಿಯೇಟರ್ ತಂತ್ರಗಳಿಗೆ ಋಣಿಯಾಗಿದ್ದರೆ "ಹೈದರ್"ದಲ್ಲಿ ದೂರಸಮನ್ವಯದ ತಂತ್ರವನ್ನು ಬಳಸಿಕೊಳ್ಳಲಾಗಿದೆ.

ಕಂಸಾಳೆಯನ್ನು ಬಳಸಿಕೊಳ್ಳುವಲ್ಲಿ ಸಂಭಾಷಣೆಗಳನ್ನು ಹೆಣೆಯುವಲ್ಲಿ, ದೃಶ್ಯಗಳ ಜೋಡಣೆಯಲ್ಲಿ ಹಳೆಮನೆಯವರು ಸಾಕಷ್ಟು ಗಮನ ಸೆಳೆಯುತ್ತಾರೆ. ರಂಗಭೂಮಿಯೊಂದಿಗೆ ನೇರ ಸಂಪರ್ಕವನ್ನಿಟ್ಟುಕೊಂಡಿರುವ ಹಳೆಮನೆಯವರ ಈ ನಾಟಕಗಳು ಪ್ರಯೋಗದ ದೃಷ್ಟಿಯಿಂದಲೂ ಅನುಕೂಲವಾಗಿವೆ. ಚರಿತ್ರೆಯನ್ನು ಅಧಿಕೃತವಾಗಿ ದಾಖಲಿಸಿ, ಆ ಮೂಲಕ ಸಮಕಾಲೀನ ಸಾಮಾಜಿಕ ಸಂಗತಿಗಳತ್ತ ಪರೋಕ್ಷವಾದ ಬೆಳಕನ್ನು ಮೂಡಿಸುವ ಹಳೆಮನೆ ಇವತ್ತಿನ ಪ್ರಮುಖ ನಾಟಕಕಾರರಾಗಿ ಕಾಣುತ್ತಾರೆ.

ಡಾ. ಕಮಲಾ ಹಂಪನಾ

ಶಾಸನಗಳು ಮತ್ತು ಯಕ್ಷಿ ಪದ್ಮಾವತಿ

ಶಿವಮೊಗ್ಗ ಜಿಲ್ಲೆಯಲ್ಲಿರುವ ಅತಿಶಯಕ್ಷೇತ್ರವೆನಿಸಿರುವ ಹೊಂಬುಜ (ಹುಂಚ)ವು ಸಾವಿರ ವರ್ಷಗಳಿಂದ ಕರ್ನಾಟಕದ ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವದ ಕ್ಷೇತ್ರವಾಗಿದೆ. ಪೊಂಬುಚ್ಚ, ಪೊಂಬುರ್ಚ, ಪೊಂಬುಚ್ಚ, ಹೊಂಬುಚ್ಚ, ಹೊಂಬುಚ, ಹೊಂಬುಜ, ಹೊಂಚ, ಹುಂಚ ಎಂಬ ಹಲವು ಹೆಸರುಗಳಿಂದ ಪ್ರಸಿದ್ಧವಾಗಿರುವ ಈ ಅತಿಶಯ ಕ್ಷೇತ್ರವು ಸಾಂತರ (ಶಾಂತರ–ಸಾಂತಾರ–ಶಾಂತಾರ) ರಾಜವಂಶಕ್ಕೆ ರಾಜಧಾನಿಯಾಗಿತ್ತು. ಗಂಗರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಕೂಡ ಈ ಸ್ಥಳದ ಪ್ರಾಮುಖ್ಯ ಕಡಿಮೆಯಾಗಲಿಲ್ಲ.

ಹೊಂಬುಜ ಕ್ಷೇತ್ರವು ಜೈನರ ಪ್ರಸಿದ್ಧ ಯಾತ್ರಾ ಸ್ಥಳವೂ ಹೌದು. ಆದರ ಚರಿತ್ರೆಯುದ್ದಕ್ಕೂ ಹುಂಚವು ಅನ್ಯಾಕ್ರಾಂತವಾಗದೆ ಜೈನರ ಪವಿತ್ರ ಕ್ಷೇತ್ರವಾಗಿ ಉಳಿದು ಬಂದಿದೆ. ಜೈನ ಹಾಗೂ ಕರ್ನಾಟಕದ ಒಟ್ಟು ವಾಸ್ತುಶಿಲ್ಪದ ದೃಷ್ಟಿಯಿಂದ ಕೂಡ ಹುಂಚದ ಪ್ರಾಧಾನ್ಯವನ್ನು ಚರಿತ್ರಕಾರರು ಪ್ರತಿಪಾದಿಸಿದ್ದಾರೆ. ಜೈನ ಧರ್ಮದ ಪ್ರಭಾವ–ಪ್ರಸಾರದ ಕಾರಣಕ್ಕಾಗಿಯೂ ಹುಂಚ ಇಂದಿಗೂ ಗಣ್ಯಸ್ಥಾನ ಪಡೆದಿದೆ. ಅಲ್ಲಿರುವ ಬಸದಿಗಳು, ಶಿಲಾಮೂರ್ತಿಗಳು, ಶಾಸನಗಳು ಸಂಶೋಧಕರ ಆಸಕ್ತಿಯನ್ನು ಕೆರಳಿಸಿವೆ. ಇದೆಲ್ಲದಕ್ಕೂ ಶಿಖರಪ್ರಾಯವಾಗಿ ಹುಂಚದ ಹೆಸರು ಜನಮನದಲ್ಲಿ ಬೇರು ಬಿಟ್ಟಿರುವುದು ಅಲ್ಲಿರುವ ಜಿನಶಾಸನ ದೇವತೆಯಾದ ಪದ್ಮಾವತಿಯ ಮಹಾತ್ಮ್ಯದಿಂದ.

ತ್ರಿಷಷ್ಟಿ ಶಲಾಕ ಪುರುಷರಲ್ಲಿ ೨೪ ಜನ ತೀರ್ಥಂಕರರು ಪ್ರಮುಖರು. ಪ್ರತಿ ತೀರ್ಥಂಕರರಿಗೂ ಒಬ್ಬೊಬ್ಬ ಯಕ್ಷ–ಯಕ್ಷಿ ಇರುತ್ತಾರೆ. ಮೂಲತಃ ಜೈನ ಧರ್ಮದಲ್ಲಿ ವಿಗ್ರಹಾರಾಧನೆ ಇರಲಿಲ್ಲ. ಜಿನಬಿಂಬಗಳನ್ನು ಪೂಜಿಸುವ ಪದ್ಧತಿ ಪ್ರಾರಂಭವಾದ ಮೇಲೆ ಯಕ್ಷ ಯಕ್ಷಿಯರನ್ನು ಜಿನಮೂರ್ತಿಗಳ ಎಡಬಲಗಳಲ್ಲಿ ಸೇರಿಸಲಾಯಿತು. ಜೈನ ಧರ್ಮ ಸೃಷ್ಟಿಕರ್ತನನ್ನು, ಅವತಾರಗಳನ್ನೂ ದೈವಾನುಗ್ರಹವನ್ನೂ ವಿರೋಧಿಸಲೆಂದೇ ಹುಟ್ಟಿಕೊಂಡರೂ ಕ್ರಮೇಣ ಹಿಂದೂ ಸಂಪ್ರದಾಯಗಳಿಗೆ ಬಾಗಿಲು

ತೆರೆಯಿತು. ದೈವಿಕ ಶಕ್ತಿಯ ಆಕರ್ಷಣೆಗೆ ಜನ ಸಮುದಾಯ ಬಹು ಬೇಗ ಒಳಗಾಗುತ್ತದೆ. ಜೈನ ಸಮಾಜವೂ ಇಂಥ ಪ್ರಲೋಭನೆಗಳಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ಹಿಂದೂ ಧರ್ಮದ ಭಕ್ತಿ ಪಂಥ ಮಧ್ಯಯುಗದಲ್ಲಿ, ಆಸೇತು ಹಿಮಾಚಲ ವ್ಯಾಪಕವಾಗಿ ಬೆಳೆಯಿತು. ಇದೇ ಅವಧಿಯಲ್ಲಿ ಜೈನ ಮತವೂ ತನ್ನ ಬಸದಿಗಳಲ್ಲಿ ಮೂಲದೇವರಂತೆ, ಶಾಸನ ದೇವತೆಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಖಾಯಂ ಜಾಗವನ್ನು ಕಲ್ಪಿಸಿಕೊಟ್ಟಿತು. ಪ್ರತಿಯೊಬ್ಬ ತೀರ್ಥಂಕರರಿಗೂ ಒಬ್ಬೊಬ್ಬ ಯಕ್ಷ–ಯಕ್ಷಿಯರ ಪ್ರಕಾರ 24 ಜನ ತೀರ್ಥಂಕರರಿಗೂ (24 + 24) 48 ಜನ ಯಕ್ಷ–ಯಕ್ಷಿಯರು ಸೇರ್ಪಡೆಯಾದರು. ಈ 48 ಜನ ಶಾಸನ ದೇವತೆಗಳಲ್ಲಿ ಚಕ್ರೇಶ್ವರಿ (ಋಷಭ ತೀ) ಜ್ವಾಲಾಮಾಲಿನೀ (ಚಂದ್ರಪ್ರಭ ತೀ) ಅಂಬಿಕಾ ಕೂಷ್ಮಾಂಡಿನೀ (ನೇಮಿ ತೀ) ಪದ್ಮಾವತಿ (ಪಾರ್ಶ್ವ ತೀ)—ಈ ನಾಲ್ವರು ಯಕ್ಷ–ಯಕ್ಷಿಯರು ಪ್ರಭಾವಶಾಲಿಗಳೆನಿಸಿದ್ದಾರೆ. ಯಕ್ಷರಲ್ಲಿ ಧರಣೇಂದ್ರ (ಪಾರ್ಶ್ವ ತೀ) ಮತ್ತು ಬ್ರಹ್ಮದೇವ (ಶೀತಲ ತೀ) ಇವರು ಇಬ್ಬರು ಪ್ರಸಿದ್ಧರು. ಯಕ್ಷ-ಯಕ್ಷಿಯರ ಮೂರ್ತಿ ಶಿಲ್ಪದ ಪರಂಪರೆ ಕೂಡ—ಏರ್ಪಟ್ಟಿದೆ. [JES Burgess : Digambara Jaina Iconography, Indian Antiquary Vol XXXII pp 459–468 : ಹಂಪನಾ ; 1976].

ಯಕ್ಷ–ಯಕ್ಷಿಯರಿಗೆ ಪೂಜೆ ಸಲ್ಲಿಸುವುದು ಸರಿಯೋ ತಪ್ಪೋ ಎಂಬ ವಿಚಾರದಲ್ಲಿ ವಿವಾದ ಹಿಂದಿನಿಂದಲೂ ನಡೆದಿದೆ, ಈಗಲೂ ನಡೆಯುತ್ತಿದೆ. ಸೋಮದೇವ ಸೂರಿಯು (ಕ್ರಿ. ಶ. 959) ಉಪಾಸಕಾಧ್ಯಯನದಲ್ಲಿ (ಇದು ಯಶಸ್ತಿಲಕ ಚಂಪೂ ಕಾವ್ಯದಲ್ಲಿ 5ರಿಂದ 7ನೆಯದರವರೆಗಿನ ಮೂರು ಅಧ್ಯಾಯಗಳಿಗೆ ಇರುವ ಇನ್ನೊಂದು ಹೆಸರು) ಶಾಸನ ದೇವತೆಗಳನ್ನು ಜಿನರಿಗೆ ಸಮನಾಗಿ ಪೂಜಿಸುವುದು ಅಧೋಗತಿಗೆ ಕಾರಣವಾದೀತೆಂದು ಎಚ್ಚರಿಸಿದ್ದಾನೆ. ಆಶಾಧರ ಸೂರಿಯೂ (ಕ್ರಿ. ಶ. 1239 ಸಾಗಾರ ಧರ್ಮಾಮೃತ) ಇದೇ ವಿರೋಧವನ್ನು ಬೆಂಬಲಿಸಿದ್ದಾನೆ. ದಾರ್ಶನಿಕನು ತನಗೆ ಎಷ್ಟೇ ಆಪತ್ತುಗಳು ಅಡರಿದರೂ ಕಷ್ಟ ಪರಿಹಾರದ ಆಮಿಷಕ್ಕೆ ಒಳಗಾಗಿ ಶಾಸನ ದೇವತೆಗಳನ್ನು 'ಕದಾಚಿದಪಿನ ಭಜತೇ' ಎಂದು ನಿಷೇಧಿಸಿದ್ದಾನೆ. (ಸಾಗಾರ ಧರ್ಮಾಮೃತ). ಜೈನ ಮುನಿಗಳೂ, ಶ್ರಾವಕ ಪಾತ್ರಧಾರಿಗಳಾದ ಗೃಹಸ್ಥರೂ ಶಾಸನ ದೇವತೆಗಳಿಗೆ ಪೂಜಿಸುವುದು ಹಾಗಿರಲಿ, ನಮಸ್ಕರಿಸುವುದೂ ಇಲ್ಲ. ಇದು ಧಾರ್ಮಿಕ ದೃಷ್ಟಿಯ ಒಂದು ಮನೋಧರ್ಮ ಮಾತ್ರ.

ಆದರೆ ಜೈನ ಸಮಾಜದಲ್ಲಿಯೇ ಪ್ರತಿಷ್ಠಿತರು ಮತ್ತು ಆಚಾರ್ಯರು ಕೆಲವರು ಒಂದು ಸಾವಿರದ ಇನ್ನೂರು ವರ್ಷಗಳಿಂದ ಒಂದು ವ್ಯವಸ್ಥಿತವಾದ ಯಕ್ಷಾರಾಧನಾ ಪರಂಪರೆಯನ್ನು ರೂಢಿಸಿದ್ದಾರೆ. ತಿಲೋಯ ಪಣ್ಣತ್ತಿ, ಪ್ರತಿಷ್ಠಾ ಸಾರ ಸಂಗ್ರಹ, ಅಭಿಧಾನ ಚಿಂತಾಮಣಿ, ಅಪರಾಜಿತ ಪೃಚ್ಛಾ, ಪ್ರತಿಷ್ಠಾ ಪಾಠ–ಮೊದಲಾದ ಕೃತಿ

ಗಳಲ್ಲಿ ಯಕ್ಷರ ಮೂರ್ತಿಗಳ ರಚನೆ ಮತ್ತು ಪ್ರತಿಷ್ಠಾಪನೆ ಕ್ರಮವನ್ನು ಶಾಸ್ತ್ರಬದ್ಧವಾಗಿ ನಿರೂಪಿಸಿದೆ.

ಪ್ರತಿ ತೀರ್ಥಂಕರರಿಗೆ ಇರುವ ಯಕ್ಷ-ಯಕ್ಷಿಯರು ಸತಿಪತಿಯೆಂದು ಭಾವಿಸುವುದು ಅನಂತರದ ಬೆಳವಣಿಗೆಯಾಗಿ ರೂಢಿಯಾಗಿದೆ. ಪಾರ್ಶ್ವ ಪಂಡಿತನೆಂಬ ಕವಿ ತನ್ನ ಪಾರ್ಶ್ವನಾಥ ಪುರಾಣದಲ್ಲಿ ಧರಣೇಂದ್ರ-ಪದ್ಮಾವತಿಯರು ದಂಪತಿಗಳೆಂದೇ ಸೂಚಿಸಿದ್ದಾರೆ (15–128 ವ). ಕರ್ನಾಟಕದಲ್ಲಿ ಯಕ್ಷ-ಯಕ್ಷಿಯರ ಪ್ರಭಾವ ಒಂಬತ್ತನೆಯ ಶತಮಾನದ ವೇಳೆಗೆ ಖಚಿತಗೊಂಡಿತ್ತು. ಪಂಪ, ಪೊನ್ನ, ರನ್ನ ಮತ್ತು ಅನಂತರದ ಕವಿಗಳು ಯಕ್ಷ-ಯಕ್ಷಿಯರನ್ನು ಸ್ತುತಿಸಿದ್ದಾರೆ. ನೂರಾರು ಜಿನಾಲಯಗಳಲ್ಲಿ ಅತಿ ಸುಂದರವಾದ ಯಕ್ಷರ ಮೂರ್ತಿಗಳಿವೆ ಐಹೊಳೆ, ಪಟ್ಟದಕಲ್ಲು, ಬಾದಾಮಿ ಮತ್ತು ಜಿನವಲ್ಲಭನ ಶಾಸನವಿರುವ ಬೊಡ್ಡ ಬಂಡೆ—ಇಲ್ಲೆಲ್ಲಾ ಯಕ್ಷಿಯರ ಪ್ರಾಚೀನ ಮೂರ್ತಿಗಳಿವೆ.

ಕರ್ನಾಟಕದ ಜೈನ ಹಾಗೂ ಜೈನೇತರ ಸಮಾಜಗಳಲ್ಲಿ ಯಕ್ಷ-ಯಕ್ಷಿಯರು ಪ್ರಭಾವ ಬೀರಿದ್ದು, ಒಂದಲ್ಲ ಒಂದು ರೂಪದಲ್ಲಿ ಬೆರೆತು ಹೋಗಿದ್ದಾರೆ. ಜೈನ—ಜೈನೇತರ ಜನಪದ ಸಾಹಿತ್ಯದಲ್ಲಿಯೂ ಇವರನ್ನು ಕುರಿತ ಹಾಡುಗಳು—ಕಥೆಗಳು ಉಪಲಬ್ಧವಿರುವುದನ್ನು ಡಾ. ಎಸ್. ಪಿ. ಪದ್ಮಪ್ರಸಾದರು ಸಂಶೋಧಿಸಿ ಪ್ರಕಟಿಸಿದ್ದಾರೆ. ಶಿಷ್ಟಪದ ಸಾಹಿತ್ಯದಲ್ಲಿರುವ ಜೈನ ಜಾನಪದೀಯ ಅಂಶಗಳಲ್ಲಿ ಈ ವಿಚಾರದ ಸಂಗತಿಯನ್ನು ಡಾ. ಎಂ. ಎ. ಜಯಚಂದ್ರರ ಮಹಾಪ್ರಬಂಧ ಒಳಗೊಂಡಿದೆ (ಹಸ್ತ ಪ್ರತಿ). ಎರಡು ಜನಪದ ಗೀತೆಗಳನ್ನು ಉದಾಹರಿಸುತ್ತೇನೆ :

> ಜಿನದತ್ತ ಜಿನಸ್ವಾಮಿ ಹೊನ್ನ ಪಾರ್ಶ್ವನಾಥ
> ನಿನ್ನಂಥ ಒಬ್ಬ ಮಗ ಬೇಕ । ಬಸ್ತ್ಯಾನ
> ಪದ್ಮಾವತಿಯಂಥ ಸೊಸಿ ಬೇಕ ॥
> ಪಾರೀಸನಾಥಗ ಪಾರಿಜಾತದ ಹೂವ
> ಪಾರೀಸನ ತಂಗಿ ಪದುಮಾಗ । ಖಳವೇನ
> ಕೊಯ್ದು ಮಲ್ಲಿಗಿ ನನೆದಂಡೆ ॥

ಈ 48 ಜನ ಯಕ್ಷ-ಯಕ್ಷಿಯರಲ್ಲಿ 23ನೆಯ ತೀ||ರಾದ ಪಾರ್ಶ್ವನಾಥರ ಯಕ್ಷಿಯಾದ ಪದ್ಮಾವತಿ ಮತ್ತು ಯಕ್ಷನಾದ ಧರಣೇಂದ್ರ—ಇವರು ಕನ್ನಡ ನಾಡಿನ ಜನಮನವನ್ನು ಗೆದ್ದವರು. ಪದ್ಮಾವತಿಯ ಸಹಸ್ರಾರು ಮೂರ್ತಿಗಳು ದೊರೆತಿವೆ. ಆಕೆಗೆಂದೇ ಪ್ರತ್ಯೇಕ ದೇವಾಲಯಗಳಿವೆ. ಜೈನ ಮತ್ತು ಅಜೈನ ಸಮಾಜದವರಿಂದ ಪದ್ಮಾವತಿ ಪೂಜೆಗೊಳ್ಳುತ್ತ ಪ್ರಭಾವಶಾಲಿಯಾಗಿ, ವರಗಳನ್ನು ಅನುಗ್ರಹಿಸುವ ಶಾಸನದೇವಿಯಾಗಿ ಜನಾನುರಾಗ ಪಡೆದಿದ್ದಾಳೆ. ಆಕೆಯನ್ನು ಕುರಿತು ಸ್ತೋತ್ರ ಸಾಹಿತ್ಯ ವಿಪುಲವಾಗಿದೆ. ಯಕ್ಷಗಾನಗಳಿವೆ, ಕಾವ್ಯಗಳಿವೆ. ಪದ್ಮನಾಭ ಕವಿಯ ಜಿನದತ್ತ

ರಾಯ ಚರಿತೆಯೆಂಬ (16ನೇ ಶತಮಾನ) ಸಾಂಗತ್ಯ ಕಾವ್ಯ ಈ ಪದ್ಮಾವತಿ ಯಕ್ಷಿಯ ಮಹಿಮೆಯ ಕಥನ ಕಾವ್ಯವೇ ಆಗಿದೆ.

ಈ ಜಿನದತ್ತರಾಯ ಚರಿತೆಯೆಂಬ ಕಾವ್ಯದ ಹೇಳಿಕೆಯಲ್ಲಿರುವ ಕೆಲವು ಚಾರಿತ್ರಿಕ ಸಂಗತಿಗಳಿಗೆ ಜೀವ ತುಂಬುವಂತಹ ಶಾಸನಾಧಾರಗಳೂ ಇವೆ. ಡಾ. ಪಿ. ಬಿ. ದೇಸಾಯಿ (1957, 171-172) ಮತ್ತು ಡಾ. ಹಂಪ ನಾಗರಾಜಯ್ಯ (1976, 37-39) ಈ ವಿಚಾರಗಳನ್ನು ಚರ್ಚಿಸಿದ್ದಾರೆ. ಜಿನದತ್ತ ರಾಯನು ಸುಮಾರು ಒಂಬತ್ತನೆಯ ಶತಮಾನದಲ್ಲಿ ಶಾಂತರಗ ರಾಜ ಮನೆತನವನ್ನು ಪ್ರಾರಂಭಿಸಿದನು. ಜಿನದತ್ತನನ್ನು ಅನುಗ್ರಹಿಸಿದ ಅವನ ಮನೆ ದೇವತೆ ಪದ್ಮಾವತಿ ಯಕ್ಷಿಯು ಲೊಕ್ಕಿ ಗಿಡದಲ್ಲಿ ಇರಲು ಇಷ್ಟಪಟ್ಟಿದ್ದರಿಂದ ಲೊಕ್ಕಿಯಬ್ಬೆ ಎಂಬ ಹೆಸರೂ ರೂಢಿಗೆ ಬಂದಿದೆ. ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಶಾಸನಗಳಿರುವ— ಎಪಿಗ್ರಾಫಿಯ ಕರ್ಣಾಟಿಕದ ಏಳು ಮತ್ತು ಎಂಟನೆಯ ಸಂಪುಟದ ಎಲ್ಲಾ ಶಾಸನಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಶಾಂತರರಿಗೆ ಸಂಬಂಧಿಸಿದ ನಗರ 35, 48, 58 ಮೊದಲಾದ ಸಂಖ್ಯೆಯ ಶಾಸನಗಳಲ್ಲಿ ಯಕ್ಷಿ ಪದ್ಮಾವತೀ ದೇವಿಯ ಸ್ತುತಿಯೂ ವರ್ಣನೆಯೂ ಪ್ರಭಾವವೂ ಮಹಿಮೆಯೂ ಅನುಗ್ರಹವೂ ನಿರೂಪಿತ ವಾಗಿದೆ. ಅವೆಲ್ಲವನ್ನೂ ಉದಾಹರಿಸಿದ ಮಾದರಿಗಾಗಿ ಒಂದು ಶಾಸನದಿಂದ ಪ್ರಕೃತ ಸಂಪ್ರಬಂಧಕ್ಕೆ ಉಚಿತವಾದಷ್ಟು, ಮೂರು ಸಾಲುಗಳನ್ನು ಉದಾಹರಿಸುತ್ತೇನೆ :

1. ಪಟ್ಟಿ ಹೊಂಬುಚ್ಚ ಪುರವರೇಶ್ವರಂ ಮಹೋಗ್ರವಂಶಲಲಾಮಂ
   ಪದ್ಮಾವತೀ ಲಬ್ಧ ವರಪ್ರಸಾದಾ ಸಾಧಿತ ವೀರ ಶಾನ್ತರ ದೇವಂ
   ಶಾಂತಳಿಗೆ ಸಾಯಿರಮುಮನೇಕ ಛತ್ರ ಛಾಯೆಯಿಂದಮಾಳುತ್ತಮಿರೆ

(ಎ.ಕ. VIII, ನಗರ ೫೮, ೧೧ ಶ.)

ಕ್ರಿ.ಶ. ೧೧ನೆಯ ಶತಮಾನದಿಂದ ಪದ್ಮಾವತೀ ಯಕ್ಷಿಯನ್ನು ನೆನೆಯುವ ಶಾಸನಗಳು ಹೆಚ್ಚಿನಸಂಖ್ಯೆಯಲ್ಲಿ ಸಾಕಷ್ಟು ಕಂಡು ಬರುತ್ತವೆ.

2. ಪದ್ಮಾವತೀ ಲಬ್ಧವರಪ್ರಸಾದಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ
   ಶ್ರೀಮನ್ಮಹಾಸಾಮನ್ತಂ ಮಾರ್ತಂಡಯ್ಯಂ ತಮ್ಮ ಮುತ್ತಯ್ಯಂ ಮಾಡಿಸಿದ
   ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ
   ಶಿಳಾಸ್ತಂಭಮಂ ಆಚನ್ದ್ರಾರ್ಕತಾರಂಬರಂ ನಿಲಿಸಿದಂ.

(ಸೌ.ಇಂ.ಇ. XI–೧, ೭೮. ಕ್ರಿ.ಶ. ೧೦೪೫ ; ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು ಮುಗದ ಗ್ರಾಮದ ಕೆರೆಯ ಏರಿಯ ಕಲ್ಲು ಶಾಸನ).

3. ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ ಮಣ್ಡಳೇಶ್ವರ
   ಬನವಾಸೀ ಪುರವರಾಧೀಶ್ವರ (ಪದ್ಮಾವತೀ) ಲಬ್ಧವರ ಪ್ರಸಾದಂ
   ಕಾದಂಬ ಕುಳಕಮಳ ಮಾರ್ತ್ತಾಂಡನೆನಿಸಿದ ಕೀರ್ತಿದೇವನ
   ವಂಶವೀರ್ಯ್ಯ ಪ್ರಭಾವ ಮಂತೆಂದಡೆ

(ಎ.ಕ. VIII + I ಸೊರಬ. ೨೬೨ ಕ್ರಿ.ಶ. ೧೦೭೫)

ಈ ಮೇಲಿನ ಕೀರ್ತಿದೇವನ ಶಾಸನವು ಆತನ ಪಟ್ಟಮಹಿಷಿ ಮಾಳಲದೇವಿಯು ಕುಪ್ಪಟೂರಿನಲ್ಲಿ ಪಾರ್ಶ್ವನಾಥ ಚೈತ್ಯಾಲಯವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಜೈನ ಕದಂಬ ವಂಶದ ಕೀರ್ತಿದೇವನು ಬನವಾಸಿ ಪುರವರಾಧೀಶನಾಗಿ ಮಹಾ ಮಂಡಳೇಶ್ವರನಾಗಿ ಪ್ರಸಿದ್ಧನಾಗಿದ್ದು ತಾನು ಜೈನ ಯಕ್ಷಿ ಪದ್ಮಾವತಿ ದೇವಿಯು ಅನುಗ್ರಹಿಸಿದ ವರ ಪ್ರಸಾದದಿಂದ ಯಶೋವಂತನಾಗಿರುವುದನ್ನು ತನ್ನ ಶಾಸನದಲ್ಲಿ ನಿರೂಪಿಸಿದ್ದಾನೆ.

4. ಪದ್ಮಾವತೀ ಲಬ್ಧ ವರ ಪ್ರಸಾದಂ ಆದಂತಹ ಮಹಾಸಾಮಂತಾಧಿಪತಿ ದಂಡನಾಯಕ ಬಲದೇವನ ವಿಚಾರ ಇದೇ ಕಾಲದ ಇನ್ನೊಂದು ಶಾಸನ ತಿಳಿಸುತ್ತದೆ. (ಎ.ಕ. VII, ಶಿಕಾರಿಪುರ, ೨೯೭ ಕ್ರಿ.ಶ. ೧೦೭೯ ಹುಂಬರ ಹೊಸೂರು). ಜೈನರು ಮೂಲತಃ ಉತ್ತರ ಭಾರತದ ಗಂಗಾ ನದೀ ತೀರಕ್ಕೆ ಸೇರಿದವರು. ಎಮ್ಮೆ ಅವರ ಸಾಕು ಪ್ರಾಣಿ. ಬ್ರಾಹ್ಮಣರು ಸಿಂಧೂನದಿಯ ತೀರಕ್ಕೆ ಸೇರಿದವರು, ಗೋವು ಅವರ ಆಹಾರ ರಕ್ಷಿಯಾಗಿತ್ತು. ಗಂಗೆಯ ಬಯಲು ಕಣಿವೆಗಳಿಂದ ಒತ್ತರಿಸಲ್ಪಟ್ಟ ಕಾರಣ ಜೈನರು ಗುಂಪುಗಳಾಗಿ ಅಲ್ಲಿಂದ ಚೆದರಿದರು. ಒಂದು ಗುಂಪು ಪಶ್ಚಿಮದ ಕಡೆಗೆ ಹೊರಟು ಗುಜರಾತು, ರಾಜಾಸ್ತಾನಗಳಲ್ಲಿ ನೆಲಸಿತು. ಇನ್ನೊಂದು ಗುಂಪು ಮಧ್ಯಭಾರತ, ಮಹಾರಾಷ್ಟ್ರಗಳತ್ತ ಪ್ರಯಾಣಿಸಿ ಅದರ ಮುಂದಿನ ಹೆಜ್ಜೆಯಾಗಿ ಆಂಧ್ರದಲ್ಲಿ ಪೇರೂರು ಪ್ರದೇಶದಲ್ಲಿ ತಳವೂರಿತು. ಭದ್ರಬಾಹುಭಟಾರರ ಮತ್ತು ಸಂಪ್ರತಿ ಚಂದ್ರಗುಪ್ತರ ಕಾಲದಲ್ಲಿ ಕರ್ನಾಟಕಕ್ಕೆ ಬಂದ ಜೈನರ ತಂಡ ಪ್ರಾಚೀನ ವಾದದ್ದು, ಕ್ರಿ.ಪೂ.ದ ಕಾಲಕ್ಕೆ ಸೇರಿದ್ದು. ಆದರೆ ಕ್ರಿ.ಶ. ೩ ಮತ್ತು ೪ನೆಯ ಶತಮಾನದಲ್ಲಿ ಜೈನ ಕ್ಷತ್ರಿಯ ಪರಿವಾರವೊಂದು ಆಂಧ್ರದಿಂದ ಕರ್ನಾಟಕಕ್ಕೆ ಬಂದಿತು. ಆಂಧ್ರದಲ್ಲಿ ಪ್ರತಿಕೂಲ ಪರಿಸರ ಉಂಟಾದ ನಿಮಿತ್ತದಿಂದ ಅನುಕೂಲ ವಾತಾವರಣವಿದ್ದ ಕರ್ನಾಟಕಕ್ಕೆ ಬಂದ ಈ ಗುಂಪೇ ಗಂಗರದು; ಇವರು ತಮ್ಮ ಮೂಲ ಬೇರಿನ ಹೆಸರನ್ನು ಹಾಗೇ ಉದ್ದಕ್ಕೂ ಉಳಿಸಿಕೊಂಡು ಬಂದರು. ಗಂಗ ಪೇರೂರಿನಿಂದ ಸಿಂಹನಂದಿ ಮುನಿಯು ತೋರಿದ ಮಾರ್ಗದರ್ಶನದಲ್ಲಿ ಬಂದ ಈ ತಂಡ ಈಗಿನ ಕೋಲಾರ ಪ್ರದೇಶದಲ್ಲಿ ಬಿಡಾರ ಹೂಡಿದರು. ನಂದಿ ಬೆಟ್ಟ ಇವರ ರಕ್ಷಣೆಯ ಕೋಟೆಯಾಯಿತು. ನಂದಿ ಬೆಟ್ಟದ ಮೇಲೆ ಈಗ ಹಿಂದೂ ದೇವಾಲಯವಾಗಿರುವ ದೇವಸ್ಥಾನ ಈ ಗಂಗರ ಪಟ್ಟ ಜಿನಾಲಯವಾಗಿತ್ತು.

ಗಂಗರು, ೩–೪ನೆಯ ಶತಮಾನದ ವೇಳೆಗೆ ಜೈನರ ಹಿಡಿತ ಕಳೆದುಕೊಂಡ ಗಂಗ ಪೇರೂರು ತೊರೆದು ಕುವಲಾಲಪುರಕ್ಕೆ ಬಂದಾಗ ಪದ್ಮಾವತಿ ಯಕ್ಷಿಯು ಅವರ ಆರಾಧ್ಯ ದೈವವಾಗಿತ್ತೆ ಎಂಬುದು ಚರ್ಚೆಯಾಗಬೇಕಾದ ವಿಷಯ. ಏಕೆಂದರೆ ದೊರೆತಿರುವ ಗಂಗರ ಪ್ರಾಚೀನ ಶಾಸನಗಳಲ್ಲಿ ಇದರ ಮಾಹಿತಿ ಕಾಣುವುದಿಲ್ಲ. ಆದರೆ ೧೧ನೆಯ ಶತಮಾನದ ಗಂಗರ ಶಾಸನದಲ್ಲಿ ಗಂಗರು ಪದ್ಮಾವತೀ (ದೇವಿ) ಲಬ್ಧವರ ಪ್ರಸಾದರು ಎಂದು ಸ್ಪಷ್ಟವಾಗಿ ನಮೂದುಗೊಂಡಿದೆ; ಒಂದು ದೃಷ್ಟಾಂತ–

5 "ಸ್ವಸ್ತಿ ಸಮಸ್ತ ನ್ರಿಪಜನ ಸ್ತುತ್ಯಸತ್ಯ ವಾಕ್ಯ ಕೊಂಗುಣಿ–ವರ್ಮ ಧರ್ಮ್ಮಮಹಾರಾಜಾಧಿರಾಜ ಪರಮೇಶ್ವರ ಕುವಳಾಳ–ಪುರವರೇಶ್ವರ ನಂದಗಿರಿನಾಥಂ ಮದಗಜೇಂದ್ರ ಲಾಂಚನಂ ಪದ್ಮಾವತೀ ಲಬ್ಧ ವರ ಪ್ರಸಾದಂ ಗಂಗ ಕುಸುಮಾಯುಧಂ ಸನ್ನಿಯ ಗಂಗಂ ಜಯದುತ್ತರಂಗಂ ವಿಬುಧ ಜನ ಚಿಂತಾಮಣಿ ಮಣ್ಡಳಿಕ ಮಕುಟ ಚೂಡಾಮಣಿ ಶ್ರೀಮಚ್ಚಾಳುಕ್ಯ ಗಂಗ ಪೆರ್ಮ್ಮಾನಡಿ ವಿಕ್ರಮಾದಿತ್ಯದೇವ" (Karnataka inscriptions Vol–I to 17AD 1055 ಶಿಗ್ಗಾಂವಿ, ಧಾರವಾಡ ಜಿಲ್ಲೆ) ಇದೇ ಬಗೆಯ ಹೇಳಿಕೆ ಇನ್ನೂ ಕೆಲವು ಶಾಸನಗಳಲ್ಲಿ ಬಂದಿದೆ. ಅವುಗಳಲ್ಲಿ ಒಂದು.

6. ಪದ್ಮಾವತೀದೇವಿ ಲಬ್ಧವರಪ್ರಸಾದಂ.... ಸಮ್ಯಕ್ತ್ವರತ್ನಾಕರಮಪ್ಪ ಪಡಿಗ ಮಾಧವ (ಎ.ಕ. VII ಶಿವಮೊಗ್ಗ.5)

ನಮ್ಮ ನಾಡಿನ ಚರಿತ್ರೆಯನ್ನು ಅವಲೋಕಿಸಿದಾಗ ಸೂರ್ಯವಂಶ, ಚಂದ್ರವಂಶಗಳಿಗೆ ಸೇರಿದ್ದೇವೆಂದು ಅಭಿಮಾನದಿಂದ ಹೇಳಿಕೊಳ್ಳುವ ರಾಜವಂಶಗಳು ಕಂಡು ಬರುತ್ತವೆ. ಅದರಂತೆಯೇ ದೇವಾನ.ದೇವತೆಗಳ ಅನುಗ್ರಹದಿಂದ ವಿಕಸನಗೊಂಡ ಕುಲಪರಂಪರೆ ತಮ್ಮದೆಂದು ಪ್ರಕಟಿಸಿದ ರಾಜಮನ್ನೆಯರ ವಿವರಗಳೂ ಇವೆ. ಪದ್ಮಾವತೀದೇವಿ, ಜ್ವಾಲನೀದೇವಿ, ಚಾಮುಂಡಾ ಮೊದಲಾದ ಜೈನ ಯಕ್ಷಿಯರು ಕೊಟ್ಟ ವರಪ್ರಸಾದದಿಂದ ತಮ್ಮ ವಂಶಗಳು ಕುಡಿಯಿಟ್ಟು ಪಲ್ಲವಿಸಿವೆ ಎಂದು ಕರ್ನಾಟಕದಲ್ಲಿ ಚಕ್ರವರ್ತಿಗಳೇ ಅಲ್ಲದೆ ಎಷ್ಟೋ ಸಣ್ಣ ಪುಟ್ಟ ರಾಜರು, ಮಹಾ ಸಾಮಂತರು ದಂಡನಾಯಕರು ನಿವೇದಿಸಿದ್ದಾರೆ. ಹೊಯ್ಸಳ ಸಾಮ್ರಾಜ್ಯ ಈ ಶ್ರೇಣಿಯಲ್ಲಿ ಎದ್ದು ಕಾಣುವ ಶಿಖರ.

7. ಆ ಸಳ ನೃಪತಿಯ ರಾಜ್ಯ
ಶ್ರೀ ಸಂವರ್ದ್ಧನ ಮನೆಯ್ದೆ ಮಾಡುವ ಬಗೆಯಿಂ
ವಾಸವ ವಂದಿತ ಜಿನ ಪೂ
ಜಾ ಸಹಿತಂ ಸಕಳ ಮಂತ್ರ ವಿದ್ಯಾ ಕುಶಳಂ॥

ಮಹಾಸ್ರಗ್ಧರಾ॥ ಮುದದಿಂ ಜೈನ ಬ್ರತೀಶಂ ಶಶಕಪುರದ ಪದ್ಮಾವತಿ ದೇವಿಯಂ ಮಂ
ತ್ರದಿನಾದಂ ಸಾಧಿಸ್ವಲ್ಪಿಕ್ರಿಯೆಯೊಳೆ ಪುಲಿ ಮೇಲ್ವಾಯೆ ಯೋಗೀಶ್ವರಂ ಕುಂ
ಚದ ಕಾವಿಂದಂತದಂ ಪೊಯ್ಸಳ ಎನಲಭಯಂ ಪೊಯ್ವುದಂ ಪೊಯ್ಸಳಾಂಕಂ
ಯದುಭೂಪಗ್ಗಾದುದಂದಿಂದೆಸೆದುದು ಸೆಳೆಯಿಂದಲೋಳ ಶಾರ್ದೂಲ ಚಿಹ್ನಂ

ಇಂದ್ರವಜ್ರ॥ ಆ ಸಂದ ಯಕ್ಷಿವರದೊಳ್ವಸಂತಂ
ಲೇಸಾಗೆ ತಾತ್ಕಾಲಿಕ ನಾಮದಿಂದು
ವಾಸನ್ತಿಕಾ ದೇವತೆಯೆಂದು ಪೂಜಾ
ವ್ಯಾಸಂಗವಂ ಮಾಡಿದನಾ ನೃಪಾಳಂ

(ಎ.ಕ. IX (೧೯೪೦) ಬೇಲೂರು, ೩೮೯ (ಬೇ ೧೨೪) ಕ್ರಿ.ಶ. ೧೧೩೩, ಬಸ್ತಿಹಳ್ಳಿ ಪು. ೩೫೩)
ಬಸ್ತಿಹಳ್ಳಿಯ ಈ ಶಾಸನ ಮತ್ತು ಇಂತಹುದೇ ಇನ್ನಿತರ ಶಾಸನಗಳು ಹೊಯ್ಸಳ ಸಾಮ್ರಾಜ್ಯದ ಉಗಮವನ್ನು ಕುರಿತು ಬೆಳಕು ಚೆಲ್ಲುತ್ತವೆ; ಅಲ್ಲದೆ ಜೈನ ಮೂಲವನ್ನು ಸ್ಪಷ್ಟಪಡಿಸುತ್ತವೆ. ಪ್ರಸ್ತುತ ಸಂಪ್ರಬಂಧದ ವ್ಯಾಪ್ತಿ ಮತ್ತು ವಿವೇಚನೆಗೆ ಒಳಪಟ್ಟು ಹಾಗೆ ಹೊಯ್ಸಳರ ಈ ಬಗೆಯ ಹಲವು ಶಾಸನಗಳು ಜೈನರ ಯಕ್ಷಿ ಪದ್ಮಾವತಿಯ ಮಂತ್ರ ಮಹಿಮೆಯನ್ನೂ ಆಕೆಗೆ ವಾಸಂತಿಕಾದೇವಿ ಎಂಬ ಹೆಸರು ಇರುವುದನ್ನೂ ಖಚಿತಪಡಿಸಿವೆ. ಶಶಕಪುರ (ಸೊಸೆಯೂರು) ಪದ್ಮಾವತಿದೇವಿಯ ಗುಡಿಯನ್ನು ಹೊಂದಿದ್ದ ಸಂಗತಿಯೂ ಇಲ್ಲಿ ಪ್ರಸ್ತಾಪಗೊಂಡಿದೆ. ಸಾಮಾನ್ಯವಾಗಿ ಪಾರ್ಶ್ವನಾಥ ತೀರ್ಥಂಕರರ ಜಿನಗೃಹದ ಪಕ್ಕದಲ್ಲಿ ಪದ್ಮಾವತಿಯ ದೇವಾಲಯ ಇರುವುದು ವಾಡಿಕೆ; ಆದ್ದರಿಂದ ಶಶಕಪುರದಲ್ಲೂ ಪಾರ್ಶ್ವನಾಥ ಮಂದಿರವಿದ್ದಿರಬಹುದು. ಹೊಯ್ಸಳ ರಾಜರುಗಳು ಆರಂಭದಲ್ಲಿ ಜೈನ ಮತಾವಲಂಬಿಗಳಾಗಿದ್ದುದಕ್ಕೆ ಬೇರೆ ಹೊರಗಿನ ಕಾರಣಗಳನ್ನು ಅರಸಬೇಕಾಗಿಲ್ಲ. ಅವರ ಮೊದಲಿನ ಶಾಸನಗಳೇ ಈ ವಿವರವನ್ನು ಒದಗಿಸುತ್ತವೆ. ಇದರೊಂದಿಗೇ ಹೇಳಬೇಕಾದ ಪ್ರಸ್ತುತ ಚರ್ಚೆಗೆ ಸಂಬಂಧಿಸಿದ ಇನ್ನೊಂದು ಮಾಹಿತಿಯೂ ಇದೆ. ಹೊಯ್ಸಳ ದೊರೆಗಳೇ ಅಲ್ಲದೆ ಅವರ ಅನೇಕ ದಂಡಾಧೀಶರು ಮಂತ್ರಿ ಸಾಮಂತ ಮನ್ನೆಯರೂ ಜೈನರಾಗಿದ್ದರಲ್ಲದೆ ಪದ್ಮಾವತೀದೇವಿ ಯಕ್ಷಿಯ ಉಪಾಸಕರೂ ಆಗಿದ್ದರು; ವಿಷ್ಣುವರ್ಧನನ ನೆಚ್ಚಿನ ಬಲಗೈಬಂಟನಾಗಿದ್ದ ದಂಡನಾಯಕ ಗಂಗರಾಜನು ಇವರ ಸಾಲಿನಲ್ಲಿ ಎದ್ದು ಕಾಣುತ್ತಾನೆ.

8. ಮಂತ್ರಿ ಮಾಣಿಕ್ಯಂ ಜಿನಶಾಸನ ರಕ್ಷಾಮಣಿ ಸಮ್ಯಕ್ತ್ವ ಚೂಡಾಮಣಿ ವಿಶುದ್ಧ ರತ್ನತ್ರಯಾಕರಂ ಚತುರ್ವಿಧ-ಅನೂನದಾನ ವಿನೋದಂ ಪದ್ಮಾವತೀದೇವಿ ಲಬ್ಧವರ ಪ್ರಸಾದಂ ಅಪ್ರತಿಮ ತೇಜಂ ಗಂಗಾರಾಜಂ

(ಅದೇ : ಪುಟ ೩೫೫)

ಮೇಲಿನ ಬಸ್ತಿಹಳ್ಳಿ ಶಾಸನದಲ್ಲಿ ಪ್ರಯೋಗವಾಗಿರುವ ''ಮುದದಿಂ ಜೈನ ಬ್ರತೀಶಂ...'' ಎಂಬ ಮಹಾ ಸ್ರಗ್ಧರಾ ವೃತ್ತ ಪದ್ಯವು ಕ್ರಿ.ಶ. ೧೨೬೫ರ ಹಳೇಬೀಡು ಶಾಸನದಲ್ಲೂ (ಬೇಲೂರು ೩೨೧ (XV ಬೇ. ೩೪೨) ಪುನರಾವೃತ್ತಿಯಾಗಿರುವುದನ್ನು ಗಮನಿಸಬೇಕು. ಇದರಿಂದ ಬಸ್ತಿಹಳ್ಳಿ ಶಾಸನ ರಚಿತವಾದ ೧೩೨ ವರ್ಷಗಳಾದ ಮೇಲೂ ಪದ್ಮಾವತಿ ಯಕ್ಷಿಯನ್ನು ಕುರಿತು ಅದೇ ನಂಬಿಕೆ ನಿಂತಿರುವುದು ಇದರಿಂದ ಸಾಬೀತು ಆಗುತ್ತದೆ.

ದಂಡನಾಯಕ ಗಂಗರಾಜನಂತೆಯೇ ಇನ್ನೂ ಕೆಲವು ಸೇನಾನಿ ಮತ್ತು ಅಧಿಕಾರಿಗಳು ತಾವು ಪದ್ಮಾವತೀದೇವಿ ಯಕ್ಷಿಯ ಕೃಪೆಗೆ ಪಾತ್ರರಾಗಿದ್ದೆವೆಂದು ಹೆಮ್ಮೆಯಿಂದ ಸೂಚಿಸಿದ್ದಾರೆ. ಮಹಿಮೋನ್ನತಿಯಂ ನೆಗಳ್ದ ಸುಮಧಿಗಣ ಪಂಚ

ಮಹಾ ಶಬ್ದ ಮಹಾ ಸಾಮನ್ತಾಧಿಪತಿ ಮಹಾ ಪ್ರಚಣ್ಡ ದಣ್ಡ ನಾಯಕಂ ಶಿಷ್ಟೇಷ್ಟ ಫಳನಾಯಕಂ ಪ್ರತಿಪನ್ನ ಮಂದರಂ ವಿಭವ ಪುರಂದರಂ ಜಿನಚರಣ ಕಮಳಭೃಂಗಂ ಸಾಹಸೋತ್ತುಂಗಂ ಸಮ್ಯಕ್ತ್ವ ರತ್ನಾಕರಂ ಬುದಕುಮುದ ಸುಧಾಕರ ಪದ್ಮಾವತೀ ಲಬ್ಧವರ ಪ್ರಸಾದ ದರ್ಮ್ಮವಿನೋದ ಮನಸ್ಸರೋಜಿನ (ರಾಜ) ಹಂಸಂ ಸರಸ್ವತೀ ಕರ್ಣಾವತಂಸಂ ಶ್ರೀ ಮತ್ತ್ರೈಳೋಕ್ಯಮಲ್ಲ ವೀರನೊಳಂಬ ಪಲ್ಲವ ಪೆರ್ಮ್ಮಾನ (ಡಿ ಜಯ) ಸಿಂಹ ದೇವ ಪಾದಾರಾಧಕಂ ಪತಿಕಾರ್ಯ ಸಾಧಕಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ದಂಡನಾಯಕಂ ಬಲದೇವಯ್ಯಂ ಬನವಾಸೆ ಪನ್ನಿಚ್ಛಾಸಿರ ಮುಮಂ (ಅಳ್ದು)

(ಎ ಕ. VII ಶಿಕಾರಿಪುರ ೨೯೭ ಕ್ರಿ.ಶ. ೧೦೭೯-೮೦; ತಂಬರ ಹೊಸೂರು)

೧೦. ಪದ್ಮಾವತೀ ಲಬ್ಧವರ ಪ್ರಸಾದ ಮಹಾಮಂಡಳೇಶ್ವರ ಗಂಗರಸ

(ಎ.ಕ. XI ಹೊಳಲಕೆರೆ ೬೮ ಕ್ರಿ.ಶ. ೧೧೨೬ ಗುಂಜಗನೂರು)

೧೧. ಮಹಾಮಂಡಳೇಶ್ವರ ತ್ರಿಭುವನ ಮಲ್ಲ ಗಂಗ ಪೆರ್ಮ್ಮಾಡಿ ಬರ್ಮ ದೇವನು ಪದ್ಮಾವತೀ ಲಬ್ಧವರ ಪ್ರಸಾದನು.

(ಎ.ಕ. VII ಹೊನ್ನಾಳಿ ೧೪ ಕ್ರಿ.ಶ. ೧೦೬೬)

೧೨. ಪದ್ಮಾವತೀ ಲಬ್ಧವರ ಪ್ರಸಾದನಾದ ಮಹಾಮಂಡಳೇಶ್ವರ ಅರಿಕೇಸರಿ

(The Kadambas of Goa and their inscriptions No. 14–AD, 1079 ಕಾದರವಳ್ಳಿ ಶಾಸನ)

೧೩. ವೀರ ಪೆರ್ಮ್ಮಾಡಿರಾಯನ ಕಟ್ಟಿದಲಗು ಮಂಡಳಿಕ ಗೂಂಕಿದೇವನು ಪದ್ಮಾವತೀದೇವಿ ಲಬ್ಧ ವರಪ್ರಸಾದನು.

(Karnataka inscription Volume V No. 21AD1123)

ಬಿಜಾಪುರ ಜಿಲ್ಲೆ, ಜಮಖಂಡಿ ತಾಲ್ಲೂಕು, ಕೇರಿದಾಳ

ಜೈನ ಶ್ರಾವಕರು, ರಾಜ-ರಾಣಿಯರು, ಸಾಮಂತ ಮಂಡಳೇಶ್ವರರು ಮಾತ್ರವಲ್ಲದೆ ಪ್ರಸಿದ್ಧ ಜೈನ ಆಚಾರ್ಯರೂ ಸಹ ಪದ್ಮಾವತೀದೇವಿ ಯಕ್ಷಿಯ ಪ್ರಭಾವ ಪಡೆದಿರುವುದಕ್ಕೆ ಆಧಾರಗಳಿವೆ.

೧೪. ಸಮಂತ ಭದ್ರಾಚಾರ್ಯರು—"ಪದ್ಮಾವತೀ ದೇವತಾದತ್ತೋದಾತ್ತ ಪದ ಸ್ವಮಂತ್ರ ವಚನ ವ್ಯಾಹೂತ ಚಂದ್ರ ಪ್ರಭಃ"—ಎಂದು ಹೇಳಲಾಗಿದೆ.

(ಎ.ಕ.—೨ ಶ್ರ. ಬೆ. ೭೭ (೬೭) ಕ್ರಿ.ಶ. ೧೧೨೯)

೧೫. ಇದೇ ರೀತಿ ಪದ್ಮಾವತಿ ಯಕ್ಷಿಯು ಪಾತ್ರಕೇಸರಿ ಆಚಾರ್ಯರಿಗೆ ತ್ರಿಲಕ್ಷಣ ಸಿದ್ಧಾಂತದವರ ವಾದವನ್ನು ಗೆಲ್ಲುವುದಕ್ಕೆ ಸಹಾಯಮಾಡಿದಳೆಂದೂ ಶಾಸನೋಕ್ತವಾಗಿದೆ.

"ಪದ್ಮಾವತೀ ಸಹಾಯಾ ತ್ರಿಲಕ್ಷಣ ಕದರ್ತ್ಥನಂ ಕರ್ತುಂ"

(ಎ ಕ. ಶ್ರ. ಬೆ. ೭೭ (೬೭) ಕ್ರಿ.ಶ. ೧೧೨೯, ಪುಟ ೪೩)

ಪದ್ಮಾವತಿ ಯಕ್ಷಿಯ ಮಹಿಮೆ ಎಷ್ಟು ಗಾಢವಾಗಿ ಸಮಾಜದಲ್ಲಿ ಬೇರೂರಿತ್ತೆಂಬುದಕ್ಕೆ ಇನ್ನೊಂದು ನಿದರ್ಶನವೆಂದರೆ ಪ್ರತಿಷ್ಠಿತರು—ಸಾಮಾನ್ಯರು, ಶಿಷ್ಟರು—ಜನಪದರು ಎಂಬ ತಾರತಮ್ಯಗಳಿಲ್ಲದೆ ಆಕೆಗೆ ಹರಕೆ ಹೊತ್ತು ಮಕ್ಕಳನ್ನು ಪಡೆಯುತ್ತಿದ್ದರು.

೧೬. ನನ್ನಿಯ ಗಂಗದೇವನುಂ ಪಟ್ಟ ಮಹಾದೇವಿ ಕಂಚಲದೇವಿಯರುಂ ಪದ್ಮಾವತೀದೇವಿಗೆ ಹರಸಿ ಹೆಮ್ಮಾಡಿ ದೇವನಂ ಪಡೆದು ಶಾಣಕೆಯುಂ ಕೊಟ್ಟರ್.

(ಎ.ಕ. VII ಶಿವಮೊಗ್ಗ ೪ ಕ್ರಿ.ಶ. ೧೧೨೨)

ಪುತ್ರ ಸಂತಾನವನ್ನು ಕರುಣಿಸುವ ದೇವತೆಗೆ ತಲೆಬಾಗದವರು ಯಾರು? ಮಕ್ಕಳ ಭಾಗ್ಯದೊಂದಿಗೆ ಯುದ್ಧ ಜಯವನ್ನೂ, ರಾಜ್ಯ ಸೌಭಾಗ್ಯಗಳನ್ನೂ ಪದ್ಮಾವತೀ ಯಕ್ಷಿಯು ಅನುಗ್ರಹಿಸುತ್ತಿದ್ದಳೆಂದು ಜನ ಮುಂದೆ ಬಾಗಿದ್ದಾರೆ, ಭಕ್ತಿ ಸಮರ್ಪಿಸಿದ್ದಾರೆ.

೧೭. ಪದ್ಮಾವತೀ ದೇವಿಯಂ ಭಕ್ತಿ ಪೂರ್ವಕಂ ಆಹ್ವಾನಂಗೆಯ್ದು
ವರಂ ಬಡೆದು ಖಳ್ಗಮುಂ ಸಮಸ್ತ ರಾಜ್ಯ ಮನವರ್ಗ್ಗ ಮಾಡಿ

(ಎ.ಕ. VII ಶಿವಮೊಗ್ಗ ೪. ಕ್ರಿ ಶ. ೧೧೨೨)

ಈಗಿನ ಬೆಳಗಾವಿ ಜಿಲ್ಲೆಯ ಬಹುಭಾಗವನ್ನೊಳಗೊಂಡ ಪ್ರಖ್ಯಾತವಾಗಿ ಆಳದ (ಕುಹೊಂಡಿ ಕುಹುಂಡಿ, ಕೂಂಡಿ) ಮೂರು ಸಾವಿರ ಎಂಬ ಹೆಸರಿನ ಪ್ರದೇಶದ ಆಳರಸರು ತಾವು ಪದ್ಮಾವತೀ ದೇವಿಯ ಕೃಪೆಯಲ್ಲಿದ್ದವರೆಂದಿದ್ದಾರೆ.

೧೮. ಶ್ರೀ ಪದ್ಮಾವತೀದೇವೀ ಲಬ್ಧವರ ಪ್ರಸಾದರಪ್ಪ
ಕೊಂಡಿ ಮೂಱು ಸಾಸಿರದ ನಾಲ್ಕುಂ ಪಟ್ಟಣದ ಸೆಟ್ಟಿಗುತ್ತರ್

(J. F. Fleet; Journal of Bombay Branch of Royal Asiatic Society No. XXX Volume X (1878) AD 1219 p. 248)

ಈ ವಿಧವಾಗಿ ಇನ್ನೂ ಅನೇಕ ಶಾಸನಗಳನ್ನು ಉದಾಹರಿಸಿ ಪದ್ಮಾವತೀದೇವಿಯ ಪ್ರಖ್ಯಾತಿಯನ್ನು ಸ್ಥಾಪಿಸಬಹುದು. ಆದರೆ ಇದುವರೆಗೆ ಕೊಟ್ಟಿರುವಷ್ಟು ನಿದರ್ಶನಗಳಿಂದ ಈ ಯಕ್ಷಿಯ ಮಹಿಮೆ ಮನವರಿಕೆಯಾಗುತ್ತದೆ. ಅನಂತರದ ಶತಮಾನಗಳಲ್ಲೂ ಈ ಯಕ್ಷಿಯ ಆರಾಧನೆ ಅಬಾಧಿತವಾಗಿ ಮುಂದುವರಿಯಿತೆಂಬುದಕ್ಕೆ ಮೂರು ವಿವಿಧ ಕಾಲ ಘಟ್ಟದ ದೃಷ್ಟಾಂತಗಳನ್ನು ಕೊಡುತ್ತೇನೆ.

೧೯. ಓಂ ನಮೋ ಅರ್ಹತೇ ಭಗವತೇ ಚಂಡೋಗ್ರ ಪಾರಿಶ್ವನಾಥಾಯ
ಧರಣೇಂದ್ರ ಪದ್ಮಾವತಿ ಸಹಿತಾಯ ಸರ್ವ್ವ ವ್ಯಾಧಿಹರಂ

(ಎ.ಕ. ೩ (೧೯೭೪) ಗುಂಡ್ಲುಪೇಟೆ ೨೧೮ (ಎ.ಕ. IV ಗು.ಪೇ. ೯೬) ಕ್ರಿ.ಶ. ೧೪೫೮ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಬೇರಂಬಾಡಿ ಗ್ರಾಮದ ಮಾರಿ ಗುಡಿಯ ಬಳಿ ನೆಟ್ಟಿರುವ ಕಲ್ಲಿನ ಮೇಲಿನ ಶಾಸನ)

೨೦. ಚಿಕ್ಕಣಗಉಡರ ಮಕ್ಕಳು ಹೊನ್ನಣಗಉಡರು ತಂಮ ಮಗ ಹುಟ್ಟಿದ ಬೊಂಮಣಗಉಡರಿಗೆ ಪುಣ್ಯವಾಗಬೇಕೆಂದು ಕಟ್ಟಿಸಿದ ಬ್ರಹ್ಮದೇವರ ಪದ್ಮಾವತಿಯ ಬಸ್ತಿಯ ಧರ್ಮಶಾಸನ

(ಎ.ಕ. IV (೧೯೭೫) ಪಿರಿಯಾಪಟ್ಟಣ ೫೫ (IV ಹು. ೬೨) ಆನೆವಾಳು ಸು. ೧೫ ಶ.

೨೧. ಶ್ರೀ ಪದ್ಮಾವತೀ ಪಾದಾರವಿಂದವೇ ಗತಿ

(ಎ.ಕ. IV (೧೯೭೫) ಚಾಮರಾಜನಗರ ೩೭೦ ಮಲಿಯೂರು ಸು. ೧೮ ಶ. ಪುಟ ೨೪೪)

ಇದುವರೆಗಿನ ಸಮೀಕ್ಷೆಯಿಂದ ಸ್ಥೂಲವಾಗಿ ಒಂದು ತೀರ್ಮಾನ ಕೈಗೊಳ್ಳಬಹುದು. ಪದ್ಮಾವತೀ ಯಕ್ಷಿಯ ವಿಗ್ರಹಗಳು ಮತ್ತು ಶಾಸನಗಳು ಸಿಗುವ ಭೌಗೋಳಿಕ ವ್ಯಾಪ್ತಿಯ ಸ್ಥಳ ಪ್ರಸಾರವನ್ನು ನೋಡಿದರೆ ವಿಶಾಲ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಕಂಡುಬರುತ್ತದೆ.

ಪದ್ಮಾವತಿಯು ಜೈನರ ಯಕ್ಷಿಯರಲ್ಲಿ ಅತ್ಯಂತ ಪ್ರಭಾವಶಾಲಿನಿ. ಇದುವರೆಗೆ ಪ್ರಾತಿನಿಧಿಕವಾಗಿ ಆರಿಸಿಕೊಳ್ಳಲಾದ ಕೆಲವೇ ಶಾಸನಗಳು ಕೃತಪಡಿಸುವಂತೆ, ಕರ್ನಾಟಕದ ಶಾಸನಗಳು ಆಕೆಯ ಗುಣಗಾನ ಮಾಡಿವೆ. ಕಾವ್ಯಗಳಲ್ಲೂ ಆಕೆಯ ಸ್ತುತಿ ಪದ್ಯಗಳಿವೆ. ನೇಮಿಚಂದ್ರ, ಪಾರ್ಶ್ವಪಂಡಿತ, ಬಾಹುಬಲಿ ಪಂಡಿತ, ನಾಗರಾಜ, ಶಿಶುಮಾಯಣ, ಪದ್ಮನಾಭ ಮೊದಲಾದ ಕನ್ನಡ ಕವಿಗಳು ಪದ್ಮಾವತಿಯ ಚರಿತೆಯನ್ನು ಹಾಡಿದ್ದಾರೆ. ಪದ್ಮನಾಭ ಕವಿಯ ಪ್ರಸಿದ್ಧ ಜಿನದತ್ತರಾಯ ಚರಿತೆಗೆ (ಪದ್ಮಾವತಿ) ಅಮ್ಮನವರ ಚರಿತೆ ಎಂಬ ಜನಪ್ರಿಯ ಹೆಸರಿದೆ. ಶಂಕರ ಕವಿಯು ಪದ್ಮಾವತಿ ಚರಿತೆ ಎಂಬ ಯಕ್ಷಗಾನವನ್ನು ರಚಿಸಿದ್ದಾನೆ ಭಕ್ತವೃಂದ ಹಾಡಿ ಕುಣಿದಿರುವ ಸ್ತೋತ್ರ ಸಾಹಿತ್ಯದಲ್ಲಿಯೂ ಪದ್ಮಾವತಿಯು ವಿಜೃಂಭಿಸಿದ್ದಾಳೆ.

ಕರ್ನಾಟಕದ ರಾಜವಂಶಗಳಲ್ಲಿ ಪದ್ಮಾವತೀ ಯಕ್ಷಿಯು ಆರಾಧ್ಯಳಾಗಿರುವುದು ಸ್ಪಷ್ಟವಾಗಿದೆ. ಗಂಗವಂಶ, ಶಾಂತರರು, ಹೊಯ್ಸಳರು, ಕೋಲ್ಹಾಪುರದ ಶಿಲಾಹಾರರು, ಖಣಿರಂಜೋಳ ಸಿಂಧರು, ಬಾಸಪುರ ಶಿಲಾಹಾರರು, ಸೌಂದತ್ತಿಯ ರಟ್ಟರು—ಮೊದಲಾದವರೆಲ್ಲ ಜಿನಧರ್ಮ ಕೇಳಿ ವಿನೋದರು ಮತ್ತು ಪದ್ಮಾವತೀ ದೇವಿ ಲಬ್ಧ ಪ್ರಸಾದರು. ಇವರಿಗೆಲ್ಲ ಶಿವಮೊಗ್ಗ ಜಿಲ್ಲೆಯ ಹೊಂಬುಜ ಕ್ಷೇತ್ರದ ಪದ್ಮಾವತೀ ದೇವಿಯ ಪ್ರಭಾವ ಕಂಡುಬರುತ್ತದೆ. ಸುಮಾರು ಒಂದು ಸಾವಿರದ ಇನ್ನೂರು ವರ್ಷಗಳವರೆಗೆ ನಿರಂತರವಾಗಿ ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಭಕ್ತಿಪಂಥ ಕ್ಷೇತ್ರಗಳಲ್ಲಿ ಅನನ್ಯವೆನಿಸುವಂಥ ಪ್ರಭಾವವನ್ನು ಚೆಲ್ಲಿರುವ ಯಕ್ಷಿ ಪದ್ಮಾವತೀ ದೇವಿಯನ್ನು ಕುರಿತು ಈ ಪುಟ್ಟ

ಸಂಪ್ರಬಂಧದಲ್ಲಿ ಸಂಗ್ರಹ ರೂಪದ ವಿವೇಚನೆ ಮಾಡಲಾಗಿದೆ. ವಾಸ್ತವವಾಗಿ ಕರ್ನಾಟಕ ಮತ್ತು ಪದ್ಮಾವತೀ ಯಕ್ಷಿ ಎಂಬುದು ಒಂದೆರಡು ಪಿಎಚ್.ಡಿ. ಮಹಾ ಪ್ರಬಂಧಕ್ಕೆ ಹೇಳಿ ಮಾಡಿಸಿದ ವಿಷಯ.

ಆಕರ ಗ್ರಂಥಗಳು :

೧. ಡಾ. ಹಂಪ ನಾಗರಾಜಯ್ಯ—ಯಕ್ಷ-ಯಕ್ಷಿಯರು, ಬೆಂಗಳೂರು, ೧೯೭೬.

೨. ಡಾ. ದೇಸಾಯಿ, ಪಿ. ಬಿ. ಜೈನಿಸಮ್ ಇನ್‌ಸೌತ್ ಇಂಡಿಯಾ, ಸೊಲ್ಲಾಪುರ, ೧೯೫೭.

೩. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು
ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್
ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್ ಮತ್ತು ಇತರ ಶಾಸನ ಸಂಪುಟಗಳು.

(ಶಾಸನಗಳ ಮಾಹಿತಿಗಳನ್ನು ಒದಗಿಸಿಕೊಟ್ಟ ಡಾ. ಹಂಪ ನಾಗರಾಜಯ್ಯ ಅವರಿಗೆ ಕೃತಜ್ಞಳು)

ಡಾ. ರಾಗೌ

ಚಿಟ್ಟೆ

ಬಣ್ಣ ಬದಲಿಸುವ ಚಿಟ್ಟೆಯು ನೋಡಿದೆಯಾ ಅಣ್ಣ
ಬಿಟ್ಟ ಬಲೂನಿನ ಒಡೆದ ಚೂರುಗಳ ಸಣ್ಣ
ಹೂವು ಹೂವಿಗೆ ಹಾರಿ ತಾನೆ ಹೂವೊಂದಾಗಿ
ಕಡೆಗೆ ಕೊಡೆ ಬಿಚ್ಚುತ್ತವೆ ಕಂಗಳಲಿ ತಂಗಿ
ಜೀವ ತಳೆದವೊ ಕನಸುಗಳೆನೆ ಏನು ಬೆಡಗು
ಭ್ರಮಾಲೋಕದಿ ರೂಹಿಕ್ಕಿದ ಕಲ್ಪನೆಯು ಹಡಗು
ನೋಟಕರ ಮನಸಿನಲಿ ಮಳೆಬಿಲ್ಲುಗಳ ರಚಿಸಿ
ಸುಳಿವ ಸುಳಿಯಲಿ ಚಿತ್ತವೃತ್ತಿಯನು ಬಿಂಬಿಸಿ
ಹಾರಿದವೆಲ್ಲೊ ಮುಗಿಲ ಪಟ್ಟಿಯು ಮೇಲೆ ಕುಳಿತು
ಮನಸು ಮೋಡಕು ನಡುವೆ ರಚಿಸಿ ಬಣ್ಣದ ಸೇತು
ಕಮಾನು ಕಟ್ಟಿತು ನೋಡು ಹೋಳಿಹುಣ್ಣಿಮೆ ಒಳಗೆ
ನಾವು ಸುಡುವೆವು ಸ್ಮರನ ಅಹಾ ! ದಿವಸದ ಕೊನೆಗೆ
ಸೋಕಿದ ಜಾಗಕೀಗ ಸರಳ ಪುಳಕಗಳ ಮೆರಗು
ಹಿಂದೆಯೇ ಬಂದಿತು ಇಷ್ಟೇನೆ ಬದುಕೆಂಬ ಕೊರಗು

ಮಹೇಶ ಅಡಕೋಳಿ

'ಅಸ್ತೋದಯ'—ಒಂದು ತೌಲನಿಕ ವಿಶ್ಲೇಷಣೆ

೧

ಕವಿಜೀವನದ ಪ್ರಾಥಮಿಕ ಸ್ತರದಲ್ಲಿ ಪ್ರಾಯಶಃ ನಿಸರ್ಗದ ರಮ್ಯ ವರ್ಣನೆಯಿಂದ ಮೊದಲಾರಂಭಿಸುವ ಕಾವ್ಯ ಜೀವನದ ಪರಿಣತಸ್ಥಿತಿಯಲ್ಲಿ ಅದೇ ನಿಸರ್ಗದ ವಿವರ್ತಗಳಲ್ಲಿ ಗರ್ಭೀಕೃತವಾದ ರಹಸ್ಯದರ್ಶನದಲ್ಲಿ ಪರ್ಯವಸಾನಗೊಳ್ಳುತ್ತದೆ. ಈ ಹೇಳಿಕೆಯ ಹಿನ್ನೆಲೆಯಲ್ಲಿ ಋತುಸಂಹಾರದಿಂದ ಆರಂಭವಾದ ಕಾಲಿದಾಸನ ಕವಿತ್ವ ಅಭಿಜ್ಞಾನ ಶಾಕುಂತಲದಲ್ಲಿ ಪರ್ಯವಸಾನಗೊಂಡಂತಹ ಉದಾಹರಣೆಗಳಿವೆ. ಉತ್ತರೋತ್ತರವಾಗಿ ಪರಿಣತಿಯ ದಿಶೆಯಲ್ಲಿ ಸಾಗುವಾಗ ಪೂರ್ವದಲ್ಲಿ ರಚಿತ ಕೃತಿಗಳ ಲಘುತ್ವವನ್ನು ಗಮನಿಸಿ ಅವುಗಳನ್ನು ತಾವೇ ತಿರಸ್ಕರಿಸುವ ಕವಿಗಳೆಲ್ಲ ಮತ್ತು ಇಂಥವರೇ ಸ್ಥಾಯಿಯಾಗುವವರು—ಕಾಲಿದಾಸನ ಉದಾಹರಣೆಯನ್ನು ಸಮರ್ಥಿಸುವವರೆ. ಹೀಗೆ ಕವಿತ್ವ ಜೀವನದ ಉದಯದಲ್ಲಿ ರಚಿತ ಕೃತಿಗಳ ಅಸ್ತಕ್ರಿಯೆಯನ್ನು, ಅಸ್ತಮಿಸುವಿಕೆಯಲ್ಲಿ ಮೌಲಿಕಕೃತಿಗಳ ನವೋದಯವನ್ನು ಪ್ರಕಟಿಸುವಿಕೆ ಕವಿಯ ಬದುಕಿನ ವಿಸ್ಮಯಜನಕಸತ್ಯ.

ನಿಸರ್ಗವರ್ಣನೆಯ ಸಾಂದರ್ಭಿಕ ಸ್ಫೋಟದಲ್ಲಿ ತನ್ನಿಂದ ರಚಿತವಾಗುವ ಕವನವನ್ನು ಕಂಡು ವಾಲ್ಮೀಕಿಯ ಬೆರಗು ಅನುಭವಿಸುವ ಕವಿ ಆ ಬಳಿಕ ಇವೇ ಬಾಹ್ಯ ನೈಸರ್ಗಿಕ ಸನ್ನಿವೇಶಗಳಲ್ಲಿ (ಸೂರ್ಯಾಸ್ತ, ಚಂದ್ರೋದಯ ಇತ್ಯಾದಿಗಳಲ್ಲಿ) ಮಾನವ ಜೀವನದ ಅಂತಸ್ಥತತ್ತ್ವ ಪ್ರತಿಮಾರೂಪದಲ್ಲಿ ಆಗಲೀ ಅಡಕವಾಗಿರುವುದನ್ನು ಕಾಣುತ್ತಾನೆ. ರೂಪಕ, ಕಾದಂಬರಿ, ಪದ್ಯಗಳಲ್ಲಿಯ ಸಂದರ್ಭಗಳನ್ನೋ ಪಾತ್ರಗಳ ಬದುಕಿನ ತತ್ತ್ವಗಳನ್ನೋ ಅಭಿವ್ಯಂಜಿಸುತ್ತ ಕೃತಿಯ ಮುಖ್ಯಾರ್ಥಕ್ಕೆ ಪೂರಕವಾಗಿದ್ದರೆ ಮಾತ್ರ ನಿಸರ್ಗವರ್ಣನೆ ಉಪಾದೇಯವಾಗುತ್ತದೆ. ಹಾಗಿಲ್ಲದೆ ಅದು ತನ್ನಷ್ಟಕ್ಕೆ ಎಷ್ಟೇ ನವೋನವಕಲ್ಪನೆಯಾದರೂ ಕೃತಿಯೊಳಗೆ ಹೊಂದಿಕೊಳ್ಳದೆ ಪೃಥಕ್ಕಾಗಿಯೇ ನಿಂತುಬಿಡುತ್ತದೆ. ಸಂಸ್ಕೃತದಲ್ಲಿಯ Ornate Poetryಯ ಕಕ್ಷೆಯಲ್ಲಿ ಬರುವ ಕಾಲಿದಾಸೋತ್ತರ ಕಾವ್ಯಗಳಲ್ಲಿ ಹಳಗನ್ನಡ ಮತ್ತು ನಡುಗನ್ನಡದ

ಅನೇಕ ಮಹಾಕಾವ್ಯಗಳಲ್ಲೆಲ್ಲ ಇದೇ ಕಾವ್ಯ ದುರಂತ ಘಟಿಸಿರುವುದನ್ನು ಗಮನಿಸ ಬಹುದು.

ಕಾಲಿದಾಸನ 'ಅಭಿಜ್ಞಾನ ಶಾಕುಂತಲ' ಮತ್ತು Emily Bronteಯ 'Wuthering Heights' ಕಾದಂಬರಿ. ಇವೆರಡು ಕೃತಿಗಳಲ್ಲಿ ಸಮಾನ ಅರ್ಥವನ್ನು ಅಭಿವ್ಯಂಜಿಸುವ ಒಂದು ನೈಸರ್ಗಿಕ ಘಟನೆ ಮೇಲಿನ ಪೀಠಿಕೆಯ ಪ್ರೇರಣೆ.

೨

ಶಕುಂತಲೆಯ ಕ್ರೂರಗ್ರಹದ ಉಪಶಾಂತಿಗಾಗಿ ಕಣ್ವ ಸೋಮತೀರ್ಥಕ್ಕೆ ತೆರಳಿದಾಗಲೇ ಅವಳ ಕ್ರೂರಗ್ರಹ ದುಷ್ಯಂತನ ರೂಪದಲ್ಲಿ ಸಮಯಸಾಧಿಸಲು ಹುಸುಳಿದ್ದು ವಿಧಿವಿಡಂಬನೆಯೆ? ಗಾಂಧರ್ವವಿಧಿಯಿಂದ ವಿವಾಹವಾಗಿ, ಅಭಿಜ್ಞಾನಾಭರಣದ ಭರವಸೆ ನೀಡಿ, ಚಂದ್ರವಂಶದ ಬೀಜಬಿತ್ತಿ, ಕನಸುಗಳ ಹೊಸಹಸಿರನ್ನು ಚಿಗುರಿಸಿ...ಸುಖದ ಹೊಂಬೆಳಕು ದೌರ್ಭಾಗ್ಯದ ಕರಿನೆರಳನ್ನು ಪಸರಿಸಿ ಮರೆಯಾಗುತ್ತದೆ. ಶಕುಂತಲೆಯ ಅರಿವಿನಾಚೆ ದೂರ್ವಾಸಶಾಪ ಎರಗಿದ್ದು ಕೂಡ ದುಷ್ಯಂತನ ಆಗಮನದ ಮುಂದುವರಿದ ಭಾಗವೇ ತನ್ನದಲ್ಲದ ದೋಷಗಳಿಗೆ ತಾನು ಹೊಣೆಗಾರಳಾದುದನ್ನೂ ತನ್ನ ಬೆನ್ನಹಿಂದೆ ಸಮಯಸಾಧಿಸುತ್ತಿರುವ ಶಕ್ತಿಗಳನ್ನೂ ಅರಿಯದ ಅಭಾಗಿನಿ ಶಕುಂತಲೆಯನ್ನು ಪತಿಗೃಹಕ್ಕೆ ಕಳುಹುವ ದಿನ ಇನ್ನೂ ಪೂರ್ಣವಾಗಿ ಕಣ್ತೆರೆಯದ ಹೊತ್ತು. ರಾತ್ರಿ ಕಳೆಯುತ್ತಿರುವ ಚೆನ್ನಾಗಿ ಬೆಳಕಾಗದ ಸಂಧಿಕಾಲದಲ್ಲಿ ಕಣ್ವಶಿಷ್ಯನೊಬ್ಬ ಪರ್ಣಕುಟಿಯಿಂದ ಹೊರಬಂದು ಆಕಾಶದಲ್ಲಿ ತಾನು ಕಾಣುತ್ತಿರುವುದನ್ನು ಹೀಗೆ ವರ್ಣಿಸುತ್ತಾನೆ :

यात्येकतोऽस्तशिखरं पतिरोषधीना-
माविष्कृतोऽरुणपुरःसर एकतोऽर्कः ।
तेजोद्वयस्य युगपद्व्यसनोदयाभ्यां
लोको नियम्यत इवात्मदशान्तरेषु ॥

—ಅಭಿಜ್ಞಾನ ಶಾಕುಂತಲ, ಅಂಕ IV, ಶ್ಲೋಕ ೨

"ಒಂದೆಡೆ ವನಸ್ಪತಿಗಳ ಪತಿ (ಚಂದ್ರ) ಅಸ್ತಾಚಲದತ್ತ
ತೆರಳುತ್ತಿದ್ದಾನೆ. ಇನ್ನೊಂದೆಡೆ ಅರುಣನನ್ನು ಮುಂದಿಟ್ಟುಕೊಂಡ
ಅರ್ಕ ಆವಿಷ್ಕಾರಗೊಳ್ಳುತ್ತಿದ್ದಾನೆ. ಇವೆರಡೂ ತೇಜಃಪುಂಜಗಳ
ಏಕಕಾಲದ ವ್ಯಸನ ಮತ್ತು ಉದಯಗಳಿಂದ ಲೋಕವು ತನ್ನ
ಅವಸ್ಥಾಂತರಗಳಲ್ಲಿ ನಿಯಮಿತವಾಗಿರುವಂತೆ ತೋರುತ್ತದೆ."

ಶಕುಂತಲೆಯ ವರ್ತಮಾನ ಅವಸ್ಥೆಯು ತೀವ್ರವಿಷಾದ ಆಶ್ರಮವನ್ನೆಲ್ಲ ಅಜ್ಞಾತ ನೆಲೆಯಲ್ಲಿ ವ್ಯಾಪಿಸಿದೆ–ದುಷ್ಯಂತನ ಜೊತೆ ಅವಳ ಸಂಬಂಧವನ್ನೇ ಅರಿಯದ ಕಣ

ಶಿಷ್ಯನನ್ನು ಬಿಡದನ್ನು. ಇದುವರೆಗೆ ಎಷ್ಟೆಲ್ಲ ಸಲ ಸೂರ್ಯಚಂದ್ರರ ಅಸ್ತೋದಯವನ್ನು ಕಂಡಿದ್ದ ಆತ ಇಂದು ಮಾತ್ರ ಹೀಗೆ ವರ್ಣಿಸುತ್ತಿರುವುದು...!

ವನಸ್ಪತಿಗಳಲ್ಲಿ ಜೀವನರಸವನ್ನು ತುಂಬಿದ ಚಂದ್ರ ಅಸ್ತಂಗತನಾಗುತ್ತಿದ್ದಾನೆ. ವನಸ್ಪತಿಗಳ ನಡುವೆ ಒಂದು ಗಿಡದಂತೆ ಲತೆಯಂತೆ ಬೆಳೆದ ಶಕುಂತಲೆಯಲ್ಲಿ ಜೀವನರಸವನ್ನು ತುಂಬಿದ ಚಂದ್ರ-ವಂಶದ ದುಷ್ಯಂತ ಮರೆಯಾಗಿದ್ದಾನೆ. ಇನ್ನೊಂದೆಡೆ ಸರ್ವದಮನನ್ ರೂಪದಲ್ಲಿ ಹೊಸ ಚಂದ್ರೋದಯವಾಗುತ್ತಿದೆ.

೩

ಗ್ರೀಷ್ಮದ ಕಡುಸೂರ್ಯನಂತೆ ಬದುಕಿನುದ್ದಕ್ಕೂ ಅನ್ಯರ ಸತ್ತ್ವಶೋಷಣೆಗೈದು ಮುಳುಗ ಹೊರಟ ಹೀತ್‌ಕ್ಲಿಫ್ ಒಂದೆಡೆ ಸೂರ್ಯರಶ್ಮಿಗಳ ಪ್ರತಿಫಲನವೇ ತನ್ನ ಕರ್ಮವಾಗಿಯೂ ಅವನಲ್ಲಿಯ ಶಾಖವನ್ನು ಇಲ್ಲವಾಗಿಸಿ ಆಹ್ಲಾದದ ಕಿರಣ ಬೀರುವ ಚಂದ್ರನಂತೆ ಹೀತ್‌ಕ್ಲಿಫ್‌ನ ದುಷ್ಟತನವೇ ತನ್ನ ಅಸ್ತಿತ್ವದ ಕುರುಹಾಗಿದ್ದರೂ ಕೇಥರೀನ್‌ಳ ಪ್ರೇಮದ ಸನ್ನಿಧಿಯಲ್ಲಿ ಮಾನವೀಯಸಾಧುತ್ವದತ್ತ ನಿಧಾನವಾಗಿಯಾದರೂ ದೃಢಹೆಜ್ಜೆ ಇಡುತ್ತಿರುವ ಹರೆಟನ್ ಅರ್ನ್‌ಶಾ ಇನ್ನೊಂದೆಡೆ. ಸದ್ಯೋಭವಿಷ್ಯದಲ್ಲಿ ನಡೆಯಲಿರುವ ಈ ಪರಿವರ್ತನೆಯ ಅರಿವು ಕಿಂಚಿತ್ತೂ ಇಲ್ಲದ ನಿರೂಪಕ ಲಾಕ್‌ವುಡ್ ಹೀತ್‌ಕ್ಲಿಫ್‌ನ ಮನೆಯಿಂದ ಹೊರಟಾಗ :

“... So I turned away and made my exit, rambling lisurely along with the glow of a sinking sun behind, and the mild glory of a rising moon infront–one fading and the other brighteoing ...”

Wuthering Heights, Chapter 32, P. 328

“...ಬಳಿಕ ನಾನು ತಿರುಗಿ ಹೊರಟೆ, ನಿಧಾನವಾಗಿ ಹೆಜ್ಜೆ ಹಾಕುತ್ತ— ನನ್ನ ಹಿಂದೆ ಮುಳುಗುತ್ತಿರುವ ಸೂರ್ಯನ ಪ್ರಭಾವಳಿ ಮತ್ತು ಎದುರಿಗೆ ಮೇಲೇರುತ್ತಿರುವ ಚಂದ್ರನ ಮೃದುಲ ವೈಭವಗಳ ಜೊತೆ; ಒಂದು ಮಾಸುತ್ತಿರುವಂತಹದು, ಇನ್ನೊಂದು ಬೆಳಗುತ್ತಿರುವಂತಹದು ...”

೪

ಎರಡೂ ಘಟನೆಗಳಲ್ಲಿ ಅಸ್ತೋದಯವನ್ನು ವರ್ಣಿಸುವವರು ಘಟನೆಗಳ ಪರಿಣಾಮದ ಆಚೆ ನಿಂತವರೆಂಬುದು ಗಮನಾರ್ಹವಾದುದು ಮತ್ತು ಇಬ್ಬರಿಗೂ ತಮ್ಮ ವರ್ಣನೆಯು ಅರ್ಥ ಕೃತಿಗಳ ಕೇಂದ್ರವ್ಯಕ್ತಿಗಳ ಭವಿಷ್ಯವನ್ನೇ ಗರ್ಭೀಕರಿಸುತ್ತದೆ ಎಂಬ ಅರಿವೂ ಇಲ್ಲ.

ಶೋಕಸಂತಸಗಳ ನಿರಂತರ ಅವಸ್ಥಾಂತರ ಮಾನವ ಬದುಕಿನ ಅನಿವಾರ್ಯ ವಾಸ್ತವ ಎಂಬ ದರ್ಶನ ಕಾಲಿದಾಸನಲ್ಲಿ ವ್ಯಕ್ತವಾಗುತ್ತದೆ. ವರ್ಣಿಸುವ ವ್ಯಕ್ತಿ ಒಬ್ಬ ದಾರ್ಶನಿಕನ ಶಿಷ್ಯ. ಸುಖವೋ ದುಃಖವೋ ಸದಾ ಚಂಕ್ರಮಣಗೊಳ್ಳುವುದೇ ಬದುಕಿನ ಸತ್ಯ ಎಂಬುದನ್ನು ದಾರ್ಶನಿಕನೆ ಮಾತ್ರ ಕಂಡುಕೊಳ್ಳಲು ಸಾಧ್ಯ.

ಪರಿತ್ಯಕ್ತೆ ಶಕುಂತಲೆಯ ಮೂಕಯಾತನೆಯ ದೀರ್ಘತಪಸ್ಸು ಕಾಣುವ ದರ್ಶನವೂ ಅದೇ. ಮೂಡಿ ಮುಳುಗುವ ಮುಳುಗಿ ಮೂಡುವ ನಿಸರ್ಗದ ತತ್ತ್ವಕ್ಕೆ ಮಾನವ ಬದುಕು ಬದ್ಧವಾದುದು; ಗಂಭೀರವೂ ದಿವ್ಯವೂ ಆದ ಚೇತನ ಮಾತ್ರ ಇಂತಹ ಪುನರಪಿಯ ಚಕ್ರದ ಪರಿಧಿಯನ್ನು ಮೀರಿನಿಲ್ಲುವ ಪರಿಣತಿಯನು ಸಾಧಿಸುತ್ತದೆ.

ಬ್ರಾಂಟಿಯಲ್ಲಿ ಮಾರ್ದವತೆಯ ಮೇಲಿನ ಬರ್ಬರವಾದ ಸತತ ಅತ್ಯಾಚಾರದ ಎಡೆಯಿಂದ ಸುಂದರಬದುಕಿನತ್ತ ಕಣ್ಣುತೆರೆಯುವ ಸಂತಸದ ಬೆಳದಿಂಗಳು ಪಸರಿಸುತ್ತದೆ ಈ ದೃಷ್ಟಿಯಿಂದ ಬ್ರಾಂಟಿಯ ನಿರೂಪಣೆ ಬದುಕಿನ ದ್ವಂದ್ವಗಳನ್ನು ಮೀರಿ ನಿಲ್ಲುವುದಕ್ಕಿಂತ ಗಂಭೀರವಾದ ಸಂತೋಷಮಯತೆಯತ್ತವೇ ಅಧಿಕವಾಗಿ ವಾಲಿದ್ದನ್ನು ಗಮನಿಸಬಹುದು. ಆದರೆ ಕಾದಂಬರಿಯ ಅಲಿಖಿತ ಅಂತ್ಯವನ್ನು ಊಹಿಸುವುದಾದರೆ ಕೇಥರೀನ್ ಮತ್ತು ಹರೆಟಾನ್ ಅರ್ನ್‌ಶಾ ಇಬ್ಬರೂ ಸ್ವಲ್ಪ ತಡವಾಗಿಯಾದರೂ ಶಕುಂತಲೆಯ ಮಾರೀಚಾಶ್ರಮವನ್ನು ತಲುಪುವವರೇ.

ಗಿರಿಜಾ ಶಾಸ್ತ್ರಿ

'ಸ್ತ್ರೀ ಪ್ರಜ್ಞೆ' ಹಾಗು ಸಮಕಾಲೀನ ಕತೆಗಾರ್ತಿಯರ ನಾಲ್ಕು ಕಥೆಗಳು

ಪುರುಷಪ್ರಧಾನ ಸಮಾಜದ ಮೌಲ್ಯಗಳೇ ನಮ್ಮ ಹೆಣ್ಣುಮಕ್ಕಳ ಗ್ರಹಿಕೆಯೂ ಆಗಿಬಿಡುವುದರಿಂದ ಈ ಗ್ರಹಿಕೆಯ ಆಚೆಗಿನ ವಸ್ತುಸ್ಥಿತಿಯನ್ನು ಕಾಣದೇ ಹೋಗಿ ಬಿಡುವ ಅಪಾಯ ಇಂದು ನಮ್ಮ ಸ್ತ್ರೀಸಾಹಿತಿಗಳಿಗಿದೆ. ಬಹುಶಃ ಇಂದು ನಮ್ಮ ಎಲ್ಲ ಸ್ತ್ರೀಯರು ಸಾಹಿತ್ಯ ನಿರ್ಮಿತಿಯಂತಹ ಸೃಜನಶೀಲ ಕ್ರಿಯೆಯಲ್ಲಿ ಎದುರಿಸುತ್ತಿರುವ ಸಮಸ್ಯೆ ಇದು ಎನ್ನಬಹುದು.

ಮೌಲ್ಯ ನಿರ್ಮಾಣ ಪ್ರಬಲ ವರ್ಗವೊಂದರ (ಪುರುಷವರ್ಗ) ಅನುಕೂಲ, ಹಿತಗಳಿಗಾಗಿ ಹುಟ್ಟಿಕೊಳ್ಳುವುದರಿಂದ ಅದನ್ನು ಬಿಟ್ಟುಕೊಡುವುದಕ್ಕಾಗಲಿ ಬದಲಾಯಿಸಲಿಕ್ಕಾಗಲೀ ಅದು ಸಿದ್ಧವಿರುವುದಿಲ್ಲ. ನಿರಂತರ ಬದಲಾವಣೆಯು ತುರ್ತನ್ನು ಅನಿವಾರ್ಯವಾಗಿಸುವ ಕಾಲದ ದೈತ್ಯ ಪ್ರವಾಹದಲ್ಲಿಯೂ ಇಂತಹ ಮೌಲ್ಯಗಳು ಸ್ವಾರ್ಥಹಿತ ಸಾಧನೆಗಾಗಿ ಹಟಕಟ್ಟಿ ನಿಂತು, ಉಳಿದುಕೊಳ್ಳಲು ಹೆಣಗಾಡುತ್ತವೆ. ತಾನು ಮೆಟ್ಟಿನಿಂತ ಶಕ್ತಿಗಳು ತನ್ನ ಕಾಲಡಿಯಲ್ಲಿ ಜರುಗತೊಡಗಿದ ಅರಿವಾದೊಡನೆಯೇ ಅವು ಧರ್ಮದ, ಅಧಿಕಾರದ ಸೋಗಿನಲ್ಲಿ, ಕ್ಷಮೆ, ಸಹನೆ, ವಿಧೇಯತೆಗಳ ಗುಣಲಕ್ಷಣಗಳಿಂದ ಹೆಣ್ಣನ್ನು ಅಲಂಕರಿಸಿ ಪಟ್ಟಕಟ್ಟುವುದರ ಮೂಲಕವೇ ಅವಳ ಹಕ್ಕುಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಅವಳನ್ನು ಪರಾವಲಂಬಿಯನ್ನಾಗಿ ಮಾಡಿದೆ. ಸ್ತ್ರೀಯ ವಿದ್ಯಾಭ್ಯಾಸ, ಅವಳ ಪಾಲನೆ ಹಾಗು ಪೋಷಣೆ, ಅವಳ ಸಾಮಾಜಿಕ ಪರಿಸ್ಥಿತಿ ಇವೆಲ್ಲವುಗಳು, ಸಹಜವಾದ ಜೈವಿಕವಾದ ಲಿಂಗ ಭೇದದಲ್ಲಿ (Sexual difference) ಲಿಂಗ ಪ್ರಜ್ಞೆಯನ್ನು ಮೂಡಿಸಿ ಅವಳ ಪರಾವಲಂಬಿ ಬದುಕನ್ನು ಅವಳೇ ಒಪ್ಪಿಕೊಳ್ಳುವಂತೆ ಮಾಡಿದೆ. ಇಂತಹ ತ್ಯಾಗ, ಸಹನೆಗಳ ಪ್ರಸಾಧನಗಳಲ್ಲಿ ಮೈಮರೆತು ಉಬ್ಬಿಹೋಗುವ ಸ್ತ್ರೀ ತನ್ನ ಕನ್ನಡಿಯ ಹಿಂದೆ ತನ್ನ ಚಲನವಲನಕ್ಕೆ ಎತ್ತಿ ಹಿಡಿದ ಕುಠಾರವನ್ನು ಕಾಣದೇ ಹೋಗುವ ಅಪಾಯವಿದೆ. ಇಂತಹ ಅಪಾಯದಿಂದ ತಪ್ಪಿಸಿಕೊಳ್ಳುವ ಅನಿವಾರ್ಯತೆ ಇಂದು ಪ್ರತಿಯೊಬ್ಬ

ಮಹಿಳೆಗೂ ಇದೆ. ಈ ಅಪಾಯವನ್ನು ಕಂಡುಕೊಳ್ಳುವ ಮತ್ತು ಅದಕ್ಕೆ ಬಲಿಯಾಗ ಬಾರದೆನ್ನುವ ಪ್ರಜ್ಞೆ ಒಂದು ಹೆಣ್ಣಿನಲ್ಲಿ ಮೂಡುವುದೇ ಪುರುಷಗೃಹೀತವನ್ನು ದಾಟುವ ಮೊದಲ ಹಂತ ಎನ್ನಬಹುದು. ಇಂತಹ ಅರಿವೊಂದರ ಜಾಗೃತಿಯನ್ನೇ ನಾವು ಸ್ತ್ರೀಪ್ರಜ್ಞೆ ಎಂದು ಕರೆಯಬಹುದೇನೋ ಪ್ರಖ್ಯಾತ ಸ್ತ್ರೀನಿಷ್ಠ ವಿಮರ್ಶಕಿ ಯೊಬ್ಬಳ (ಬಹುಷಃ ಕೇಟ್ ಮಿಲ್ಲೆಟ್) ಪ್ರಕಾರ "ಪ್ರತಿಯೊಬ್ಬಳ ಅಸ್ತಿತ್ವವೂ ಅರ್ಥಪೂರ್ಣವಾಗುವುದು ತನ್ನ ಮಿತಿಗಳನ್ನು ಮೀರಿ ಹೊರಬರುವ ತಾನು ಸ್ವತಂತ್ರ ಳಾಗಿ ಆಯ್ಕೆಮಾಡಿಕೊಂಡ ಯೋಜನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಅದಮ್ಯ ಬಯಕೆಗಳಲ್ಲಿ ಮಾತ್ರ" (ಸಾಹಿತ್ಯ ವಿಮರ್ಶೆ: ಸಿ. ಎನ್. ರಾಮಚಂದ್ರನ್). ಅಲ್ಲದೆ ಮೊತ್ತ ಮೊದಲ ಸ್ತ್ರೀನಿಷ್ಠ ವಿಮರ್ಶಕಿ ಎಂದು ಗುರುತಿಸಲ್ಪಟ್ಟಿರುವ ಸಿಮೋನ್ ದ ಬೋವಾ ಹೀಗೆ ಬರೆಯುತ್ತಾಳೆ: "ಎಂದಿನ ತನಕ ಪುರುಷನಿರ್ಮಿತ ಮಾನಸಿಕ ವೈಚಾರಿಕ ಚೌಕಟ್ಟಿನಲ್ಲಿ ಸ್ತ್ರೀ ಬದುಕಬೇಕಾಗುತ್ತದೆಯೋ ಅಂದಿನ ತನಕ ನಿಜವಾದ ಅರ್ಥದಲ್ಲಿ ಸ್ತ್ರೀ ಸ್ವತಂತ್ರಳಾಗುವುದಿಲ್ಲ" (ಸಿಮೋನ್‌ದ ಬೋವಾ, ಅಂಕಣ, ಉದಯ ವಾಣಿ, ನವೆಂಬರ್, 18, 1990).

ಆದ್ದರಿಂದ ಪುರುಷನ ಆದರ್ಶಗಳ ಹಂಗನ್ನು ತೊರೆದ ಸ್ತ್ರೀ ತನ್ನ ಸಾಹಿತ್ಯ ನಿರ್ಮಿತಿಯ ಕೆಲಸದಲ್ಲಿ ತೊಡಗಬೇಕಾಗಿರುವುದು ಅನಿವಾರ್ಯವಾಗುತ್ತಿದೆ. ಹೀಗಾಗಿ ಸಾಹಿತ್ಯದಲ್ಲಿ ಅವಳ ಗ್ರಹಿಕೆಯ ನೆಲೆಯನ್ನು ಶೋಧಿಸುತ್ತಲೇ ಅವಳು ತನ್ನ ಮಿತಿ ಗಳನ್ನು ದಾಟುವ ಹಂತದ ಬೆಳವಣಿಗೆಯನ್ನು ಗುರುತಿಸಲು ಈಗಾಗಲೇ ಇರುವ ಸಾಹಿತ್ಯಕ ಮಾನದಂಡಗಳಿಗಿಂತ ಬೇರೆಯದೇ ಆದ ಸಾಹಿತ್ಯಕ ಮಾನದಂಡವೊಂದರ, ವಿಮರ್ಶನ ಪ್ರಜ್ಞೆಯೊಂದರ ಅವಶ್ಯಕತೆ ಇದೆ. ನಮ್ಮ ಇಡಿಯ ಸಾಹಿತ್ಯ ಚರಿತ್ರೆ ಯಲ್ಲಿ ಎಲ್ಲ ಕಾಲಕ್ಕೂ ನಾವು ಆಯಾ ಸಾಹಿತ್ಯ ಕೃತಿಯನ್ನು ಅವುಗಳ ಮಿತಿಗಳನ್ನು ಗಣನೆಗೆ ತಂದುಕೊಂಡೇ ಮೌಲ್ಯಮಾಪನ ಮಾಡುತ್ತಾ ಬಂದಿದ್ದೇವೆ. ಈ ದೃಷ್ಟಿ ಯಲ್ಲಿ ಇತ್ತೀಚೆಗಷ್ಟೇ ಲೇಖನಿ ಹಿಡಿದ ಸ್ತ್ರೀಯ ಬೆನ್ನಿಗೆ ಸಾವಿರಾರು ವರುಷಗಳಿಂದ ತುಕ್ಕಹಿಡಿದ ಮನೋಧರ್ಮಕ್ಕೆ ಗುರಿಯಾದ ಹೆಣ್ಣು ಸಂಸ್ಕಾರವಿದೆ ಎಂಬುದನ್ನು ಮಾತ್ರ ನಾವು ಮರೆಯಬಾರದು. ಸ್ತ್ರೀ ಸಾಹಿತ್ಯಕ್ಕೆ ರಿಯಾಯಿತಿ ತೋರಿಸ ಬೇಕೆನ್ನುವ ಯಾಚನೆಯ ದೃಷ್ಟಿಯಲ್ಲ, ಪುರುಷನ ಮೌಲ್ಯಗಳಿಂದಲೇ ಸ್ತ್ರೀ ಸಾಹಿತ್ಯ ವನ್ನೂ ಮೌಲ್ಯಮಾಪನ ಮಾಡುವಾಗ ಆ ಮಾನದಂಡಗಳು ಒಡ್ಡುವ ಸವಾಲುಗಳಿಗೆ ದಕ್ಕದ ಈ ಸಾಹಿತ್ಯ ಸಹಜವಾಗಿ ಸೊರಗಿ ಹೋಗುವ ಅಪಾಯವಿದೆ.

ಈ ನೆಲೆಯಲ್ಲಿ ಸಾಹಿತ್ಯದಲ್ಲಿ ಸ್ತ್ರೀ ಪ್ರಜ್ಞೆಯನ್ನು ಗುರುತಿಸುವಾಗ ಶಾರನ್ ಸ್ಪೆನ್ಸರ್ ಎನ್ನುವ ವಿಮರ್ಶಕಿ ಕೆಳಗಿನ ನಾಲ್ಕು ಅಂಶಗಳನ್ನು ಗುರುತಿಸುತ್ತಾಳೆ ಅವು,

1. ನಿರ್ಲಕ್ಷಿಸಲ್ಪಟ್ಟ ಕೃತಿಗಳನ್ನು ಶೋಧಿಸಿ ಬೆಳಕಿಗೆ ತರುವುದು.
2. ಪ್ರಾಚೀನ ಹಾಗು ಅರ್ವಾಚೀನ ಸಾಹಿತ್ಯದಲ್ಲಿ ಸ್ತ್ರೀ ಚಿತ್ರಣ ವಿಶ್ಲೇಷಣೆ

3. ಮಹಿಳಾ ಸಾಹಿತ್ಯ ಕೃತಿಗಳ ಬಗ್ಗೆ ಪುರುಷ ಬರೆದಿರುವ ವಿಮರ್ಶೆ
4. ಸ್ತ್ರೀ ಕೇಂದ್ರಿತ ವೈಚಾರಿಕ ನೆಲೆಯಲ್ಲಿ 'ಸೃಜನಾತ್ಮಕ ಪ್ರಜ್ಞೆ'ಗೆ ಅಭಿವ್ಯಕ್ತಿ ಮತ್ತು ಪ್ರಚಾರಕೊಡುವುದು.

(ಸಾಹಿತ್ಯವಿಮರ್ಶೆ, ಸಿ. ಎನ್. ರಾಮಚಂದ್ರನ್) ಪ್ರಸ್ತುತ ನನ್ನ ಆಶಯವೆಂದರೆ, ಸಮಕಾಲೀನ ಕತೆಗಾರ್ತಿಯರ ಕಥೆಗಳಲ್ಲಿ ಸ್ತ್ರೀ ಕೇಂದ್ರಿತ 'ಸೃಜನಾತ್ಮಕ ಪ್ರಜ್ಞೆ'ಯನ್ನು ಹುಡುಕುವುದಾಗಿದೆ.

ಆಯಾ ಕಾಲಘಟ್ಟಗಳಲ್ಲಿ ಸಾಹಿತ್ಯದ ಮುಖ್ಯ ಪ್ರವಾಹಕ್ಕೆ ಸೇರಿಕೊಳ್ಳುವ ಒಳವಾಹಿನಿಗಳು ಎಂದಿಗೂ ನಿರ್ವಾತದಲ್ಲಿ ಹುಟ್ಟುವುದಿಲ್ಲ ಎನ್ನುವುದು ಈಗಾಗಲೇ ತಿಳಿದ ಅಂಶವಾಗಿದೆ. ಪ್ರಬಲವಾದ ರಾಜಕೀಯ, ಸಾಮಾಜಿಕ ಹಾಗು ಆರ್ಥಿಕ ಒತ್ತಡಗಳು ಅಂತಹ ಸಾಹಿತ್ಯದ ಒಳಧಾರೆಯನ್ನು ಚಿಮ್ಮಿಸಿರುತ್ತವೆ. ಸಾಹಿತ್ಯ ಜನಪರವಾಗಬೇಕೆಂದು ನವ್ಯದ ಆತ್ಮರತಿಯಿಂದ ತೇಜಸ್ವಿಯವರು ಸಿಡಿದು ಬೇರೆಯಾದ ಘಟ್ಟ ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲು. ಇದಕ್ಕೆ ಎಪ್ಪತ್ತು ಮತ್ತು ಎಂಭತ್ತರ ದಶಕದ ಸಾಮಾಜಿಕ, ರಾಜಕೀಯ ವಿದ್ಯಮಾನಗಳೂ ಕಾರಣವಾಗಿದ್ದವು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದರಿಂದ ನಮ್ಮ ಸಮಕಾಲೀನ ಕತೆಗಳನ್ನು ವಿಶ್ಲೇಷಿಸಲು ಹೆಚ್ಚು ಸಹಾಯವಾಗುತ್ತದೆ. ಜನಪರ ಚಳವಳಿಗಳನ್ನು ಹತ್ತಿಕ್ಕಲೆಂದು ರಾಜಕೀಯ ರಂಗದಲ್ಲಿ ಆಂತರಿಕ ಭದ್ರತೆಯ ನೆಪವೊಡ್ಡಿ ಹೇರಿದ ತುರ್ತು ಪರಿಸ್ಥಿತಿ ಸ್ವಾತಂತ್ರ್ಯೋತ್ತರ ಭಾರತ ಎದುರಿಸಿದ ಒಂದು ದೊಡ್ಡ ಆಘಾತ. ಇದು ಕನ್ನಡದಲ್ಲಿ ಹೊಸ ಜಾಗೃತಿಯನ್ನು ಮೂಡಿಸಿದುದಲ್ಲದೆ, ಹೊಸಬರಹಕ್ಕೂ ಕಾರಣವಾಯಿತು. ಒಂದು ವ್ಯವಸ್ಥೆಯೊಳಗೆ ಶೋಷಣೆಗೆ ಗುರಿಯಾದ, ಅದರ ವಿರುದ್ಧ ಸಿಡಿದೆದ್ದ ಹಲವಾರು ಚಿಂತನೆಗಳು ಅವರೆಗೆ ಛಿದ್ರ ಛಿದ್ರವಾಗಿ ಹರಡಿ ಹಂಚಿ ಹೋಗಿದ್ದವು. ಅವು ತಮ್ಮ ಚಿಂತನೆಗಳಿಗೆ ಸಮಾನವೇದಿಕೆಯನ್ನು ಪಡೆದದ್ದು ಬಂಡಾಯ ಸಾಹಿತ್ಯ ಸಂಘಟನೆಯಲ್ಲಿಯೇ. ಜಿ. ಎಸ್. ಶಿವರುದ್ರಪ್ಪನವರು ಬಂಡಾಯ ಸಾಹಿತ್ಯ ಕುರಿತು ಬರೆಯುತ್ತಾ "ಕಳೆದ ಒಂದೂವರೆ ದಶಕದ ಕಾಲಮಾನದಲ್ಲಿ ಬಹುಸಂಖ್ಯಾತ ಮಹಿಳೆಯರು ಬರೆಯಲು ಶುರುಮಾಡಿರುವುದೂ ಮತ್ತು ಅವರ ಬರಹಗಳಲ್ಲಿ ಕಂಡುಬರುತ್ತಿರುವ ವೈಚಾರಿಕ ಎಚ್ಚರಗಳೂ ಹಾಗೂ ದೃಷ್ಟಿಕೋನಗಳೂ ಖಂಡಿತವಾಗಿಯೂ ಬಂಡಾಯ ಸಾಹಿತ್ಯ ಚಳವಳಿಯ ಪರಿಣಾಮಗಳಾಗಿವೆ ಎಂದು ನನ್ನ ತಿಳುವಳಿಕೆ, ಏಕೆಂದರೆ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಎಚ್ಚರಗೊಂಡು ಮಾತನಾಡಲು ತೊಡಗಿದ ಶೋಷಿತ ಸಾಮಾಜಿಕ ವರ್ಗಕ್ಕೆ ಮಹಿಳೆಯರೂ ಸೇರುತ್ತಾರೆ." (ಸಾಹಿತ್ಯ ವಿಮರ್ಶೆ, 'ಬಂಡಾಯ ಸಾಹಿತ್ಯ ಕುರಿತು') ಆಧುನಿಕ ಕನ್ನಡ ಸಾಹಿತ್ಯದ ಇತ್ತೀಚಿನ ಮುಖ್ಯವಾದ ಬೆಳವಣಿಗೆಯೆಂದರೆ ಅದು ಇಂತಹ "ಜನಪರ ಸಾಂಸ್ಕೃತಿಕ ಹೋರಾಟ ಮತ್ತು ಇಂಥ ಒಲವಿನ ಸಾಹಿತ್ಯ

ಸೃಷ್ಟಿಯನ್ನು ಪ್ರಜ್ಞಾಪೂರ್ವಕವಾಗಿ ತನ್ನ ಮುಖ್ಯನೆಲೆಯನ್ನಾಗಿ ಮಾಡಿಕೊಂಡಿದ್ದು.'' (ದಶವಾರ್ಷಿಕ ವಿಮರ್ಶೆ). ಈ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಸ್ತ್ರೀ ತನ್ನ ಮೌನಗೌರೀವ್ರತದ ಏಕೈಕ ನಿಷ್ಠೆಯನ್ನು ಬದಿಗೊತ್ತಿ ಪಿಸುಗುಡಲು ತೊಡಗಿದ್ದಾಳೆ. ತನ್ನ ಅಡುಗೆ ಮನೆ ನಡುಮನೆಯ ಪ್ರಪಂಚದಿಂದ ಸ್ವಲ್ಪವೇ ಇಣುಕಿ ಹೊರಗಿನ ಬೆಳಕಿನ ಪ್ರಪಂಚಕ್ಕೆ ತನ್ನ ಅಸ್ತಿತ್ವವನ್ನು ಸಾದರಪಡಿಸುತ್ತಿದ್ದಾಳೆ. ಕನ್ನಡ ಕಥಾಸಾಹಿತ್ಯದ ಪ್ರಮುಖಧಾರೆಗೆ ಒಂದು ಹೊಸ ಪ್ರಜ್ಞೆ ಒಳಸೇರುವ ಹಂತದಲ್ಲಿದೆ. ಈ ನೆಲೆಯಲ್ಲಿ ಈ ಹೊಸ ಅರಿವನ್ನು ಬಹಳ ಪ್ರಜ್ಞಾಪೂರ್ವಕವಾಗಿ ಸೃಜನಶೀಲ ಅಭಿವ್ಯಕ್ತಿಗೆ ಗುರಿಪಡಿಸಿರುವ ಕೆಲವೇ ಕಥೆಗಾರ್ತಿಯರು ನಮ್ಮಲ್ಲಿ ಕಂಡುಬರುತ್ತಿದ್ದಾರೆ. ಅಂತಹವರಲ್ಲಿ ನಾನು ಗುರುತಿಸಿಕೊಂಡಿರುವ ಮಟ್ಟಿಗೆ, ವೀಣಾಶಾಂತೇಶ್ವರ, ವೈದೇಹಿ, ಸಾರಾ ಅಬೂಬಕರ್ ಮತ್ತು ಬಾನು ಮುಸ್ತಾಕ್ ಇವರುಗಳು. ಈ ನಾಲ್ವರ ಪ್ರಾತಿನಿಧಿಕವಾದ ಒಂದೊಂದು ಕತೆಯನ್ನು ಮಾತ್ರ ನನ್ನ ಲೇಖನಕ್ಕೆ ಆಯ್ದುಕೊಂಡಿದ್ದೇನೆ.

ಮೊದಲಿಗೆ ನೋಡುವುದಾದರೆ ವೀಣಾರವರ 'ಹೀಗೊಂದು ಕತೆ' ಎಂಬ ಕತೆ. ಇದು ನಮ್ಮ ಸಾಮಾಜಿಕ ಮೌಲ್ಯಗಳ ಮಿಥ್ಯಾಚರಣೆಯನ್ನು ಬಯಲಿಗೆಳೆವ ಒಂದು ಕಥೆ. ಇಲ್ಲಿಯ ನಾಯಕಿ ಮದುವೆಯ ಯಾವ ಕಟ್ಟುಪಾಡುಗಳಿಗೂ ಒಳಪಡದೆ ತನ್ನ ಗೆಳೆಯನ ಜೊತೆಗೆ ಹತ್ತುವರುಷಗಳ ಸಹವಾಸಮಾಡಿ ನಂತರ ಗರ್ಭಿಣಿಯಾಗುತ್ತಾಳೆ. ಅಲ್ಲದೆ, ವಿವಾಹದ ಮುದ್ರೆ ಇಲ್ಲ ಎನ್ನುವ ಕಾರಣದಿಂದ ಆ ಗರ್ಭವನ್ನು ತೆಗೆಸಲು ಇಚ್ಛಿಸದೆ, ಹುಟ್ಟುವ ಮಗುವಿನ ಬಗ್ಗೆ ನವಿರಾದ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾ ಹೋಗುತ್ತಾಳೆ. ಆದರೆ ಎಲ್ಲ ರೀತಿಯ ಸಾಮಾಜಿಕ ರೀತಿ, ರಿವಾಜು ನಿಯಮ ಬಂಧನಗಳಾಚೆ ಬಂದು, ಆವರೆಗೆ ಆವಳ ಜೊತೆ ಬದುಕನ್ನು ಸವೆಸಿದ್ದ ಅವಳ ಗೆಳೆಯನಿಗೆ ಮಾತ್ರ ಮಗುವನ್ನು ಪಡೆದುಕೊಳ್ಳುವ ವಿಷಯದಲ್ಲಿ ಅವನ ನಿಲುವು ವಾಸ್ತವ ಮತ್ತು ಸಮಾಜದ ಪ್ರತಿಕ್ರಿಯೆಗಳ ಮಧ್ಯೆ ತಾಕಲಾಡುತ್ತದೆ. ಮಗುವಿಗೆ ಸಮಾಜದಲ್ಲಿ ಒಂದು ಸ್ಥಾನಕೊಡಬೇಕೆನ್ನುವ ನೆಪವೊಡ್ಡಿ ಅವಳನ್ನು ಮದುವೆಯ ಬಂಧನಕ್ಕೆಳೆವ ಮೂಲಕ ತನ್ನ ಭಯವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅಲ್ಲಿನ ನಾಯಕಿ ತಾಯಿಯಾಗುವ ಜೈವಿಕ ಬಯಕೆ ಹಾಗು ಅದಕ್ಕೆ ಸಮಾಜ ಕಟ್ಟಿಕೊಂಡ ಕೃತ್ರಿಮ ಪೊರೆಯನ್ನು ಬೇಧಿಸುವುದರ ಮೂಲಕ 'ಮಗು ಹೆರುವುದು ಹೆಂಗಸಿನ ಜನ್ಮಸಿದ್ಧಹಕ್ಕು ನನಗೀಗ ಯಾರ ಅವಶ್ಯಕತೆಯೂ ಇಲ್ಲ' ಎಂದು ಅವನ ಪ್ರಸ್ತಾಪವನ್ನು ಧಿಕ್ಕರಿಸುತ್ತಾಳೆ.

ಯಾವುದೇ ಜವಾಬ್ದಾರಿಯುತ ಸಾಹಿತಿಗಿರಬೇಕಾದ ಈ ಸಮಕಾಲೀನ ಪ್ರಜ್ಞೆ ತನ್ನ ವಸ್ತುವಿನ ದೃಷ್ಟಿಯಿಂದ ಮಾತ್ರವಲ್ಲದೆ ತನ್ನ ಬಂಧದಲ್ಲೂ ಗಟ್ಟಿಯಾದ ಸ್ಪಷ್ಟತೆಯನ್ನು ಪಡೆದುಕೊಂಡಾಗ ಅದು ಒಳ್ಳೆಯ ಕೃತಿಯಾಗುವುದರಲ್ಲಿ ಅನುಮಾನವಿಲ್ಲ. ವೀಣಾ ಅವರ ಈ ಕಥೆ ಅಂತಹ ಸಾಲಿಗೆ ಸೇರುತ್ತದೆ. ಮಹಿಳೆಯ ತಾಯ್ತನದ

ಹಕ್ಕನ್ನು ತನ್ನ ಹತೋಟಿಯಲ್ಲಿಟ್ಟುಕೊಂಡ ಪುರುಷಸಮಾಜ ಅವಳನ್ನು ಜೈವಿಕವಾದ ಬಯಕೆ ಹಾಗು ನಿಯಂತ್ರಣದ ನಡುವೆ ಅಡಕತ್ತರಿಯನ್ನಾಗಿ ಮಾಡಿದೆ. ಇಂತಹ ತನ್ನ ಹಕ್ಕು ಹೊರಗಿನ ಇನ್ನೊಂದರ ನಿಯಂತ್ರಣಕ್ಕೆ ಗುರಿಯಾಗಿದೆ ಎನ್ನುವ ಪ್ರಜ್ಞೆಗೆ ಒಳ್ಳೆಯ ಉದಾಹರಣೆ ಈ ಕತೆ. ಆದರೆ ಕಥಾ ನಾಯಕಿಗೆ ಹೀಗೆ ಅನ್ನಿಸುವಾಗ ತನ್ನ ನಿರ್ಣಾಯಕ ಹಂತದಲ್ಲಿ ಯಾವುದೇ ದ್ವಂದ್ವಗಳು ಕಾಡಲಿಲ್ಲವೇ ಎನ್ನುವ ಪ್ರಶ್ನೆಗೆ ಈ ಕಥೆಯಲ್ಲಿ ಉತ್ತರ ಸಿಗುವುದಿಲ್ಲ. ಕೊನೆಗೆ ತಾಯ್ತನಕ್ಕೆ ಭಾವುಕವಾಗಿ ಅಂಟಿಕೊಂಡುಬಿಡುವ ಅವಳು ಅದಕ್ಕೆ ಕಾರಣವಾದ ಅವನ ಜೊತೆಗಿನ ಸಾಂಗತ್ಯವನ್ನು ನೆನೆಸಿಕೊಳ್ಳುವುದೂ ಇಲ್ಲ. ಅಭಿವ್ಯಕ್ತಿಯ ಮಾಧ್ಯಮವಾಗಿ ಒಂದು ಸಾಹಿತ್ಯ ಕೃತಿ ವಾಸ್ತವತೆ ಎಸೆಯುವ ಸವಾಲುಗಳನ್ನು ಎದುರಿಸದೇ ಹೋದಾಗ ಅದರ ಮಿತಿಗಳು ಕಾಣುವುದು ಇಲ್ಲಿಯೇ. ಈ ಎಲ್ಲ ಮಿತಿಗಳೊಡನೆಯೂ ವಸ್ತುವಿನ ದೃಷ್ಟಿಯಿಂದ ಇದು ಬಹಳ ಪರಿಣಾಮಕಾರಿಯಾದ ಕತೆ. ಇಂದಿನ ಸಂದರ್ಭದಲ್ಲಿ ನಮಗೇನು ಬೇಕು ? ಸಂವಿಧಾನದಲ್ಲಿ ಕೇವಲ ಶಾಸನವಾಗಿರುವ ನಮ್ಮ ಹಕ್ಕುಗಳು ನಮ್ಮ ನಮ್ಮ ಕುಟುಂಬಗಳ ಅವಿಚ್ಛಿನ್ನ ಘಟಕದಾಚೆಗೇ ಉಳಿದುಬಿಟ್ಟಿವೆ ಯಾಕೆ ? ಎನ್ನುವ ಪ್ರಜ್ಞೆ ನಮ್ಮ ಸ್ತ್ರೀಯರಲ್ಲಿ ಮೂಡುವುದೇ ವಿಶೇಷವಾಗಿರುವುದರಿಂದ ಈ ಕತೆ ಬಹಳ ವಿಶಿಷ್ಟವೆನಿಸುತ್ತದೆ.

ಎರಡನೆಯದಾಗಿ ಇಂತಹ ವಿಶಿಷ್ಟ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ನಮ್ಮ ಇನ್ನೊಬ್ಬ ಕತೆಗಾರ್ತಿ ವೈದೇಹಿ. ಅಡುಗೆ ಮನೆ ಪಾರುಪತ್ಯ, ತೊಟ್ಟಿಲತೂಗಾಟ, ಹಸೆ, ಕಸೂತಿ ಈ ಕೈಂಕರ್ಯದ ಪರಮ ಸಾರ್ಥಕತೆಯಲ್ಲಿಯೇ ಮುಳುಗಿ ಹೋಗುವ ಸ್ತ್ರೀಗೆ ನಿಜವಾಗಿ ಬೇಕಾಗಿರುವುದು ಏನು ? ಎಂಬುದರ ಹುಡುಕಾಟ ಅವರ 'ಶೋಧ' ಎನ್ನುವ ಕತೆಯ ವಸ್ತು. ಇಲ್ಲಿಯ ಕಥಾನಾಯಕಿ ತನ್ನ ಬಾಲ್ಯದ ಗೆಳತಿಗಾಗಿ ನಡೆಸುವ ಹುಡುಕಾಟವೇ ಈ ಕಥೆಯ ಹಂದರ. ಈ ಕಥೆ ಎರಡು ಘಟ್ಟಗಳಲ್ಲಿ ಬೆಳೆಯುತ್ತ ಹೋಗುತ್ತದೆ. ಮೊದಲನೆಯ ಘಟ್ಟದಲ್ಲಿ ಶ್ರೀಮಂತ ಮನೆತನಕ್ಕೆ ಸೊಸೆಯಾಗಿ ಹೋದ ಗೆಳತಿ ಅರಮನೆಯಂಥ ಮನೆಯಲ್ಲಿ ರಾಜಕುಮಾರಿಯ ವೈಭವದಲ್ಲಿ ತಾನೆಷ್ಟು ಸುಖಿ ಎಂದು ನಾಯಕಿಗೆ ಹೇಳಿಕೊಳ್ಳುವ ಗೆಳತಿ ಅಡುಗೆ ಮನೆಗೆ ತೆರಳಿದವಳು ಮತ್ತೆ ಬರುವುದೇ ಇಲ್ಲ. ಒಮ್ಮೆ ದೊಡ್ಡ ಮನೆ ಹೊಕ್ಕು ಬಾಗಿಲು ಹಾಕಿಕೊಂಡಮೇಲೆ ಮತ್ತೆ ಪ್ರತ್ಯಕ್ಷವಾಗಲು ಅವರಿಗೆ ಅವರದೇ ಆದ ಪ್ರಪಂಚಗಳಿರುತ್ತವೆ (ಶೋಧ, ವೈದೇಹಿ, ಗೀಲಳರ ಕತೆಗಳು) ಎಂದು ಉದ್ಗಾರ ತೆಗೆಯುವ ನಾಯಕಿಯ ಮಾತುಗಳು ಈ ಎಲ್ಲವುಗಳ ಮಧ್ಯೆ ಸ್ತ್ರೀ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತೆ ಮಾಡಿರುವ ಈ ಸಾಮಾಜಿಕ ವ್ಯವಸ್ಥೆ ಬಗೆಗಿನ ವ್ಯಂಗ್ಯವನ್ನು ಸೂಚಿಸುವುದಲ್ಲದೆ ಆ ನಿರೂಪಣೆಯು ಹಿಂದಿನ ನಿರುದ್ವಿಗ್ನತೆ ಭಾರತೀಯ ಸ್ತ್ರೀ ಇದುವರೆಗೂ ಒಪ್ಪಿಕೊಂಡು ಬಂದ ಸಾಮಾಜಿಕ ಸ್ಥಾನಮಾನದ ಬಗ್ಗೆ ಎತ್ತುವ ಪ್ರಶ್ನೆಯನ್ನು ಅಷ್ಟೇ ಸಹಜವಾಗಿ ವ್ಯಕ್ತಪಡಿಸುತ್ತದೆ. ಆದರೆ ಇದು ಉಸಿರು

ಗಟ್ಟಿದರೂ ಹಾಗೆ ಉಸಿರುಗಟ್ಟಿಕೊಂಡಿರುವುದೇ ಸುಖವೆಂದು ಮೆತ್ತನೆಯ ಹಾಸಿಗೆಯ ಮೇಲೆ ತಂಬುಲ ಜಗಿಯುತ್ತ ನಿಟ್ಟುಸಿರು ಬಿಡುತ್ತಾ ಕುಳಿತಿರಲಿಕ್ಕಿಲ್ಲವಷ್ಟೆ" (ಶೋಧ, ವೈದೇಹಿ, ೧೯೮೮ರ ಕತೆಗಳು) ಎಂದು ಕತೆಯ ಉದ್ದೇಶವನ್ನು ನೇರವಾಗಿ ಹೇಳಿ ಹಿಂಜಿಬಿಡುವುದರಿಂದ ಎಲ್ಲೋ ತನ್ನ ಏಕಸೂತ್ರತೆಯನ್ನು ಕಳೆದುಕೊಂಡು ಜಾಳಾಗಿ ಬಿಡುವುದರಿಂದ ಕಥೆಯು ಕಲಾತ್ಮಕ ಪರಿಣಾಮಕ್ಕೆ ಧಕ್ಕೆ ತಂದಿದೆ. ಆದರೆ ಕಥೆಯ ಮುಕ್ತಾಯ ಮಾತ್ರ ಕಥೆಯ ಉದ್ದೇಶಕ್ಕೆ ಸಾರ್ಥಕವಾದ ಪರಿಣಾಮವನ್ನು ಒದಗಿಸಿಕೊಡುತ್ತದೆ. ಎರಡನೆಯ ಘಟ್ಟದಲ್ಲಿ ರಾಜಕುಮಾರಿಯಂತೆ ಬದುಕುತ್ತಿದ್ದೇನೆ, ಎಂದು ಹೇಳುವ ಗೆಳತಿಯನ್ನು ನಾಯಕಿ ಕಾಣುವುದು ಗುರುತಿಸಲು ಸಾಧ್ಯವಾಗದಷ್ಟು ಬಿಳಿತಲೆಯ, ಸುಕ್ಕು ಮುಖದ ವಿಕೃತ ಮನಸ್ಸಿನ ಮುದುಕಿಯನ್ನು. ಹೆಣ್ಣಿನ ಸುಳ್ಳು ಭ್ರಮೆಗಳಿಗೆ ಒದಗಿದ ಭ್ರಮನಿರಸನದ ಸ್ಥಿತಿ ಅದು. ಸ್ತ್ರೀಯ ನಿಜವಾದ ಹಂಬಲಗಳ ಸುತ್ತ ಸಮಾಜ ಒದಗಿಸುವ ಕೃತ್ರಿಮ ಆವರಣ ತನ್ನ ಎಲ್ಲ ಆಕಾಂಕ್ಷೆಗಳನ್ನು ದಮನಕ್ಕೆ ಒಳಪಡಿಸಿ ಬದುಕುವ ಅವಳ ವಿಲಕ್ಷಣ ನಡತೆಯನ್ನು ಮೈಗೂಡಿಸಿಕೊಳ್ಳುವಲ್ಲಿ ಕತೆಯ ಕೊನೆ ಅತ್ಯಂತ ಸಹಜವಾದ ಪರಿಣಾಮವನ್ನು ಕೊಡುತ್ತದೆ. ಈ ವಿಲಕ್ಷಣತೆ ಸಾಮಾಜಿಕ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಸೂಚಿಸುತ್ತದೆ. ಇಂತಹ ದಮನಕಾರಿ ಶತ್ರುಗಳು ಅವಳನ್ನು ಎಂತಹ ಅನಾರೋಗ್ಯಕರವಾದ ಪರಿಸ್ಥಿತಿಗೆ ತಳ್ಳಿದೆ ಎಂಬುದನ್ನೂ, ಗಂಡಿಗಿಂತ ಹೆಣ್ಣು ದೈಹಿಕವಾಗಿಯಲ್ಲದೆ ಮಾನಸಿಕವಾಗಿಯೂ ಯಾಕೆ ಬೇಗ ಮುದುಕಿಯಾಗುತ್ತಾಳೆ ಎನ್ನುವ ಪ್ರಶ್ನೆಗೆ ಉತ್ತರವನ್ನು, ನಾಲ್ಕು ಗೋಡೆಗಳ ಮಧ್ಯೆ ಅವಳನ್ನು ಸುಖವಾಗಿ ಇಟ್ಟಿರುವ ಸಾಮಾಜಿಕ ಭ್ರಮೆಗಳಿಗೆ ಪೆಟ್ಟುಕೊಡುವುದರ ಮೂಲಕ ಕತೆ ತನ್ನ ಉದ್ದೇಶವನ್ನು ಸಾರ್ಥಕ ಪಡಿಸಿಕೊಂಡಿದೆ.

ಕನ್ನಡ ಸಾಹಿತ್ಯದ ಇತ್ತೀಚಿನ ಬೆಳವಣಿಗೆಯೆಂದರೆ, ಈವರೆಗೆ ಅಪರಿಚಿತವಾಗಿದ್ದ ಮುಸ್ಲಿಂ ಪ್ರಪಂಚವೊಂದು ಕಥಾ ಸಾಹಿತ್ಯಕ್ಕೆ ಕಾಲಿಡುತ್ತಿರುವುದು. ಮುಸ್ಲಿಂ ಜನಾಂಗದ ಆಂತರಿಕ ನೋವು ನಲಿವುಗಳು ಇಲ್ಲಿ ಘನಿಷ್ಠವಾದ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ಮೇಲುವರ್ಗದ ಶ್ರೀಮಂತ ಮುಸ್ಲಿಂ ಮಹಿಳೆಯರು ಅವರ ವೈಭವೋಪೇತ ಜನಾನಾಗಳನ್ನು ಒಳಗೊಂಡ ಹಾಗೆಯೇ ಕಫಕಟ್ಟಿ ಕೆಮ್ಮುತ್ತಾ, ಗೂರುತ್ತಾ ಬೀಡಿಕಟ್ಟುವ ಬಡ ಹೆಂಗಸರು, ಶ್ರೀಮಂತ ಮುದುಕ ಗಂಡನನ್ನು ಕಟ್ಟಿಕೊಂಡುಕೋಣೆಯೊಳಗೆ ಬುರ್ಖಾದ ಕಿಂಡಿಗಳೊಳಗಿಂದ ಯುವಕರತ್ತ ಕದ್ದು ನೋಡುವ ಆಸೆಯನ್ನು ಒತ್ತಿ ಹಿಡಿದ ಬಡ ಯುವತಿಯರು, ಸಣ್ಣವಯಸ್ಸಿಗೆ ಶಾಲೆಗೆ ಶರಣು ಹೊಡೆದು ನಾಲ್ಕು ಗೋಡೆಗಳ ಒಳಗೇ ಕುಳಿತು ಅವರವರ ತಾಯಂದಿರು ಪ್ರತಿವರ್ಷ ಎಡಬಿಡದೆ ಹೆತ್ತುಕೊಡುವ ಮಕ್ಕಳ ಪಾಲನೆಯನ್ನು ಮಾಡುತ್ತಾ ದುಡಿಯುವ ಚಿಕ್ಕ ಹುಡುಗಿಯರು, ಹೀಗೆ ಹಿಂದೂ ಸ್ತ್ರೀಗಳ ಸ್ಥಿತಿಗಿಂತಲೂ ಶೋಚನೀಯವಾದ ಪರಿಸ್ಥಿತಿಯಲ್ಲಿ ಶೋಷಿತ ಮುಸ್ಲಿಂ ಮಹಿಳೆಯರು ಈ ಕತೆಗಳ ವಸ್ತುವಾಗುತ್ತಾರೆ.

ಇತ್ತೀಚಿಗೆ ಕನ್ನಡ ಕಥಾಸಾಹಿತ್ಯದಲ್ಲಿ ಪ್ರಮುಖವಾಗಿ ಗಮನ ಸೆಳೆಯುತ್ತಿರುವ ಕತೆಗಾರ್ತಿ ಸಾರಾ ಅಬೂಬಕ್ಕರ್. ಅತ್ಯಂತ ತೀವ್ರವಾದ ಸ್ತ್ರೀಪರ ಕಾಳಜಿಗಳನ್ನು ತುಂಬಿಕೊಂಡು ಬರೆಯುತ್ತಿರುವ ಲೇಖಕಿ. ಬಹಳ ಶೋಷಿತ ವರ್ಗವಾದ ಮುಸ್ಲಿಂ ಮಹಿಳಾ ಜನಾಂಗದಿಂದ ಹೊರಬಂದು ಮಾತು ಕೊಡುತ್ತಿರುವ ಈ ಲೇಖಕಿ, ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಬರಹಗಾರರಿಗೆ ಇರುವ Identity crisis ನಲ್ಲಿಯೂ ಕೂಡ ಅದನ್ನು ಸಮರ್ಥವಾಗಿ ಬಗೆಹರಿಸಿಕೊಂಡ ಕತೆಗಾರ್ತಿಯಾಗಿರುವುದೇ ವಿಶೇಷ. ಇವರ 'ಚಪ್ಪಲಿ' ಎನ್ನುವ ಕತೆ ಮುಸ್ಲಿಂ ಮಹಿಳೆಯ ಸ್ಥಾನಕ್ಕೆ ಒಂದು ಸಾಮಾಜಿಕ ದೊಡ್ಡ ವ್ಯಂಗ್ಯವಾಗಿದೆ. ಈ ಕತೆಯಲ್ಲಿ ಹೊಸದಾಗಿ ಮದುವೆಯಾದ ಯುವತಿಯೊಬ್ಬಳು ಗಂಡ ದುಬೈನಲ್ಲಿರುವ ಕಾರಣದಿಂದ ಅವನಿಂದ ದೂರವಾಗಿ ಭಾರತದಲ್ಲಿಯೇ ಉಳಿದುಬಿಡುತ್ತಾಳೆ. ಗಂಡನಿಂದ ದೂರವಾಗಿ ಹೊಸದಾಗಿ ಮದುವೆಯಾದ ಹುಡುಗಿಯೊಬ್ಬಳ ಸೂಕ್ಷ್ಮನೋವು ಅಂತರಂಗದ ತಾಕಲಾಟಗಳ ಒಂದು ಕತೆ 'ಚಪ್ಪಲಿ'. ಸ್ತ್ರೀ ತನ್ನ ಆಯ್ಕೆಯ ಹಕ್ಕನ್ನು ಕಳೆದುಕೊಂಡಿರುವ ಸ್ಥಿತಿಗೆ ಉತ್ತಮ ಉದಾಹರಣೆಯಾಗಬಲ್ಲ ಕತೆ ಇದು. ಪ್ರತಿ ವರ್ಷ ತನ್ನ ಹೆಂಡತಿಗೆ ಬಿಡದೆ ಮಕ್ಕಳನ್ನು ದಯಪಾಲಿಸುವ ಅವಳ ಅಪ್ಪ, ಹೊಸದಾಗಿ ಮದುವೆಯಾದ ತನ್ನ ಮಗಳು ಅವಳ ದೂರದ ಊರಿನಿಂದ ಬಂದ ಗಂಡನೊಡನೆ ಅಡ್ಡಾಡಲು ಹೋಗುವುದನ್ನು ನಿಯಂತ್ರಿಸುತ್ತಾನೆ. ಸ್ತ್ರೀಯರೆಂದರೆ ಚಪ್ಪಲಿಗಳ ಹಾಗೆ ಅದನ್ನು ಬೇಕಾದಾಗ ಮಾತ್ರ ಉಪಯೋಗಿಸಿ ನಂತರ ಧೂಳು ತುಂಬಿದ ಮೂಲೆಯಲ್ಲಿಡಬೇಕು ಎಂದು ತನ್ನ ಅಳಿಯನಿಗೆ ಉಪದೇಶಿಸುತ್ತಾನೆ. 'ನಾನೊಂದು ಚಪ್ಪಲಿಗೆ ಹುಟ್ಟಲಿಲ್ಲ ನನ್ನನ್ನು ಹೆತ್ತವಳು ಒಬ್ಬ ಹೆಣ್ಣು' ಎಂದು ನಾಯಕ ಉತ್ತರ ಕೊಡುವುದರ ಮೂಲಕ ಗಂಡಿಗೆ ಹೆಣ್ಣು ಕೇವಲ Commodity ಯಾದ, ಅವನ ಆದರ್ಶಗಳಿಗೆ ಕೇವಲ ಮಾಧ್ಯಮವಾಗಿಬಿಡುವ ದುರಂತವನ್ನು ಪ್ರತಿಬಿಂಬಿಸುತ್ತದೆ. ಹೆಣ್ಣು ಗಂಡಿನ ಕೈತಪ್ಪಿ ಹೋಗಬಹುದು ಎನ್ನುವ ಭಯಕ್ಕೆ ಆರೋಗ್ಯಕರವಾದ ಕಾಮವನ್ನು ಸ್ತ್ರೀ ಹತ್ತಿಕ್ಕುವಂತೆ ಮಾಡುವುದಕ್ಕೂ, ಹೆಣ್ಣು ಇರುವುದೇ ತನ್ನ ಲಾಲಸೆಗೆಂದು ಅವಳನ್ನು ನಿರಂತರ ಸಂತಾನೋತ್ಪತ್ತಿಯ ಸಾಧನವನ್ನಾಗಿ ಉಪಯೋಗಿಸುವುದಕ್ಕೂ ಧರ್ಮ ನೆರವಾಗುತ್ತದೆ. ಧರ್ಮ ಹಾಗು ಪ್ರಕೃತಿ ಇವೆರಡರ ಸಂಘರ್ಷದಲ್ಲಿ ಇಂದು ನಲುಗಿ ಹೋದ ಹೆಣ್ಣಿಗೆ, ಪ್ರೀತಿಯಿಂದ ಕಾಣುವ ಗಂಡನಿಗಿಂತಲೂ ಅವನ ಪ್ರತಿಷ್ಠೆಯನ್ನು ಮೆರೆಸುವ ಹಣ, ಸೀರೆ, ಸುಗಂಧಗಳೇ ಅವಳ ಪರಮ ಸಾರ್ಥಕತೆಯ ಸಾಧನಗಳೆಂದು, ಅವಳ ಆಸೆ ಕನಸುಗಳನ್ನು ಆ ಮೂಲಕ ಮುಚ್ಚಲು ಪ್ರಯತ್ನ ಪಡುವ ನಮ್ಮ ಸಾಮಾಜಿಕ ವ್ಯವಸ್ಥೆಯ ಈ ಕ್ರೂರ, ಘಾತುಕ ಮುಖವನ್ನು ಬಹಳ ಪರಿಣಾಮಕಾರಿಯಾಗಿ ಎತ್ತಿ ತೋರಿಸುವ ಕತೆ ಇದು. ಚಪ್ಪಲಿಗಳು ಎಷ್ಟು ಸವೆದರೂ ಗಂಡು ಹೊಸ ಚಪ್ಪಲಿಗಳನ್ನು ಕೊಳ್ಳಬಹುದು ಎನ್ನುವಲ್ಲಿ ಲೈಂಗಿಕ ಅಸಮಾನತೆಯನ್ನು ಅಷ್ಟೇ ದಿಟ್ಟತನದಿಂದ ಕಲಾತ್ಮಕ ಪರಿಶೋಧನೆಗೆ ಗುರಿಮಾಡುವ ಈ ಕತೆಯ ವಿಶಿಷ್ಟತೆ, ಸೃಜನ

ಶೀಲ ಸೃಷ್ಟಿಯ ನೆಲೆಯಲ್ಲಿ ಹೊಸ ವಸ್ತುವೊಂದು, ತನಗೆ ತಾನೆ ಪಡೆದುಕೊಳ್ಳುವ ಬಂಧದ ಬಿಗಿ ಹಾಗು ಕತೆಗಾರಿಕೆಯ ನಯವನ್ನು ಅತ್ಯಂತ ಸೂಕ್ಷ್ಮವಾಗಿ ಹಿಡಿದಿಡುತ್ತದೆ.

ಇಂತಹುದೇ ವರ್ಗದಿಂದ ಬಂದ ಮತ್ತೊಬ್ಬ ಸ್ತ್ರೀನಿಷ್ಠ ಕತೆಗಾರ್ತಿ ಬಾನುಮುಷ್ತಾಕ್, ಹೆಣ್ಣಿನ ಬದುಕಿನ ದುರಂತದ ಇನ್ನೊಂದು ಮುಖವನ್ನು ತನ್ನ 'ರಾಹಿಲಾ' ಎನ್ನುವ ಕತೆಯಲ್ಲಿ ಚಿತ್ರಿಸುತ್ತಾಳೆ. ಮದುವೆಯ ವಯಸ್ಸು ದಾಟಿದ ಹೆಣ್ಣು ಮಗಳೊಬ್ಬಳು ತನ್ನ ವಯಸ್ಸಿಗೆ ಸಹಜವಾದ ಎಲ್ಲ ಕಾಮನೆಗಳನ್ನು ವರದಕ್ಷಿಣೆಯ ದಳ್ಳುರಿಯಲ್ಲಿ ಸುಟ್ಟುಕೊಳ್ಳುವ ಕತೆ ಇದು. ಸಾಮಾಜಿಕ ಅನಿಷ್ಟವಾದ ವರದಕ್ಷಿಣೆ ಪದ್ಧತಿ ಹಾಗು ಅದರ ಹಿಡಿತದಿಂದ ಪಾರಾಗಲು ನೆರವಾಗದ ಈ ಜಾತಿ ಪದ್ಧತಿ, ಈ ಎರಡೂ ಅನಿಷ್ಟಗಳು ಗಂಡು ಹೆಣ್ಣಿನ ಪವಿತ್ರ ಸಂಬಂಧವನ್ನು ಮದುವೆಯ ಮಾರುಕಟ್ಟೆಯಲ್ಲಿಟ್ಟು ಹರಾಜು ಹಾಕುವ ಕೊಳಕು ಪದ್ಧತಿಯನ್ನು ಕುರಿತು ಈ ಕತೆ ಹೇಳುತ್ತದೆ. ಇದರ ಮಧ್ಯೆ ಬಡವರ ಸ್ಥಿತಿ ವಾಸ್ತವದ ಕ್ರಿಯೆಗೆ ಸಿಕ್ಕಿ ಹೇಗೆ ಬಡಬಾಗ್ನಿಯಾಗುತ್ತದೆ. ಇದಕ್ಕೆ ಸಿಕ್ಕಿ ಸೋತು ಹೋಗುವ ಬಡತನ ಅವರನ್ನು ದುಃಖದ ಸಾಗರಕ್ಕೆ ಹೇಗೆ ತಳ್ಳಿಬಿಡುತ್ತದೆ ಎಂಬುದು, ಸಾಹಿತ್ಯ ಕೃತಿಯಾಗಿಯೂ ಯಶಸ್ವಿಯಾಗಿರುವುದನ್ನು ಈ ಕಥೆ ತಿಳಿಸಿಕೊಡುತ್ತದೆ.

ಈ ಮೇಲಿನ ಎಲ್ಲ ಕತೆಗಾರ್ತಿಯರನ್ನು ವಿಶ್ಲೇಷಿಸಿದಾಗ Gail Minalt ಎನ್ನುವವರ ಅಭಿಪ್ರಾಯದಂತೆ " The history of woman kind has all too often been written as the history of men, their mass their thoughts their commerce" (New Quest, Malladi Subbamma, Woman in Islam, January, 1991) ಇಂತಹ ಪೂರ್ವಗ್ರಹ ನಮ್ಮ ಇತಿಹಾಸವಾಗಿರುವುದನ್ನು ನಮ್ಮ ಮಹಿಳೆಯರು ಇತ್ತೀಚೆಗೆ ಗುರುತಿಸಿಕೊಳ್ಳುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಜನಪ್ರಿಯವಾದ ಆದರ್ಶಗಳನ್ನು ತೊರೆದು ಅದನ್ನು ನಂಬಿರುವ ಜನಕ್ಕೆ ಆಘಾತಕೊಟ್ಟು ಸಾಗುವುದರ ಮೂಲಕ ಸಾಹಿತ್ಯಕ ಸವಾಲುಗಳನ್ನು ಎದುರಿಸಬೇಕಾಗಿರುವುದು, ಮೊದಲೇ ಹೇಳಿದಂತೆ ಇತ್ತೀಚೆಗಷ್ಟೇ ಬರೆಯುತ್ತಿರುವ ಮಹಿಳೆಯರಿಗೆ ಕಷ್ಟಸಾಧ್ಯವಾಗುವುದಾದರೂ ಆದರೆ ಅದರೆಡೆಗೆ ಮುಖಮಾಡಿ ನಡೆದಿರುವುದು ಕನ್ನಡ ಕಥಾ ಸಾಹಿತ್ಯ ಪರಂಪರೆಯ ಗಮನಾರ್ಹ ಅಂಶ. ಏಕೆಂದರೆ ಪರಂಪರೆ ಎಂದರೇ ಸದಾ ಹರಿವ ನೀರಿನಂತೆ, ನಾವು ಕಟ್ಟಿಕೊಂಡ ಮೌಲ್ಯಗಳು ಹರಿವ ನೀರಿನ ಜಾಯಮಾನಕ್ಕೆ ಒಗ್ಗಿ ಹಲವು ಬದಲಾವಣೆಗಳಿಗೆ ಪಕ್ಕಾಗುತ್ತಾ ಹೋಗುವುದಾದರೆ ಅದು ಆರೋಗ್ಯ ಪೂರ್ಣ ಸಾಮಾಜಿಕ ವ್ಯವಸ್ಥೆಯಾಗುತ್ತದೆ. ಇಲ್ಲವಾದಲ್ಲಿ ಅದು ಅಲ್ಲಿಯೇ ಮಡುಗಟ್ಟಿ ನಿಂತ ನೀರಾಗುತ್ತದೆ, ನಾರುತ್ತದೆ, ಸಂಪ್ರದಾಯವಾಗುತ್ತದೆ. ಇಂತಹ ನಾರುತ್ತಿರುವ ಸಾಂಪ್ರದಾಯಿಕ ಮೌಲ್ಯಗಳತ್ತ ಬೊಟ್ಟುಮಾಡಿ ತೋರಿಸುವಷ್ಟಾದರೂ ನಮ್ಮ ಹೆಣ್ಣು ಮಕ್ಕಳ ಮೂಗಿಗೆ ಅದರ ವಾಸನೆ ಬಡಿದಿರುವುದು

ಮಾನವ ಸಮಾಜ ಆರೋಗ್ಯ ಪೂರ್ಣತೆಯನ್ನು ಉಳಿಸಿಕೊಳ್ಳುವುದರ ಕಡೆಗೆ ಸಾಗುತ್ತಿರುವುದನ್ನು ಗುರುತಿಸಬಹುದು. ಇಂತಹವುಗಳು ಕಲಾಮಾಧ್ಯಮದಲ್ಲಿ ಅಭಿವ್ಯಕ್ತಿಯನ್ನು ಹೇಗೆ ಪಡೆದುಕೊಳ್ಳುತ್ತವೆ ಎನ್ನುವುದೇ ಕೊನೆಗೂ ಮುಖ್ಯವಾದ ಅಂಶವಾಗುತ್ತದೆ.

ಡಾ. ರಾಗೌ

ಕಲೆ

ನಿನ್ನ ಸೃಷ್ಟಿ ಸುಂದರ ಕಲೆಯನೋಡಿದ ಮೇಲೆ
ಹೋರಲಾರದು ನನ್ನಕಲೆ ನಿನ್ನದರ ಮುಂದೆ
ನನ್ನದೇನಿದ್ದರೂ ನಿನ್ನನನುಸರಿಸಲೆಂದೆ !

ವಿರೋಧವಲ್ಲ ನಿನದಕೆ ಸದಾಪೂರಕ ನೆಲೆ
ಅದರದರ ಬೆಲೆಯು ಅದರದರೊಳಗೆ ಇರಿಸಿ

ಅವ್ಯಕ್ತಪಥಕೆ ಸರಿದಿರುವೆಯಾ ನೀನು
ನಿನ್ನ ಮುಂದೆನ್ನಹಂಗೋಳದರ್ಥವೇನು ?

ಅಲರೆಲೆಯ ಹಿಂದೆ ಅಡಗಿಸೆನ್ನನಂತೆ ವಾಸಿ !
ಸರಳ ಸಂಕೀರ್ಣ ಗೋಜಲುಗಳನೆಲ್ಲ ದಾಟಿ

ಲತೆಯೊಳಗೆ ಹೂವುಹೊಮ್ಮುವತೆರದಂತೆ
ಕಲ್ಲಿನಲಿ ಕಲೆಯರಳುವ ಸೂತ್ರದಂತೆ

ಸ್ಥಿತಪ್ರಜ್ಞೆಗೆ ಚಲಿಸಲೆನ್ನ ಮನ ಹೃದಯ ಮೀಟಿ !
ಕಲೆಗಾಗಿ ಕಲೆಯಲ್ಲ ಎಂಬ ನುಡಿ ಬೆಳಸು
ಜೀವಕ್ಕಲ್ಲದಿರುವುದೆಲ್ಲವ ತ್ಯಜಿಸಲೆಳಸು !

ಪುಸ್ತಕ ವಿಮರ್ಶೆ

ಕತ್ತಲೆಯಿಂದ ಕಗ್ಗತ್ತಲೆಗೆ (ಕಾದಂಬರಿ) , ಪಂಜಾಬಿ ಮೂಲ : ನರೇಂದ್ರಪಾಲ್ ಸಿಂಘ್, ಕನ್ನಡ ಅನುವಾದ : ಪಿ. ಶಶಿಕಲಾ; ಸಾಹಿತ್ಯ ಅಕಾದೆಮಿ, ನವದೆಹಲಿ, ಪುಟ ೨೧೬; ೧೯೯೧; ಬೆಲೆ ರೂ. ೩೦.

ಇದು ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದ ನರೇಂದ್ರಪಾಲ್ ಸಿಂಘ್ ಅವರ ಪಂಜಾಬಿ ಕಾದಂಬರಿ 'ಬಾ ಮುಲಾಹಿಜ ಹೋಷಿಯಾರ್'ನ ಕನ್ನಡ ಅನುವಾದ ಪಿ. ಶಶಿಕಲಾ ಅವರು ಇದನ್ನು ಇಂಗ್ಲಿಷ್ ಆವೃತ್ತಿಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

'ನಾಗರಿಕತೆ ಮತ್ತು ಮನುಷ್ಯನ ಅವನತಿ' ಇದು ಕಾದಂಬರಿಯ ಕೇಂದ್ರವಸ್ತು. ತುಂಬಾ ವ್ಯಾಪಕವಾದ ಅರ್ಥದಲ್ಲಿ ಕಾಮದ ನೆಲೆಯಲ್ಲಿ ಮಾನವ ಬದುಕಿನ ಮೌಲ್ಯವನ್ನು ನಿರ್ಧರಿಸುವತ್ತ ಕಾದಂಬರಿಯ ಘಟನೆಗಳು ಸಾಗುತ್ತವೆ. ಮುಂದುವರಿದ ರಾಷ್ಟ್ರಗಳು ಮತ್ತು ಅಭಿವೃದ್ಧಿಶೀಲ ದೇಶಗಳ ಜನಜೀವನವನ್ನು ಕಣ್ಣೆದುರಿಗಿಡುತ್ತ ಎರಡೂ ಕಡೆ ಬದುಕು ಹೇಗೆ ವಿನಾಶದತ್ತಲೇ ರಭಸದಿಂದ ದಾಪುಗಾಲನ್ನಿಡುತ್ತಿದೆ ಎಂಬುದನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ. ಈ ಕಾದಂಬರಿ ಪ್ರಧಾನವಾಗಿ ಎರಡು ಭೂಮಿಕೆಗಳಲ್ಲಿ ತನ್ನ ಒಡಲಿನ ಘಟನೆಗಳನ್ನು ಕಾಣಿಸುತ್ತಾ ಮುಂಬರಿಯುತ್ತದೆ ಅಮೆರಿಕಾ ಮತ್ತು ಭಾರತ ಆ ಎರಡು ಭೂಮಿಕೆಗಳಾಗಿವೆ.

ಕಾಮತೃಪ್ತಿಯೇ ತನ್ನ ಜೀವನದ ಪರಮೋದ್ದೇಶ ಎಂದು ಭಾವಿಸಿ ಸಲಿಂಗ ರತಿಯೂ ಸೇರಿದಂತೆ ಕಾಮಕೂಪದ ಆಳಪಾತಾಳದಲ್ಲಿ ಮುಳುಗಿ ಕೊನೆಗೆ ಅದರಿಂದಾಗಿಯೇ ಉದ್ಭವಿಸಿದ 'ಹೆಮಿಸ್ಫ್ಯಾರಿಸೆಕ್' ಎಂಬ ವಿಚಿತ್ರ ರೋಗಕ್ಕೆ ತುತ್ತಾಗಿ ಹೇಳಹೆಸರಿಲ್ಲದಂತಾಗುವ ಭಾರತದ ಅವತಾರ್‌ಸಿಂಘ್, ಆತನ ಪ್ರೇಯಸಿಯಾಗಿದ್ದು ಅವನ ಸಾವಿನ ತರುವಾಯ ವಿರಹತಪ್ತಳಾಗಿ ನೊಂದು ಕಡೆಗೆ ನೆಮ್ಮದಿಯೊಂದೇ ಬದುಕಿನಲ್ಲಿ ಮುಖ್ಯ ಎಂದು ಬಗೆದು ಅಂಥ ನೆಮ್ಮದಿಯನ್ನು ಅವತಾರ್‌ನ ಭಾರತದಲ್ಲಿ ಕಾಣಲೆಂದು ಬಂದು ಇಲ್ಲಿನ ನೈತಿಕ ಅಧಃಪತನದಿಂದ ಬೆಂದು 'ಕತ್ತಲೆಯಿಂದ ಕಗ್ಗತ್ತಲೆ'ಗೆ ನಡೆಯುವ ಅಮೆರಿಕಾದ ತರುಣಿ ಮೇರಿಯಾ ಈ ಕಾದಂಬರಿಯ ಎರಡು ಪ್ರಧಾನ ಪಾತ್ರಗಳು. ಈ ಎರಡು ಪ್ರಮುಖ ಪಾತ್ರಗಳ ಮೂಲಕ ವಸ್ತುಸ್ಥಿತಿಯನ್ನು ಅದರ ಎಲ್ಲಾ ಸಂಕೀರ್ಣತೆಗಳೊಡನೆ ಕಾದಂಬರಿಕಾರರು ಕಂಡರಿಸಿದ್ದಾರೆ. ಭವಿಷ್ಯದ ಭಯಾನಕ ಸ್ವರೂಪವನ್ನು ನಿರೂಪಿಸುತ್ತಲೇ ವರ್ತಮಾನದ ಹೇಯಕರ ವ್ಯವಸ್ಥೆಯನ್ನು ಕಾದು, ರಾಜಕೀಯ ಡಂಭಾಚಾರ, ವ್ಯಭಿಚಾರ, ಪರಿಸರ ಮಾಲಿನ್ಯ ಇತ್ಯಾದಿ ಮುಖ್ಯಪಾತಳಿಗಳ ಮೇಲೆ ಚಿತ್ರಿಸಲಾಗಿದೆ. ಆ ಚಿತ್ರಣದ ಅಂತರಾಳದಲ್ಲೇ

ಬದುಕಿನ ಬಗ್ಗೆ ಮನುಷ್ಯ ಹೆಚ್ಚು ಎಚ್ಚರಿಕೆ ಹಾಗೂ ಹೊಣೆಗಾರಿಕೆಯಿಂದ ವರ್ತಿಸದಿದ್ದರೆ ಅವನ ವಿನಾಶ ನಿಶ್ಚಿತ ಎಂಬ ಕಟುಸತ್ಯವನ್ನು ಕಾದಂಬರಿ ಸಾರಿಹೇಳುತ್ತದೆ.

ಕಾದಂಬರಿಯ ಪೂರ್ವಾರ್ಧ ಅಮೆರಿಕಾದ ಸಾಮಾಜಿಕ ಬದುಕಿನ ಹಲವು ಮುಖಗಳನ್ನು ಪರಿಚಯಿಸುತ್ತದೆ. ಮುಕ್ತಲೈಂಗಿಕತೆ ಇರುವಲ್ಲಿ ಎಂಥೆಲ್ಲಾ ಅಪಾಯಕಾರಿ ಸಮಸ್ಯೆಗಳು ತಲೆದೋರಬಹುದೆಂಬುದನ್ನು ಈ ಭಾಗದಲ್ಲಿ ಹೇಳಲಾಗಿದೆ. ಇಲ್ಲಿ ಕಾಣಿಸಿಕೊಳ್ಳುವ ಅವತಾರ್, ಡ್ಯಾನಿ, ಫ್ಯಾನಿ ಮುಂತಾದ ಪಾತ್ರಗಳ ನೆಲೆಯಲ್ಲಿ ಅನಿರ್ಬಂಧಿತ ಸಮಾಜದಲ್ಲಿ ನಡೆಯುವ ಕಾಮ ಸ್ವೇಚ್ಛಾಚಾರವನ್ನು ನೈಜವಾಗಿ ವರ್ಣಿಸಲಾಗಿದೆ. ಕಾದಂಬರಿಯ ಮಧ್ಯಂತರದಲ್ಲಿ ಕಾಣಿಸಿಕೊಳ್ಳುವ 'ಹೆಮಿಪ್ಯಾರಿಸೆಕ್' ಖಾಯಿಲೆ ಸದ್ಯದ ಭಯಾನಕ ರೋಗ 'ಏಯ್ಡ್ಸ್'ನ ಬೇರೊಂದು ರೂಪವೋ ಎಂಬಂತಿದೆ. ಮುಂದುವರೆದ ರಾಷ್ಟ್ರಗಳಲ್ಲೂ ಇರುವ ಭ್ರಷ್ಟಾಚಾರ, ಕಾಳಸಂತೆ, ಶೋಷಣೆ ಮುಂತಾದವುಗಳನ್ನು ಈ ಭಾಗದಲ್ಲಿ ಹೇಳಲಾಗಿದೆ.

ಕಾದಂಬರಿಯ ಉತ್ತರಾರ್ಧದ ಘಟನೆಗಳು ಪ್ರಸ್ತುತ ಭಾರತದ ಭಾಷ್ಯದಂತಿವೆ. 'ಭವಿಷ್ಯದಲ್ಲಿ ನಡೆಯಬಹುದಾದ ಕಥೆಯೊಂದರ ಕಾಲ್ಪನಿಕ ಚಿತ್ರಣ ಈ ಕಾದಂಬರಿಯಲ್ಲಿದೆ' ಎಂದು ಇದರ ಬೆನ್ನುಡಿಯಲ್ಲಿ ಹೇಳಲಾಗಿದೆ. ಆದರೆ ವಾಸ್ತವವಾಗಿ ಈ ಕಾದಂಬರಿ ಕೆಲವೊಂದು ಘಟನೆಗಳನ್ನು ಬಿಟ್ಟರೆ ಉಳಿದಂತೆ ಪ್ರಸ್ತುತಕ್ಕೆ ಹೆಚ್ಚು ಒತ್ತುಕೊಡುತ್ತದೆ. ಭಾರತೀಯ ಸಂಸ್ಕೃತಿಯ ಸರ್ವಮುಖಗಳನ್ನು ಈ ಭಾಗ ತೆರೆದುತೋರಿಸುತ್ತಾ ಸಾಗುತ್ತದೆ. ಇಲ್ಲಿನ ಅಜ್ಞಾನ, ಅವಿವೇಕ, ಆತ್ಮವಂಚನೆ, ವಿಷಯಲಂಪಟತನ ಇತ್ಯಾದಿಗಳೆಲ್ಲವನ್ನೂ ವಿವಿಧ ಪಾತ್ರಗಳ ಹಿನ್ನೆಲೆಯಲ್ಲಿ ಎತ್ತಿತೋರಿಸಲಾಗಿದೆ. ಆರ್ಷೇಯ ಭಾರತೀಯ ಮೌಲ್ಯಗಳ ಮಹತ್ತ್ವವನ್ನು, ಪ್ರಸ್ತುತದಲ್ಲಿ ಅವುಗಳ ಅಳವಡಿಕೆಯ ಅಗತ್ಯವನ್ನು ಅಂತರ್ವಾಹಿನಿಯಂತೆ ನಿರೂಪಿಸುತ್ತದೆ ಈ ಕಾದಂಬರಿ.

'ಕತ್ತಲೆಯಿಂದ ಕಗ್ಗತ್ತಲೆ'ಗೆ ನಿರೂಪಣಾ ಪ್ರಧಾನ ಕಾದಂಬರಿ. ಸಂದರ್ಭಕ್ಕೆ ತಕ್ಕಂತೆ ಭಾಷೆ ಇಲ್ಲಿ ಸಂಕೀರ್ಣವಾಗುತ್ತಾ ಸರಳವಾಗುತ್ತಾ ನಡೆಯುತ್ತದೆ, ನುಡಿಯುತ್ತದೆ. ಕಾದಂಬರಿಕಾರರು ಪ್ರತಿಪದವನ್ನೂ ತುಂಬು ಎಚ್ಚರಿಕೆಯಿಂದ ಪ್ರಯೋಗಿಸಿದ್ದಾರೆ. ಓದುಗನನ್ನೂ ಕಥಾವಲಯದೊಳಕ್ಕೆ ಒಂದು ಪಾತ್ರವಾಗಿ ಎಳೆದುಕೊಳ್ಳುವ ಇಲ್ಲಿನ ಕೌಶಲ ಪರಿಣಾಮದ ದೃಷ್ಟಿಯಿಂದ ಮುಖ್ಯವಾಗಿದೆ. ಭೂತ–ವರ್ತಮಾನಗಳನ್ನು ಸಮಾನಾಂತರವಾಗಿ ನಿರೂಪಿಸುವ ತಂತ್ರವಿಧಾನ ಈ ಕಾದಂಬರಿಯ ಶೈಲಿಯ ಒಂದು ಸೊಗಸು. ಕಾಮ ಪ್ರೇಮಗಳ ನಡುವಿನ ನವುರಾದ ವ್ಯತ್ಯಾಸವನ್ನು ತೆರೆದು ತೋರಿಸುವಲ್ಲಿ ಕೃತಿಕಾರರ ಸಂವಿಧಾನ ಕೌಶಲ ಹಾಗೂ ಭಾಷಾನೈಪುಣ್ಯ ಅನನ್ಯವಾಗಿ ಮೈದೋರಿದೆ. ಕಥಾವರಣದ ಘಟನೆಗಳಿಗೆ ಸಮಾನಾಂತರವಾಗಿ, ಅಂಥ ಘಟನೆಗಳಿಗೆ ಬರೆದ ವ್ಯಾಖ್ಯಾನವೆಂಬಂತೆ ಸಾಮಾನ್ಯ ಸಂಗತಿಗಳನ್ನು (ಆದರೆ ಅವು ತೀರಾ ಗಂಭೀರವಾದವುಗಳು) ನಿರೂಪಿಸುವುದು ಇಲ್ಲಿನ

ಮತ್ತೊಂದು ವೈಶಿಷ್ಟ್ಯ. ಓದುಗನನ್ನು ಇದು ಅಲ್ಲಲ್ಲೇ ಬೆನ್ನುತಟ್ಟಿ ಎಚ್ಚರಿಸುತ್ತಾ ಚಿಂತನೆಗೆ ಹಚ್ಚುವಲ್ಲಿ ಪರಿಣಾಮಕಾರಿಯಾಗಿದೆ.

ಕಥೆಯ ನಡುವೆ ಕಥೆಯೊಳಗಿನ ಘಟನೆಗಳಿಗೆ ಭೂಮಿಕೆಯಾಗಿರುವ ಪರಿಸರವನ್ನು ಕಣ್ಣೆದುರಿಗಿಡುತ್ತ, ಆ ಮೂಲಕ ಘಟನೆಗಳನ್ನು ನಿಯಂತ್ರಿಸುವ ಪರಿಸರದ ('ಪರಿಸರ' ಪದದ ಎಲ್ಲಾ ವ್ಯಾಪಕ ಅರ್ಥಗಳೊಡನೆ) ಬಗ್ಗೆ ಸೂಕ್ಷ್ಮವಾಗಿ ಆಲೋಚಿಸುವತ್ತ ಗಮನ ಸೆಳೆಯುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ. ಇಲ್ಲಿನ ವ್ಯಂಗ್ಯ ತೀರಾ ಮೊನಚಾದುದು. ಸೂಕ್ಷ್ಮವಾದ ವ್ಯಂಗ್ಯದಲ್ಲಿ ಬದುಕನ್ನು ಶೋಧಿಸಿ ಅದರ ಫಲಶ್ರುತಿಯನ್ನು ಓದುಗನಿಗೊಪ್ಪಿಸುವ ಕೌಶಲ ಅನನ್ಯ.

ಪಿ. ಶಶಿಕಲಾ ಅವರು ಈ ಕಾದಂಬರಿಯನ್ನು ಅಚ್ಚುಕಟ್ಟಾಗಿ ಅನುವಾದಿಸಿದ್ದಾರೆ. ಮೂಲದ ಸರ್ವಸ್ವವನ್ನೂ ಅವರು ಸೊಗಸಾಗಿ ಕನ್ನಡಿಸಿದ್ದಾರೆ. ಅನುವಾದ ಸ್ವತಂತ್ರ ಕೃತಿಯಂತೆ ಓದಿಸಿಕೊಳ್ಳುವುದರಲ್ಲಿ ಇದರ ಯಶಸ್ಸನ್ನು ಕಾಣಬಹುದಾಗಿದೆ. ಭಾಷೆ ಶೈಲಿ ಎರಡರಲ್ಲೂ ಶಶಿಕಲಾ ಮೂಲಕ್ಕೆ ಗಂಭೀರ ನಿಷ್ಠರಾಗಿದ್ದಾರೆ. ಆದರೆ ಕೆಲವೊಂದು ವಿಶಿಷ್ಟ ಪಾರಿಭಾಷಿಕ ಪದಗಳಿಗೆ (ಹಿಪ್ ಹಿಪ್ ಹುರ್ರೆ, ರೋಬೋಟ್ ಇತ್ಯಾದಿ) ಅಡಿಟಿಪ್ಪಣಿಯಲ್ಲಿ ಸಾಮಾನ್ಯ ಓದುಗನಿಗಾಗಿ ಅರ್ಥಕೊಡಬೇಕಿತ್ತು ಎನಿಸುತ್ತದೆ. ಒಟ್ಟಾರೆ ಶಶಿಕಲಾ ಅವರ ಅನುವಾದ ಉತ್ತಮವಾಗಿದೆ. ಪ್ರಸ್ತುತಕ್ಕೆ ಹೆಚ್ಚು ಮಹತ್ವದ್ದೆನಿಸುವ 'ಕತ್ತಲೆಯಿಂದ ಕಗ್ಗತ್ತಲೆಗೆ'ಯಂಥ ಭಾರತದ ಅತ್ಯುತ್ತಮ ಕೃತಿಗಳು ಎಲ್ಲಾ ಭಾಷೆಗಳಿಗೂ ಅನುವಾದವಾಗಬೇಕು. ಮನುಷ್ಯನನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವಲ್ಲಿ ಇಂಥ ಕೃತಿಗಳು ಮಹತ್ವದ ಪರಿಣಾಮ ಬೀರುತ್ತದೆ.

ಮೈಸೂರು ಕೃಷ್ಣಮೂರ್ತಿ

ಅಸಹಾಯಕರು : ಲೇಖಕರು ಡಿ. ಲಿಂಗಯ್ಯ ; ದಿನಕರ ಪ್ರಕಾಶನ ; ೬೯೦, ೭ನೇ ಬ್ಲಾಕ್, ಬನಶಂಕರಿ ೩ನೇ ಘಟ್ಟ, ಬೆಂಗಳೂರು-೮೫, ೧೯೯೨, ಪುಟ ಸಂಖ್ಯೆ ೨೦೦, ಬೆಲೆ ೩೦ ರೂ.ಗಳು.

'ಅಸಹಾಯಕರು' ಶ್ರೀ ಡಿ. ಲಿಂಗಯ್ಯನವರ ಒಂದು ಸಾಮಾಜಿಕ ಕಾದಂಬರಿ; ಇದು ೧೯೬೮ರಲ್ಲಿ ಮೊದಲು ಪ್ರಕಟಗೊಂಡಿದ್ದು, ಕೆಲವು ಪರಿಷ್ಕರಣಗಳೊಡನೆ ೧೯೯೨ರಲ್ಲಿ ಮತ್ತೆ ಪ್ರಕಟಣೆಯಾಗಿದೆ. ಒಟ್ಟು ೨೦೦ ಪುಟಗಳ ಈ ಕಾದಂಬರಿಯಲ್ಲಿ ೨೨ ಶೀರ್ಷಿಕೆಗಳಿವೆ.

ವಿಶ್ವವಿದ್ಯಾಲಯದ ಪರಿಸರದಲ್ಲಿ ಉನ್ನತ ಶೈಕ್ಷಣಿಕ ವ್ಯಾಸಂಗಾರ್ಥಿಗಳಾಗಿ ಬರುವ ಅನಂತ, ಚಂಚಲಾ ಮುಂತಾದ ವಿದ್ಯಾರ್ಥಿಗಳು ಪ್ರಾಧ್ಯಾಪಕ ರುದ್ರೇಗೌಡನ ಜಾತೀಯತೆ, ಕಾಮುಕತೆ, ದರ್ಪ ಮತ್ತು ಸ್ವಾರ್ಥ ಸಾಧನೆಗೋಸುಗ ಬಲಿಪಶುಗಳಾಗಿ ಅಸಹಾಯಕತೆಯಿಂದ ಊರುಗಳಿಗೆ ತೆರಳುವ ಸ್ಥಿತಿಗತಿಯ ಚಿತ್ರಣವೇ ಕಾದಂಬರಿಯ ವಸ್ತುವಾಗಿದೆ.

ಕಾದಂಬರಿಯ ನಾಯಕ ಅನಂತೇಗೌಡನು, ತಂದೆ ಮಾದೇಗೌಡನ ಸಾವೂ ಅಣ್ಣ ಶಂಕರೇಗೌಡನ ನಿಷ್ಠೂರ ಮೊದಲಾದ ಅಡ್ಡಿಆತಂಕಗಳಿಗೆ ಎದೆಗುಂದದೆ ಎಂ.ಎ., ಓದುವ ಉತ್ಕಟ ಆಕಾಂಕ್ಷಿಯಾಗಿ ಗಂಗೋತ್ರಿ ತಲುಪುವುದರೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಅನಂತ ಹಳ್ಳಿಯಿಂದ ಬಂದವನು. ಪ್ರತಿಭಾವಂತ, ವಿಚಾರವಂತ, ಸಾಹಿತ್ಯ ಪ್ರೇಮಿ. ಆದರ್ಶವಾಗಿರುವುದರ ಜೊತೆಗೆ ಸ್ವಾಭಿಮಾನಿ ಕೂಡ ಆಗಿರುತ್ತಾನೆ. ಆದರೆ ತನ್ನ ಎರಡುವರ್ಷದ ಓದು ಮುಗಿದು ಫಲಿತಾಂಶ ಪ್ರಕಟವಾಗುವಷ್ಟರಲ್ಲಿ, ಪ್ರಾಧ್ಯಾಪಕ ರುದ್ರೇಗೌಡನ ನೀಚತನಕ್ಕೆ ಬಲಿಯಾಗಿ ಸಾಮಾನ್ಯ ತೇರ್ಗಡೆಯೊಂದಿ ವ್ಯಸನದಿಂದ ತನ್ನೂರಿಗೆ ಅಸಹಾಯಕನಾಗಿ ಮರಳುತ್ತಾನೆ; ಹೀಗೆ ಕಥೆ ಕೊನೆಗೊಳ್ಳುತ್ತದೆ.

ಪ್ರಧಾನ ಪಾತ್ರವಾಗಿರುವ ಚಂಚಲಾ ಕೂಡ ಅನಂತನಂತೆ ಯಾವ ಆದರ್ಶ ಇತ್ಯಾದಿಗಳ ಗುಣಹೊಂದಿಲ್ಲದಿದ್ದರೂ ಎಂ. ಎ., ಓದಲು ಬಂದವಳು. ಈಕೆ ಸುಂದರಿ; ಬಹಳ ವ್ಯವಹಾರ ಚತುರೆ. ಕಂಡವರೊಡನೆ ಸರಸದಿಂದ ಸಲೀಸಾಗಿ ಬೆರೆಯುವ, ಹೆಸರಿಗೆ ತಕ್ಕನಾದ ಸ್ವಭಾವದವಳು. 'ರೂಪದೇವತೆ' 'ಬಣ್ಣದ ಚಿಟ್ಟೆ'—ಎಂದೆಲ್ಲಾ ಸಹ್ಯಾದ್ರಿ ಕಾಲೇಜಿನಲ್ಲಿ ಅಡ್ಡಹೆಸರುಗಳಿಗೆ ವಾರಸುದಾರಳಾಗಿದ್ದೂ ತನ್ನೂರಿನ ಕಡೆಯ ಶ್ರೀಮಂತ ಹುಡುಗ ಮಾಧವನಾಯಕನ ಪ್ರೇಯಸಿ. ತರಗತಿಯಲ್ಲಿನ ಚರ್ಚೆ ಹಾಗೂ ಗೋಷ್ಠಿಗಳಲ್ಲಿ ಕ್ರಿಯಾಶೀಲನಾಗಿರುತ್ತಿದ್ದ ಅನಂತನ ಬುದ್ಧಿವಂತಿಕೆಗೆ ಮೆಚ್ಚಿ ಆತನ ಸಹಜ ಸ್ನೇಹವನ್ನೂ ಅನುಕಂಪವನ್ನೂ ಸಂಪಾದಿಸಿಕೊಂಡಿರುತ್ತಾಳೆ. ಕಾದಂಬರಿಯ ಆರಂಭದಲ್ಲಿ ಅನಂತ ಮತ್ತು ಚಂಚಲರ ರೈಲುನಿಲ್ದಾಣದ ಮೊದಲ ಭೇಟಿ ಸಿನಿಮೀಯ ರೀತಿಯಂತಿದೆ. ಕೊನೆಯಲ್ಲಿ ಚಂಚಲ ಪ್ರಾಧ್ಯಾಪಕ ರುದ್ರೇಗೌಡನ ಹಾಸಿಗೆಯಲ್ಲಿ ಅವನ ಕಾಮುಕತನಕ್ಕೆ ಬಲಿಯಾಗುತ್ತಾಳೆ; ಅದರ ಸಲುವಾಗಿ ಇಡೀತರಗತಿಗೆ ಮೊದಲದರ್ಜೆಯಲ್ಲಿ ತೇರ್ಗಡೆಹೊಂದಿ ಗೆಲುವಿನಿಂದ ಹಿಂದಿರುಗುತ್ತಾಳೆ. ಪ್ರೇಮಿ ಮಾಧವನಾಯಕನ ಸಂಗಡ ಅಲೆದಾಡಿ ಯೌವನದ ಸುಖ ಅನುಭವಿಸಿದ್ದರೂ ರುದ್ರೇಗೌಡನ ಮೃಗೀಯ ಭೋಗವರ್ತನೆ ಆಕೆಗೆ ಯಾತನೆ ಮತ್ತು ಪಶ್ಚಾತ್ತಾಪ ಪಡುವಂತೆ ಮಾಡಿದೆ ಎಂದೆನಿಸಿದರೂ "ಉತ್ತಮ ದರ್ಜೆಯ ತೇರ್ಗಡೆ, ಒಳ್ಳೆಯ ನೌಕರಿ"ಯ ಆಸೆಗಾಗಿ ತನ್ನನ್ನೇ ಮಾರಿಕೊಳ್ಳುವ ಆದರ್ಶವೇ ಅವಳಿಗೆ ದೊಡ್ಡದಾಗಿದೆ.

"ನನ್ನ ಮಗಳು ರಾಜೇಶ್ವರಿಯನ್ನು ಮದುವೆ ಮಾಡಿಕೊ, ನಿನಗೆ—ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುತ್ತದೆ, ಜೊತೆಗೆ ಒಳ್ಳೆಯ ನೌಕರಿಯನ್ನು ಕೊಡಿಸು ತ್ತೇನೆ"—"ಕೊನೆ ಪರೀಕ್ಷೇಲಿ ಸರಿಪಡಿಸ್ತೇನಿ. ನೀವೆ ಫಸ್ಟ್‌ಬರುವ ಹಾಗೆ ಮಾಡುತ್ತೀನಿ"—ರುದ್ರೇಗೌಡ ಕಾದಂಬರಿಯ ಬೇರೆ ಬೇರೆ ಸಂದರ್ಭಗಳಲ್ಲಿ ಅನಂತ ನೊಡನೆ ಆಡುವ ಮಾತುಗಳ ಸ್ಯಾಂಪಲ್ಸ್: ಇದರಿಂದ ಆ ಪಾತ್ರದ ನೀಚ ಸ್ವರೂಪ ಸುಲಭವಾಗಿ ತಿಳಿಯಬಹುದಾಗಿದೆ. ಅಧ್ಯಾಪಕರಾದ ಕುಳ್ಳಪ್ಪ, ಕೃಷ್ಣೇಗೌಡ, ಕರಿಬಸಪ್ಪ, ಶಿವಸ್ವಾಮಿಗಳು ಇದ್ದರೂ ರುದ್ರೇಗೌಡನ ಚೇಲಾಗಳಂತೆ ವರ್ತಿಸುತ್ತಾ ದನಿಕಳೆದುಕೊಂಡಿರುವ ಅಸಹಾಯಕರು; ಆದರೆ ಸುಬ್ಬಣ್ಣ, ರಾಜಾರಾವ್‌ರಂಥ ಹೃದಯವಂತ ಗುರುಗಳ ಒಂದೆರಡು ಪಾತ್ರ ಚಿತ್ರಣವೂ ಇದೆ. ವಿಕೃತ ಲೈಂಗಿಕ ಕ್ರಿಯೆಗೆ ಬಲಿಯಾಗಿ ಅಪಾಯ ತಂದುಕೊಳ್ಳುವ ಕಾವೇರಿ, ಇವಳ ಗೆಳತಿಯರಾದ ಮಾಯಾವತಿ, ಲೀಸಾ, ಚಂಚಲಾರ ಗುಣ ಶೀಲಗಳ ನಿರೂಪಣೆ ಮಾಡಲಾಗಿದೆ. ಅನಂತ, ಆನಂದ, ಶ್ರೀನಿವಾಸ ಐತಾಳ, ಸೀನಿಯರ್ ವಿದ್ಯಾರ್ಥಿ ರಾಮದೇವ ಮೊದಲಾದ "ಸೋಮಾರಿ ಕಟ್ಟೆ"ಯ ಹರಟೆ ಸದಸ್ಯರ ದೃಷ್ಟಿ, ಧೋರಣೆಗಳ ನಿರೂಪಣೆಯಿದೆ. ಮಹಾರಾಜರ ಕಾಲದ ದಸರಾ ವೈಭವದ ವರ್ಣನೆ ನಿಜಕ್ಕೂ ಖುಷಿಕೊಡುವ ಸಂಗತಿ, ಹಿಂದಿ ವಿರೋಧ ಚಳುವಳಿ, ರ್‍ಯಾಗಿಂಗ್ ಹಾವಳಿಗಳಂಥ ನಿರೂಪಣೆ ವರದಿಗಳಂತಿವೆ. ಕಾದಂಬರಿಯ ಒಟ್ಟು ಬರವಣಿಗೆಯೇ ಒರಟು; ಹಸಿ ಹಸಿಯಾದ ಅಭಿವ್ಯಕ್ತಿ. ಸೊಪ್ಪು ತಿಂದು ರೇಷ್ಮೆಗೂಡು ಕಟ್ಟಿಕೊಟ್ಟಿದ್ದರೆ .... !

ಇದರಲ್ಲಿ ಅನಂತ ಮೊದಲ್ಗೊಂಡು ಎಲ್ಲರೂ ಅಸಹಾಯಕರೆ; ನಿಜ. ಆದರೆ ಹೆಸರಿಗೆ ತಕ್ಕನಾದ ಕಥೆ ಹೊಸೆಯುಲೋಸುಗ ಸಂಘರ್ಷ-ಸಮಸ್ಯೆಗಳ ಮುಖಾ ಮುಖಿಗೆ ತಾರದೆ ತೇಲಿಸುವ ಚಿತ್ರಣವೆನಿಸಿಬಿಡುವುದು ಈ ಕೃತಿಯ ಮಿತಿ. ರೋಚ ಕತೆಯಿಂದ ಓದಿಸಿಕೊಳ್ಳುವುದಷ್ಟೆ ಈ ಕಾದಂಬರಿಯ ಮಹತ್ವ.

ಎಲ್. ರಾಜಶೇಖರಯ್ಯ

ಶರಣ ಧರ್ಮದಲ್ಲಿ ವಿಶ್ವತತ್ವದ ಮೌಲ್ಯಗಳು: (ಶ್ರೀ ಮೃತ್ಯುಂಜಯ ವ್ಯಾಖ್ಯಾನ ಮಾಲೆ ವಿಶೇಷೋಪನ್ಯಾಸಗಳು) ಡಾ. ಎ. ಎಲ್. ಶಿವರುದ್ರಪ್ಪ, ಪ್ರಸಾರಾಂಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ, ಪು. ೧೨೨.

ಶ್ರೀ ಮೃತ್ಯುಂಜಯ ವ್ಯಾಖ್ಯಾನ ಮಾಲೆಯ ವಿಶೇಷೋಪನ್ಯಾಸಗಳಲ್ಲಿ ಮೂಡಿ ಬಂದ ಕೃತಿ 'ಶರಣ ಧರ್ಮದಲ್ಲಿ ವಿಶ್ವ ತತ್ವದ ಮೌಲ್ಯಗಳು'. ತತ್ವಶಾಸ್ತ್ರ ಪ್ರಾಧ್ಯಾಪಕ ರಾಗಿ ನಿವೃತ್ತರಾದ ಡಾ. ಎ. ಎಲ್. ಶಿವರುದ್ರಪ್ಪನವರು ಶರಣ ಧರ್ಮವನ್ನು

ಕುರಿತಂತೆ ಹಲವು ವಿಷಯುಗಳನ್ನು ವಿಶೇಷಗಳನ್ನು ಇದರಲ್ಲಿ ಚರ್ಚಿಸಿದ್ದಾರೆ. ಈ ಪುಸ್ತಕದಲ್ಲಿ ಶರಣ ಧರ್ಮ ಹಾಗೂ ವಿಶ್ವಧರ್ಮ, ಪಾಶ್ಚಿಮಾತ್ಯದರ್ಶನದ ಹಿನ್ನೆಲೆಯಲ್ಲಿ ಶರಣರ ಅನುಭವದ ವಿಶ್ಲೇಷಣೆ, ಶರಣತತ್ವದ ತುಲನಾತ್ಮಕ ಚಿಂತನೆ, ಶರಣಧರ್ಮದಲ್ಲಿ ಕಾಣುವ ಭೌತಾತೀತ ಸಿದ್ಧಾಂತ, ಶರಣರು ಕಂಡ ಸಾಮಾಜಿಕ ದರ್ಶನ, ಶರಣಧರ್ಮದಲ್ಲಿ ಕಾಣುವ ನೈತಿಕತೆ–ಎಂಬ ಆರು ಲೇಖನಗಳಿವೆ.

ಭಾರತೀಯ ದರ್ಶನದಲ್ಲಿ ಮತವನ್ನು ಒಂದು ಧರ್ಮವಾಗಿ, ಒಂದು ದರ್ಶನವಾಗಿ ಹೇಗೆ ಭಾವಿಸುತ್ತಾರೆಂಬುದನ್ನು ಡಾ. ಶಿವರುದ್ರಪ್ಪನವರು ವಿವರಿಸಿದ್ದಾರೆ. ಧರ್ಮದ ಉಗಮ, ಬುಡಕಟ್ಟುಧರ್ಮ, ಪುರೋಹಿತಶಾಹಿಧರ್ಮ, ವಿಶ್ವಧರ್ಮ ಮುಂತಾದವನ್ನು ' ಪ್ರವೇಶ'ದಲ್ಲಿ ವಿವರಿಸಲಾಗಿದೆ. ಧರ್ಮದ ವಿಕಾಸದಲ್ಲಿ ಮೂರು ಘಟ್ಟಗಳನ್ನು ಗುರುತಿಸಿದ್ದಾರೆ. " ವಿಶ್ವಧರ್ಮ ಎಂದರೆ ಮಾನವನ ಒಳಿತಿಗೆ ನೆರವಾಗುವ ಮಾನವೀಯ ಮೌಲ್ಯಗಳನ್ನು ಒಳಗೊಂಡಂತಹ ಒಂದು ಧರ್ಮ". ಮೂಲತಃ ನೀತಿಪ್ರಧಾನವಾದ ಶರಣಧರ್ಮ ವಿಶ್ವಧರ್ಮದ ನೆಲೆಯನ್ನು ಹೇಗೆ ಮುಟ್ಟಿದೆ ಎಂಬುದನ್ನು ಲೇಖಕರು ಸಮರ್ಪಕವಾಗಿ ನಿರೂಪಿಸಿದ್ದಾರೆ. ಅನುಭವ ಪ್ರಧಾನವಾದ ಈ ಶರಣಧರ್ಮ ವಿಶ್ವಧರ್ಮದ ಅನೇಕ ಗುಣಗಳನ್ನು ಪಡೆದಿರುವುದರಿಂದ ಪಂಡಿತ ಪಾಮರರಲ್ಲೂ ಜನಪ್ರಿಯವಾಯಿತು.

ಎರಡನೆಯ ಲೇಖನದಲ್ಲಿ ಪಾಶ್ಚಿಮಾತ್ಯ ದರ್ಶನದ ಹಿನ್ನೆಲೆಯಲ್ಲಿ ಶರಣರ ಅನುಭವದ ವಿಶ್ಲೇಷಣೆ ಮಾಡಲಾಗಿದೆ. ದೇವರು ಮತ್ತು ಆತ್ಮ ಇವುಗಳ ನಂಬಿಕೆಗೆ ಇರುವ ಆಧಾರಗಳನ್ನು ಶ್ರುತಿ ಮತ್ತು ಮತಿ, ವೇದ ಮತ್ತು ವಾದ ಎರಡು ಗುಂಪುಗಳಲ್ಲಿ ವಿಂಗಡಿಸಿದ್ದಾರೆ. ಉಪನಿಷತ್ತು, ಬೈಬಲ್, ಕುರಾನ್ ಮುಂತಾದ ಗ್ರಂಥಗಳನ್ನು ಶ್ರುತಿಗಳೆಂದಿದ್ದಾರೆ. ಇವುಗಳ ಆಧಾರದಿಂದ ದೇವರ ಮತ್ತು ಆತ್ಮದ ಅಸ್ತಿತ್ವವನ್ನು ತಿಳಿಯಲು ಪೌರ್ವಾತ್ಯ, ಪಾಶ್ಚಿಮಾತ್ಯ ದಾರ್ಶನಿಕರು ಪ್ರಯತ್ನಿಸಿದ್ದಾರೆ; ಅನೇಕ ವಾದಗಳನ್ನು ಮಂಡಿಸಿದ್ದಾರೆ.

"ಭಗವಂತನ ಸಾಕ್ಷಾತ್ಕಾರವನ್ನು ಸಾಕಾರ ರೂಪದಲ್ಲಿಯೋ ಅಥವಾ ಅಂತರಂಗದಲ್ಲಿ ಲಭಿಸುವ ಆನಂದಭರಿತವಾದ ದಿವ್ಯಾನುಭವದ ರೂಪದಲ್ಲಿಯೋ ಪಡೆದವರನ್ನು ಅನುಭಾವಿಗಳು " ಎಂದಿದ್ದಾರೆ ವಿಲಿಯಂ ಜೇಮ್ಸ್. ಈತ ಬಳಸಿರುವ ಅರ್ಥದಲ್ಲೇ ಶರಣರು ಅನುಭಾವ ಎಂಬ ಪದವನ್ನು ಬಳಸಿದ್ದಾರೆ. ಇದಕ್ಕೆ ವಚನಗಳನ್ನು ಉದಾಹರಣೆಗಳಾಗಿ ಲೇಖಕರು ನೀಡಿದ್ದಾರೆ. "ಒಟ್ಟಿನಲ್ಲಿ ಶರಣರ ಅನುಭಾವವು ಪಾಶ್ಚಿಮಾತ್ಯ ದಾರ್ಶನಿಕರ ಕಲ್ಪನೆಯ ಅನುಭಾವದೊಂದಿಗೆ ಅನೇಕ ಸಾಮ್ಯಗಳನ್ನು ಪಡೆದಿರುವುದು ಮಾತ್ರವಲ್ಲದೆ ತಾನು ಬೆಳೆದ ವಿಶಿಷ್ಟ ಪರಿಸರದ ಪ್ರಭಾವದಿಂದ ತನ್ನದೇ ಆದ ಗುಣಧರ್ಮಗಳನ್ನು ಪಡೆದಿದೆ ಎಂಬ ಅಂಶವನ್ನು ಗಮನಿಸಬೇಕು " ಎಂದಿದ್ದಾರೆ ಲೇಖಕರು.

ಶರಣರ ತುಲನಾತ್ಮಕ ಚಿಂತನೆ ಎಂಬ ಲೇಖನದಲ್ಲಿ ಶರಣಧರ್ಮ ಹಾಗೂ ರಾಮಾನುಜರ ವಿಶಿಷ್ಟಾದ್ವೈತ, ಶಂಕರರ ಅದ್ವೈತ, ಬೌದ್ಧಧರ್ಮದ ಸಿದ್ಧಾಂತಗಳನ್ನು, ಹೋಲಿಸಿ ಅವುಗಳಿಗಿರುವ ವ್ಯತ್ಯಾಸವನ್ನು ಗುರುತಿಸಲಾಗಿದೆ. ಲಿಂಗಾಂಗ ಸಾಮರಸ್ಯಕ್ಕೆ (ಶಿವ–ಜೀವರ ಐಕ್ಯತೆ) ನೆರವಾಗುವ ಸಾಧನ ಮಾರ್ಗವೇ ಷಟ್‌ಸ್ಥಲ ಸಿದ್ಧಾಂತ ವೀರಶೈವದ ಉಗಮದ ಬಗ್ಗೆ 'ಆರ್ಯರಿಗಿಂತಲೂ ಹಿಂದೆಯೇ ಶೈವಾರಾಧನೆ ಇತ್ತು' ಎಂಬ ಪ್ರೊ. ಬಸವನಾಳರ ಅಭಿಪ್ರಾಯವನ್ನೇ ಲೇಖಕರು ಸಮರ್ಥಿಸಿದ್ದಾರೆ. ಹೆಗಲನ ಸಿದ್ಧಾಂತ, ಪ್ರತಿಸಿದ್ಧಾಂತ ಮತ್ತು ಸಮನ್ವಯ ಸಿದ್ಧಾಂತದ ಹಿನ್ನೆಲೆಯಲ್ಲಿ ವೀರಶೈವ ದರ್ಶನದ ವಿಕಾಸ ಮತ್ತು ಅದರ ಮೌಲ್ಯಗಳನ್ನು ಸೋದಾಹರಣವಾಗಿ ವಿವೇಚಿಸಿದ್ದಾರೆ.

ಆತ್ಮ, ದೇವರು, ಮೋಕ್ಷ, ವಿಶ್ವದ ಆದಿ, ಅಂತ್ಯ ಮುಂತಾದ ವಿಚಾರಗಳನ್ನು ಕುರಿತಂತೆ ನಡೆಯುವ ತರ್ಕಬದ್ಧ ಚಿಂತನೆಯೇ ಭೌತಾತೀತ ಸಿದ್ಧಾಂತ. ಜೀವ-ಜಡ, ಚೇತನ–ಅಚೇತನಗಳ ನಡುವಿನ ಸಂಬಂಧವನ್ನು ವಿವರಿಸಲು ಮೂರು ಸಿದ್ಧಾಂತಗಳು ಇವೆ. ಈ ಮೂರರಲ್ಲಿ ಚೇತನ ಶಕ್ತಿಯ ಪಾರಮ್ಯವನ್ನು ಒಪ್ಪುವವರದು ಒಂದು ಗುಂಪು, ಜಡವಸ್ತುವಿನ ನಿತ್ಯತೆಯನ್ನು ಒಪ್ಪುವವರದು ಮತ್ತೊಂದು ಗುಂಪು. ಮೂರನೆಯದು ಚೇತನ ಮತ್ತು ಜಡವಸ್ತುಗಳ ಭಿನ್ನತೆ ಹಾಗೂ ನಿತ್ಯತೆ ಒಪ್ಪಿ ಇವುಗಳ ಸಮನ್ವಯ ಸಾಧಿಸುವವರದ್ದು. ಇವುಗಳ ಹಿನ್ನೆಲೆಯಲ್ಲಿ ವೀರಶೈವ ಶರಣರ ದೇವರ ಸಾಕಾರ ನಿರಾಕಾರಗಳ ಸ್ವರೂಪವನ್ನು ಕುರಿತು ವಿಮರ್ಶಿಸಲಾಗಿದೆ. ಶಿವಶರಣರು ಭೌತ ಮತ್ತು ಭೌತಾತೀತ ಸಮಸ್ಯೆಗಳನ್ನು ಸಮನ್ವಯಗೊಳಿಸಿ ಸಮಗ್ರ ಜೀವನ ಸಿದ್ಧಾಂತವೊಂದನ್ನು ಹೇಗೆ ನೀಡಿದ್ದಾರೆಂಬುದನ್ನು ಈ ಲೇಖನ ತಿಳಿಸುತ್ತದೆ.

ಶರಣರ ಸಾಮಾಜಿಕ ನಿಲುವು ಮತ್ತು ಒಲವುಗಳೇನು ಎಂಬುದನ್ನು, ಶರಣರು ಕಂಡ ಸಾಮಾಜಿಕ ದರ್ಶನ ಎಂಬ ಲೇಖನ ನಿರೂಪಿಸುತ್ತದೆ. ಸಹಮಾನವರ ವಿಚಾರದಲ್ಲಿ ಪ್ರೀತಿ, ವಾತ್ಸಲ್ಯಗಳಿಂದ ವ್ಯವಹರಿಸಬೇಕೆಂಬುದನ್ನು ಸಾರಿದರು. ಶರಣರು ಸರ್ವಸಮಾನತೆಯನ್ನು ತಮ್ಮ ನಡೆನುಡಿಗಳಿಂದ ಹೇಗೆ ಸಾಧಿಸಿ ತೋರಿಸಿದರೆಂಬುದನ್ನು ವಚನಗಳನ್ನು ಉದ್ಧರಿಸುವ ಮೂಲಕ ಲೇಖಕರು ವಿವರಿಸಿದ್ದಾರೆ. ನೀತಿ ಮತ್ತು ಧರ್ಮ ಎಂಬುದು ಭಿನ್ನ ಸಂಸ್ಕಾರಗಳಂತೆ ಕಂಡರೂ ಶರಣರ ದೃಷ್ಟಿಯಲ್ಲಿ ಇವೆರಡೂ ಜೊತೆಗೂಡಿವೆ ಕರ್ಮಾಚರಣೆಯ ಸ್ಥಾನವನ್ನು ನೀತಿಗೆ ಕೊಟ್ಟಿದ್ದಾರೆ. ದಯೆಯಿಂದ ಹಿಡಿದು ಕಾಯಕದ ವರೆಗೆ ಮಾನವನ ಬದುಕಲ್ಲೆಲ್ಲ ನೀತಿಯ ಕಲ್ಪನೆ ಹರಡಿ ಹಬ್ಬಿದೆ.

ಈ ಪುಸ್ತಕದಲ್ಲಿ ಅಚ್ಚಿನ ದೋಷಗಳು ವಿಪರೀತ ಇವೆ. ಆದರೂ ಶರಣಧರ್ಮದ ಮೂಲತತ್ತ್ವಗಳನ್ನು ಸಮೀಕ್ಷಿಸುವುದರೊಂದಿಗೆ ಅದರಲ್ಲಿರುವ ವಿಶ್ವತತ್ತ್ವದ ಮೌಲ್ಯಗಳನ್ನು ನಿರೂಪಿಸುವುದರಲ್ಲಿ ಡಾ. ಎ. ಎಲ್. ಶಿವರುದ್ರಪ್ಪನವರು ಯಶಸ್ವಿ

ಬರೆಗಿದ್ದಾರೆ ಭಾರತೀಯ ದರ್ಶನದ ಹಿರಿಮೆ ಹಾಗೂ ಪಾಶ್ಚಾತ್ಯ ತತ್ತ್ವಗಳ ಪರಿಚಯವನ್ನು ನೀಡಿರುವ ಈ ಕೃತಿ ಶರಣಧರ್ಮದ ವಿಶ್ವಜನೀನ ತತ್ತ್ವವನ್ನು ಅರಿಯಲು ನೆರವಾಗುವುದು.

ಡಾ. ಅಕ್ಕಮಹಾದೇವಿ

ಭೂಮಿ ತೂಕದ ಮಾತು : ಲೇಖಕರು ಡಾ. ಪಿ. ಕೆ. ರಾಜಶೇಖರ, ೧೯೯೧, ಕಿರಣ ಕಿಶೋರ ಪ್ರಕಾಶನ, ಸಂಖ್ಯೆ ೮೩೭, ಮೂರನೆ ತಿರುವು, ಪೈಪ್ ಲೈನ್, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್.–೫೬೩೧೨೨, ಬೆಲೆ ರೂ. ೬೫–೦೦ ಪುಟ ೧೬೬.

ಭೂಮಿ ತೂಕದ ಮಾತು—ಡಾ. ಪಿ. ಕೆ. ರಾಜಶೇಖರ ಅವರು ಸಂಗ್ರಹಿಸಿರುವ ಗಾದೆಗಳ ಒಂದು ಸಂಕಲನವಾಗಿದೆ. ಅವರ ಈ ಕೃತಿಗೆ ಶ್ರೀ ಶಿವರಾಮು ಕಾಡನಕುಪ್ಪೆ ಅವರು ವಿಚಾರ ಪೂರ್ಣ ಮುನ್ನುಡಿಯನ್ನು ನೀಡಿದ್ದಾರೆ. ಪ್ರಸ್ತುತ ಕೃತಿಯು ೧೫೦೧ ಗಾದೆಗಳನ್ನು ಹೊಂದಿದ್ದು, ಬಹುಪಾಲು ಗ್ರಾಮೀಣ ಪರಿಸರದ ಬದುಕನ್ನು ಕುರಿತದ್ದಾಗಿದೆ. ಲೇಖಕರ ಈ ಪ್ರಯತ್ನ ಗಾದೆಗಳ ಕ್ಷೇತ್ರದಲ್ಲಿ ಪ್ರಥಮದ್ದೇನೂ ಅಲ್ಲ. ಅವರೇ ತಿಳಿಸುವಂತೆ ಈಗಾಗಲೇ ಇತರ ಹಿರಿಯ ವಿದ್ವಾಂಸರುಗಳು ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಅಲ್ಲದೆ ಸಂಗ್ರಹ ಕಾರ್ಯವೂ ಸಂಪೂರ್ಣವಾಗಿದೆ ಎನಿಸಿದರೂ, ಹೆಕ್ಕಿದಷ್ಟೂ ಮತ್ತಷ್ಟು ಸಿಗಬಹುದಾದ ಸಂದರ್ಭವು ಇನ್ನೂ ಇದೆ ಎನ್ನುವ ಅಭಿಪ್ರಾಯವನ್ನು ಸೂಚಿಸುತ್ತಾರೆ. ಇದರ ಜೊತೆಗೆ ಅವರ ಈ ಕೃತಿ ಕೆಲವು ವಿಚಾರಗಳ ಹಿನ್ನೆಲೆಯಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಅದೇನೆಂದರೆ ಮಾನವ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಜಾನಪದ ಮತ್ತು ಮಾನವ ಶಾಸ್ತ್ರಜ್ಞರಿಗೆ ಈ ಕೃತಿಯು ಉಪಯುಕ್ತ ಮಾಹಿತಿಯನ್ನು ಒದಗಿಸಿ ಕೊಡುವುದರಲ್ಲಿ ಸಂಶಯವೇ ಇಲ್ಲ. ಈವರೆಗಿನ ಸಂಗ್ರಹಗಳು ಮಾನವನ ಎಲ್ಲಾ ಸಂವೇದನೆಗಳನ್ನು ಒಳಗೊಳ್ಳುತ್ತವೆ ಎಂದು ಹೇಳಲಾಗದಿದ್ದರೂ, 'ಭೂಮಿ ತೂಕದ ಮಾತು' ಕೃತಿಯಲ್ಲಿನ ಬಹುಪಾಲು ಗಾದೆಗಳು ಮಾನವನ ಕೆಲವು ಸೂಕ್ಷ್ಮ ಎನಿಸುವ ಸಂವೇದನೆಗಳನ್ನು ಒಳಗೊಳ್ಳುತ್ತದೆ. ಲಿಂಗ ಭೇದದ ಆಧಾರದ ಮೇಲೆ ಜಾನಪದ ಸಾಮಗ್ರಿಗಳನ್ನು ಅಧ್ಯಯನ ಮಾಡುವ ಜಾನಪದ ವಿದ್ವಾಂಸರಿಗೆ ಪ್ರಸ್ತುತ ಕೃತಿಯಲ್ಲಿನ ಬಹುಪಾಲು ಗಾದೆಗಳು ಉಪಯುಕ್ತವಾಗುತ್ತದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರಸ್ತುತ ಕೃತಿಯ ಮುನ್ನುಡಿಯಲ್ಲಿ ಇತರ ಗಾದೆಗಳಿಗಿಂತ ಇಲ್ಲಿಯ ಗಾದೆಗಳು ಅಶ್ಲೀಲ ಎಂಬ ಒಂದೇ ದೃಷ್ಟಿಯಿಂದ ಪ್ರತ್ಯೇಕವಾಗುತ್ತದೆ

ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಒಂದು ಸಂಸ್ಕೃತಿಯ ಅಧ್ಯಯನವನ್ನು ಕೈಗೊಂಡಾಗ ಶ್ಲೀಲ, ಅಶ್ಲೀಲ ಎಂಬ ಭೇದಗಳೇ ಕಾಣಬರುವುದಿಲ್ಲ, ಈ ಭೇದಗಳು ಸಾಮಾನ್ಯವಾಗಿ ನೋಡುವವರ ಕಣ್ಣಿನಲ್ಲಿ ಅವರ ವಿದ್ವತ್ತಿನ ಆಳದಲ್ಲಿ ಇರಬಹುದು. ವಸ್ತುನಿಷ್ಠವಾಗಿ ನೋಡಿದಾಗ ಅವುಗಳು ಸಹಜವಾಗಿಯೇ ಗೌಣ ಎನಿಸಿಬಿಡುತ್ತವೆ. ಪ್ರಸ್ತುತ ಕೃತಿಯಲ್ಲಿ ಹೆಣ್ಣಿನ ಸಂವೇದನೆಗಳನ್ನು ಗುರುತಿಸಬಹುದಾದರೆ ಹೊಸ್ರಾಗಿ ಹಿಟ್ಬ್ಯಾದ್ರೆ ಎಸ್ರೆ ಬ್ಯಾಡ, ಕೆಂಪೀನಿ ಗಂಡಾದ್ರೆ ಒಡ್ವೇನೆ ಬ್ಯಾಡ ಎನ್ನುವಲ್ಲಿ ಓರ್ವ ಹೆಣ್ಣಿನ ಸೂಕ್ಷ್ಮವಾದ ಭಾವನೆಗಳ ಕಡೆ ನಮ್ಮ ಗಮನ ಹರಿಯುತ್ತದೆ. ಇನ್ನೊಂದು ಗಾದೆ–ಹೆಂಡ್ತಿ ಬಂದ್ಮೇಲೆ ಹೆತ್ತೋರ್ನ ಹೊಡುದ್ನಂತೆ. ಇಲ್ಲಿ ಓರ್ವ ತಾಯಿ ತನ್ನ ಮಗನ ಪ್ರೀತಿಯಿಂದ ವಂಚಿತಳಾದ ರೀತಿಯನ್ನು ಹೇಗೆ ಜನಪದರು ಅನುಭವಿಸುತ್ತಾರೆ ಎಂಬುದು ತಿಳಿದುಬರುತ್ತದೆ. ಒಂದೇ, ಎರಡೇ ಈ ಸಾವಿರದ ಐನೂರ ಒಂದು ಗಾದೆಗಳೂ ಒಂದಲ್ಲ ಒಂದು ರೀತಿಯಲ್ಲಿ ಅಧ್ಯಯನಕ್ಕೆ ವಸ್ತುವಾಗುತ್ತವೆ. ಒಟ್ಟಾರೆ ಗಾದೆಗಳನ್ನು 'ಅ' ಕಾರದಿಂದ 'ಹ' ಕಾರದವರೆಗೂ ಸಂಗ್ರಹಿಸಿಕೊಟ್ಟಿರುವ ಕೀರ್ತಿ ಲೇಖಕರಿಗೆ ಸಲ್ಲಬೇಕು. ಕಾರಣ ಇವುಗಳನ್ನು ಸಂಗ್ರಹಿಸುವ ಕೆಲಸವೇ ಬಹಳ ತ್ರಾಸದಾಯಕವಾದುದು. ಓದುಗರನ್ನು ಗಂಭೀರವಾಗಿ ಓದಿಸಿಕೊಂಡುಹೋಗುವ ಈ ಸಂಕಲನ ಒಂದು ಅಪರೂಪದ ಕೃತಿ ಎಂದು ಹೇಳಬಹುದು.

ಎ. ಸಿ. ಲಲಿತಾ

ಕೆ.ಸಂ. ೪೩೩೪—ಎಂ.ಯು.ಪಿ.ಎಂ.—೧೦೦೦ + ೨೫ ಪ್ರತಿಗಳು—೨೩-೧೧-೯೬

ಸಂಮಾತು

ಪ್ರಬುದ್ಧ ಕರ್ಣಾಟಕ ಪತ್ರಿಕೆ ೧೯೧೯ರಲ್ಲಿ ಸಿದ್ಧಾರ್ಥಿ ಸಂವತ್ಸರದ ಯುಗಾದಿಯಲ್ಲಿ ಆರಂಭವಾಯಿತು. ಆದರೆ ಇಂಥದೊಂದು ಪತ್ರಿಕೆಯ ಕನಸನ್ನು ಮೊದಲಿಗೆ ಕಂಡವರು ಬೆಂಗಳೂರಿನ ನಿರ್ಮಲಾನಂದ ಸ್ವಾಮಿಗಳು. ಇಂಥ ಕನಸು ಇವರಲ್ಲಿ ಮೂಡಲು ಮುಖ್ಯ ಕಾರಣ, ಆಗಲೇ ಇಂಗ್ಲಿಷ್ ಭಾಷೆಯಲ್ಲಿ 'ಪ್ರಬುದ್ಧ ಭಾರತ' ಎಂಬ ಪತ್ರಿಕೆ ಇತ್ತು. ಅದೇ ರೀತಿ ಮಲೆಯಾಳಂ ಭಾಷೆಯಲ್ಲಿ 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆ ಬರುತ್ತಿತ್ತು. ಕನ್ನಡದಲ್ಲಿ ಇಂಥದೇ ಒಂದು ಪತ್ರಿಕೆ ಇರಬೇಕು ಎಂದು ಮನಮಾಡಲು ಕಾರಣವಾಗಿತ್ತು. ಇವರ ಸಂಪರ್ಕವನ್ನು ಹೊಂದಿದ್ದ ಕೃಷ್ಣಶಾಸ್ತ್ರಿಗಳು ೧೯೧೪ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘವನ್ನು ಸ್ಥಾಪಿಸಿದರು. ೧೯೧೯ರಲ್ಲಿ ಈ ಸಂಘದಿಂದಲೇ 'ಪ್ರಬುದ್ಧ ಕರ್ಣಾಟಕ' ಪತ್ರಿಕೆ ಆರಂಭವಾಯಿತು. ಇದರ ಮೊದಲ ಸಂಚಿಕೆಯಲ್ಲಿ ಎಸ್. ವಿ. ರಂಗಣ್ಣ, ಸಿ. ಕೆ. ವೆಂಕಟರಾಮಯ್ಯ ಮತ್ತು ನೀಲಕಂಠಪ್ಪನವರ ಲೇಖನಗಳು ಪ್ರಕಟವಾಗಿದ್ದವು. ೧೯೩೨ರಲ್ಲಿ ಈ ಪತ್ರಿಕೆಯನ್ನು ಮೈಸೂರು ವಿಶ್ವವಿದ್ಯಾನಿಲಯ ಕೈಗೆತ್ತಿಕೊಂಡಿತು. ಇದಕ್ಕೆ ಮುಖ್ಯ ಕಾರಣ ಆರ್ಥಿಕ ಮುಗ್ಗಟ್ಟು. ವಿಶ್ವವಿದ್ಯಾನಿಲಯ ಪತ್ರಿಕೆಗೆ ಸಂಪಾದಕ ಮಂಡಳಿಯೊಂದನ್ನು ನೇಮಿಸಿ ಮುಂದುವರೆಸಿತು.

ಈ ಪತ್ರಿಕೆ ಬೆಳ್ಳಿ ಹಬ್ಬ, ಸ್ವರ್ಣಮಹೋತ್ಸವಗಳೆರಡನ್ನೂ ಆಚರಿಸಿಕೊಂಡು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಕನ್ನಡದ ಹಲವಾರು ವಿದ್ವಾಂಸರು ಈ ಪತ್ರಿಕೆಯ ಕುರಿತು ಕೊಂಡಾಡಿದ್ದಾರೆ. ಇದರ ಐತಿಹಾಸಿಕ ನೆಲೆಯನ್ನು ಕೂಲಂಕುಷವಾಗಿ ವಿಶ್ಲೇಷಿಸಿದ್ದಾರೆ. ಅವುಗಳಲ್ಲಿ ಹಾ. ಮಾ. ನಾಯಕ ಅವರ ಲೇಖನ ಗಮನಾರ್ಹವಾದುದು.

ಇದನ್ನೆಲ್ಲ ಈಗ ಇಲ್ಲಿ ಬರೆಯಲು ಕಾರಣವೆಂದರೆ—ಇಂಥ ಐತಿಹಾಸಿಕ ನೆಲೆಯುಳ್ಳ ಈ ಪತ್ರಿಕೆ ಕುಂಟುತ್ತ ಹೊರಬರುತ್ತಿದೆ. ಅದಕ್ಕೆ ಯಾರೊಬ್ಬರ ಮೇಲೆ ಅಪವಾದ ಹೊರಿಸಿದರೆ ಸಾಲದು. ಇದಕ್ಕೆ ಸಂಬಂಧಿಸಿದವರೆಲ್ಲ ಹೊಣೆಗಾರರೇ ಆಗಿದ್ದಾರೆ.

ಈ ಪತ್ರಿಕೆ ಹೆಚ್ಚು ಕ್ರಿಯಾಶೀಲವಾಗಲಿ ಎನ್ನುವ ಉದ್ದೇಶದಿಂದ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲ ನಿಯತಕಾಲಿಕಗಳ ಸಂಪಾದಕತ್ವದ ಸ್ವರೂಪ ಒಂದೆ ಬಗೆಯಾಗಿರಲಿ ಎನ್ನುವ ಉದ್ದೇಶದಿಂದ ಮಾನವಿಕ ಕರ್ಣಾಟಕ, ಪ್ರಬುದ್ಧ ಕರ್ಣಾಟಕ, ವಿಜ್ಞಾನ ಕರ್ಣಾಟಕ ಪತ್ರಿಕೆಗಳ ಸಂಪಾದಕತ್ವದಲ್ಲಿ ಬದಲಾವಣೆಯನ್ನು

ತರಲಾಗಿದೆ. ಸಂಪಾದಕ ಹಾಗೂ ಪ್ರಧಾನ ಸಂಪಾದಕತ್ವ ಪದ್ಧತಿಯನ್ನು ಕೈಬಿಟ್ಟು ಅಧ್ಯಕ್ಷ ಮತ್ತು ಐದು ಜನ ಸದಸ್ಯರನ್ನೊಳಗೊಂಡ ಸಂಪಾದನ ಸಮಿತಿಯನ್ನು ರೂಪಿಸಲಾಗಿದೆ. ಸಂಪಾದಕರ ಬದಲಾಗಿ ಸಂಪಾದನ ಸಮಿತಿ ಮಾಡುವುದರಿಂದ ಪತ್ರಿಕೆ ಸಮಯಕ್ಕೆ ತಕ್ಕಂತೆ ಹೊರಬಂದೇ ಬರುತ್ತದೆಂದು ನಿಖರ ಹೇಳಲು ಸಾಧ್ಯವಾಗದಿದ್ದರೂ ಆ ನಿಟ್ಟಿನಲ್ಲಿ ಇದೂ ಒಂದು ಸಣ್ಣ ಪ್ರಯತ್ನವಾಗಿದೆ. ಈ ಪ್ರಯತ್ನದಲ್ಲಿ ನಾವು ಯಶಸ್ವಿಯಾಗುತ್ತೇವೆಂಬ ಆತ್ಮವಿಶ್ವಾಸವೂ ನಮ್ಮಲ್ಲಿದೆ.

ಈ ಸಂಚಿಕೆಯಿಂದ ಹೊಸ ಸಂಪಾದಕ ಮಂಡಳಿ ಈ ರೀತಿ ಜಾರಿಯಲ್ಲಿ ಬಂದಿದೆ.

ಅಧ್ಯಕ್ಷರು : ಡಾ. ಅರವಿಂದ ಮಾಲಗತ್ತಿ

ಸದಸ್ಯರು : ಡಾ. ಸಿ. ಪಿ. ಸಿದ್ಧಾಶ್ರಮ
ಡಾ. ಎಂ. ಆರ್. ವೀರಭದ್ರಸ್ವಾಮಿ
ಡಾ. ಆರ್. ವಿ. ಎಸ್. ಸುಂದರಂ
ಡಾ. ರಾಮಚಂದ್ರ
ಡಾ. ಎನ್. ಎಸ್. ತಾರಾನಾಥ

ಹೀಗೆ ಅಧ್ಯಕ್ಷ ಮತ್ತು ಸದಸ್ಯರನ್ನೊಳಗೊಂಡ ಈ ಸಮಿತಿ ಇದ್ದಾಗಲೂ ಕೆಲಸದ ಅನುಕೂಲಕ್ಕಾಗಿ ಇಬ್ಬರ ಸಂಪಾದಕತ್ವದಲ್ಲಿ ಒಂದೊಂದು ಸಂಚಿಕೆಯನ್ನು ತರುವಂತೆ ನಿರ್ಣಯಿಸಲಾಗಿದೆ. ಅದೇ ರೀತಿ ಈಗಿನ ಸಂಚಿಕೆಯನ್ನು ಶ್ರೀ ಆರ್. ವಿ. ಎಸ್. ಸುಂದರಂ, ಡಾ. ಎಂ. ಆರ್. ವೀರಭದ್ರಸ್ವಾಮಿ ಇವರು ಸಿದ್ಧಪಡಿಸಿಕೊಟ್ಟಿದ್ದಾರೆ. ಮುಂದಿನ ಸಂಚಿಕೆಯನ್ನು ಬೇರೆ ಸದಸ್ಯರು ಸಂಪಾದಿಸಿಕೊಡಲಿದ್ದಾರೆ.

ಪತ್ರಿಕೆಯನ್ನು ಸಕಾಲಿಕವಾಗಿ ಹೊರತರುವ ವಿಚಾರಕ್ಕೆ ಸಂಬಂಧಿಸಿದಂತೆ ಈ ಹಿಂದೆಯೇ ಹೇಳಿದೆ. ಪತ್ರಿಕೆಯ ನಡಿಗೆಯನ್ನು ವರ್ತಮಾನದೊಂದಿಗೆ ಸರಿದೂಗಿಸಿಕೊಂಡು ಹೋಗಲು ಸಂಯುಕ್ತ ಸಂಚಿಕೆಗಳನ್ನಾಗಿಸಿ ಹೊರತರುವುದು ಅನಿವಾರ್ಯವಾಗಿದೆ. ಹಾಗೆ ಮಾಡದೆ ಹೋದಲ್ಲಿ ಪತ್ರಿಕೆಯನ್ನು ವರ್ತಮಾನದೊಂದಿಗೆ ಸರಿದೂಗಿಸಿಕೊಂಡು ಹೋಗಲು ಸಾಧ್ಯವಾಗದು. ಈ ಕಾರಣದಿಂದಾಗಿ ಸರತಿಯಂತೆ ಕೆಲವು ಸಂಯುಕ್ತ ಸಂಚಿಕೆಗಳನ್ನು ಹೊರತಂದರೆ, ಅನಂತರ ಕ್ರಮಬದ್ಧವಾಗಿ ಮುನ್ನಡೆಸಿಕೊಂಡು ಹೋಗಬಹುದೆಂಬ ಹಿರಿದಾಸೆ. ಓದುಗರು ಸಹಕರಿಸಬೇಕೆಂದು ಕೋರುವೆ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕ

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಹತ್ತು ರೂಪಾಯಿ
ಇತರರಿಗೆ	....	ಹದಿನೈದು ರೂಪಾಯಿ
ಸಂಸ್ಥೆಗಳಿಗೆ	....	ಇಪ್ಪತ್ತೈದು ರೂಪಾಯಿ

(ಆಜೀವ ಸದಸ್ಯತ್ವ : ಒಂದು ನೂರು ಐವತ್ತು ರೂಪಾಯಿ)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬